सत्यमेव जयते

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

## ಸಾಮಾನ್ಯ ಮತ್ತು ಸಾಮಾಜಿಕ ವಲಯ

## ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷ

लोकहितार्थ सत्यनिष्ठा

Dedicated to Truth in Public Interest

**ಕರ್ನಾಟಕ ಸರ್ಕಾರ**

**2019ನೇ ವರ್ಷದ ವರದಿ ಸಂಖ್ಯೆ–4**

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

## ಸಾಮಾನ್ಯ ಮತ್ತು ಸಾಮಾಜಿಕ ವಲಯ

**ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷ**

**ಕರ್ನಾಟಕ ಸರ್ಕಾರ**

**2019ನೇ ವರ್ಷದ ವರದಿ ಸಂಖ್ಯೆ–4**

# ವಿಷಯಸೂಚಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಪ್ರಸ್ತಾವನೆ | | v |
| **ಅಧ್ಯಾಯ–I : ಪರಿಚಯ** | | |
| ಈ ವರದಿಯ ಬಗ್ಗೆ | 1.1 | 1 |
| ಲೆಕ್ಕಪರಿಶೋಧನೆಗೊಳಪಡುವ ಸಂಸ್ಥೆಗಳ ಚಿತ್ರಣ | 1.2 | 1 |
| ಲೆಕ್ಕಪರಿಶೋಧನೆಗೆ ಅಧ್ಯಾದೇಶ | 1.3 | 2 |
| ಪ್ರಧಾನ ಮಹಾಲೇಖಾಪಾಲರು (ಸಾಮಾನ್ಯ ಮತ್ತು ಸಾಮಾಜಿಕ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು, ಕಛೇರಿಯ ಸಾಂಸ್ಥಿಕ ರಚನೆ | 1.4 | 3 |
| ಲೆಕ್ಕಪರಿಶೋಧನೆಯ ಯೋಜನೆ ಮತ್ತು ನಿರ್ವಹಣೆ | 1.5 | 3 |
| ಪ್ರಮುಖ ಲೆಕ್ಕಪರಿಶೋಧನಾ ಅಭಿಪ್ರಾಯಗಳು | 1.6 | 3 |
| ಕಾರ್ಯಕ್ರಮಗಳ/ಚಟುವಟಿಕೆಗಳ/ಇಲಾಖೆಗಳ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ | 1.6.1 | 3 |
| ಅನುಪಾಲನಾ ಲೆಕ್ಕಪರಿಶೋಧನೆ | 1.6.2 | 5 |
| ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆಯ ಕೊರತೆ | 1.7 | 8 |
| ಬಾಕಿ ಇರುವ ತಪಾಸಣಾ ವರದಿಗಳು | 1.7.1 | 8 |
| ಕರಡು ಕಂಡಿಕೆಗಳಿಗೆ ಇಲಾಖೆಗಳ ಪ್ರತಿಕ್ರಿಯೆ | 1.7.2 | 9 |
| ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಸರಣಾ ಕ್ರಮ | 1.7.3 | 9 |
| ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಾಗಿರುವ ಕಂಡಿಕೆಗಳು | 1.7.4 | 9 |
| **ಅಧ್ಯಾಯ–II : ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ** | | |
| **ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ** | | |
| ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ | 2.1 | 13 |
| **ಅಧ್ಯಾಯ–III : ಅನುಪಾಲನಾ ಲೆಕ್ಕಪರಿಶೋಧನೆ** | | |
| **ಕನ್ನಡ ಮತ್ತು ಸಂಸ್ಕೃತಿ ಇಲಾಖೆ** | | |
| ಕರ್ನಾಟಕದಲ್ಲಿ ಭಾಷೆ ಮತ್ತು ಸಂಸ್ಕೃತಿಯ ಉತ್ತೇಜನ ಮತ್ತು ಪ್ರಚಾರದ ಮೇಲಿನ ಅನುಪಾಲನಾ ಲೆಕ್ಕಪರಿಶೊಧನೆ | 3.1 | 59 |
| **ಸಮಾಜ ಕಲ್ಯಾಣ ಇಲಾಖೆ** | | |
| ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯಗಳ ನಿರ್ಮಾಣ ಮತ್ತು ನಿರ್ವಹಣೆಯ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆ | 3.2 | 74 |
| **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ** | | |
| ₹2.81 ಲಕ್ಷದ ದುರುಪಯೋಗ | 3.3 | 98 |
| **ಪದವಿಪೂರ್ವ ಶಿಕ್ಷಣ ಇಲಾಖೆ** | | |
| ಸರ್ಕಾರೇತರ ಖಾತೆಯಿಂದ ₹ಆರು ಲಕ್ಷ ಸಂದೇಹಾಸ್ಪದ ದುರುಪಯೋಗ | 3.4 | 100 |

| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| **ವಸತಿ ಇಲಾಖೆ** | | |
| ಹಣದ ವಿವೇಚನಾರಹಿತ ನಿರ್ವಹಣೆ | 3.5 | 102 |
| **ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ** | | |
| ಅನರ್ಹ ಫಲಾನುಭವಿಗಳಿಗೆ ಹಣಕಾಸಿನ ನೆರವನ್ನು ನೀಡಿರುವುದು | 3.6 | 104 |
| ಉದ್ಯೋಗಿಗಳಿಗೆ ಶಾಸನಬದ್ಧ ವಂತಿಗೆಗಳನ್ನು ಪಾವತಿ ಮಾಡದಿರುವುದು | 3.7 | 105 |
| **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ** | | |
| ಪಠ್ಯಪುಸ್ತಕಗಳ ಮುದ್ರಣದಲ್ಲಿ ತಪ್ಪಿಸಬಹುದಾಗಿದ್ದ ವೆಚ್ಚ | 3.8 | 107 |
| **ಕಂದಾಯ ಇಲಾಖೆ** | | |
| ತಪ್ಪಿಸಬಹುದಾಗಿದ್ದ ಪರಿಹಾರ ಪಾವತಿ | 3.9 | 110 |
| **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ** | | |
| ನೀರು ಸರಬರಾಜು ಯೋಜನೆಯ ಮೇಲೆ ನಿಷ್ಫಲ ವೆಚ್ಚ | 3.10 | 112 |
| ಶಿಕ್ಷಣ ಉಪಕರದ ತಪ್ಪಾದ ವಿಧಿಸುವಿಕೆ ಮತ್ತು ಸಂಗ್ರಹಣೆ | 3.11 | 114 |
| **ತಾಂತ್ರಿಕ ಶಿಕ್ಷಣ ಇಲಾಖೆ** | | |
| ಮಹಿಳಾ ವಿದ್ಯಾರ್ಥಿನಿಲಯದ ನಿರ್ಮಾಣದಲ್ಲಿ ನಿಷ್ಫಲ ವೆಚ್ಚ | 3.12 | 116 |

## ಅನುಬಂಧಗಳ ಪಟ್ಟಿ


| ವಿವರಗಳು | ಅನುಬಂಧ ಸಂಖ್ಯೆ | ಪುಟ ಸಂಖ್ಯೆ |
|---|---|---|
| 31 ಮಾರ್ಚ್ 2018ರಲ್ಲಿದ್ದಂತೆ ಬಾಕಿಯಿರುವ ತಪಾಸಣಾ ವರದಿಗಳು ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳು | 1.1 | 123 |
| 31.12.2018ರಲ್ಲಿದ್ದಂತೆ ಬಾಕಿಯಿರುವ ಇಲಾಖಾ ಟಿಪ್ಪಣಿಗಳ ವಿವರಗಳು (ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ) | 1.2 | 126 |
| 31.12.2018ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಇನ್ನೂ ಚರ್ಚೆಯಾಗಬೇಕಿರುವ ಕಂಡಿಕೆಗಳು (ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ) | 1.3 | 127 |
| ಸಂಯುಕ್ತ ರಾಷ್ಟ್ರಗಳ ಮುಂದುವರೆಸಬಲ್ಲ ಅಭಿವೃದ್ಧಿ ಧ್ಯೇಯ ಸಂಖ್ಯೆ–4 ಗುಣಮಟ್ಟದ ಶಿಕ್ಷಣ | 2.1 | 128 |
| ಪರೀಕ್ಷಾ–ತನಿಖೆ ನಡೆಸಿದ ಮಾದರಿ ಶಾಲೆಗಳು ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳು | 2.2 | 129 |
| 2009–10ರಿಂದ 2017–18ರ ಅವಧಿಯಲ್ಲಿ ಆರ್‌ಎಮ್‌ಎಸ್‌ಎ ಅಡಿಯಲ್ಲಿ ಹಣದ ಬಳಕೆ | 2.3 | 130 |
| ಪರೀಕ್ಷಾ–ತನಿಖೆ ನಡೆಸಿದ ಉನ್ನತೀಕರಿಸಿದ ಶಾಲೆಗಳ ಕಾರ್ಯವೈಖರಿ | 2.4 | 131 |
| ನಿವೇಶನಗಳನ್ನು ಹಸ್ತಾಂತರಿಸುವಲ್ಲಿ ವಿಳಂಬ | 2.5 | 132 |
| ಶಾಲೆಗಳ ಉನ್ನತೀಕರಣ ಮತ್ತು ಬಲವರ್ಧನೆಯಲ್ಲಿ ಗಮನಿಸಿದ ಅಕ್ರಮಗಳು | 2.6 | 134 |
| ಪರೀಕ್ಷಾ–ತನಿಖೆ ನಡೆಸಿದ ಶಾಲೆಗಳಲ್ಲಿ ಮೂಲಸೌಕರ್ಯಗಳು | 2.7 | 136 |
| ಪ್ರಯೋಗಶಾಲಾ ಸಾಧನಗಳ ಖರೀದಿ | 2.8 | 137 |
| ಪೀಠೋಪಕರಣಗಳ ಖರೀದಿಯ ಸ್ಥಿತಿ | 2.9 | 138 |
| ಸೈನ್ಸ್ ಮತ್ತು ಮ್ಯಾತ್ಸ್ ಕಿಟ್‌ಗಳ ಖರೀದಿಯ ಸ್ಥಿತಿ | 2.10 | 139 |
| ಅರ್ಹವಲ್ಲದ ಶಾಲೆಗಳಿಗೆ ಅನುದಾನವನ್ನು ನೀಡಿರುವುದು | 2.11 | 140 |
| 2017–18ರ ಅವಧಿಯಲ್ಲಿ ಕರ್ನಾಟಕದಲ್ಲಿ ಪ್ರೌಢಶಾಲೆಗಳ ಶಿಕ್ಷಕರ ಖಾಲಿ ಹುದ್ದೆಗಳು | 2.12 | 143 |
| ಎನ್‌ಸಿಟಿಇ ವಿದ್ಯಾರ್ಹತೆಗಿಂತ ಕಡಿಮೆ ವಿದ್ಯಾರ್ಹತೆ ಹೊಂದಿದ್ದ ಶಿಕ್ಷಕರು | 2.13 | 144 |
| ಮಾದರಿ ಶಾಲೆಗಳ ಸಂಬಂಧವಾದ ಅವಲೋಕನಗಳು | 2.14 | 145 |
| ಪ್ರೌಢ ಶಿಕ್ಷಣದಲ್ಲಿ ಶಾಲೆಗಳ ಸಂಖ್ಯೆ ಮತ್ತು ನೋಂದಣಿಯಾದ ವಿದ್ಯಾರ್ಥಿಗಳ ವಿವರಗಳು | 2.15 | 146 |
| 2009–10ರಿಂದ 2017–18ರ ಅವಧಿಯಲ್ಲಿ ರಾಜ್ಯದಲ್ಲಿ ಜಿಇಆರ್ ಸೂಚಕಗಳು | 2.16 | 147 |
| ಜಿಲ್ಲಾವಾರು ಜಿಇಆರ್ | 2.17 | 148 |
| ರಾಜ್ಯದಲ್ಲಿ ಶಾಲೆ ಬಿಟ್ಟವರ, ಉಳಿದವರ ಮತ್ತು ವರ್ಗಾವಣೆಯ ದರ | 2.18 | 149 |
| 2017–18ರ ವರ್ಷಕ್ಕೆ ಶಾಲೆ ಬಿಟ್ಟವರ ಜಿಲ್ಲಾವಾರು ದರ | 2.19 | 150 |
| ರಾಜ್ಯದಲ್ಲಿ 10ನೇ ತರಗತಿಯ ವರ್ಷಾವಾರು ಫಲಿತಾಂಶಗಳು | 2.20 | 151 |
| ಯೋಜನೆಗಳು/ಕಾರ್ಯಕ್ರಮಗಳನ್ನು ಮತ್ತು 2013–14ರಿಂದ 2017–18ರ ಅವಧಿಗೆ ವೆಚ್ಚವನ್ನು ತೋರಿಸುವ ಕೋಷ್ಟಕ | 3.1 | 152 |

| ವಿವರಗಳು | ಅನುಬಂಧ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಸಾಂಸ್ಕೃತಿಕ ಸಂಘಗಳಿಂದ ನೋಂದಾಯಿತ ಸಂಘದ ನವೀಕರಣ ಪ್ರಮಾಣಪತ್ರವನ್ನು ಒದಗಿಸದಿರುವುದು | 3.2 | 153 |
| ಸಾಂಸ್ಕೃತಿಕ ಸಂಘಗಳಿಂದ ಲೆಕ್ಕಪರಿಶೋಧಿತ ಲೆಕ್ಕಪತ್ರಗಳನ್ನು ಸಲ್ಲಿಸದಿರುವುದು | 3.3 | 154 |
| ಸಾಂಸ್ಕೃತಿಕ ಸಂಘಗಳಿಗೆ ಒಂದು ವರ್ಷದಲ್ಲಿ ಎರಡು ಬಾರಿ ಹಣಕಾಸು ನೆರವು | 3.4 | 155 |
| ಟ್ರಸ್ಟ್‌ಗಳು ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದಿರುವುದನ್ನು ತೋರಿಸುವ ಪಟ್ಟಿ | 3.5 | 156 |
| ಅವಶ್ಯಕ ದಾಖಲೆಗಳನ್ನು ಸಲ್ಲಿಸದಿದ್ದರೂ ಹಣಕಾಸಿನ ನೆರವನ್ನು ನೀಡಿರುವುದು | 3.6 | 157 |
| ಸಾಂಸ್ಕೃತಿಕ ಭವನಗಳಲ್ಲದೇ ಇತರೆ ಉದ್ದೇಶಗಳಿಗೆ ಬಿಡುಗಡೆ ಮಾಡಿದ ಹಣದ ವಿವರಗಳು | 3.7 | 158 |
| ನಿಗದಿತ ಮಿತಿಗಿಂತ ಅಧಿಕವಾಗಿ ಹಣವನ್ನು ಬಿಡುಗಡೆ ಮಾಡಿರುವುದನ್ನು ತೋರಿಸುವ ಕೋಷ್ಟಕ | 3.8 | 159 |
| ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ ಹಾಗೂ ಇತರ ಇಲಾಖೆಗಳೆರಡರಿಂದಲೂ ಹಣವನ್ನು ಪಡೆದಿರುವುದನ್ನು ತೋರಿಸುವ ಪಟ್ಟಿ | 3.9 | 160 |
| ಸಾಂಸ್ಕೃತಿಕ ಭವನಗಳ ನಿರ್ಮಾಣದಲ್ಲಿ ವಿಳಂಬ | 3.10 | 161 |
| ಪರೀಕ್ಷಾ-ತನಿಖೆ ನಡೆಸಿದ ಘಟಕಗಳ ಪಟ್ಟಿ | 3.11 | 162 |
| 2017-18ರ ಅವಧಿಯಲ್ಲಿ ಪರೀಕ್ಷಾ-ತನಿಖೆ ನಡೆಸಿದ ವಿದ್ಯಾರ್ಥಿ ನಿಲಯಗಳ ಸ್ವಾಧೀನದ ಸ್ಥಿತಿ | 3.12 | 163 |
| (ಎ) ಪರೀಕ್ಷಾ-ತನಿಖೆ ನಡೆಸಿದ 139 ಬಾಲಕರ ವಿದ್ಯಾರ್ಥಿನಿಲಯಗಳ ಸ್ವಾಧೀನದ ಸ್ಥಿತಿ<br>(ಬಿ) ಪರೀಕ್ಷಾ-ತನಿಖೆ ನಡೆಸಿದ 51 ಬಾಲಕಿಯರ ವಿದ್ಯಾರ್ಥಿನಿಲಯಗಳ ಸ್ವಾಧೀನದ ಸ್ಥಿತಿ | 3.13 | 164 |
| 2013-14ರಿಂದ 2017-18ರ ಅವಧಿಯಲ್ಲಿ ವಿದ್ಯಾರ್ಥಿನಿಲಯಗಳ ನಿರ್ಮಾಣದ ಸ್ಥಿತಿ | 3.14 | 170 |
| ಭೂಮಿಯ ಅಲಭ್ಯತೆಯಿಂದ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರದ ಪ್ರಕರಣಗಳು | 3.15 | 171 |
| ಕೆಆರ್‌ಐಡಿಎಲ್ ಕಾರ್ಯಗತಗೊಳಿಸಿದ ಕಾಮಗಾರಿಗಳ ಸಂಬಂಧವಾಗಿನ ಉಳಿತಾಯಗಳನ್ನು ತೋರಿಸುವ ಕೋಷ್ಟಕ | 3.16 | 172 |
| ಒಬ್ಬರೇ ಗುತ್ತಿಗೆದಾರರಿಗೆ ವಹಿಸಿದ ಗುತ್ತಿಗೆಗಳ ವಿವರಗಳನ್ನು ತೋರಿಸುವ ಕೋಷ್ಟಕ | 3.17 | 173 |
| ದುರಸ್ತಿ ಕಾಮಗಾರಿಗಳಿಗೆ ಅಂದಾಜುಗಳನ್ನು ವಿಭಜಿಸಿರುವುದು | 3.18 | 174 |
| ತಪ್ಪಿಸಬಹುದಾಗಿದ್ದ ಬಾಡಿಗೆ ಪಾವತಿಯ ವಿವರಗಳು | 3.19 | 175 |
| ಪಂಚಾಯತ್‌ರಾಜ್ ಸಂಸ್ಥೆಗಳು ಸಂಗ್ರಹಿಸಿದ, ಜಮೆ ಮಾಡಿದ ಮತ್ತು ವೆಚ್ಚ ಮಾಡಿದ ಶಿಕ್ಷಣ ಉಪಕರವನ್ನು ತೋರಿಸುವ ಕೋಷ್ಟಕ | 3.20 | 176 |

# ಪ್ರಸ್ತಾವನೆ

31 ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯನ್ನು ಸಂವಿಧಾನದ ಅನುಚ್ಛೇದ 151(2)ರ ಅನ್ವಯ ರಾಜ್ಯ ವಿಧಾನಮಂಡಲದಲ್ಲಿ ಮಂಡಿಸುವುದಕ್ಕಾಗಿ ರಾಜ್ಯಪಾಲರಿಗೆ ಸಲ್ಲಿಸಲು ತಯಾರಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಸತಿ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರ್ಮಿಕ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಸಮಾಜಕಲ್ಯಾಣ ಇಲಾಖೆ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಳನ್ನು ಒಳಗೊಂಡಂತೆ ಸಾಮಾನ್ಯ ಮತ್ತು ಸಾಮಾಜಿಕ ಸೇವೆಗಳಡಿಯಲ್ಲಿನ ಕರ್ನಾಟಕ ಸರ್ಕಾರದ ಇಲಾಖೆಗಳ ಮತ್ತು ಇಲಾಖೆಗಳ ಸ್ವಾಯುತ್ತ ಸಂಸ್ಥೆಗಳ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಮತ್ತು ಅನುಪಾಲನಾ ಲೆಕ್ಕಪರಿಶೋಧನೆಯ ಪ್ರಮುಖವಾದ ಫಲಿತಾಂಶಗಳನ್ನು ಈ ವರದಿಯು ಒಳಗೊಂಡಿದೆ.

ಈ ವರದಿಯಲ್ಲಿ ತಿಳಿಸಿರುವ ಪ್ರಕರಣಗಳು 2017–18ರ ವರ್ಷದಲ್ಲಿ ಲೆಕ್ಕಪತ್ರಗಳ ಪರೀಕ್ಷಾ–ತನಿಖೆಯ ಸಮಯದಲ್ಲಿ ಗಮನಕ್ಕೆ ಬಂದವುಗಳೇ ಅಲ್ಲದೆ ಅದಕ್ಕಿಂತ ಮುಂಚಿನ ವರ್ಷಗಳಲ್ಲಿ ಗಮನಿಸಿದ್ದಾದರೂ ಹಿಂದಿನ ವರದಿಗಳಲ್ಲಿ ಸೇರಿಸಲಾಗದೇ ಇರುವಂತಹವುಗಳಾಗಿವೆ. 2017–18ರ ತರುವಾಯದ ಅವಧಿಗೆ ಸಂಬಂಧಿಸಿದ ವಿಷಯಗಳನ್ನು ಕೂಡ, ಅವಶ್ಯವಿದ್ದೆಡೆಯಲ್ಲಿ, ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ.

ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಅಧ್ಯಾಯ -I
# ಪರಿಚಯ

# ಅಧ್ಯಾಯ–I

## ಪರಿಚಯ

### 1.1 ಈ ವರದಿಯ ಬಗ್ಗೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯು ಆಯ್ದ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಹಾಗೂ ಸರ್ಕಾರಿ ಇಲಾಖೆಗಳ ಮತ್ತು ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ವಿಷಯಗಳಿಗೆ ಸಂಬಂಧಿಸಿದ್ದಾಗಿದೆ.

ಅನುಪಾಲನಾ ಲೆಕ್ಕಪರಿಶೊಧನೆಯು, ಭಾರತ ಸಂವಿಧಾನದ ನಿಬಂಧನೆಗಳು, ಅನ್ವಯಿಸುವ ಕಾನೂನುಗಳು, ನಿಯಮಗಳು, ಕಾಯಿದೆಗಳು, ಸಕ್ಷಮ ಪ್ರಾಧಿಕಾರದಿಂದ ಜಾರಿಯಾದ ಆದೇಶಗಳು ಮತ್ತು ಸೂಚನೆಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ತಿಳಿಯಲು ಲೆಕ್ಕಪರಿಶೋಧನೆ ಮಾಡಿದ ಇಲಾಖೆಗಳ ವೆಚ್ಚಕ್ಕೆ ಸಂಬಂಧಿಸಿದ ವಹಿವಾಟುಗಳ ಪರೀಕ್ಷೆಗೆ ಸಂಬಂಧಿಸಿರುತ್ತದೆ. ಮತ್ತೊಂದು ಕಡೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು, ವಹಿವಾಟು ಲೆಕ್ಕಪರಿಶೋಧನೆಯನ್ನು ನಡೆಸುವ ಜೊತೆಗೆ ಕಾರ್ಯಕ್ರಮ/ಚಟುವಟಿಕೆಯ/ಇಲಾಖೆಯ ಉದ್ದೇಶಗಳನ್ನು ಮಿತವ್ಯಯವಾಗಿ ಮತ್ತು ಕಾರ್ಯ ಕ್ಷಮತೆಯಿಂದ ಸಾಧಿಸಲಾಯಿತೇ ಎಂಬುದನ್ನೂ ಕೂಡ ಪರಿಶೀಲಿಸುತ್ತದೆ.

ಲೆಕ್ಕಪರಿಶೋಧನೆಯ ಪ್ರಮುಖ ಫಲಿತಾಂಶಗಳನ್ನು ರಾಜ್ಯ ವಿಧಾನಮಂಡಲದ ಗಮನಕ್ಕೆ ತರುವುದು ಈ ವರದಿಯ ಮುಖ್ಯ ಉದ್ದೇಶವಾಗಿದೆ. ವಹಿವಾಟುಗಳ ಸ್ವರೂಪ, ಗಾತ್ರ ಮತ್ತು ಪರಿಮಾಣಕ್ಕೆ ತಕ್ಕಂತೆ ವರದಿ ಮಾಡುವ ರೀತಿಯು ತಕ್ಕ ಪ್ರಮಾಣದಲ್ಲಿರಬೇಕೆಂದು ಲೆಕ್ಕಪರಿಶೋಧನಾ ಮಾನದಂಡಗಳು ನಿಗದಿಪಡಿಸುತ್ತವೆ. ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು ಕಾರ್ಯಾಂಗಕ್ಕೆ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳುವ ಹಾಗೂ ಸಂಸ್ಥೆಗಳ ಸುಧಾರಿತ ಹಣಕಾಸಿನ ನಿರ್ವಹಣೆಗೆ ಅನುಕೂಲವಾಗುವಂತೆ ಧೋರಣೆಗಳನ್ನು ಮತ್ತು ಮಾರ್ಗದರ್ಶಕಗಳನ್ನು ರಚಿಸುವುದಕ್ಕೆ ಅನುಕೂಲಕರವಾಗಿ ಒಳ್ಳೆಯ ಆಡಳಿತಕ್ಕೆ ಕಾಣಿಕೆ ನೀಡುತ್ತವೆ.

ಈ ಅಧ್ಯಾಯವು ಲೆಕ್ಕಪರಿಶೋಧನೆಯ ಯೋಜನೆ ಮತ್ತು ವ್ಯಾಪ್ತಿಯನ್ನು ವಿವರಿಸುವ ಜೊತೆಗೆ ಆಯ್ದ ಯೋಜನೆಗಳ ಅನುಷ್ಠಾನದಲ್ಲಿನ ಪ್ರಮುಖ ನ್ಯೂನತೆಗಳ ಮತ್ತು ಸಾಧನೆಗಳ, ವಹಿವಾಟುಗಳ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಪ್ರಮುಖ ಲೆಕ್ಕಪರಿಶೋಧನಾ ಅಂಶಗಳ ಮತ್ತು ಹಿಂದಿನ ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಪಾಲನೆಯ ಸಾರಾಂಶವನ್ನೂ ಒಳಗೊಂಡಿದೆ. ಈ ವರದಿಯ ಎರಡನೇ ಮತ್ತು ಮೂರನೇ ಅಧ್ಯಾಯಗಳು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಮತ್ತು ಸರ್ಕಾರಿ ಇಲಾಖೆಗಳ ಮತ್ತು ಸ್ವಾಯತ್ತ ಸಂಸ್ಥೆಗಳ ವಹಿವಾಟುಗಳ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಕಂಡಬಂದ ಅಂಶಗಳನ್ನು ಒಳಗೊಂಡಿವೆ.

### 1.2 ಲೆಕ್ಕಪರಿಶೋಧನೆಗೊಳಪಡುವ ಸಂಸ್ಥೆಗಳ ಚಿತ್ರಣ

ರಾಜ್ಯದಲ್ಲಿನ 65 ಇಲಾಖೆಗಳು ಸಚಿವಾಲಯ ಮಟ್ಟದಲ್ಲಿ ಮತ್ತು 11 ಸ್ವಾಯತ್ತ ಸಂಸ್ಥೆಗಳು ಸಾಮಾನ್ಯ ಮತ್ತು ಸಾಮಾಜಿಕ ವಲಯ ಸೇವೆಗಳಡಿಯಲ್ಲಿ ಭರಿಸಿದ ವೆಚ್ಚವನ್ನು ಪ್ರಧಾನ ಮಹಾಲೇಖಾಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ), ಬೆಂಗಳೂರು ಇವರು ಲೆಕ್ಕಪರಿಶೋಧನೆ ನಡೆಸುತ್ತಾರೆ. ಇಲಾಖೆಗಳಿಗೆ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಮುಖ್ಯಸ್ಥರಾಗಿರುತ್ತಾರೆ ಮತ್ತು ನಿರ್ದೇಶಕರು/ಆಯುಕ್ತರು ಮತ್ತು ಅಧೀನ ಅಧಿಕಾರಿಗಳು ಅವರುಗಳಿಗೆ ನೆರವು ನೀಡುತ್ತಾರೆ.

2016–17 ಮತ್ತು 2017–18ರ ಅವಧಿಯಲ್ಲಿನ ಹಣಕಾಸು ವಹಿವಾಟಿನ ಸಾರಾಂಶವನ್ನು **ಕೋಷ್ಟಕ–1.1** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1 : 2017–18ರಲ್ಲಿ ಹಣಕಾಸು ವಹಿವಾಟುಗಳ ಸಾರಾಂಶ**

(₹ ಕೋಟಿಗಳಲ್ಲಿ)

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| | 2016–17 | 2017–18 | | 2016–17 | 2017–18 |
| **ಭಾಗ–ಎ: ರಾಜಸ್ವ** | | | | | |
| **ರಾಜಸ್ವ ಸ್ವೀಕೃತಿಗಳು** | **1,33,213.79** | **1,46,999.65** | **ರಾಜಸ್ವ ವೆಚ್ಚ** | **1,31,920.75** | **1,42,482.33** |
| ತೆರಿಗೆ ರಾಜಸ್ವ | 82,956.13 | 87,130.38 | ಸಾಮಾನ್ಯ ಸೇವೆಗಳು | 31,264.56 | 34,484.44 |
| ತೆರಿಗೆಯೇತರ ರಾಜಸ್ವ | 5,794.53 | 6,476.53 | ಸಾಮಾಜಿಕ ಸೇವೆಗಳು | 54,549.24 | 58,652.35 |
| ಕೇಂದ್ರ ತೆರಿಗೆಗಳು ಮತ್ತು ಸುಂಕಗಳ ಪಾಲು | 28,759.94 | 31,751.96 | ಆರ್ಥಿಕ ಸೇವೆಗಳು | 40,421.37 | 42,855.78 |
| ಭಾರತ ಸರ್ಕಾರದ ಸಹಾಯಾನುದಾನಗಳು ಮತ್ತು ವಂತಿಗೆಗಳು | 15,703.19 | 21,640.78 | ಸಹಾಯಾನುದಾನಗಳು ಮತ್ತು ವಂತಿಗೆಗಳು | 5,685.58 | 6,489.76 |
| **ಭಾಗ–ಬಿ: ಬಂಡವಾಳ ಮತ್ತು ಇತರೆ** | | | | | |
| **ಇತರೆ ಬಂಡವಾಳ ಸ್ವೀಕೃತಿಗಳು** | **26.96** | **3.70** | **ಬಂಡವಾಳ ವೆಚ್ಚ** | **28,150.43** | **30,666.76** |
| | | | ಸಾಮಾನ್ಯ ಸೇವೆಗಳು | 1,060.39 | 977.45 |
| | | | ಸಾಮಾಜಿಕ ಸೇವೆಗಳು | 6,896.84 | 8,676.76 |
| | | | ಆರ್ಥಿಕ ಸೇವೆಗಳು | 20,193.20 | 21,012.55 |
| **ಸಾಲಗಳು ಮತ್ತು ಮುಂಗಡಗಳ ವಸೂಲಾತಿ** | **99.84** | **136.93** | **ವಿತರಿಸಿದ ಸಾಲಗಳು ಮತ್ತು ಮುಂಗಡಗಳು** | **1,934.38** | **5,092.22** |
| **ಸಾರ್ವಜನಿಕ ಋಣ ಸ್ವೀಕೃತಿಗಳು**** | **31,155.92** | **25,121.86** | **ಸಾರ್ವಜನಿಕ ಋಣದ ಮರುಪಾವತಿ **** | **7,420.24** | **8,269.16** |
| **ಸಾದಿಲ್ವಾರು ನಿಧಿ** | – | – | **ಸಾದಿಲ್ವಾರು ನಿಧಿ** | – | – |
| **ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು** | **1,79,318.45** | **2,00,615.43** | **ಸಾರ್ವಜನಿಕ ಲೆಕ್ಕ ವಿತರಣೆಗಳು **** | **1,67,153.81** | **1,94,536.63** |
| **ಆರಂಭಿಕ ನಗದು ಶಿಲ್ಕು** | **27,118.23** | **34,353.58** | **ಅಂತಿಮ ನಗದು ಶಿಲ್ಕು** | **34,353.58** | **26,184.05** |
| **ಒಟ್ಟು** | **3,70,933.19** | **4,07,231.15** | **ಒಟ್ಟು** | **3,70,933.19** | **4,07,231.15** |

(ಆಧಾರ: 2017–18ರ ಹಣಕಾಸು ಲೆಕ್ಕ ಪತ್ರಗಳು)

** ಅರ್ಥೋಪಾಯ ಮಾರ್ಗೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳಡಿಯಲ್ಲಿನ ನಿವ್ವಳ ವಹಿವಾಟುಗಳನ್ನು ಹೊರತುಪಡಿಸಿ.

## 1.3 ಲೆಕ್ಕಪರಿಶೋಧನೆಗೆ ಅಧ್ಯಾದೇಶ

ಭಾರತ ಸಂವಿಧಾನದ 149 ಮತ್ತು 151ನೇ ಅನುಚ್ಛೇದಗಳಡಿ ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) ಅಧಿನಿಯಮ, 1971 [ಸಿಎಜಿರವರ (ಡಿಪಿಸಿ) ಅಧಿನಿಯಮ] ಇದರಡಿ ಸಿಎಜಿಯವರು ಲೆಕ್ಕಪರಿಶೋಧನೆಗಾಗಿ ಅಧ್ಯಾದೇಶವನ್ನು ಪಡೆಯುತ್ತಾರೆ. ಸಿಎಜಿರವರು ಸದರಿ ಅಧಿನಿಯಮದ ಪರಿಚ್ಛೇದ 13ರ[1] ಅಡಿಯಲ್ಲಿ ಕರ್ನಾಟಕ ಸರ್ಕಾರದ ಇಲಾಖೆಗಳ ವೆಚ್ಚದ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ. ಅಧಿನಿಯಮದ ಪರಿಚ್ಛೇದ 19(2)[2] ಮತ್ತು 19(3)ರ[3] ಅಡಿಯಲ್ಲಿ ಲೆಕ್ಕಪರಿಶೋಧನೆ ನಡೆಸುವ 11 ಸ್ವಾಯತ್ತ ಸಂಸ್ಥೆಗಳಿಗೆ ಸಿಎಜಿಯವರೇ ಲೆಕ್ಕಪರಿಶೋಧಕರಾಗಿರುತ್ತಾರೆ. ಇದಲ್ಲದೇ, ಅಧಿನಿಯಮದ ಪರಿಚ್ಛೇದ 14ರ[4] ಅಡಿಯಲ್ಲಿ ಸರ್ಕಾರದಿಂದ ಬಹುಪಾಲು ಹಣ ಪಡೆಯುವ 298 ಇತರೆ ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನೂ ಸಹ ಸಿಎಜಿರವರು ನಡೆಸುತ್ತಾರೆ. ಹಲವಾರು ಲೆಕ್ಕಪರಿಶೋಧನೆಗಳಿಗೆ ತತ್ವಗಳನ್ನು ಮತ್ತು ವಿಧಾನಗಳನ್ನು

---

[1] (i) ರಾಜ್ಯದ ಸಂಚಿತ ನಿಧಿಯಿಂದ ಆಗುವ ಎಲ್ಲ ವಹಿವಾಟುಗಳ (ii) ಸಾದಿಲ್ವಾರು ನಿಧಿಗೆ ಮತ್ತು ಸಾರ್ವಜನಿಕ ಲೆಕ್ಕಕ್ಕೆ ಸಂಬಂಧಿಸಿದ ವಹಿವಾಟುಗಳು ಮತ್ತು (iii) ಎಲ್ಲ ವ್ಯಾಪಾರ, ತಯಾರಿಕೆ, ಲಾಭ ಮತ್ತು ನಷ್ಟದ ಲೆಕ್ಕಗಳು, ಆಢಾವೆ ಪಟ್ಟಿಕೆ (ಬ್ಯಾಲೆನ್ಸ್ ಶೀಟ್) ಮತ್ತು ಇತರೆ ಅಧೀನ ಲೆಕ್ಕಗಳು.

[2] ಸಂಬಂಧಪಟ್ಟ ಶಾಸನದ ನಿಬಂಧನೆಗಳ ಪ್ರಕಾರ ಸಂಸತ್ತಿನ ನಿಯಮದಿಂದ ರಚಿತವಾಗಿರುವ ನಿಗಮಗಳ (ಕಂಪನಿಗಳಲ್ಲದ) ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.

[3] ರಾಜ್ಯ ವಿಧಾನಮಂಡಲದ ಶಾಸನ ನಿಬಂಧನೆಗಳ ಪ್ರಕಾರ ರಾಜ್ಯಪಾಲರ ಕೋರಿಕೆಯ ಮೇರೆಗೆ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.

[4] (i) ರಾಜ್ಯದ ಸಂಚಿತ ನಿಧಿಯಿಂದ ಅನುದಾನಗಳು ಅಥವಾ ಸಾಲಗಳ ಮುಖಾಂತರ ಬಹುಮಟ್ಟಿಗೆ ಹಣಕಾಸು ಒದಗಿಸುವ ಸಂಸ್ಥೆ/ಪ್ರಾಧಿಕಾರದ ಎಲ್ಲ ಜಮೆ ಮತ್ತು ವೆಚ್ಚದ ಲೆಕ್ಕಪರಿಶೋಧನೆ (ii) ರಾಜ್ಯದ ಸಂಚಿತ ನಿಧಿಯಿಂದ ₹ಒಂದು ಕೋಟಿಗೂ ಕಡಿಮೆಯಿಲ್ಲದಂತೆ ಅನುದಾನ ಅಥವಾ ಸಾಲ ಪಡೆಯುವ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರದ ಎಲ್ಲ ಜಮೆ ಮತ್ತು ವೆಚ್ಚಗಳ ಲೆಕ್ಕಪರಿಶೊಧನೆ.

ಸಿಎಜಿರವರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳು ಮತ್ತು ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳು, 2007ರ ಕಾಯಿದೆಗಳಲ್ಲಿ ನಿಗದಿಪಡಿಸಲಾಗಿದೆ.

## 1.4 ಪ್ರಧಾನ ಮಹಾಲೇಖಾಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು, ಕಛೇರಿಯ ಸಾಂಸ್ಥಿಕ ರಚನೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ನಿರ್ದೇಶನಗಳ ಮೇರೆಗೆ ಪ್ರಧಾನ ಮಹಾಲೇಖಾಪಾಲರು (ಸಾಮಾನ್ಯ ಮತ್ತು ಸಾಮಾಜಿಕ ಲೆಕ್ಕಪರಿಶೋಧನೆ) ಬೆಂಗಳೂರು, ಇವರು ರಾಜ್ಯದೆಲ್ಲೆಡೆ ಇರುವ ಸಾಮಾನ್ಯ ಮತ್ತು ಸಾಮಾಜಿಕ ವಲಯದಡಿಯಲ್ಲಿನ ಸರ್ಕಾರಿ ಇಲಾಖೆಗಳ/ ಕಛೇರಿಗಳ/ಸ್ವಾಯತ್ತ ನಿಕಾಯಗಳ/ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ. ಮಹಾಲೇಖಪಾಲರಿಗೆ ಮೂವರು ಉಪ ಮಹಾಲೇಖಪಾಲರುಗಳು ಮತ್ತು ಅಧೀನ ಅಧಿಕಾರಿಗಳು ನೆರವು ನೀಡುತ್ತಾರೆ.

## 1.5 ಲೆಕ್ಕಪರಿಶೋಧನೆಯ ಯೋಜನೆ ಮತ್ತು ನಿರ್ವಹಣೆ

ಸರ್ಕಾರದ ಹಲವಾರು ಇಲಾಖೆಗಳು ಎದುರಿಸುವ ಸಂಭವನೀಯ ಅಪಾಯ ಮತ್ತು ಭರಿಸಿದ ವೆಚ್ಚ, ಚಟುವಟಿಕೆಗಳ ವಿಮರ್ಶಕತ್ವ/ಸಂಕೀರ್ಣತೆ, ನೀಡಿದ ಹಣಕಾಸಿನ ಅಧಿಕಾರಗಳು, ಒಟ್ಟಾರೆ ಆಂತರಿಕ ನಿಯಂತ್ರಣಗಳ ನಿರ್ಧಾರಣೆ ಮತ್ತು ಹಿತಾಸಕ್ತಿಯುಳ್ಳವರ ಕಳಕಳಿಯ ಮೇಲೆ ನಿರ್ಧರಿಸಿ ಲೆಕ್ಕಪರಿಶೋಧನಾ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುತ್ತದೆ. ಈ ಅಭ್ಯಾಸದಲ್ಲಿ ಹಿಂದಿನ ಲೆಕ್ಕಪರಿಶೋಧನಾ ಅಂಶಗಳನ್ನೂ ಸಹ ಪರಿಗಣಿಸಲಾಗುತ್ತದೆ. ಈ ಅಪಾಯದ ಸಂಭವನೀಯತೆಯ ಆಧಾರದ ಮೇಲೆ ಲೆಕ್ಕಪರಿಶೋಧನೆಯ ಕಾಲಾವಧಿ ಮತ್ತು ವ್ಯಾಪ್ತಿಯನ್ನು ನಿರ್ಧರಿಸಲಾಗುವುದು.

ಪ್ರತಿಯೊಂದು ಘಟಕದ ಲೆಕ್ಕಪರಿಶೋಧನೆಯ ನಂತರ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಒಳಗೊಂಡ ತಪಾಸಣಾ ವರದಿಗಳನ್ನು ಇಲಾಖೆಯ ಮುಖ್ಯಸ್ಥರಿಗೆ ಕಳುಹಿಸಲಾಗುತ್ತದೆ. ತಪಾಸಣಾ ವರದಿಗಳು ಸ್ವೀಕೃತಗೊಂಡ ಒಂದು ತಿಂಗಳೊಳಗಾಗಿ ಲೆಕ್ಕಪರಿಶೋಧನಾ ಅಂಶಗಳಿಗೆ ಉತ್ತರಗಳನ್ನು ಸಲ್ಲಿಸಲು ಇಲಾಖೆಗಳನ್ನು ಕೋರಲಾಗುತ್ತದೆ. ಉತ್ತರಗಳನ್ನು ಸ್ವೀಕರಿಸಿದಾಗ ಲೆಕ್ಕಪರಿಶೋಧನಾ ಅಂಶಗಳನ್ನು ಇತ್ಯರ್ಥಗೊಳಿಸಲಾಗುವುದು ಅಥವಾ ಅನುಪಾಲನೆಗಾಗಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲು ಸಲಹೆ ನೀಡಲಾಗುವುದು. ಈ ತಪಾಸಣಾ ವರದಿಗಳಲ್ಲಿನ ಪ್ರಮುಖ ಲೆಕ್ಕಪರಿಶೋಧನಾ ಅಂಶಗಳನ್ನು, ಭಾರತ ಸಂವಿಧಾನದ ಅನುಚ್ಛೇದ 151ರಡಿಯಲ್ಲಿ ವಿಧಾನ ಮಂಡಲದಲ್ಲಿ ಮಂಡಿಸುವ ಸಲುವಾಗಿ ರಾಜ್ಯಪಾಲರಿಗೆ ಸಲ್ಲಿಸಲಾಗುವ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲು ಸಂಸ್ಕರಿಸಲಾಗುವುದು.

2017–18ರ ಅವಧಿಯಲ್ಲಿ ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನಾ ವಿಭಾಗದಲ್ಲಿ 6,288 ತಂಡ ದಿನಗಳನ್ನು ಬಳಸಿ 507 ಘಟಕಗಳನ್ನು ಮತ್ತು ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ, ಎರಡು ಅನುಪಾಲನಾ ಲೆಕ್ಕಪರಿಶೋಧನೆಗಳನ್ನು ನಡೆಸಲಾಯಿತು.

## 1.6 ಪ್ರಮುಖ ಲೆಕ್ಕಪರಿಶೋಧನಾ ಅಭಿಪ್ರಾಯಗಳು

ಕಳೆದ ಕೆಲವು ವರ್ಷಗಳಲ್ಲಿ ಕಾರ್ಯನಿರ್ವಹಣಾ ಸಮೀಕ್ಷೆಗಳ ಮೂಲಕ ಹಲವಾರು ಕಾರ್ಯಕ್ರಮಗಳ/ ಚಟುವಟಿಕೆಗಳ ಅನುಷ್ಠಾನದಲ್ಲಿನ ಪ್ರಮುಖ ನ್ಯೂನತೆಗಳನ್ನು ಮತ್ತು ಕಾರ್ಯಕ್ರಮಗಳ ಸಫಲತೆಯ ಹಾಗೂ ಇಲಾಖೆಗಳ ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರುವ ಆಯ್ದ ಇಲಾಖೆಗಳಲ್ಲಿನ ಆಂತರಿಕ ನಿಯಂತ್ರಣಗಳ ಗುಣಮಟ್ಟದ ಬಗ್ಗೆ ಲೆಕ್ಕಪರಿಶೋಧನೆಯು ವರದಿ ಮಾಡಿದೆ. ಅದೇ ರೀತಿ ಸರ್ಕಾರಿ ಇಲಾಖೆಗಳ/ಸಂಸ್ಥೆಗಳ ವಹಿವಾಟುಗಳ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ನ್ಯೂನತೆಗಳನ್ನೂ ಸಹ ವರದಿ ಮಾಡಲಾಗಿದೆ.

### *1.6.1 ಕಾರ್ಯಕ್ರಮಗಳ/ಚಟುವಟಿಕೆಗಳ/ಇಲಾಖೆಗಳ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ*

ಪ್ರಸಕ್ತ ವರದಿಯು ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳನ್ನು ಒಳಗೊಂಡಿದೆ. ಅದರ ಮುಖ್ಯಾಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ನೀಡಲಾಗಿದೆ.

### 1.6.1.1 ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

ಸುಧಾರಿತ ಭೌತಿಕ ಸೌಲಭ್ಯ ಹಾಗೂ ಅರ್ಹ ಶಿಕ್ಷಕರ ಮೂಲಕ ಸಮಂಜಸ ಅಂತರದಲ್ಲಿ ಪ್ರೌಢಶಾಲೆ ಮತ್ತು ಪದವಿಪೂರ್ವ ಶಿಕ್ಷಣಕ್ಕೆ ಪ್ರವೇಶಾವಕಾಶ, ಗುಣಮಟ್ಟ ಮತ್ತು ಸಮಾನತೆಯನ್ನು ಸುಧಾರಿಸುವ ಉದ್ದೇಶದೊಂದಿಗೆ ಹಾಗೂ 14–18ರ ವಯೋಮಾನದ ಬಾಲಕಿಯರಿಗೆ, ಪರಿಶಿಷ್ಟ ಜಾತಿ ಮತ್ತು ಗಿರಿಜನ ಮತ್ತು ವಿಕಲಚೇತನ ಮಕ್ಕಳಿಗೆ ವಿಶೇಷ ಗಮನವನ್ನು ನೀಡಲು ಭಾರತ ಸರ್ಕಾರವು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವನ್ನು (ಆರ್‌ಎಮ್‌ಎಸ್‌ಎ) ಪ್ರಾರಂಭಿಸಿತು. ಮೇಲಿನ ಉದ್ದೇಶಗಳನ್ನು ಸಾಧಿಸಲಾಯಿತೆ ಎಂಬುದನ್ನು ನಿರ್ಧರಿಸಲು 2013–14ರಿಂದ 2017–18ರ ಅವಧಿಯಲ್ಲಿ ಆರ್‌ಎಮ್‌ಎಸ್‌ಎಯ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯೊಂದನ್ನು ನಡೆಸಲಾಯಿತು ಹಾಗೂ ನಾವು ಕೆಳಗಿನವುಗಳನ್ನು ಗಮನಿಸಿದೆವು:

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಸಮಿತಿ, ಕರ್ನಾಟಕ (ಆರ್‌ಎಮ್‌ಎಸ್‌ಎಎಸ್‌ಕೆ) ಲಭ್ಯವಿದ್ದ ಹಣವನ್ನು ಸಮಯಕ್ಕೆ ಸರಿಯಾಗಿ ಬಳಸಿಕೊಳ್ಳಲಿಲ್ಲ. 2013–14ರಿಂದ 2017–18ರ ಅವಧಿಯಲ್ಲಿ ಹಣದ ಬಳಕೆಯು ಶೇಕಡಾ 30 ಮತ್ತು 55ರ ನಡುವಿನ ವ್ಯಾಪ್ತಿಯಲ್ಲಿದ್ದಿತು. ಯೋಜನೆಯ ಪ್ರಮುಖ ಉದ್ದೇಶವನ್ನು ಶಾಲೆಗಳನ್ನು ಉನ್ನತೀಕರಿಸುವ/ಬಲಪಡಿಸುವುದಕ್ಕೆ ಕೇಂದ್ರೀಕರಿಸಲಾಗಿತ್ತು ಏಕೆಂದರೆ ಹಂಚಿಕೆಯಾದ ಶೇಕಡಾ 56ರಷ್ಟು ಹಣವನ್ನು ಅವುಗಳಿಗೆ ನೀಡಲಾಗಿದ್ದು, ಇದು ಕಂಪ್ಯೂಟರ್ ಶಿಕ್ಷಣ, ಪ್ರಯೋಗಶಾಲಾ ವಸ್ತುಗಳ ಮತ್ತು ಪೀಠೋಪಕರಣಗಳ ಖರೀದಿ ಮುಂತಾದ ಇತರ ಘಟಕಗಳನ್ನು ನಿರ್ಲಕ್ಷ್ಯ ಮಾಡಲು ಕಾರಣವಾಯಿತು.

**(ಕಂಡಿಕೆ 2.1.6)**

ಪ್ರವೇಶಾವಕಾಶವನ್ನು ಸುಧಾರಿಸಲು ಕರ್ನಾಟಕ ಮುನ್ನೋಟ ಯೋಜನೆಯು ಸಮಂಜಸ ಅಂತರದಲ್ಲಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿರಬೇಕೆಂದು ಉದ್ದೇಶಿಸಿತ್ತು. ಆದರೆ, ಮಾರ್ಚ್ 2018ರ ಅಂತ್ಯದಲ್ಲಿದ್ದಂತೆ 4,361 ವಾಸಸ್ಥಳಗಳಿಗೆ ಪ್ರೌಢ ಶಿಕ್ಷಣಕ್ಕೆ ಪ್ರವೇಶಾವಕಾಶವಿರಲಿಲ್ಲ. ಜೊತೆಗೆ, 2017ರೊಳಗೆ ರಾಷ್ಟ್ರ ಮಟ್ಟದ ಮಾದರಿಯೊಂದಿಗೆ ಶಾಲಾ ಶಿಕ್ಷಣದ ಸ್ವರೂಪವನ್ನು ಮರುರೂಪಿಸಲು ಮುನ್ನೋಟ ಯೋಜನೆಯು ಉದ್ದೇಶಿಸಿತ್ತಾದರೂ ಪದವಿಪೂರ್ವ ಶಿಕ್ಷಣವು ಪದವಿಪೂರ್ವ ಮಂಡಳಿಯಡಿಯಲ್ಲಿಯೇ ಕಾರ್ಯ ನಿರ್ವಹಿಸುವುದು ಮುಂದುವರೆದಿತ್ತು. ಹೀಗೆ ಎರಡೂ ಗುರಿಗಳನ್ನು ಸಾಧಿಸಲಾಗಿರಲಿಲ್ಲ.

**(ಕಂಡಿಕೆ 2.1.7.1)**

ಸಾಕಷ್ಟು ಶಾಲಾ ಕೊಠಡಿಗಳು, ಪ್ರಯೋಗಶಾಲೆಗಳು, ಗ್ರಂಥಾಲಯ, ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಮುಂತಾದ ಮೂಲಸೌಕರ್ಯಗಳ ಮೂಲಕ ಪ್ರೌಢ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಮುನ್ನೋಟ ಯೋಜನೆಯಲ್ಲಿ ನಿಗದಿಪಡಿಸಲಾಗಿದ್ದ ಗುರಿಯನ್ನು ಇನ್ನೂ ಸಾಧಿಸಬೇಕಿದೆ. ಸಿವಿಲ್ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವಿಳಂಬದಿಂದ 2009–10ರಿಂದ 2017–18 ಅವಧಿಯಲ್ಲಿ ಉನ್ನತೀಕರಣ/ಬಲಪಡಿಸುವಿಕೆಗೆ ಕೈಗೆತ್ತಿಕೊಂಡಿದ್ದ 2,396 ಶಾಲೆಗಳಲ್ಲಿ ಕೇವಲ 1,740 ಶಾಲೆಗಳನ್ನು ಮಾತ್ರ ಪೂರ್ಣಗೊಳಿಸಲಾಯಿತು, 140 ಶಾಲೆಗಳು ಪ್ರಗತಿಯಲ್ಲಿದ್ದವು ಮತ್ತು ಉಳಿದ 516 ಶಾಲೆಗಳನ್ನು ಇನ್ನೂ ಕೈಗೆತ್ತಿಕೊಂಡಿರಲಿಲ್ಲ. ಮಾರ್ಚ್ 2018ರಲ್ಲಿದ್ದಂತೆ, 1,367 ಮತ್ತು 1,494 ಶಾಲೆಗಳಿಗೆ ಅನುಕ್ರಮವಾಗಿ ದೊಡ್ಡ ಪ್ರಮಾಣದ/ಸಣ್ಣ ಪ್ರಮಾಣದ ದುರಸ್ತಿಗಳ ಅವಶ್ಯಕತೆಯಿದ್ದರೂ ಸಹ ಆರ್‌ಎಮ್‌ಎಸ್‌ಎಎಸ್‌ಕೆ ಅವುಗಳನ್ನು ಕೈಗೆತ್ತಿಕೊಂಡಿರಲಿಲ್ಲ. ಸರ್ಕಾರಿ ಶಾಲೆಗಳಲ್ಲಿನ ಶಾಲಾಕೊಠಡಿ ಮತ್ತು ವಿದ್ಯಾರ್ಥಿಗಳ ಅನುಪಾತವು ನಿಗದಿಪಡಿಸಿದ 1:40 ರಷ್ಟಿದ್ದರೂ, ಶಿಕ್ಷಣ ಇಲಾಖೆಯು ನಿರ್ವಹಿಸುತ್ತಿರುವ 4,677 ಸರ್ಕಾರಿ ಶಾಲೆಗಳಲ್ಲಿ 2,721 ಶಾಲೆಗಳಲ್ಲಿ ಅನುಪಾತವು 1:41ರಿಂದ 1:69ರ ನಡುವಿನ ವ್ಯಾಪ್ತಿಯಲ್ಲಿದ್ದಿತೆಂದು ಶಾಲಾವಾರು ವಿಶ್ಲೇಷಣೆಯು ತೋರಿಸಿತು.

**[(ಕಂಡಿಕೆ 2.1.8.1 (ಎ) (ಸಿ) ಮತ್ತು (ಇ)]**

ರಾಜ್ಯದ ವಿದಾರ್ಥಿ–ಶಿಕ್ಷಕರ ಅನುಪಾತವು (ಪಿಟಿಆರ್) ನಿಗದಿತ 30:1 ರೊಳಗಿದ್ದಿತು. ಆದರೆ, ಶಾಲಾ ಮಟ್ಟದಲ್ಲಿ ಶಿಕ್ಷಕರ ನಿಯೋಜನೆಯಲ್ಲಿ ಯಾವುದೇ ಮೇಲ್ವಿಚಾರಣೆಯ ಇರಲಿಲ್ಲವಾದ್ದರಿಂದ 874 ಶಾಲೆಗಳಲ್ಲಿ ಪಿಟಿಆರ್ ಅನುಪಾತವು 30:1ಕ್ಕಿಂತ ಅಧಿಕವಾಗಿದ್ದಿತು. ಪ್ರತಿಯೊಂದು ಶಾಲೆಯಲ್ಲಿಯೂ ವಿಷಯವಾರು ಶಿಕ್ಷಕರನ್ನು ನಿಯೋಜಿಸುವುದು ಅಗತ್ಯವಾಗಿದೆ ಎಂದು ಆರ್‌ಎಮ್‌ಎಸ್‌ಎ ನಿಗದಿಪಡಿಸಿದ್ದರೂ ಸಹ 15,666 ಶಾಲೆಗಳ ಪೈಕಿ 642, 491 ಮತ್ತು 500 ಶಾಲೆಗಳಲ್ಲಿ ಅನುಕ್ರಮವಾಗಿ ಪ್ರಮುಖ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿಗೆ ಶಿಕ್ಷಕರೇ ಇರಲಿಲ್ಲ.

**[(ಕಂಡಿಕೆ 2.1.8.3 (ಬಿ) (ಸಿ)]**

ಪರೀಕ್ಷಾ–ತನಿಖೆ ನಡೆಸಿದ 342 ಶಾಲೆಗಳಲ್ಲಿ ನಾವು ಕೆಳಕಂಡಂತೆ ಗಮನಿಸಿದೆವು:

- 22 ಶಾಲೆಗಳಲ್ಲಿ ಸಾಕಷ್ಟು ಶಾಲಾ ಕೊಠಡಿಗಳಿರಲಿಲ್ಲ;
- 65 ಶಾಲೆಗಳಲ್ಲಿ ವಿಜ್ಞಾನ ಮತ್ತು ಕಂಪ್ಯೂಟರ್ ಪ್ರಯೋಗಶಾಲೆಗಳಿರಲಿಲ್ಲ;
- 199 ಶಾಲೆಗಳಲ್ಲಿ ಗ್ರಂಥಾಲಯ ಸೌಲಭ್ಯ ಇದೆಯೆಂದು ಹೇಳಲಾಗಿದ್ದರೂ ಸಹ 99 ಶಾಲೆಗಳಲ್ಲಿ ಪ್ರತ್ಯೇಕ ಗ್ರಂಥಾಲಯ ಸೌಲಭ್ಯ ಇರಲಿಲ್ಲ;
- ಒಂದು ಶಾಲೆಯ ಹೊರತಾಗಿ ಎಲ್ಲ ಶಾಲೆಗಳೂ ಶೌಚಾಲಯ ಸೌಲಭ್ಯವನ್ನು ಹೊಂದಿದ್ದರೂ ಸಹ ಹಲವಾರು ಶಾಲೆಗಳಲ್ಲಿ ಶೌಚಾಲಯಗಳ ನಿರ್ವಹಣೆಯ ಕೊರತೆಯಿದ್ದಿತು (163ರಲ್ಲಿ 52); ಮತ್ತು
- ರಾಜ್ಯವು ನಿಗದಿಪಡಿಸಿದ್ದ ಮಾನದಂಡಗಳ ಅನ್ವಯ 252 ರಲ್ಲಿ 73 ಅನುದಾನಿತ ಮತ್ತು ಅನುದಾನಿತವಲ್ಲದ ಶಾಲೆಗಳಲ್ಲಿ ಮೂಲಸೌಕರ್ಯ ಮತ್ತು ಬೋಧನಾ ಸೌಲಭ್ಯಗಳು ಇರಲಿಲ್ಲವಾದರೂ ಸಹ ಶಾಲೆಗಳ ನೋಂದಣಿಯನ್ನು ನವೀಕರಿಸಲಾಗಿತ್ತು.

**[ಕಂಡಿಕೆಗಳು 2.1.8.1 (ಇ) ಮತ್ತು 2.1.8.2]**

ಮಾದರಿ ಶಾಲೆಗಳ ನಿರ್ಮಾಣದಲ್ಲಿ ಮತ್ತು ಈ ಮಾದರಿ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿಯಲ್ಲಿನ ವಿಳಂಬದಿಂದ ಈ ಶಾಲೆಗಳು ಕೇಂದ್ರೀಯ ವಿದ್ಯಾಲಯಗಳ ಗುಣಮಟ್ಟವನ್ನು ಇನ್ನೂ ಸಾಧಿಸಬೇಕಿದೆ. ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಲು ವೃತ್ತಿಪರ ಶಿಕ್ಷಣವನ್ನು ಆರ್‌ಎಮ್‌ಎಸ್‌ಎ ಆಲೋಚಿಸಿದ್ದರೂ ಸಹ ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡಲಾಗಿಲ್ಲ ಅಥವಾ ಪ್ರಾವೀಣ್ಯತೆಯ ಪ್ರಮಾಣಪತ್ರವನ್ನು ನೀಡಿಲ್ಲವಾದ್ದರಿಂದ ರಾಜ್ಯವು ವೃತ್ತಿಪರ ಶಿಕ್ಷಣವನ್ನು ಇನ್ನೂ ಪ್ರೌಢ ಶಿಕ್ಷಣ ವ್ಯವಸ್ಥೆಯೊಂದಿಗೆ ಸಂಯೋಜಿಸಲು ಇನ್ನೂ ಸಾಧ್ಯವಾಗಿಲ್ಲ.

**(ಕಂಡಿಕೆಗಳು 2.1.10.1 ಮತ್ತು 2.1.10.2)**

ಪ್ರೌಢ ಶಿಕ್ಷಣದಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು 2009–10ರಲ್ಲಿನ ಶೇಕಡಾ 75ರಿಂದ 2017–18ರಲ್ಲಿ ಶೇಕಡಾ 82ಕ್ಕೆ ಸುಧಾರಿಸಲು ರಾಜ್ಯಕ್ಕೆ ಸಾಧ್ಯವಾಯಿತು. ಆದರೆ, 2017ರೊಳಗೆ ಅದು ಇನ್ನೂ ಶೇಕಡಾ 100ರಷ್ಟು ಜಿಇಆರ್ ಅನ್ನು ಸಾಧಿಸಬೇಕಿದೆ. ರಾಜ್ಯದ ಜಿಇಆರ್ ಶೇಕಡಾ 82ಕ್ಕೆ ಪ್ರತಿಯಾಗಿ ಬಾಲಕಿಯರ, ಎಸ್‌ಸಿ ಮತ್ತು ಎಸ್‌ಟಿ ಮಕ್ಕಳ ಜಿಇಆರ್ ಅನುಕ್ರಮವಾಗಿ ಶೇಕಡಾ 83, 79 ಮತ್ತು 73 ರಷ್ಟಿತ್ತು. ಕರ್ನಾಟಕ ಮುನ್ನೋಟ ಯೋಜನೆಯಲ್ಲಿ ಆಲೋಚಿಸಿದಂತೆ ಶೇಕಡಾ 100ರಷ್ಟು ಗುರಿಯನ್ನು ರಾಜ್ಯ ಸಾಧಿಸದಿದ್ದರೂ ಸಹ ಪ್ರೌಢ ಶಿಕ್ಷಣದಲ್ಲಿ ವಿಶೇಷ ಗುಂಪಿನ ಸಮಾನ ಭಾಗವಹಿಸುವಿಕೆಯನ್ನು ಅದು ಬಹುತೇಕ ಖಚಿತಪಡಿಸಿಕೊಂಡಿತ್ತು. ಆದರೆ, ಪ್ರೌಢ ಶಿಕ್ಷಣದಲ್ಲಿ ವಿಕಲಚೇತನ ಮಕ್ಕಳ ಭಾಗವಹಿಸುವಿಕೆಯನ್ನು ಅದು ಮೇಲ್ವಿಚಾರಣೆ ಮಾಡಿರಲಿಲ್ಲ.

**(ಕಂಡಿಕೆಗಳು 2.1.9.2 ಮತ್ತು 2.1.11.2)**

ಪರಿಣಾಮಕಾರಿಯಲ್ಲದ ಯೋಜನೆಯ ಕಾರಣದಿಂದ ವಾರ್ಷಿಕ ಮತ್ತು ಮುನ್ನೋಟ ಯೋಜನೆಗಳು ಅಗತ್ಯತೆಗಳ ಆಧಾರಿತವಾಗಿರಲಿಲ್ಲ ಮತ್ತು ವಾಸ್ತವವಾಗಿರಲಿಲ್ಲ. ಇದು ಎಲ್ಲಾ ಮಟ್ಟದಲ್ಲಿಯೂ ದೋಷಪೂರಿತ ಮೇಲ್ವಿಚಾರಣೆಯೊಂದಿಗೆ ಸೇರಿ ಮೂಲತಃ ಪ್ರೌಢ ಶಿಕ್ಷಣದ ಪ್ರವೇಶಾವಕಾಶ ಮತ್ತು ಗುಣಮಟ್ಟವನ್ನು ಸುಧಾರಿಸುವ ಉದ್ದೇಶಗಳನ್ನು ಆರ್‌ಎಮ್‌ಎಸ್‌ಎ ಸಾಧಿಸದಿರುವಲ್ಲಿ ಪರಿಣಮಿಸಿತು. ಹೀಗೆ, ರಾಜ್ಯದ ಮಧ್ಯಸ್ತಿಕೆಗೆ ಹೋಲಿಸಿದರೆ ಹಣಕಾಸಿನ ಮತ್ತು ಫಲಿತಾಂಶದ ಸೂಚಕಗಳಲ್ಲಿ ಪ್ರೌಢ ಶಿಕ್ಷಣದ ಮೇಲೆ ಆರ್‌ಎಮ್‌ಎಸ್‌ಎ ಪ್ರಭಾವವು ಗೋಚರಿಸಲಿಲ್ಲ.

**(ಕಂಡಿಕೆ 2.1.12)**

### *1.6.2 ಅನುಪಾಲನಾ ಲೆಕ್ಕಪರಿಶೋಧನೆ*

ಸರ್ಕಾರಿ ಇಲಾಖೆಗಳು/ಸಂಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವುದನ್ನು ಪ್ರಭಾವಿಸುವ ಮಹತ್ವದ ಕ್ಷೇತ್ರಗಳಲ್ಲಿನ ಹಲವಾರು ಪರಮುಖ ನ್ಯೂನತೆಗಳನ್ನು ಸಹ ಲೆಕ್ಕಪರಿಶೋಧನೆಯು ವರದಿ ಮಾಡಿತು. ಕೆಲವು ಪ್ರಮುಖ ಲೆಕ್ಕಪರಿಶೋಧನಾ ಅಂಶಗಳು ಕೆಳಕಂಡಂತಿವೆ:

### *1.6.2.1 ಕರ್ನಾಟಕದಲ್ಲಿ ಭಾಷೆ ಮತ್ತು ಸಂಸ್ಕೃತಿಯ ಪ್ರಚಾರ ಮತ್ತು ಪ್ರಸರಣದ ಮೇಲಿನ ಅನುಪಾಲನಾ ಲೆಕ್ಕಪರಿಶೊಧನೆ*

ಕನ್ನಡ ಭಾಷೆಯ ಅಭಿವೃದ್ಧಿ ಮತ್ತು ಸಂಸ್ಕೃತಿಯ ಉತ್ತೇಜನವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖ್ಯ ಉದ್ದೇಶವಾಗಿತ್ತು. ಇಲಾಖೆಯು 42 ವರ್ಷಗಳ ನಂತರ ಸಾಂಸ್ಕೃತಿಕ ನೀತಿಯೊಂದನ್ನು ಹೊರತಂದಿದ್ದರೂ ಸಹ ನೀತಿಯಲ್ಲಿರುವ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಕಾರ್ಯ ಯೋಜನೆಯನ್ನು ರೂಪಿಸಬೇಕಾದ ಅವಶ್ಯಕತೆಯಿದೆ. ಅಗತ್ಯವಿದ್ದ ಮೂಲಸೌಕರ್ಯಗಳನ್ನು ಪಡೆದುಕೊಳ್ಳುವಲ್ಲಿನ ರಾಜ್ಯದ ಪರಿಣಾಮಕಾರಿಯಲ್ಲದ ಕ್ರಮವು ಬೆಂಗಳೂರಿನಲ್ಲಿ ಶಾಸ್ತ್ರೀಯ ಕನ್ನಡದ ಅಧ್ಯಯನಕ್ಕಾಗಿ ಮೀಸಲಿಟ್ಟ ಕೇಂದ್ರದ ಸ್ಥಾಪನೆಯಾಗದಿರುವಲ್ಲಿ ಪರಿಣಮಿಸಿತು. ತತ್ಪರಿಣಾಮವಾಗಿ ಭಾರತ ಸರ್ಕಾರದ ಅನುದಾನಗಳ ಬಳಕೆಯು ನಿಧಾನ ಗತಿಯಲ್ಲಿತ್ತು. ಇದರ ಜೊತೆಗೆ ವೈಯಕ್ತಿಕವಾಗಿ/ ಸಂಸ್ಥೆಗಳನ್ನು ಪ್ರೋತ್ಸಾಹಿಸುವ/ಗೌರವಿಸುವುದಕ್ಕೆ ವಿವಿಧ ಯೋಜನೆ/ಕಾರ್ಯಕ್ರಮಗಳನ್ನು ಸರ್ಕಾರವು ರಚಿಸಿದ್ದರೂ ಸಹ ಮಾರ್ಗದರ್ಶಿ ಸೂತ್ರಗಳನ್ನು ತಯಾರಿಸುವಲ್ಲಿನ ಲೋಪದೋಷಗಳಿಂದ ಮತ್ತು ಅನುಪಾಲಿಸದಿರುವುದರಿಂದ ಸಾಹಿತ್ಯವನ್ನು ಪ್ರಚಾರ ಮಾಡುವ ಉದ್ದೇಶವನ್ನು ಸಾಧಿಸಲಾಗಲಿಲ್ಲವಾಗಿ ಅದು ಹಣಕಾಸಿನ ನೆರವನ್ನು ಅರ್ಹವಲ್ಲದ ಸಂಸ್ಥೆಗಳಿಗೆ/ಟ್ರಸ್ಟ್‌ಗಳಿಗೆ ಬಿಡುಗಡೆ ಮಾಡುವಲ್ಲಿ ಮತ್ತು ನೆರವನ್ನು ಬಿಡುಗಡೆ ಮಾಡಿದ ಉದ್ದೇಶಕ್ಕೆ ಅದನ್ನು ಬಳಸಿಕೊಳ್ಳದಿರುವಲ್ಲಿ ಪರಿಣಮಿಸಿತು. 2013–14ರಿಂದ 2017–18ರ ಅವಧಿಯಲ್ಲಿ ವಿವಿಧ ಪ್ರಾಧಿಕಾರಗಳಿಗೆ, ಅಕ್ಯಾಡೆಮಿಗಳಿಗೆ, ಪರಿಷತ್‌ಗಳಿಗೆ ಮತ್ತು ರಂಗಾಯಣಗಳಿಗೆ ಬಿಡುಗಡೆ ಮಾಡಿದ ಅನುದಾನಗಳಲ್ಲಿ ಕೆಲವು ಭಾಗ ಬಳಕೆಯಾಗದೇ ಸರ್ಕಾರೀ ಲೆಕ್ಕದಿಂದ ಹೊರಗೆ ಉಳಿಯಿತು. ಇದು ಅನುದಾನಗಳ ಬಳಕೆಯನ್ನು ಮೇಲ್ವಿಚಾರಣೆ ಮಾಡುವಲ್ಲಿನ ಲೋಪವನ್ನು ಸೂಚಿಸುತ್ತಿತ್ತು. ಹೀಗೆ, ಕನ್ನಡ ಮತ್ತು ಸಂಸ್ಕೃತಿಯ ಪ್ರಚಾರ ಮತ್ತು ಪ್ರಸರಣದ ಮೇಲೆ ಸರ್ಕಾರವು ಬೃಹತ್ ಮೊತ್ತಗಳನ್ನು ಬಿಡುಗಡೆ ಮಾಡಿದರೂ ಸಹ ಇಲಾಖೆಯು ಗುರಿಯನ್ನು ಬಹಳಮಟ್ಟಿಗೆ ಸಾಧಿಸಲಾಗಲಿಲ್ಲ.

**(ಕಂಡಿಕೆ 3.1)**

### *1.6.2.2 ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯಗಳ ನಿರ್ಮಾಣ ಮತ್ತು ನಿರ್ವಹಣೆಯ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆ*

ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ರಾಜ್ಯ ಸರ್ಕಾರವು ಯಾವುದೇ ಮಾರ್ಗದರ್ಶಿ ಸೂತ್ರಗಳನ್ನು ಹೊರತರಲಿಲ್ಲ. ಬ್ಯಾಡಗಿಯಲ್ಲಿ ವಿದ್ಯಾರ್ಥಿನಿಲಯದ ನಿರ್ಮಾಣವಾಗದಿರುವುದು ಮತ್ತು ಬೆಟಗೇರದಲ್ಲಿನ ಅಪೂರ್ಣ ಕಾಮಗಾರಿಯು ವಿದ್ಯಾರ್ಥಿನಿಲಯಗಳ ನಿರ್ಮಾಣದಲ್ಲಿ ಸೂಕ್ತ ಯೋಜನೆ/ಆದ್ಯತೀಕರಣದ ಅಭಾವವನ್ನು ಸೂಚಿಸುತ್ತದೆ.

ರಾಜ್ಯದಲ್ಲಿನ ವಿದ್ಯಾರ್ಥಿನಿಲಯಗಳಲ್ಲಿ ಸ್ಥಳಾವಕಾಶ ಮಾಡಿಕೊಟ್ಟ ವಿದ್ಯಾರ್ಥಿಗಳ ಸಂಖ್ಯೆಯು ನಿಗದಿಪಡಿಸಿದ್ದ ಸಂಖ್ಯೆಗಿಂತ ಅಧಿಕವಾಗಿದ್ದಿತು. ವಿದ್ಯಾರ್ಥಿನಿಲಯಗಳ ಮಂಜೂರಾತಿ ಬಲವನ್ನು ಲೆಕ್ಕಿಸದೇ ವಿದ್ಯಾರ್ಥಿನಿಲಯಕ್ಕೆ ಪ್ರವೇಶಾವಕಾಶ ಕೋರಿದ್ದ ಎಲ್ಲ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಿಕೊಡಲು ಸಮಾಜಕಲ್ಯಾಣ ಇಲಾಖೆಗೆ ರಾಜ್ಯ ಸರ್ಕಾರವು ನಿರ್ದೇಶನ ನೀಡದಿರುವುದೇ (ಜುಲೈ 2013) ಇದಕ್ಕೆ ಕಾರಣವಾಗಿತ್ತು.

16 ತಾಲ್ಲೂಕುಗಳ ಪರೀಕ್ಷಾ–ತನಿಖೆ ನಡೆಸಿದ 190 ರಲ್ಲಿ 74 ವಿದ್ಯಾರ್ಥಿನಿಲಯಗಳು (ಶೇಕಡಾ 39) ತಮ್ಮ ಸಾಮರ್ಥ್ಯಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ನೀಡಿದ್ದವು. 10 ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಶೇಕಡಾ 100ಕ್ಕಿಂತ ಅಧಿಕವಾಗಿತ್ತು. ಇನ್ನೊಂದು ಕಡೆ 85 ವಿದ್ಯಾರ್ಥಿ ನಿಲಯಗಳನ್ನು (ಶೇಕಡಾ 45) ಕಡಿಮೆ ಬಳಕೆ ಮಾಡಿಕೊಳ್ಳಲಾಗಿತ್ತು. 18 ವಿದ್ಯಾರ್ಥಿನಿಲಯಗಳಲ್ಲಿ ಕಡಿಮೆ ಬಳಕೆಯ ಪ್ರಮಾಣವು ಶೇಕಡ 10ಕ್ಕಿಂತ ಕಡಿಮೆಯಿದ್ದಿತು ಮತ್ತು 30 ವಿದ್ಯಾರ್ಥಿನಿಲಯಗಳಲ್ಲಿ ಅದು ಶೇಕಡಾ 12ರಿಂದ 25ರಷ್ಟಿತ್ತು. 26 ವಿದ್ಯಾರ್ಥಿನಿಲಯಗಳಲ್ಲಿನ ಕಡಿಮೆಬಳಕೆಯ ಪ್ರಮಾಣವು ಶೇಕಡಾ 26ರಿಂದ 50ರಷ್ಟಿದ್ದರೆ, ಉಳಿದ 11 ವಿದ್ಯಾರ್ಥಿನಿಲಯಗಳಲ್ಲಿ ಅದು ಶೇಕಡಾ 53ರಿಂದ 83ರಷ್ಟಿದ್ದಿತು. ಬಾಲಕರ ವಿದ್ಯಾರ್ಥಿನಿಲಯಗಳಿಗೆ ಹೋಲಿಸಿದರೆ ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅಧಿಕವಾಗಿದ್ದಿತು.

ಕೆಟಿಪಿಪಿ ಕಾಯಿದೆ, 1999ಡಿ ಕಲಮು 4(ಜಿ) ಅಡಿಯಲ್ಲಿ ನೀಡಲಾದ ವಿನಾಯಿತಿಯು ಕೇಂದ್ರ ಜಾಗೃತ ಆಯೋಗದ ಮಾರ್ಗದರ್ಶಿ ಸೂತ್ರಗಳನ್ನು ಉಲ್ಲಂಘಿಸಿತ್ತು ಮತ್ತು ಘನತೆವೆತ್ತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧವಾಗಿದೆ. ಇದು ಏಜೆನ್ಸಿಗಳಿಗೆ ನಾಮನಿರ್ದೇಶನದ ಆಧಾರದ ಮೇಲೆ ಅವ್ಯವಸ್ಥಿತವಾಗಿ ಕಾಮಗಾರಿಗಳನ್ನು ವಹಿಸುವಲ್ಲಿ ಪರಿಣಮಿಸಿತು. ನಿರ್ಮಾಣ ಏಜೆನ್ಸಿಗಳಿಂದ ಕಾಮಗಾರಿಗಳನ್ನು ಪ್ರಾರಂಭ ಮಾಡುವಲ್ಲಿ ಮತ್ತು ಪೂರ್ಣಗೊಳಿಸುವಲ್ಲಿ ವಿಳಂಬಗಳಿದ್ದವು. ಸಂಹಿತೆಯ ಉಪಬಂಧಗಳನ್ನು ಉಲ್ಲಂಘಿಸಿ ₹45.63 ಕೋಟಿ ಅಂದಾಜು ವೆಚ್ಚದ 12 ಕಾಮಗಾರಿಗಳನ್ನು ನಿವೇಶನಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ಇಲಾಖೆಯು ಏಜೆನ್ಸಿಗಳಿಗೆ ವಹಿಸಿತ್ತು.

2013–14ರಿಂದ 2015–16ರ ಅವಧಿಯಲ್ಲಿ ಕೈಗೆತ್ತಿಕೊಂಡ ದುರಸ್ತಿ/ನವೀಕರಣ ಕಾಮಗಾರಿಗಳ ವಿವರಗಳನ್ನು ಇಲಾಖೆಯು ಒದಗಿಸಲಿಲ್ಲ. ಅಲ್ಲದೆ, 2016–17 ಮತ್ತು 2017–18ರ ಅವಧಿಯಲ್ಲಿ ಪೂರ್ಣಗೊಳ್ಳಲು ಆರು ತಿಂಗಳ ಅವಧಿಯನ್ನು ನಿಗದಿಪಡಿಸಿದ್ದ ಕೈಗೆತ್ತಿಕೊಂಡ 755ರಲ್ಲಿ 376 ಕಾಮಗಾರಿಗಳನ್ನು (ಶೇಕಡಾ 50) ಇನ್ನೂ ಪೂರ್ಣಗೊಳಿಸಿರಲಿಲ್ಲ. ದುರಸ್ತಿ/ನವೀಕರಣ ಕಾಮಗಾರಿಗಳನ್ನು ಕಾರ್ಯಗತಗೊಳಿಸದೇ ಪೂರ್ಣಗೊಂಡಿದೆ ಎಂದು ತಪ್ಪಾಗಿ ವರದಿ ಮಾಡಿದ್ದ ಪ್ರಕರಣಗಳಿದ್ದವು.

ಪರೀಕ್ಷಾ–ತನಿಖೆ ನಡೆಸಿದ ವಿದ್ಯಾರ್ಥಿನಿಲಯಗಳಲ್ಲಿ ನಿವಾಸಿಗಳಿಗೆ ಮಂಚಗಳು, ಹಾಸಿಗೆಗಳು, ಮ್ಯಾಟ್ರೆಸ್‌ಗಳು, ಶೌಚಾಲಯಗಳು ಮತ್ತು ಸ್ನಾನಗೃಹಗಳು ಮುಂತಾದ ಸೌಕರ್ಯಗಳನ್ನು ಒದಗಿಸುವಲ್ಲಿ ನ್ಯೂನತೆಗಳಿದ್ದವು.

ಟೆಂಡರ್ ಪ್ರಕ್ರಿಯೆಯು ಕೆಟಿಟಿಪಿ ಅಧಿನಿಯಮ, 1999ರ ನಿಬಂಧನೆಗಳಿಗೆ ಅನುಗುಣವಾಗಿರಲಿಲ್ಲ. ಟೆಂಡರ್‌ಗಳ ಮೌಲ್ಯಮಾಪನವು ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವ ಮಾನದಂಡಗಳಿಗೆ ಅನುಗುಣವಾಗಿರಲಿಲ್ಲ. ಗುತ್ತಿಗೆದಾರರ ಸಾಮರ್ಥ್ಯಕ್ಕೆ ಮೀರಿ ಹಲವಾರು ಕಾಮಗಾರಿಗಳನ್ನು ವಹಿಸಿದ್ದು ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ತೀವ್ರವಾದ ವಿಳಂಬವಾಗುವುದರಲ್ಲಿ ಪರಿಣಮಿಸಿತು.

ಶಾಸನಬದ್ಧ ಕಡಿತಗಳು ಮತ್ತು ಎಫ್‌ಎಸ್‌ಡಿಯನ್ನು ಕಡಿತ ಮಾಡದೇ ನಿರ್ಮಾಣ ಏಜೆನ್ಸಿಗಳಿಗೆ ಹಣವನ್ನು ಒಟ್ಟಾರೆ ಮೊತ್ತವನ್ನಾಗಿ ಬಿಡುಗಡೆ ಮಾಡಿದ್ದು ₹14.86 ಕೋಟಿ ಮೊತ್ತದ ಆದಾಯ ತೆರಿಗೆ ಮತ್ತು ₹37.16 ಕೋಟಿ ಎಫ್‌ಎಸ್‌ಡಿಯು ವಸೂಲಾಗದಿರುವಲ್ಲಿ ಪರಿಣಮಿಸಿತು. ನಿರ್ಮಾಣ ಏಜೆನ್ಸಿಗಳು ನಿರ್ಮಾಣದ ನಂತರದ ಉಳಿತಾಯಗಳನ್ನು ಇಲಾಖೆಗೆ ಜಮೆ ಮಾಡದೇ ತಮ್ಮ ಬಳಿಯೇ ಉಳಿಸಿಕೊಂಡವು. ನಿರ್ಮಾಣ ಏಜೆನ್ಸಿಗಳು/ಇಲಾಖಾ ಅಧಿಕಾರಿಗಳು ಮಂಜೂರಾತಿ ಆದೇಶಗಳಲ್ಲಿ ನಿಗದಿಪಡಿಸಿದ್ದ ವಿವಿಧ ಸೂಚನೆಗಳನ್ನು ಪಾಲಿಸಲಿಲ್ಲವಾಗಿ ಅದು ಪರಿಣಾಮಕಾರಿ ಮೇಲ್ವಿಚಾರಣೆಯ ಅನುಪಸ್ಥಿತಿಯಲ್ಲಿ ಪರಿಣಮಿಸಿತು.

**(ಕಂಡಿಕೆ 3.2)**

### 1.6.2.3 ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಇತರೆ ಅಂಶಗಳು

ಬಿಲ್ಲುಗಳ ತಯಾರಿಕೆ ಮತ್ತು ಮೇಲ್ವಿಚಾರಣೆಯಲ್ಲಿ ಕರ್ನಾಟಕ ಹಣಕಾಸು ಸಂಹಿತೆ, 1958ರಲ್ಲಿ ತಿಳಿಸಿರುವ ನಿಬಂಧನೆಗಳನ್ನು ಅನುಸರಿಸುವಲ್ಲಿ ಪಾವಗಡ ತಾಲ್ಲೂಕು ಆರೋಗ್ಯಾಧಿಕಾರಿಗಳ ವಿಫಲತೆಯು ಅದೇ ಕಛೇರಿಯ ಪ್ರಥಮ ದರ್ಜೆ ಸಹಾಯಕ ₹2.81 ಲಕ್ಷವನ್ನು ದುರುಪಯೋಗಪಡಿಸಿಕೊಳ್ಳುವಲ್ಲಿ ಪರಿಣಮಿಸಿತು.

**(ಕಂಡಿಕೆ 3.3)**

ಸೆಳೆದ ಮೊತ್ತಕ್ಕಾಗಿ ಲೆಕ್ಕವನ್ನು ಸಲ್ಲಿಸುವಲ್ಲಿನ ಪದವಿಪೂರ್ವ ಇಲಾಖೆ, ಬಳ್ಳಾರಿಯ ಉಪನಿರ್ದೇಶಕರ ವಿಫಲತೆ ಮತ್ತು ಕರ್ನಾಟಕ ಲೆಕ್ಕಸಂಹಿತೆಯ ನಿಬಂಧನೆಗಳ ಅನ್ವಯ ನಗದು ಪುಸ್ತಕವನ್ನು ನಿರ್ವಹಿಸದಿರುವುದು ₹ಆರು ಲಕ್ಷ ಸಂದೇಹಾಸ್ಪದ ದುರುಪಯೋಗದಲ್ಲಿ ಪರಿಣಮಿಸಿತು.

**(ಕಂಡಿಕೆ 3.4)**

ಕೆಲವು ನಿಗದಿತ ದಿನಾಂಕಗಳಂದು ಮಾತ್ರವೇ ಹಣವನ್ನು ವರ್ಗಾವಣೆ ಮಾಡಬೇಕೆನ್ನುವ ತನ್ನ ಸೂಚನೆಗಳ ಕಾರಣದಿಂದಾಗಿ ಕರ್ನಾಟಕ ಗೃಹಮಂಡಳಿಯು ತನ್ನ ಹಣದ ಅಗತ್ಯತೆಯನ್ನು ಮೇಲ್ವಿಚಾರಣೆ ಮಾಡಲಾಗಲಿಲ್ಲ. ಇದು ಓವರ್‌ಡ್ರಾಫ್ಟ್ ಮೊತ್ತದ ಮೇಲೆ ₹0.63 ಕೋಟಿ ತಪ್ಪಿಸಬಹುದಾಗಿದ್ದ ಹಣಕಾಸು ಶುಲ್ಕದಲ್ಲಿ ಪರಿಣಮಿಸಿತು.

**(ಕಂಡಿಕೆ 3.5)**

ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಯು 'ಬಿದಾಯಿ' ಯೋಜನೆಯಡಿಯಲ್ಲಿ ಫಲಾನುಭವಿಗಳು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸದೇ ಅನರ್ಹ ಫಲಾನುಭವಿಗಳಿಗೆ ₹50 ಲಕ್ಷ ಹಣಕಾಸಿನ ನೆರವನ್ನು ನೀಡಿತು.

**(ಕಂಡಿಕೆ 3.6)**

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಇತರೆ ನಿಬಂಧನೆಗಳ ಅಧಿನಿಯಮ, 1952 ಮತ್ತು ಉದ್ಯೋಗಿಗಳ ರಾಜ್ಯ ವಿಮಾ ಅಧಿನಿಯಮ, 1948ರ ರ ನಿಬಂಧನೆಗಳನ್ನು ಅನುಪಾಲಿಸಲು ವಿಫಲವಾಯಿತು. ತತ್ಪರಿಣಾಮವಾಗಿ ಮಂಡಳಿಯು ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಉದ್ಯೋಗಿಗಳ ರಾಜ್ಯ ವಿಮೆಯ ಕಡೆಗೆ ಶಾಸನಬದ್ಧ ಪಾವತಿಗಳನ್ನು ಮಾಡಲಿಲ್ಲ ಮತ್ತು ಅದು ₹1.09 ಕೋಟಿಗಳಷ್ಟಾಗಿತ್ತು.

**(ಕಂಡಿಕೆ 3.7)**

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕರ್ನಾಟಕ ಪಠ್ಯಪುಸ್ತಕ ಸೊಸೈಟಿಯು ಸರ್ಕಾರದ ಆದೇಶ ಮತ್ತು ಸೂಚನೆಗಳನ್ನು ಅನುಪಾಲಿಸದಿರುವುದು ₹1.13 ಕೋಟಿ ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿತು.

**(ಕಂಡಿಕೆ 3.8)**

ಭೂಸ್ವಾಧೀನ ಅಂತಿಮ ಅಧಿಸೂಚನೆಯಲ್ಲಿ ಭೂಮಿಯನ್ನು ತಪ್ಪಾಗಿ ವರ್ಗೀಕರಿಸಿದ್ದು ಹಾಗೂ ಸರ್ಕಾರವು ಸಮಯಕ್ಕೆ ಸರಿಯಾಗಿ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳದಿದ್ದುದು ಭೂಮಾಲೀಕರುಗಳಿಗೆ ₹10.53 ಕೋಟಿ ತಪ್ಪಿಸಬಹುದಾಗಿದ್ದ ಪರಿಹಾರ ಪಾವತಿಯಲ್ಲಿ ಪರಿಣಮಿಸಿತು.

**(ಕಂಡಿಕೆ 3.9)**

ಹರಪನಹಳ್ಳಿಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ದಾವಣಗೆರೆ ಜಿಲ್ಲೆಯ ನೀರು ಸರಬರಾಜು ಯೋಜನೆಗಳಿಗೆ ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ವಿಫಲರಾಗಿದ್ದು ₹47.55 ಕೋಟಿ ನಿಷ್ಫಲ ವೆಚ್ಚದಲ್ಲಿ ಪರಿಣಮಿಸಿತು ಮತ್ತು ಸುರಕ್ಷಿತ ಕುಡಿಯುವ ನೀರನ್ನು ವಂಚಿಸಿದಂತಾಯಿತು.

**(ಕಂಡಿಕೆ 3.10)**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಕರ್ನಾಟಕ ಶಿಕ್ಷಣ ಅಧಿನಿಯಮ, 1983ರನ್ನು ಉಲ್ಲಂಘನೆ ಮಾಡಿ ಗ್ರಾಮಪಂಚಾಯತಿಗಳು ಶಿಕ್ಷಣ ಉಪಕರವನ್ನು ವಿಧಿಸಿ ಸಂಗ್ರಹಿಸಬೇಕೆಂದು ನಿಗದಿಪಡಿಸಿತು. ಅದರಂತೆ, ಪರೀಕ್ಷಾ-ತನಿಖೆ ನಡೆಸಿದ 197 ಗ್ರಾಮಪಂಚಾಯತಿಗಳು ಮಾರ್ಚ್ 2017ರಲ್ಲಿದ್ದಂತೆ ₹2.69 ಕೋಟಿಯನ್ನು ವಿಧಿಸಿ ಸಂಗ್ರಹಿಸಿದ್ದವು.

**(ಕಂಡಿಕೆ 3.11)**

ಕರ್ನಾಟಕ ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಹಾಗೂ ಕರ್ನಾಟಕ ಗೃಹಮಂಡಳಿ ಇವುಗಳು ಬೇಡಿಕೆ ಸಮೀಕ್ಷೆ ನಡೆಸದಿರುವುದರಿಂದ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯದ ನಿರ್ಮಾಣದ ಅಂದಾಜು ಮತ್ತು ವಿನ್ಯಾಸಗಳನ್ನು ತಯಾರಿಸುವಲ್ಲಿನ ಲೋಪದೋಷಗಳಿಂದ ₹1.86 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಕಟ್ಟಡವು ಅಪೂರ್ಣವಾಗಿ ಹಾಗೂ ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಬಳಕೆಯಾಗದೇ ಉಳಿದಿತ್ತು.

**(ಕಂಡಿಕೆ 3.12)**

## 1.7 ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆಯ ಕೊರತೆ

### *1.7.1 ಬಾಕಿ ಇರುವ ತಪಾಸಣಾ ವರದಿಗಳು*

ಲೆಕ್ಕಪರಿಶೋಧನೆಯ ಅಭಿಪ್ರಾಯಗಳ ತ್ವರಿತಗತಿಯ ಇತ್ಯರ್ಥಕ್ಕಾಗಿ ಆರ್ಥಿಕ ಇಲಾಖೆಯಿಂದ 2001ರಲ್ಲಿ ಹೊರಡಿಸಲ್ಪಟ್ಟಿರುವ ಸೂಚನೆಗಳ ಕೈಪಿಡಿಯು ನಿಗದಿಪಡಿಸಿದ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಸರಣೆಯಿಂದ ಸರಿಪಡಿಕೆ ಕ್ರಮಗಳ ಮತ್ತು ತಪಾಸಣೆಯಲ್ಲಿ ಗಮನಿಸಿದ ನ್ಯೂನತೆಗಳು, ಲೋಪಗಳು, ಮುಂತಾದವುಗಳಿಗಾಗಿ ಹೊಣೆಗಾರಿಕೆಯನ್ನು ಖಾತರಿಪಡಿಸಿಕೊಳ್ಳಲು ಮಹಾಲೇಖಾಪಾಲರಿಂದ ನೀಡಲ್ಪಟ್ಟ ತಪಾಸಣಾ ವರದಿಗಳಿಗೆ (ಐಆರ್) ಕಾರ್ಯಾಂಗದಿಂದ ಚುರುಕಾದ ಪ್ರತಿಕ್ರಿಯೆಗಾಗಿ ಉಪಬಂಧಿಸುತ್ತವೆ.

ಕಛೇರಿಗಳ ಮುಖ್ಯಸ್ಥರುಗಳು ಮತ್ತು ನಂತರದ ಮೇಲಧಿಕಾರಿಗಳು ಐಆರ್‌ಗಳಲ್ಲಿರುವ ಅಭಿಪ್ರಾಯಗಳನ್ನು ಅನುಪಾಲಿಸಬೇಕು, ಲೋಪದೋಷಗಳನ್ನು ಸರಿಪಡಿಸಬೇಕು ಮತ್ತು ಎಜಿಯವರಿಗೆ ವರದಿಯನ್ನು ಕಳುಹಿಸಬೇಕು. ಅವರು ಲೆಕ್ಕಪರಿಶೋಧನಾ ಅಭಿಪ್ರಾಯಗಳ ಮೇಲ್ವಿಚಾರಣೆಗೆ ಅನುವಾಗಲು ಬಾಕಿ ಇರುವ ಐಆರ್‌ಗಳ ಅರ್ಧವಾರ್ಷಿಕ ವರದಿಯೊಂದನ್ನು ಇಲಾಖೆಯ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾರೆ.

31 ಮಾರ್ಚ್ 2018ರಲ್ಲಿದ್ದಂತೆ ಎಲ್ಲ ಇಲಾಖೆಗಳ ಪ್ರತಿಯಾಗಿ 3,420 ತಪಾಸಣಾ ವರದಿಗಳು (18,207 ಕಂಡಿಕೆಗಳು) ಬಾಕಿ ಉಳಿದಿದ್ದವು. ಬಾಕಿ ಇರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳನ್ನು **ಅನುಬಂಧ–1.1ರಲ್ಲಿ** ನೀಡಲಾಗಿದೆ. ಬಾಕಿ ಉಳಿದಿದ್ದ ಒಟ್ಟು ತಪಾಸಣಾ ವರದಿಗಳ ಶೇಕಡಾ 5ರಷ್ಟು ಅಂದರೆ 183 ತಪಾಸಣಾ ವರದಿಗಳು (1,613 ಕಂಡಿಕೆಗಳು) ಒಂದು ವರ್ಷಕ್ಕೂ ಕಡಿಮೆ ಅವಧಿಗೆ ಬಾಕಿ ಉಳಿದಿದ್ದವು, 2,421 ತಪಾಸಣಾ ವರದಿಗಳು (13,903 ಕಂಡಿಕೆಗಳು) ಒಂದು ವರ್ಷಕ್ಕೂ ಅಧಿಕವಾಗಿ ಆದರೆ 10 ವರ್ಷಕ್ಕೂ ಕಡಿಮೆ ಅವಧಿಗೆ ಬಾಕಿ ಉಳಿದಿದ್ದವು. ಆದರೆ, ಶೇಕಡಾ 24ರಷ್ಟು ತಪಾಸಣಾ ವರದಿಗಳು ಅಂದರೆ 816 ತಪಾಸಣಾ ವರದಿಗಳು(2,691 ಕಂಡಿಕೆಗಳು) 10 ವರ್ಷಗಳಿಗೂ ಅಧಿಕ ಅವಧಿಗೆ ಬಾಕಿ ಉಳಿದಿದ್ದವು. ಉನ್ನತ ಶಿಕ್ಷಣ ಇಲಾಖೆ ಮತ್ತು ಕಂದಾಯ ಇಲಾಖೆಗಳು ಅನುಕ್ರಮವಾಗಿ 109 ಮತ್ತು 163 ತಪಾಸಣಾ ವರದಿಗಳಷ್ಟು ಹೆಚ್ಚಿನ ಬಾಕಿ ಉಳಸಿಕೊಂಡಿದ್ದವೆಂದು ಮಾರ್ಚ್ 2018ರವರೆಗೆ ನೀಡಿರುವ ಉತ್ತರಿಸದೇ ಬಾಕಿ ಉಳಿದಿರುವ ತಪಾಸಣಾ ವರದಿಗಳ ಪರಿಶೀಲನೆಯು ತಿಳಿಯಪಡಿಸಿತು.

### *1.7.2 ಕರಡು ಕಂಡಿಕೆಗಳಿಗೆ ಇಲಾಖೆಗಳ ಪ್ರತಿಕ್ರಿಯೆ*

ಕರಡು ಕಂಡಿಕೆ ಮತ್ತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳನ್ನು ಅರೆ–ಸರ್ಕಾರಿ ಪತ್ರದ ಮುಖಾಂತರ ಸಂಬಂಧಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ, ಆರು ವಾರಗಳೊಳಗೆ ಅವರ ಪ್ರತಿಕ್ರಿಯೆಯನ್ನು ನೀಡುವಂತೆ ಕೋರಿ, ಜೂನ್ 2018 ಮತ್ತು ಅಕ್ಟೋಬರ್ 2018ರ ನಡುವೆ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ, ಎರಡು ಅನುಪಾಲನಾ ಲೆಕ್ಕಪರಿಶೋಧನೆಗಳು ಹಾಗೂ 12 ಕಂಡಿಕೆಗಳನ್ನು ಕಳುಹಿಸಲಾಯಿತು. ಲೆಕ್ಕಪರಿಶೋಧನಾ ವರದಿಗಳ ಆಧಾರದ ಮೇಲೆ ಎರಡು ಕರಡು ಕಂಡಿಕೆಗಳ ಸಂಬಂಧವಾಗಿ ಕ್ರಮ ಕೈಗೊಳ್ಳಲಾಗಿದೆ ಮತ್ತು ಈ ಕಛೇರಿಯು ಪರಿಗಣಿಸಿ ಅವುಗಳನ್ನು ಈ ವರದಿಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ. ಈ ವರದಿಯಲ್ಲಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ, ಎರಡು ಅನುಪಾಲನಾ ಲೆಕ್ಕಪರಿಶೋಧನೆಗಳು ಹಾಗೂ ಎಲ್ಲ ಕಂಡಿಕೆಗಳಿಗೆ ಸರ್ಕಾರದ ಉತ್ತರಗಳನ್ನು ಸ್ವೀಕರಿಸಲಾಗಿದೆ. ಯಾವುದಕ್ಕೆ ಉತ್ತರಗಳನ್ನು ಸ್ವೀಕರಿಸಲಾಗಿದೆಯೋ ಅವುಗಳನ್ನು ವರದಿಯಲ್ಲಿ ಸಮರ್ಪಕವಾಗಿ ಅಳವಡಿಸಲಾಗಿದೆ.

### *1.7.3 ಲೆಕ್ಕಪರಿಶೋಧನಾ ವರದಿಗಳ ಮೇಲೆ ಅನುಸರಣಾ ಕ್ರಮ*

ಕೈಪಿಡಿ ಹಾಗೂ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಕಾರ್ಯವಿಧಾನ ನಿಯಮಾವಳಿಗಳು (ಆಂತರಿಕ ವ್ಯವಹಾರ), 1999, ಸರ್ಕಾರದ ಎಲ್ಲ ಇಲಾಖೆಗಳಿಂದ ಲೆಕ್ಕಪರಿಶೋಧನಾ ವರದಿಗಳಲ್ಲಿ ನಿರೂಪಿಸಲಾದ ಅಭಿಪ್ರಾಯಗಳಿಗೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳ (ಎಟಿಎನ್‌ಗಳ) ರೂಪದಲ್ಲಿ ವಿವರವಾದ ಸ್ಪಷ್ಟೀಕರಣಗಳನ್ನು ಅವು ವಿಧಾನಮಂಡಲದಲ್ಲಿ ಮಂಡನೆಯಾದ ನಾಲ್ಕು ತಿಂಗಳುಗಳ ಒಳಗಾಗಿ ಲೆಕ್ಕಪರಿಶೋಧನಾ ಕಛೇರಿಗೆ ಅವುಗಳ ಪ್ರತಿಗಳೊಂದಿಗೆ ಕರ್ನಾಟಕ ವಿಧಾನಮಂಡಲದ ಸಚಿವಾಲಯಕ್ಕೆ ಸಲ್ಲಿಸಬೇಕೆಂದು ಉಪಬಂಧಿಸುತ್ತವೆ.

ಆಡಳಿತ ಇಲಾಖೆಗಳು ಈ ಸೂಚನೆಗಳನ್ನು ಪಾಲಿಸಲಿಲ್ಲ ಮತ್ತು **ಅನುಬಂಧ–1.2ರಲ್ಲಿ** ವಿವರಿಸಿರುವಂತೆ ಐದು ಇಲಾಖೆಗಳು, 31 ಡಿಸೆಂಬರ್ 2018ರಲ್ಲಿದ್ದಂತೆ, 2011–12ರಿಂದ 2016–17ರವರೆಗೆ 10 ಕಂಡಿಕೆಗಳಿಗೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳನ್ನು ಸಲ್ಲಿಸಿರಲಿಲ್ಲ.

### *1.7.4 ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಿರುವ ಕಂಡಿಕೆಗಳು*

31 ಡಿಸೆಂಬರ್ 2018ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಗಾಗಿ ಬಾಕಿ ಉಳಿದಿರುವ ಕಂಡಿಕೆಗಳ ವಿವರಗಳನ್ನು (ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ) **ಅನುಬಂಧ–1.3ರಲ್ಲಿ** ನೀಡಲಾಗಿದೆ.

# ಅಧ್ಯಾಯ-II
# ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

# ಅಧ್ಯಾಯ-II

# ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

# ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

## 2.1 ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

**ಕಾರ್ಯನಿರ್ವಹಣಾ ಸಾರಾಂಶ**

ಸುಧಾರಿತ ಭೌತಿಕ ಸೌಲಭ್ಯ ಹಾಗೂ ಅರ್ಹ ಶಿಕ್ಷಕರ ಮೂಲಕ ಸಮಂಜಸ ಅಂತರದಲ್ಲಿ ಪ್ರೌಢಶಾಲೆ ಮತ್ತು ಪದವಿಪೂರ್ವ ಶಿಕ್ಷಣಕ್ಕೆ ಪ್ರವೇಶಾವಕಾಶ, ಗುಣಮಟ್ಟ ಮತ್ತು ಸಮಾನತೆಯನ್ನು ಸುಧಾರಿಸುವ ಉದ್ದೇಶದೊಂದಿಗೆ ಹಾಗೂ 14–18ರ ವಯೋಮಾನದ ಬಾಲಕಿಯರಿಗೆ, ಪರಿಶಿಷ್ಟ ಜಾತಿ ಮತ್ತು ಗಿರಿಜನ ಮತ್ತು ವಿಕಲಚೇತನ ಮಕ್ಕಳಿಗೆ ವಿಶೇಷ ಗಮನವನ್ನು ನೀಡಲು ಭಾರತ ಸರ್ಕಾರವು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವನ್ನು (ಆರ್‌ಎಮ್‌ಎಸ್‌ಎ) ಪ್ರಾರಂಭಿಸಿತು. ಮೇಲಿನ ಉದ್ದೇಶಗಳನ್ನು ಸಾಧಿಸಲಾಯಿತೆ ಎಂಬುದನ್ನು ನಿರ್ಧರಿಸಲು 2013–14ರಿಂದ 2017–18ರ ಅವಧಿಯಲ್ಲಿ ಆರ್‌ಎಮ್‌ಎಸ್‌ಎಯ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯೊಂದನ್ನು ನಡೆಸಲಾಯಿತು ಹಾಗೂ ನಾವು ಕೆಳಗಿನವುಗಳನ್ನು ಗಮನಿಸಿದೆವು:

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಸಮಿತಿ, ಕರ್ನಾಟಕ (ಆರ್‌ಎಮ್‌ಎಸ್‌ಎಎಸ್‌ಕೆ) ಲಭ್ಯವಿದ್ದ ಹಣವನ್ನು ಸಮಯಕ್ಕೆ ಸರಿಯಾಗಿ ಬಳಸಿಕೊಳ್ಳಲಿಲ್ಲ. 2013–14ರಿಂದ 2017–18ರ ಅವಧಿಯಲ್ಲಿ ಹಣದ ಬಳಕೆಯು ಶೇಕಡಾ 30 ಮತ್ತು 55ರ ನಡುವಿನ ವ್ಯಾಪ್ತಿಯಲ್ಲಿದ್ದಿತು. ಯೋಜನೆಯ ಪ್ರಮುಖ ಉದ್ದೇಶವನ್ನು ಶಾಲೆಗಳನ್ನು ಉನ್ನತೀಕರಿಸುವ/ಬಲಪಡಿಸುವುದಕ್ಕೆ ಕೇಂದ್ರೀಕರಿಸಲಾಗಿತ್ತು ಏಕೆಂದರೆ ಹಂಚಿಕೆಯಾದ ಶೇಕಡಾ 56ರಷ್ಟು ಹಣವನ್ನು ಅವುಗಳಿಗೆ ನೀಡಲಾಗಿದ್ದು, ಇದು ಕಂಪ್ಯೂಟರ್ ಶಿಕ್ಷಣ, ಪ್ರಯೋಗಶಾಲಾ ವಸ್ತುಗಳ ಮತ್ತು ಪೀಠೋಪಕರಣಗಳ ಖರೀದಿ ಮುಂತಾದ ಇತರ ಘಟಕಗಳನ್ನು ನಿರ್ಲಕ್ಷ್ಯ ಮಾಡಲು ಕಾರಣವಾಯಿತು.

**(ಕಂಡಿಕೆ 2.1.6)**

ಪ್ರವೇಶಾವಕಾಶವನ್ನು ಸುಧಾರಿಸಲು ಕರ್ನಾಟಕ ಮುನ್ನೋಟ ಯೋಜನೆಯು ಸಮಂಜಸ ಅಂತರದಲ್ಲಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿರಬೇಕೆಂದು ಉದ್ದೇಶಿಸಿತ್ತು. ಆದರೆ, ಮಾರ್ಚ್ 2018ರ ಅಂತ್ಯದಲ್ಲಿದ್ದಂತೆ 4,361 ವಾಸಸ್ಥಳಗಳಿಗೆ ಪ್ರೌಢ ಶಿಕ್ಷಣಕ್ಕೆ ಪ್ರವೇಶಾವಕಾಶವಿರಲಿಲ್ಲ. ಜೊತೆಗೆ, 2017ರೊಳಗೆ ರಾಷ್ಟ್ರ ಮಟ್ಟದ ಮಾದರಿಯೊಂದಿಗೆ ಶಾಲಾ ಶಿಕ್ಷಣದ ಸ್ವರೂಪವನ್ನು ಮರುರೂಪಿಸಲು ಮುನ್ನೋಟ ಯೋಜನೆಯು ಉದ್ದೇಶಿಸಿತ್ತಾದರೂ ಪದವಿಪೂರ್ವ ಶಿಕ್ಷಣವು ಪದವಿಪೂರ್ವ ಮಂಡಳಿಯಡಿಯಲ್ಲಿಯೇ ಕಾರ್ಯ ನಿರ್ವಹಿಸುವುದು ಮುಂದುವರೆದಿತ್ತು. ಹೀಗೆ ಎರಡೂ ಗುರಿಗಳನ್ನು ಸಾಧಿಸಲಾಗಿರಲಿಲ್ಲ.

**(ಕಂಡಿಕೆ 2.1.7.1)**

ಸಾಕಷ್ಟು ಶಾಲಾ ಕೊಠಡಿಗಳು, ಪ್ರಯೋಗಶಾಲೆಗಳು, ಗ್ರಂಥಾಲಯ, ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಮುಂತಾದ ಮೂಲಸೌಕರ್ಯಗಳ ಮೂಲಕ ಪ್ರೌಢ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಮುನ್ನೋಟ ಯೋಜನೆಯಲ್ಲಿ ನಿಗದಿಪಡಿಸಲಾಗಿದ್ದ ಗುರಿಯನ್ನು ಇನ್ನೂ ಸಾಧಿಸಬೇಕಿದೆ. ಸಿವಿಲ್ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವಿಳಂಬದಿಂದ 2009–10ರಿಂದ 2017–18 ಅವಧಿಯಲ್ಲಿ ಉನ್ನತೀಕರಣ/ಬಲಪಡಿಸುವಿಕೆಗೆ ಕೈಗೆತ್ತಿಕೊಂಡಿದ್ದ 2,396 ಶಾಲೆಗಳಲ್ಲಿ ಕೇವಲ 1,740 ಶಾಲೆಗಳನ್ನು ಮಾತ್ರ ಪೂರ್ಣಗೊಳಿಸಲಾಯಿತು, 140 ಶಾಲೆಗಳು ಪ್ರಗತಿಯಲ್ಲಿದ್ದವು ಮತ್ತು ಉಳಿದ 516 ಶಾಲೆಗಳನ್ನು ಇನ್ನೂ ಕೈಗೆತ್ತಿಕೊಂಡಿರಲಿಲ್ಲ. ಮಾರ್ಚ್ 2018ರಲ್ಲಿದ್ದಂತೆ, 1,367 ಮತ್ತು 1,494 ಶಾಲೆಗಳಿಗೆ ಅನುಕ್ರಮವಾಗಿ ದೊಡ್ಡ ಪ್ರಮಾಣದ/ಸಣ್ಣ ಪ್ರಮಾಣದ ದುರಸ್ತಿಗಳ ಅವಶ್ಯಕತೆಯಿದ್ದರೂ ಸಹ ಆರ್‌ಎಮ್‌ಎಸ್‌ಎಎಸ್‌ಕೆ ಅವುಗಳನ್ನು ಕೈಗೆತ್ತಿಕೊಂಡಿರಲಿಲ್ಲ. ಸರ್ಕಾರಿ ಶಾಲೆಗಳಲ್ಲಿನ ಶಾಲಾಕೊಠಡಿ ಮತ್ತು ವಿದ್ಯಾರ್ಥಿಗಳ ಅನುಪಾತವು ನಿಗದಿಪಡಿಸಿದ 1:40 ರಷ್ಟಿದ್ದರೂ, ಶಿಕ್ಷಣ ಇಲಾಖೆಯು ನಿರ್ವಹಿಸುತ್ತಿರುವ 4,677 ಸರ್ಕಾರಿ ಶಾಲೆಗಳಲ್ಲಿ 2,721 ಶಾಲೆಗಳಲ್ಲಿ ಅನುಪಾತವು 1:41ರಿಂದ 1:69ರ ನಡುವಿನ ವ್ಯಾಪ್ತಿಯಲ್ಲಿದ್ದಿತೆಂದು ಶಾಲಾವಾರು ವಿಶ್ಲೇಷಣೆಯು ತೋರಿಸಿತು.

**[(ಕಂಡಿಕೆ 2.1.8.1 (ಎ) (ಸಿ) ಮತ್ತು (ಇ)]**

ರಾಜ್ಯದ ವಿದ್ಯಾರ್ಥಿ–ಶಿಕ್ಷಕರ ಅನುಪಾತವು (ಪಿಟಿಆರ್) ನಿಗದಿತ 30:1 ರೊಳಗಿದ್ದಿತು. ಆದರೆ, ಶಾಲಾ ಮಟ್ಟದಲ್ಲಿ ಶಿಕ್ಷಕರ ನಿಯೋಜನೆಯಲ್ಲಿ ಯಾವುದೇ ಮೇಲ್ವಿಚಾರಣೆಯ ಇರಲಿಲ್ಲವಾದ್ದರಿಂದ 874 ಶಾಲೆಗಳಲ್ಲಿ ಪಿಟಿಆರ್ ಅನುಪಾತವು 30:1ಕ್ಕಿಂತ ಅಧಿಕವಾಗಿದ್ದಿತು. ಪ್ರತಿಯೊಂದು ಶಾಲೆಯಲ್ಲಿಯೂ ವಿಷಯವಾರು ಶಿಕ್ಷಕರನ್ನು ನಿಯೋಜಿಸುವುದು ಅಗತ್ಯವಾಗಿದೆ ಎಂದು ಆರ್‌ಎಮ್‌ಎಸ್‌ಎ ನಿಗದಿಪಡಿಸಿದ್ದರೂ ಸಹ 15,666 ಶಾಲೆಗಳ ಪೈಕಿ 642, 491 ಮತ್ತು 500 ಶಾಲೆಗಳಲ್ಲಿ ಅನುಕ್ರಮವಾಗಿ ಪ್ರಮುಖ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿಗೆ ಶಿಕ್ಷಕರೇ ಇರಲಿಲ್ಲ.

**[(ಕಂಡಿಕೆ 2.1.8.3 (ಬಿ) (ಸಿ)]**

ಪರೀಕ್ಷಾ–ತನಿಖೆ ನಡೆಸಿದ 342 ಶಾಲೆಗಳಲ್ಲಿ ನಾವು ಕೆಳಕಂಡಂತೆ ಗಮನಿಸಿದೆವು:

- 22 ಶಾಲೆಗಳಲ್ಲಿ ಸಾಕಷ್ಟು ಶಾಲಾ ಕೊಠಡಿಗಳಿರಲಿಲ್ಲ;
- 65 ಶಾಲೆಗಳಲ್ಲಿ ವಿಜ್ಞಾನ ಮತ್ತು ಕಂಪ್ಯೂಟರ್ ಪ್ರಯೋಗಶಾಲೆಗಳಿರಲಿಲ್ಲ;
- 199 ಶಾಲೆಗಳಲ್ಲಿ ಗ್ರಂಥಾಲಯ ಸೌಲಭ್ಯ ಇದೆಯೆಂದು ಹೇಳಲಾಗಿದ್ದರೂ ಸಹ 99 ಶಾಲೆಗಳಲ್ಲಿ ಪ್ರತ್ಯೇಕ ಗ್ರಂಥಾಲಯ ಸೌಲಭ್ಯ ಇರಲಿಲ್ಲ;
- ಒಂದು ಶಾಲೆಯ ಹೊರತಾಗಿ ಎಲ್ಲ ಶಾಲೆಗಳೂ ಶೌಚಾಲಯ ಸೌಲಭ್ಯವನ್ನು ಹೊಂದಿದ್ದರೂ ಸಹ ಹಲವಾರು ಶಾಲೆಗಳಲ್ಲಿ ಶೌಚಾಲಯಗಳ ನಿರ್ವಹಣೆಯ ಕೊರತೆಯಿದ್ದಿತು (163ರಲ್ಲಿ 52); ಮತ್ತು
- ರಾಜ್ಯವು ನಿಗದಿಪಡಿಸಿದ್ದ ಮಾನದಂಡಗಳ ಅನ್ವಯ 252 ರಲ್ಲಿ 73 ಅನುದಾನಿತ ಮತ್ತು ಅನುದಾನಿತವಲ್ಲದ ಶಾಲೆಗಳಲ್ಲಿ ಮೂಲಸೌಕರ್ಯ ಮತ್ತು ಬೋಧನಾ ಸೌಲಭ್ಯಗಳು ಇರಲಿಲ್ಲವಾದರೂ ಸಹ ಶಾಲೆಗಳ ನೋಂದಣಿಯನ್ನು ನವೀಕರಿಸಲಾಗಿತ್ತು.

**[ಕಂಡಿಕೆಗಳು 2.1.8.1 (ಇ) ಮತ್ತು 2.1.8.2]**

ಮಾದರಿ ಶಾಲೆಗಳ ನಿರ್ಮಾಣದಲ್ಲಿ ಮತ್ತು ಈ ಮಾದರಿ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿಯಲ್ಲಿನ ವಿಳಂಬದಿಂದ ಈ ಶಾಲೆಗಳು ಕೇಂದ್ರೀಯ ವಿದ್ಯಾಲಯಗಳ ಗುಣಮಟ್ಟವನ್ನು ಇನ್ನೂ ಸಾಧಿಸಬೇಕಿದೆ. ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಲು ವೃತ್ತಿಪರ ಶಿಕ್ಷಣವನ್ನು ಆರ್‌ಎಮ್‌ಎಸ್‌ಎ ಆಲೋಚಿಸಿದ್ದರೂ ಸಹ ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡಲಾಗಿಲ್ಲ ಅಥವಾ ಪ್ರಾವೀಣ್ಯತೆಯ ಪ್ರಮಾಣಪತ್ರವನ್ನು ನೀಡಿಲ್ಲವಾದ್ದರಿಂದ ರಾಜ್ಯವು ವೃತ್ತಿಪರ ಶಿಕ್ಷಣವನ್ನು ಇನ್ನೂ ಪ್ರೌಢ ಶಿಕ್ಷಣ ವ್ಯವಸ್ಥೆಯೊಂದಿಗೆ ಸಂಯೋಜಿಸಲು ಇನ್ನೂ ಸಾಧ್ಯವಾಗಿಲ್ಲ.

**(ಕಂಡಿಕೆಗಳು 2.1.10.1 ಮತ್ತು 2.1.10.2)**

ಪ್ರೌಢ ಶಿಕ್ಷಣದಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು 2009–10ರಲ್ಲಿನ ಶೇಕಡಾ 75ರಿಂದ 2017–18ರಲ್ಲಿ ಶೇಕಡಾ 82ಕ್ಕೆ ಸುಧಾರಿಸಲು ರಾಜ್ಯಕ್ಕೆ ಸಾಧ್ಯವಾಯಿತು. ಆದರೆ, 2017ರೊಳಗೆ ಅದು ಇನ್ನೂ ಶೇಕಡಾ 100ರಷ್ಟು ಜಿಇಆರ್ ಅನ್ನು ಸಾಧಿಸಬೇಕಿದೆ. ರಾಜ್ಯದ ಜಿಇಆರ್ ಶೇಕಡಾ 82ಕ್ಕೆ ಪ್ರತಿಯಾಗಿ ಬಾಲಕಿಯರ, ಎಸ್‌ಸಿ ಮತ್ತು ಎಸ್‌ಟಿ ಮಕ್ಕಳ ಜಿಇಆರ್ ಅನುಕ್ರಮವಾಗಿ ಶೇಕಡಾ 83, 79 ಮತ್ತು 73 ರಷ್ಟಿತ್ತು. ಕರ್ನಾಟಕ ಮುನ್ನೋಟ ಯೋಜನೆಯಲ್ಲಿ ಆಲೋಚಿಸಿದಂತೆ ಶೇಕಡಾ 100ರಷ್ಟು ಗುರಿಯನ್ನು ರಾಜ್ಯ ಸಾಧಿಸದಿದ್ದರೂ ಸಹ ಪ್ರೌಢ ಶಿಕ್ಷಣದಲ್ಲಿ ವಿಶೇಷ ಗುಂಪಿನ ಸಮಾನ ಭಾಗವಹಿಸುವಿಕೆಯನ್ನು ಅದು ಬಹುತೇಕ ಖಚಿತಪಡಿಸಿಕೊಂಡಿತ್ತು. ಆದರೆ, ಪ್ರೌಢ ಶಿಕ್ಷಣದಲ್ಲಿ ವಿಕಲಚೇತನ ಮಕ್ಕಳ ಭಾಗವಹಿಸುವಿಕೆಯನ್ನು ಅದು ಮೇಲ್ವಿಚಾರಣೆ ಮಾಡಿರಲಿಲ್ಲ.

**(ಕಂಡಿಕೆಗಳು 2.1.9.2 ಮತ್ತು 2.1.11.2)**

ಪರಿಣಾಮಕಾರಿಯಲ್ಲದ ಯೋಜನೆಯ ಕಾರಣದಿಂದ ವಾರ್ಷಿಕ ಮತ್ತು ಮುನ್ನೋಟ ಯೋಜನೆಗಳು ಅಗತ್ಯತೆಗಳ ಆಧಾರಿತವಾಗಿರಲಿಲ್ಲ ಮತ್ತು ವಾಸ್ತವವಾಗಿರಲಿಲ್ಲ. ಇದು ಎಲ್ಲಾ ಮಟ್ಟದಲ್ಲಿಯೂ ದೋಷಪೂರಿತ ಮೇಲ್ವಿಚಾರಣೆಯೊಂದಿಗೆ ಸೇರಿ ಮೂಲತ: ಪ್ರೌಢ ಶಿಕ್ಷಣದ ಪ್ರವೇಶಾವಕಾಶ ಮತ್ತು ಗುಣಮಟ್ಟವನ್ನು ಸುಧಾರಿಸುವ ಉದ್ದೇಶಗಳನ್ನು ಆರ್‌ಎಮ್‌ಎಸ್‌ಎ ಸಾಧಿಸದಿರುವಲ್ಲಿ ಪರಿಣಮಿಸಿತು. ಹೀಗೆ, ರಾಜ್ಯದ ಮಧ್ಯಸ್ಥಿಕೆಗೆ ಹೋಲಿಸಿದರೆ ಹಣಕಾಸಿನ ಮತ್ತು ಫಲಿತಾಂಶದ ಸೂಚಕಗಳಲ್ಲಿ ಪ್ರೌಢ ಶಿಕ್ಷಣದ ಮೇಲೆ ಆರ್‌ಎಮ್‌ಎಸ್‌ಎ ಪ್ರಭಾವವು ಗೋಚರಿಸಲಿಲ್ಲ.

**(ಕಂಡಿಕೆ 2.1.12)**

### 2.1.1 ಪರಿಚಯ

ಭಾರತದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಮಕ್ಕಳ ನೋಂದಣಿಯು ಗೋಪುರಾಕಾರದಲ್ಲಿದೆ. ಕೆಳವರ್ಗಗಳಲ್ಲಿನ ತರಗತಿಗಳಿಗೆ ನೋಂದಣಿಯು ಅತಿ ಹೆಚ್ಚಾಗಿರುತ್ತದೆ ಮತ್ತು ನಂತರದ ಪ್ರತಿಯೊಂದು ತರಗತಿಯಲ್ಲಿಯೂ ಕ್ಷೀಣಿಸಿ ಉನ್ನತ ಶಿಕ್ಷಣದಲ್ಲಿ ಅತಿ ಕಡಿಮೆಯಿರುತ್ತದೆ. 9 ಮತ್ತು 10ನೇ ತರಗತಿಗಳು ಪ್ರೌಢಶಿಕ್ಷಣದ[5] ಹಂತವಾಗಿದ್ದರೆ, 11 ಮತ್ತು 12ನೇ ತರಗತಿಗಳು ಪದವಿಪೂರ್ವ ಶಿಕ್ಷಣದ ಹಂತವಾಗಿರುತ್ತದೆ.

ಮಾರ್ಚ್ 2009ರಲ್ಲಿ ಭಾರತ ಸರ್ಕಾರವು ದೇಶಾದ್ಯಂತ 'ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ'[6] (ಆರ್‌ಎಮ್‌ಎಸ್‌ಎ) ಎಂಬ ಪ್ರೌಢಶಿಕ್ಷಣ ಅಭಿವೃದ್ಧಿ ಕಾರ್ಯಕ್ರಮವನ್ನು ಪ್ರಾರಂಭಿಸಿತು. 2013–14ರಿಂದ ಆರ್‌ಎಮ್‌ಎಸ್‌ಎ ಅಸ್ತಿತ್ವದಲ್ಲಿದ್ದ ನಾಲ್ಕು[7] ಕೇಂದ್ರ ಪುರಸ್ಕೃತ ಯೋಜನೆಗಳನ್ನು ತನ್ನ ಪರಿಧಿಗೆ ಸೇರಿಸಿಕೊಂಡಿತು. ಸಮಂಜಸವಾದ ಅಂತರದಲ್ಲಿ ಪ್ರೌಢ ಶಿಕ್ಷಣವನ್ನು ಒದಗಿಸುವುದು, 2017ರೊಳಗೆ ಶೇಕಡಾ 100ರಷ್ಟು ನಿವ್ವಳ ನೋಂದಣಾ ಅನುಪಾತವನ್ನು (ಜಿಇಆರ್) ಸಾಧಿಸುವುದು, 2020ರೊಳಗೆ ಸಾರ್ವತ್ರಿಕ ಧಾರಣವನ್ನು ಸಾಧಿಸುವುದು ಮತ್ತು ಆರ್ಥಿಕವಾಗಿ ಹಿಂದುಳಿದ, ಶೈಕ್ಷಣಿಕವಾಗಿ ಹಿಂದುಳಿದ, ಬಾಲಕಿಯರ ಮತ್ತು ವಿಕಲಚೇತನ ಮಕ್ಕಳಿಗೆ ವಿಶೇಷ ಉಲ್ಲೇಖದೊಂದಿಗೆ ಪ್ರೌಢ ಶಿಕ್ಷಣವನ್ನು ಒದಗಿಸುವುದು ಆರ್‌ಎಮ್‌ಎಸ್‌ಎ ದೃಷ್ಟಿಕೋನವಾಗಿತ್ತು. ಮೇಲಿನ ದೃಷ್ಟಿಕೋನವನ್ನು **ನಕ್ಷೆ–2.1**ರಲ್ಲಿ ತೋರಿಸಿರುವ ಉದ್ದೇಶಗಳಾಗಿ ಮಾರ್ಪಡಿಸಲಾಯಿತು.

**ನಕ್ಷೆ–2.1: ಆರ್‌ಎಮ್‌ಎಸ್‌ಎ ಉದ್ದೇಶಗಳು**

ಆರ್‌ಎಮ್‌ಎಸ್‌ಎ ಉದ್ದೇಶಗಳು

**ಪ್ರವೇಶಾವಕಾಶದ ಸುಧಾರಣೆ**
- ಹತ್ತಿರದ ಸ್ಥಳ, ಪರಿಣಾಮಕಾರಿ ಮತ್ತು ಸುರಕ್ಷಿತ ಸಾರಿಗೆ/ವಸತಿ ಸೌಲಭ್ಯಗಳು, ಮುಕ್ತ ಶಾಲಾ ಶಿಕ್ಷಣದ ಮೂಲಕ
- ಪ್ರೌಢ ಶಾಲೆಗಳ ವಿಸ್ತರಣೆ, ಬಲಪಡಿಸುವಿಕೆ ಮತ್ತು ಉನ್ನತೀಕರಣ

**ಗುಣಮಟ್ಟದ ಸುಧಾರಣೆ**
- ಮೂಲ ಸೌಕರ್ಯಗಳನ್ನು ಮತ್ತು ಕಲಿಕಾ ಸಂಪನ್ಮೂಲಗಳನ್ನು ಒದಗಿಸುವುದು
- ಹೆಚ್ಚುವರಿ ಶಿಕ್ಷಕರ ನೇಮಕಾತಿ ಮತ್ತು ಅವರಿಗೆ ತರಬೇತಿ

**ಸಮಾನತೆಯ ಭರವಸೆ**
- ಬಾಲಕಿಯರ ಶಿಕ್ಷಣ
- ಪರಿಶಿಷ್ಟ ಜಾತಿ (ಎಸ್‌ಸಿ)/ಪರಿಶಿಷ್ಟ ಪಂಗಡ (ಎಸ್‌ಟಿ)/ಇತರೆ ಹಿಂದುಳಿದ ವರ್ಗ (ಒಬಿಸಿ) ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದ ಮಕ್ಕಳ ಶಿಕ್ಷಣ
- ವಿಕಲಚೇತನ ಮಕ್ಕಳ ಶಿಕ್ಷಣ

ಸಂಯುಕ್ತ ರಾಷ್ಟ್ರವು ತನ್ನ ಮಿಲೇನಿಯಮ್ ಅಭಿವೃದ್ಧಿ ಗುರಿ–2ರಲ್ಲಿ 2015ರೊಳಗೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸಲು ಉದ್ದೇಶಿಸಿತ್ತು. ಅದು ತನ್ನ ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ) ಸಂಖ್ಯೆ.4ರಲ್ಲಿ ತನ್ನ ಗುರಿಯನ್ನು ಪ್ರೌಢ ಶಿಕ್ಷಣಕ್ಕೂ ವಿಸ್ತರಿಸಿತು. ಎಲ್ಲಾ ಬಾಲಕರು ಮತ್ತು ಬಾಲಕಿಯರಿಗೆ ಪರಿಣಾಮಕಾರಿ ಕಲಿಕೆಯ ಫಲಿತಾಂಶಗಳಿಗೆ ಕಾರಣವಾಗುವ ಸಂಪೂರ್ಣ ಉಚಿತ, ನ್ಯಾಯಸಮ್ಮತ ಹಾಗೂ ಗುಣಮಟ್ಟದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಖಚಿತಪಡಿಸುವ ಸಂಯುಕ್ತ ರಾಷ್ಟ್ರದ ಎಸ್‌ಡಿಜಿ ಸಂಖ್ಯೆ.4ಕ್ಕೆ ಭಾರತವು ಬದ್ಧವಾಗಿದೆ (**ಅನುಬಂಧ–2.1**). ಅಲ್ಲದೆ, ಮೇಲೆ ಹೇಳಿದ ಎಸ್‌ಡಿಜಿಯು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಕ್ಕೆ ಪ್ರವೇಶಾವಕಾಶವನ್ನು ಗಮನಾರ್ಹವಾಗಿ ಹೆಚ್ಚಿಸುವುದನ್ನು ಹಾಗೂ ಮತ್ತು ಕನಿಷ್ಠ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಅಂತರ್ಜಾಲಕ್ಕೆ ಸಾರ್ವತ್ರಿಕ ಹಾಗೂ ಕೈಗೆಟಕುವ ಪ್ರವೇಶವನ್ನು ಒದಗಿಸುವುದನ್ನು ಗುರಿಯಾಗಿಟ್ಟುಕೊಂಡಿದೆ.

[5] ಪ್ರೌಢ ಶಿಕ್ಷಣಕ್ಕೆ ಸಾಮಾನ್ಯ ವಯೋಮಾನವು 14ರಿಂದ 16 ವರ್ಷಗಳು ಹಾಗೂ ಪದವಿಪೂರ್ವ ಶಿಕ್ಷಣಕ್ಕೆ ಅದು 17ರಿಂದ 18 ವರ್ಷಗಳಾಗಿರುತ್ತದೆ.

[6] ಪ್ರೌಢಶಿಕ್ಷಣಕ್ಕೆ ಪ್ರವೇಶಾವಕಾಶವನ್ನು ಹೆಚ್ಚಿಸುವುದು, ಅದರ ಗುಣಮಟ್ಟವನ್ನು ಸುಧಾರಿಸುವುದು ಹಾಗೂ ಲಿಂಗ ತಾರತಮ್ಯ, ಸಾಮಾಜಿಕ–ಆರ್ಥಿಕ ಮತ್ತು ವಿಕಲಾಂಗತೆಯ ಅಡ್ಡಿಗಳನ್ನು ತೆಗೆದುಹಾಕುವುದು ಆರ್‌ಎಮ್‌ಎಸ್‌ಎ ಉದ್ದೇಶವಾಗಿತ್ತು.

[7] (i) ಬಾಲಕಿಯರ ವಿದ್ಯಾರ್ಥಿನಿಲಯದ ನಿರ್ಮಾಣ ಮತ್ತು ನಡೆಸುವಿಕೆಗೆ ಯೋಜನೆ, (ii) ಶಾಲೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ), (iii) ಮಾಧ್ಯಮಿಕ ಹಂತದಲ್ಲಿ ವಿಕಲಚೇತನರಿಗೆ ಅಂತರ್ಗತ ಶಿಕ್ಷಣ (ಐಇಡಿಎಸ್‌ಎಸ್) ಮತ್ತು (iv) ವೃತ್ತಿಪರ ಶಿಕ್ಷಣ.

### 2.1.2 ಸಂಘಟನಾ ವ್ಯವಸ್ಥೆ

ಆರ್‌ಎಮ್‌ಎಸ್‌ಎ ಯನ್ನು 'ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಸಮಿತಿ–ಕರ್ನಾಟಕ (ಆರ್‌ಎಮ್‌ಎಸ್‌ಎಎಸ್‌ಕೆ)–ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಆಡಳಿತಾತ್ಮಕ ನಿಯಂತ್ರಣದಲ್ಲಿ ಸ್ಥಾಪಿಸಿರುವ (ಮೇ 2009) ಒಂದು ನೋಂದಾಯಿತ ಸೊಸೈಟಿಯ ಮೂಲಕ ಅನುಷ್ಠಾನ ಗೊಳಿಸಲಾಗುತ್ತಿದೆ. ಆರ್‌ಎಮ್‌ಎಸ್‌ಎ ಕಾರ್ಯಾಚರಣೆಯನ್ನು ಗೌರವಾನ್ವಿತ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುವ ಆಡಳಿತ ಮಂಡಳಿಯು ನಿರ್ವಹಿಸುತ್ತಿದ್ದರೆ, ಪ್ರಧಾನ ಕಾರ್ಯದರ್ಶಿಯವರು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಅಧ್ಯಕ್ಷರಾಗಿರುವ ಕಾರ್ಯನಿರ್ವಾಹಕ ಸಮಿತಿಯು (ಇಸಿ) ಕಾರ್ಯಕ್ರಮಗಳನ್ನು ನಿರ್ವಹಿಸುತ್ತದೆ. ಇಸಿಯ ಸದಸ್ಯ ಕಾರ್ಯದರ್ಶಿಯಾಗಿರುವ ರಾಜ್ಯ ಯೋಜನಾ ನಿರ್ದೇಶಕರು (ಎಸ್‌ಪಿಡಿ) ಯೋಜನೆಯ ಅನುಷ್ಠಾನ ಮತ್ತು ಮೇಲ್ವಿಚಾರಣೆಗೆ ಹೊಣೆಗಾರರಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಡಿಪಿಐ) ಜಿಲ್ಲಾ ಮಟ್ಟದ ಸಮಿತಿ, ಜಿಲ್ಲಾ ಅನುಷ್ಠಾನ ಸಮಿತಿ ಮತ್ತು ಜಿಲ್ಲಾ ಸಂಪನ್ಮೂಲ ತಂಡ, ಇವುಗಳ ಸಹಕಾರದೊಂದಿಗೆ ಆರ್‌ಎಮ್‌ಎಸ್‌ಎ ಯನ್ನು ಅನುಷ್ಠಾನಗೊಳಿಸುತ್ತಾರೆ. ಬ್ಲಾಕ್ ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, [ಬ್ಲಾಕ್ ಸಂಪನ್ಮೂಲ ಕೇಂದ್ರ (ಬಿಆರ್‌ಸಿ)] ಯೋಜನೆಯನ್ನು ಅನುಷ್ಠಾನಗೊಳಿಸುತ್ತಾರೆ. ಗ್ರಾಮ/ಶಾಲಾ ಮಟ್ಟದಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಮ್‌ಸಿ) ಯೋಜನೆಯ ಅನುಷ್ಠಾನಕ್ಕೆ ಹೊಣೆಗಾರರಾಗಿರುತ್ತದೆ.

### 2.1.3 ಲೆಕ್ಕಪರಿಶೋಧನಾ ಉದ್ದೇಶಗಳು

ಆರ್‌ಎಮ್‌ಎಸ್‌ಎಯ ಪ್ರಾಥಮಿಕ ಉದ್ದೇಶಗಳನ್ನು ಈ ಕೆಳಗಿನವುಗಳ ಮೂಲಕ ಸಾಧಿಸಲಾಯಿತೆ ಎಂದು ತಿಳಿಯಲು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು:

- ಪ್ರೌಢ ಶಿಕ್ಷಣಕ್ಕೆ ಸುಧಾರಿತ ಪ್ರವೇಶಾವಕಾಶದ ಮೂಲಕ;
- ಪ್ರೌಢ ಶಿಕ್ಷಣದಲ್ಲಿ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವುದು; ಮತ್ತು
- ಪ್ರೌಢ ಶಿಕ್ಷಣದಲ್ಲಿ ಸಮಾನತೆ.

### 2.1.4 ಲೆಕ್ಕಪರಿಶೋಧನಾ ಮಾನದಂಡಗಳು

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗೆ ಈ ಕೆಳಗಿನವುಗಳು ಮಾನದಂಡಗಳಾಗಿದ್ದವು:

- ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಮತ್ತು ಅದರಡಿಯ ನಿಯಮಗಳು;
- 12ನೇ ಯೋಜನಾ ದಾಖಲೆಯ ವಿಶಾಲ ದೃಷ್ಟಿ, ಸಹಸ್ರಮಾನದ ಅಭಿವೃದ್ಧಿ ಗುರಿಗಳು ಮತ್ತು ಸ್ಥಿರ ಅಭಿವೃದ್ಧಿ ಗುರಿಗಳು;
- ಆರ್‌ಎಮ್‌ಎಸ್‌ಎ ಅನುಷ್ಠಾನದ ಚೌಕಟ್ಟು;
- ಆರ್‌ಎಮ್‌ಎಸ್‌ಎ ಖರೀದಿಗಾಗಿನ ಹಣಕಾಸು ನಿರ್ವಹಣೆಯ ಮೇಲಿನ ಕೈಪಿಡಿ;
- ಪ್ರೌಢ ಶಿಕ್ಷಣದ ಯೋಜನೆ ಮತ್ತು ಮೌಲ್ಯಮಾಪನ ಕೈಪಿಡಿ
- ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ), ಪ್ರೌಢಶಿಕ್ಷಣ ಹಂತದಲ್ಲಿ ವಿಕಲಚೇತನರ ಅಂತರ್ಗತ ಶಿಕ್ಷಣ (ಐಇಡಿಎಸ್‌ಎಸ್), ಬಾಲಕಿಯರ ವಿದ್ಯಾರ್ಥಿನಿಲಯ ಮತ್ತು ವೃತ್ತಿಪರ ಶಿಕ್ಷಣ ಮುಂತಾದ ವಿವಿಧ ಘಟಕಗಳ ಮೇಲಿನ ಮಾರ್ಗದರ್ಶಿ ಸೂತ್ರಗಳು;
- ಆರ್‌ಎಮ್‌ಎಸ್‌ಎ ಸಂಬಂಧವಾಗಿ ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಭಾರತ ಸರ್ಕಾರದಿಂದ ಬಂದ ಸೂಚನೆಗಳು.

### 2.1.5 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

ಏಪ್ರಿಲ್ ಮತ್ತು ಆಗಸ್ಟ್ 2018ರ ನಡುವೆ 2013–14ರಿಂದ 2017–18ರ[8] ಅವಧಿಯನ್ನು ವ್ಯಾಪಿಸುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿ, ಎಸ್‌ಪಿಡಿ–

[8] ಶಾಲೆಗಳ ನಿರ್ಮಾಣ/ಉನ್ನತೀಕರಣ/ಬಲಪಡಿಸುವಿಕೆ, ಪ್ರಮುಖ ದುರಸ್ತಿಗಳು ಮತ್ತು ಕಾರ್ಯಕ್ಷಮತೆ ಸೂಚ್ಯಂಕಗಳು ಮುಂತಾದ ಆವರ್ತಕವಲ್ಲದ ವೆಚ್ಚದ ಸಂಬಂಧವಾಗಿ 2009–10ರಿಂದ 2017–18ರ ಅವಧಿ ಅಂದರೆ, ಆರ್‌ಎಮ್‌ಎಸ್‌ಎ ಅವಧಿಯನ್ನು ವ್ಯಾಪಿಸಲಾಯಿತು.

ಆರ್‌ಎಮ್‌ಎಸ್‌ಎ, ರಾಜ್ಯದಲ್ಲಿನ 30ರಲ್ಲಿ ಎಂಟು[9] ಪರೀಕ್ಷಾ-ತನಿಖೆ ನಡೆಸಿದ ಜಿಲ್ಲೆಗಳಲ್ಲಿನ ಡಿಪಿಒಗಳು ಮತ್ತು ಎಂಟು ಪರೀಕ್ಷಾ-ತನಿಖೆ ನಡೆಸಿದ ಜಿಲ್ಲೆಗಳಲ್ಲಿರುವ 6,275 ರಲ್ಲಿ 342[10] ಪ್ರೌಢ ಶಾಲೆಗಳ ದಾಖಲೆಗಳನ್ನು ಪರೀಕ್ಷಾ-ತನಿಖೆ ನಡೆಸುವ ಮೂಲಕ ನಡೆಸಲಾಯಿತು. ರಾಜ್ಯದ ನಾಲ್ಕು ಕಂದಾಯ ವಿಭಾಗಗಳಾದ ಬೆಳಗಾವಿ, ಕಲಬುರಗಿ, ಬೆಂಗಳೂರು ಮತ್ತು ಮೈಸೂರು ಕಂದಾಯ ವಿಭಾಗಗಳಲ್ಲಿ ಪ್ರತಿಯೊಂದರಲ್ಲೂ ಎರಡು ಜಿಲ್ಲೆಗಳೊಂದಿಗೆ ಎಂಟು ಜಿಲ್ಲೆಗಳ ಆಯ್ಕೆಗೆ ಬದಲಿ ವಿಧಾನವಿಲ್ಲದೆ ಗಾತ್ರಕ್ಕೆ ಅನುಗುಣವಾದ ಸಂಭವನೀಯತೆ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಪರೀಕ್ಷಾ-ತನಿಖೆ ನಡೆಸಿದ ಎಂಟು ಜಿಲ್ಲೆಗಳಿಂದ ಯಾದೃಚ್ಛಿತ ಮಾದರಿ ವಿಧಾನದ ಮೂಲಕ 342 ಪ್ರೌಢ ಶಾಲೆಗಳನ್ನು ಆಯ್ಕೆ ಮಾಡಲಾಯಿತು. ಜೊತೆಗೆ, ಆಯ್ದ ಜಿಲ್ಲೆಗಳಲ್ಲಿ ಎಂಟು ಮಾದರಿ ಶಾಲೆಗಳು ಮತ್ತು ಏಳು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಪರೀಕ್ಷಾ-ತನಿಖೆ ಮಾಡಲಾಯಿತು (**ಅನುಬಂಧ-2.2**). ಲೆಕ್ಕಪರಿಶೋಧನಾ ಉದ್ದೇಶಗಳು, ಮಾನದಂಡಗಳು ಮತ್ತು ವ್ಯಾಪ್ತಿಯನ್ನು ಪ್ರವೇಶ ಸಭೆಯಲ್ಲಿ (ಮಾರ್ಚ್ 2018) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರೊಂದಿಗೆ ಚರ್ಚಿಸಲಾಯಿತು.

ಉತ್ತಮವಾಗಿ ನಿರ್ವಹಣೆ ಮಾಡಿರುವ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು (ಹೆಚ್‌ಡಿಐ) ಹೊಂದಿರುವ ಯಾವುದೇ ಜಿಲ್ಲೆಯನ್ನು ಲೆಕ್ಕಪರಿಶೋಧನೆಯು ಪರೀಕ್ಷಾ-ತನಿಖೆಗಾಗಿ ಆಯ್ಕೆ ಮಾಡಲಿಲ್ಲವೆಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019). ಪ್ರವೇಶ ಸಭೆಯಲ್ಲಿ ಚರ್ಚಿಸಿದ ಹಾಗೆ 14-18 ವರ್ಷದ ವಯೋಗುಂಪಿನ ಜಿಲ್ಲಾವಾರು ಮಕ್ಕಳ ಸಂಖ್ಯೆಯ ಆಧಾರದ ಮೇಲೆ ಮಾದರಿಗಳನ್ನು ಆಯ್ಕೆ ಮಾಡಲಾಗಿತ್ತೆಂಬ ವಾಸ್ತವಂಶವನ್ನು ಉತ್ತರದಲ್ಲಿ ಪರಿಗಣಿಸಿಲ್ಲ. ಹೆಚ್‌ಡಿಐ ಮತ್ತಷ್ಟು ವಿಶ್ಲೇಷಣೆಯು ಮಾದರಿಯು ವಿಭಾಗಗಳಲ್ಲಿನ ಎಲ್ಲ ಹಂತಗಳನ್ನು ತಕ್ಕಮಟ್ಟಿಗೆ ಪ್ರತಿನಿಧಿಸಿದೆ ಎಂಬುದನ್ನು ತೋರಿಸಿತು.

ಲೆಕ್ಕಪರಿಶೋಧನೆಗೆ ಅಳವಡಿಸಿಕೊಂಡ ವಿಧಾನವು ಕಡತಗಳು ಮತ್ತು ದಾಖಲೆಗಳ ಪರಿಶೀಲನೆ, ದತ್ತಾಂಶಗಳನ್ನು ಸಂಗ್ರಹಿಸುವುದು, ಲೆಕ್ಕಪರಿಶೋಧನಾ ವಿಚಾರಣೆ/ಪ್ರಶ್ನಾವಳಿಗಳು/ನಮೂನೆಗಳನ್ನು ನೀಡುವುದು ಮತ್ತು ದಾಖಲೆಗಳನ್ನು ಪರೀಕ್ಷಿಸುವುದು, ಇವುಗಳನ್ನು ಒಳಗೊಂಡಿತ್ತು. ಇದಲ್ಲದೆ, ಮುಖ್ಯೋಪಾಧ್ಯಾಯರು/ಕ್ಷೇತ್ರ ಶಿಕ್ಷಣಾಧಿಕಾರಿ/ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆಸಿದ ಜಂಟಿ ಭೌತಿಕ ತಪಾಸಣೆಗಳು ಮತ್ತು ಶಾಲೆಗಳಲ್ಲಿ ಒದಗಿಸಿರುವ ಮತ್ತು ಲಭ್ಯವಿರುವ ಸೌಲಭ್ಯಗಳನ್ನು ತಿಳಿದುಕೊಳ್ಳಲು ಶಾಲಾ ಮಕ್ಕಳ ಹಾಗೂ ಮುಖ್ಯೋಪಾಧ್ಯಾಯರ ಸಮೀಕ್ಷೆ ನಡೆಸಲಾಯಿತು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರೊಂದಿಗೆ ಜನವರಿ 2019ರಲ್ಲಿ ನಿರ್ಗಮನ ಸಭೆಯನ್ನು ನಡೆಸಲಾಯಿತು ಮತ್ತು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಚರ್ಚಿಸಲಾಯಿತು. ಇಲಾಖೆಯು ಸಲ್ಲಿಸಿರುವ ಉತ್ತರಗಳನ್ನು ವರದಿಯಲ್ಲಿ ಪರಿಗಣಿಸಲಾಗಿದೆ.

### 2.1.6 ಹಣದ ಬಳಕೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ 2014-15ರವರೆಗೆ ಮತ್ತು ಆ ನಂತರ ಆರ್‌ಎಮ್‌ಎಸ್‌ಎ ಹಣದ ಹಂಚಿಕೆ ವಿಧಾನದ ಅನುಪಾತವು ಅನುಕ್ರಮವಾಗಿ 75:25 ಮತ್ತು 60:40 ಇದ್ದಿತು. 2009-10ರಿಂದ 2017-18ರ ನಂತರ ಹಣದ ಬಳಕೆಯನ್ನು **ಅನುಬಂಧ-2.3ರಲ್ಲಿ** ನೀಡಲಾಗಿದೆ.

ಲೆಕ್ಕಪರಿಶೋಧನಾ ವ್ಯಾಪ್ತಿಯ ಅವಧಿಯಲ್ಲಿ ಅಂದರೆ 2013-14ರಿಂದ 2017-18ರಲ್ಲಿ, ಬಳಕೆಯ ಶೇಕಡಾವಾರು 30 ಮತ್ತು 55 ನಡುವಿನ ವ್ಯಾಪ್ತಿಯಲ್ಲಿದ್ದು, ಆರ್‌ಎಮ್‌ಎಸ್‌ಎಎಸ್‌ಕೆ ಲಭ್ಯವಿದ್ದ ಹಣವನ್ನು ಸಮಯಕ್ಕೆ ಸರಿಯಾಗಿ ಬಳಸಿಕೊಳ್ಳಲಿಲ್ಲ ಎಂಬುದನ್ನು ಸೂಚಿಸಿತ್ತು. ಹಣವನ್ನು ಬಳಕೆ ಮಾಡದಿರುವುದಕ್ಕೆ ಕಾರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ. ಹಣದ ಬಳಕೆ ಮಾಡದಿರುವುದು, ಕಂಡಿಕೆ 2.1.8.1(ಎ) ಯಲ್ಲಿ ಚರ್ಚಿಸಿರುವಂತೆ ಪ್ರೌಢ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವ ಉದ್ದೇಶವನ್ನು ಸಾಧಿಸುವುದರ ಮೇಲೆ ಪರಿಣಾಮ ಬೀರಿತು.

[9] ಬೆಳಗಾವಿ, ಬೆಂಗಳೂರು (ನಗರ), ಚಾಮರಾಜನಗರ, ಚಿತ್ರದುರ್ಗ, ಹಾಸನ, ಕಲಬುರಗಿ, ವಿಜಯಪುರ ಮತ್ತು ಯಾದಗಿರಿ.

[10] ಪರೀಕ್ಷಾ-ತನಿಖೆಗಾಗಿ ಆಯ್ಕೆ ಮಾಡಿದ 363ರಲ್ಲಿ 21 ಶಾಲೆಗಳು ಕಾರ್ಯ ನಿರ್ವಹಿಸುತ್ತಿರಲಿಲ್ಲ ಅಥವಾ ಲೆಕ್ಕಪರಿಶೋಧನೆಗೆ ಸ್ಪಂದಿಸಲಿಲ್ಲ. ಆದುದರಿಂದ ಲೆಕ್ಕಪರಿಶೋಧನೆಯು ಕೇವಲ 342 ಶಾಲೆಗಳ ಪರೀಕ್ಷಾ-ತನಿಖೆ ನಡೆಸಲಾಯಿತು.

ಆರ್‌ಎಮ್‌ಎಸ್‌ಎ ಲಭ್ಯವಿದ್ದ ಹಣವನ್ನು ಪೂರ್ಣವಾಗಿ ಬಳಕೆ ಮಾಡಿಕೊಳ್ಳಲಾಗಲಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾ ಆವರ್ತಕವಲ್ಲದ ಅನುದಾನದಡಿಯಲ್ಲಿ ಒದಗಿಸಿದ ಹಣದ ಅಧಿಕ ಭಾಗವನ್ನು ಬಳಸುವುದರಲ್ಲಿ ವಿಳಂಬವಿತ್ತೆಂದು ಸರ್ಕಾರವು ತಿಳಿಸಿತು. ಕಂಡಿಕೆ 2.1.8.1(ಎ)ಯಲ್ಲಿ ಚರ್ಚಿಸಿದಂತೆ, ಹಣದ ಬಳಕೆ ಮಾಡದಿರುವುದು ಪ್ರೌಢ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವ ಉದ್ದೇಶವನ್ನು ಸಾಧಿಸುವಲ್ಲಿ ಪರಿಣಾಮ ಬೀರಿತು.

ಹಂಚಿಕೆಯ ಶೇಕಡಾ 56ರಷ್ಟು ಶಾಲೆಗಳ ಉನ್ನತೀಕರಣ/ಬಲಪಡಿಸುವಿಕೆಗೆ ಆಗಿದ್ದರೆ ಶೇಕಡಾ 27ರಷ್ಟು ಹಂಚಿಕೆಯು ಶಿಕ್ಷಕರ ವೇತನ ಮತ್ತು ತರಬೇತಿಗಾಗಿತ್ತೆಂದು ಹಣದ[11] ಹಂಚಿಕೆಯ ಘಟಕವಾರು ವಿಶ್ಲೇಷಣೆಯು ತೋರಿಸಿತು. ಉಳಿದ ಹಣವನ್ನು ಇತರ ಘಟಕಗಳ ನಡುವೆ ಹಂಚಿಕೆ ಮಾಡಲಾಯಿತು, ಅದನ್ನು **ನಕ್ಷೆ-2.2**ರಲ್ಲಿ ತೋರಿಸಲಾಗಿದೆ.

**ನಕ್ಷೆ-2.2: ಆರ್‌ಎಮ್‌ಎಸ್‌ಎ ಅಡಿಯಲ್ಲಿ ಘಟಕವಾರು ಹಂಚಿಕೆ**




ಹೀಗೆ, ಆರ್‌ಎಮ್‌ಎಸ್‌ಎ ಮಧ್ಯಸ್ಥಿಕೆಯು ಹೆಚ್ಚಾಗಿ ಭೌತಿಕ ಮೂಲಸೌಕರ್ಯಗಳ ಕಡೆಗಿದ್ದಿತು.

## ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು

ರಾಜ್ಯದಲ್ಲಿನ ಪ್ರೌಢಶಾಲೆಗಳ ಸಂಖ್ಯೆ, ಪ್ರೌಢಶಾಲೆಗಳಲ್ಲಿನ ಮಕ್ಕಳ ದಾಖಲಾತಿ, ಜಿಇಆರ್, ಧಾರಣಾ ದರ, ಮುಂತಾದವುಗಳನ್ನು ಆರ್‌ಎಮ್‌ಎಸ್‌ಎ ಪ್ರಾರಂಭವಾಗುವುದಕ್ಕಿಂತ ಮುಂಚಿನ (ಸೆಪ್ಟಂಬರ್ 2008ರಲ್ಲಿದ್ದಂತೆ), ಲೆಕ್ಕಪರಿಶೋಧನಾ ಅವಧಿಯ ಪ್ರಾರಂಭದಲ್ಲಿ (ಮಾರ್ಚ್ 2014ರ ಅಂತ್ಯಕ್ಕೆ) ಮತ್ತು ಆರ್‌ಎಮ್‌ಎಸ್‌ಎಯ ಅನುಷ್ಠಾನದ 10 ವರ್ಷದ ನಂತರದ (ಮಾರ್ಚ್ 2018ರಲ್ಲಿದ್ದಂತೆ) **ಕೋಷ್ಟಕ-2.1**ರಲ್ಲಿ ನೀಡಲಾಗಿದೆ.

**ಕೋಷ್ಟಕ-2.1: ನಿಯತಾಂಕಗಳಲ್ಲಿನ ಪ್ರವೃತ್ತಿ**

| ವರ್ಗಗಳು | 2008 | 2014 | 2018 |
|---|---|---|---|
| ಶಾಲೆಗಳ ಸಂಖ್ಯೆ | 11,753 | 14,469 | 15,666[12] |
| ಶಾಲೆಗಳಲ್ಲಿನ ದಾಖಲಾತಿ | 15,57,708 | 16,84,704 | 17,59,737 |
| ಬಾಲಕಿಯರ ದಾಖಲಾತಿ | 7,47,660 | 8,09,890 | 8,42,943 |
| ಎಸ್‌ಸಿ/ಎಸ್‌ಟಿ ಗಳ ದಾಖಲಾತಿ | 3,67,722 | 4,09,352 | 4,45,829 |
| ವಿಕಲಚೇತನರ ದಾಖಲಾತಿ | ಲಭ್ಯವಿಲ್ಲ | 14,084 | 9,818 |
| ಜಿಇಆರ್ | 68.4 | 76* | 82.37 |
| ಧಾರಣಾ ದರ | ಲಭ್ಯವಿಲ್ಲ | 82.7 | 88 |

ಆಧಾರ: ಆರ್‌ಎಮ್‌ಎಸ್‌ಎ ರಾಜ್ಯ ಯೋಜನಾ ನಿರ್ದೇಶಕರು ಸಲ್ಲಿಸಿದ ಮಾಹಿತಿ

* 2014-15

[11] ಆರ್‌ಎಮ್‌ಎಸ್‌ಎಸ್‌ಕೆ ಬಳಿ ಘಟಕವಾರು ವೆಚ್ಚವು ಲಭ್ಯವಿಲ್ಲ. ಆದುದರಿಂದ ಲೆಕ್ಕಪರಿಶೋಧನೆಯು ಹಣದ ಹಂಚಿಕೆಯ ವಿಶ್ಲೇಷಣೆ ಮಾಡಿತು.

[12] ಸರ್ಕಾರಿ ಶಾಲೆಗಳು-5,330; ಅನುದಾನಿತ ಶಾಲೆಗಳು-3,803; ಅನುದಾನಿತವಲ್ಲದ ಶಾಲೆಗಳು-6,533.

ಎಲ್ಲ ನಿಯತಾಂಕಗಳಲ್ಲಿ ಏರಿಕೆಯ ಪ್ರವೃತ್ತಿಯಿದ್ದರೂ ಸಹ ರಾಜ್ಯದಲ್ಲಿ ಆರ್‌ಎಮ್‌ಎಸ್‌ಎ ಗುರಿಗಳನ್ನು ಇನ್ನೂ ಸಾಧಿಸಲಾಗಿಲ್ಲವೆಂದು ಕೋಷ್ಟಕದಿಂದ ಸ್ಪಷ್ಟವಾಗುತ್ತದೆ. ಮಾರ್ಚ್ 2018ರಲ್ಲಿದ್ದಂತೆ ಜಿಇಆರ್ ಅನ್ನು ಶೇಕಡಾ 82ಕ್ಕೆ ಮತ್ತು ಧಾರಣಾ ದರವನ್ನು ಶೇಕಡಾ 88ಕ್ಕೆ ತಲುಪಿರುವ ರಾಜ್ಯದ ಪ್ರಯತ್ನವು ಶ್ಲಾಘನೀಯವಾಗಿದ್ದರೂ ಯೋಜನೆಯ ಗುರಿಯನ್ನು ಸಾಧಿಸಲು ಹೆಚ್ಚುವರಿ ಮತ್ತು ನಿರಂತರ ಪ್ರಯತ್ನಗಳನ್ನು ಮಾಡಬೇಕಾದ ಅಗತ್ಯವಿದೆ. ಆರ್‌ಎಮ್‌ಎಸ್‌ಎ ಫಲಿತಾಂಶಗಳನ್ನು ಸಾಧಿಸದಿರುವುದಕ್ಕೆ ಕಾರಣಗಳನ್ನು ಮತ್ತು ಅದರ ಫಲಿತಾಂಶವನ್ನು ಈ ವರದಿಯಲ್ಲಿ ಶೀರ್ಷಿಕೆವಾರು ಚರ್ಚಿಸಲಾಗಿದೆ.

## 2.1.7 ಪ್ರೌಢ ಶಿಕ್ಷಣಕ್ಕೆ ಸುಧಾರಿತ ಪ್ರವೇಶಾವಕಾಶ

ಮಾಧ್ಯಮಿಕ ಮತ್ತು ಪ್ರೌಢಶಾಲೆಯನ್ನು ತಲುಪಲು ಮಕ್ಕಳು ಪ್ರಯಾಣ ಮಾಡಬೇಕಿರುವ ದೂರವನ್ನು ಕಡಿಮೆಗೊಳಿಸುವುದು, ಸಾರಿಗೆ ಸೌಲಭ್ಯವನ್ನು ಸುಧಾರಿಸುವುದು ಮತ್ತು ತೆರೆದ ಶಾಲೆಯ ಮೂಲಕ ಪ್ರೌಢ ಶಿಕ್ಷಣಕ್ಕೆ ಸುಧಾರಿತ ಪ್ರವೇಶಾವಕಾಶವನ್ನು ನೀಡುವುದು ಆರ್‌ಎಮ್‌ಎಸ್‌ಎ ಗುರಿಯಾಗಿತ್ತು.

ಕರ್ನಾಟಕಕ್ಕೆ 2009–17ರಲ್ಲಿ ಮಾಧ್ಯಮಿಕ ಶಿಕ್ಷಣವನ್ನು ವಿಸ್ತರಿಸುವ ಮುನ್ನೋಟ ಯೋಜನೆಯು (ಕರ್ನಾಟಕದ ಮುನ್ನೋಟ ಯೋಜನೆ) 2017ರೊಳಗೆ ಸಮಂಜಸವಾದ ಅಂತರದಲ್ಲಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಿರಬೇಕು ಮತ್ತು ರಾಷ್ಟ್ರೀಯ ಮಟ್ಟದ ಮಾದರಿಯೊಂದಿಗೆ ಶಾಲಾ ಶಿಕ್ಷಣವನ್ನು ಸರಿಹೊಂದಿಸಬೇಕು ಎಂದು ಉದ್ದೇಶಿಸಿತ್ತು. ಆದರೆ, ಎರಡೂ ಗುರಿಗಳನ್ನು ಸಾಧಿಸಲಾಗಿಲ್ಲವೆಂದು ನಾವು ಗಮನಿಸಿದೆವು. ಪ್ರವೇಶಾವಕಾಶದ ಮೇಲಿನ ಮತ್ತಷ್ಟು ಅವಲೋಕನಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *2.1.7.1 ವಾಸಸ್ಥಳಗಳ ವ್ಯಾಪ್ತಿ*

ಸಮೀಪದಲ್ಲಿರುವ ಸ್ಥಳದ ಮೂಲಕ ಪ್ರೌಢ ಶಿಕ್ಷಣಕ್ಕೆ ಪ್ರವೇಶಾವಕಾಶವನ್ನು ಸುಧಾರಿಸುವುದು, ಅಂದರೆ 5 ಕಿಲೋಮೀಟರ್‌ಗಳೊಳಗೆ ಮಾಧ್ಯಮಿಕ ಶಾಲೆಗಳು ಮತ್ತು 7–10 ಕಿಲೋಮೀಟರ್‌ಗಳೊಳಗೆ ಪ್ರೌಢಶಾಲೆಗಳಿರುವಂತೆ ಮಾಡುವುದು ಆರ್‌ಎಮ್‌ಎಸ್‌ಎಯ ಪ್ರಮುಖ ಉದ್ದೇಶವಾಗಿತ್ತು. 2011–12ರೊಳಗೆ ಎಲ್ಲ ವಾಸಸ್ಥಳಗಳಿಂದ ಐದು ಕಿಲೋಮೀಟರ್‌ಗಳ ದೂರದೊಳಗೆ ಪ್ರೌಢ ಶಾಲೆಗಳಿರಬೇಕೆಂದು ಕರ್ನಾಟಕ[13] ಮುನ್ನೋಟ ಯೋಜನೆಯು ಉದ್ದೇಶಿಸಿತ್ತು. ಈ ಸಂಬಂಧವಾಗಿ ಕೆಳಗಿನವುಗಳು ಲೆಕ್ಕಪರಿಶೊಧನೆಯ ಅವಲೋಕನಗಳಾಗಿವೆ:

- ರಾಜ್ಯದಲ್ಲಿರುವ ಎಲ್ಲ ವಾಸಸ್ಥಳಗಳ ಪಟ್ಟಿಯನ್ನಾಗಲೀ ಅಥವಾ ಪ್ರೌಢ ಶಾಲೆಗಳಿರುವ ವಾಸಸ್ಥಳಗಳನ್ನಾಗಲೀ ಆರ್‌ಎಮ್‌ಎಸ್‌ಎಎಸ್‌ಕೆ ನಿರ್ವಹಿಸಿರಲಿಲ್ಲ. ಹೀಗಾಗಿ, ಎಲ್ಲ ವಾಸಸ್ಥಳಗಳೂ ಐದು ಕಿಲೋಮೀಟರ್‌ಗಳೊಳಗೆ ಪ್ರೌಢ ಶಾಲೆಗಳನ್ನು ಹೊಂದಿದ್ದವೇ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ನಿರ್ಧರಿಸಲಾಗಲಿಲ್ಲ. ಆರ್‌ಎಮ್‌ಎಸ್‌ಎಎಸ್‌ಕೆ ಲೆಕ್ಕಪರಿಶೋಧನೆಗೆ ಒದಗಿಸಿದ ಮಾಹಿತಿಯಿಂದ 2010–11 ಮತ್ತು 2017–18ರ ಅಂತ್ಯದಲ್ಲಿದ್ದಂತೆ ಕ್ರಮವಾಗಿ 11,609 ಮತ್ತು 4,361 ವಾಸಸ್ಥಳಗಳು ಐದು ಕಿಲೋಮೀಟರ್‌ಗಳೊಳಗೆ ಪ್ರೌಢ ಶಾಲೆಗೆ ಪ್ರವೇಶಾವಕಾಶವನ್ನು ಹೊಂದಿರಲಿಲ್ಲ ಎಂಬುದನ್ನು ನಾವು ಗಮನಿಸಿದೆವು. ಹೀಗೆ, ಪ್ರೌಢ ಶಿಕ್ಷಣಕ್ಕೆ ಪ್ರವೇಶಾವಕಾಶವಿಲ್ಲದ ವಾಸಸ್ಥಳಗಳು 11,609ರಿಂದ 4,361ಕ್ಕೆ ಇಳಿಕೆಯಾದರೂ ಸಹ ಕರ್ನಾಟಕ ಮುನ್ನೋಟ ಯೋಜನೆಯಲ್ಲಿನ ಅನ್ವಯ ಗುರಿಯನ್ನು ಸಾಧಿಸಲಾಗಲಿಲ್ಲ. ಆರ್‌ಎಮ್‌ಎಸ್‌ಎಎಸ್‌ಕೆ ಪ್ರೌಢ ಶಿಕ್ಷಣವನ್ನು ಒದಗಿಸುವ ತನ್ನ ವೇಗವನ್ನು ಆರ್‌ಎಮ್‌ಎಸ್‌ಎ ಅನುಷ್ಠಾನದ ಪ್ರಾರಂಭಿಕ ವರ್ಷಗಳಲ್ಲಿ ಹೆಚ್ಚಿಸಿತ್ತು ಮತ್ತು ನಂತರ ವೇಗವು ಹೆಚ್ಚುಕಡಿಮೆ ಮಂದ ಗತಿಯಲ್ಲಿತ್ತೆಂದು ದತ್ತಾಂಶದ ಮತ್ತಷ್ಟು ವಿಶ್ಲೇಷಣೆಯು ತೋರಿಸಿತು. ಪ್ರೌಢಶಾಲೆಗಳಿರುವ ವಾಸಸ್ಥಳಗಳ ಪಟ್ಟಿಯು ಲಭ್ಯವಿಲ್ಲದ್ದರಿಂದ ಲೆಕ್ಕಪರಿಶೋಧನೆಗೆ ಒದಗಿಸಿದ ವಾಸಸ್ಥಳಗಳ ಮೇಲಿನ ಮಾಹಿತಿಯ ನಿಖರತೆಯನ್ನು ಪರಿಶೀಲಿಸಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.
- ನಿರ್ದಿಷ್ಟಪಡಿಸಿದ ಮಾನದಂಡವಾದ ವಾಸಸ್ಥಳದ ಏಳು ಕಿಲೋಮೀಟರ್‌ಗಳ ಪರಿಧಿಯಲ್ಲಿ ಪದವಿಪೂರ್ವ ಕಾಲೇಜುಗಳ ಲಭ್ಯತೆಯನ್ನು ಕಂಡುಹಿಡಿಯಲು ಆರ್‌ಎಮ್‌ಎಸ್‌ಎಎಸ್‌ಕೆ ಯಾವುದೇ ಪ್ರಯತ್ನಗಳನ್ನೂ ಮಾಡಿರಲಿಲ್ಲ.

[13] ಕರ್ನಾಟಕಕ್ಕೆ 2009–2017ರ ಅವಧಿಯಲ್ಲಿ ಪ್ರೌಢ ಶಿಕ್ಷಣವನ್ನು ವಿಸ್ತರಿಸುವ ಮುನ್ನೋಟ ಯೋಜನೆ.

ಹೀಗೆ, ಎಲ್ಲ ವಾಸಸ್ಥಳಗಳ ಮಕ್ಕಳು ಸಮಂಜಸ ಅಂತರದೊಳಗೆ ಪ್ರೌಢ ಶಾಲೆ/ಪದವಿಪೂರ್ವ ಕಾಲೇಜುಗಳನ್ನು ಹೊಂದಿರಲಿಲ್ಲ.

ಎಲ್ಲ ವಾಸಸ್ಥಳಗಳಿಗೆ ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣವು ಲಭ್ಯವಾಗುವಂತೆ ಮಾಡುವುದಕ್ಕೆ ತಾನು ಬದ್ಧವಾಗಿರುವುದಾಗಿ ರಾಜ್ಯ ಸರ್ಕಾರವು ಒಪ್ಪಿಕೊಂಡಿತು (ಫೆಬ್ರವರಿ 2019). ಆದರೆ, ಶೇಕಡಾ 93ರಷ್ಟು ವಾಸಸ್ಥಳಗಳನ್ನು ವ್ಯಾಪಿಸಿರುವುದೇ ಒಂದು ಸಾಧನೆಯಾಗಿದೆ ಎಂದೂ ತಿಳಿಸಿತು. ಶಾಲೆಗಳ ಸ್ಥಳಗಳನ್ನು ನಿರ್ಧರಿಸಲು ಪ್ರಸ್ತುತ ಜಿಐಎಸ್ ಮ್ಯಾಪಿಂಗ್ ವ್ಯವಸ್ಥೆಯನ್ನು ಬಳಸಿಕೊಳ್ಳಲಾಗುತ್ತಿದೆ ಎಂದೂ ಸಹ ತಿಳಿಸಿತು.

### *2.1.7.2 ಸಾರಿಗೆ ಸೌಲಭ್ಯಗಳ ವ್ಯವಸ್ಥೆ*

ಸ್ಥಳೀಯ ಪರಿಸ್ಥಿತಿಗಳಾದ ಗುಡ್ಡಗಾಡು ಪ್ರದೇಶಗಳು, ತಲುಪಲು ಕಷ್ಟಸಾಧ್ಯವಾದ ಪ್ರದೇಶಗಳು ಇತ್ಯಾದಿಗಳಿಗೆ ಅನುಗುಣವಾಗಿ ಪರಿಣಾಮಕಾರಿ ಮತ್ತು ಸುರಕ್ಷಿತ ಸಾರಿಗೆ ಅಥವಾ ವಸತಿ ಶಾಲೆಗಳ ವ್ಯವಸ್ಥೆಯನ್ನು ಮಾಡಲು ಆರ್‌ಎಮ್‌ಎಸ್‌ಎ ಚೌಕಟ್ಟು ಉದ್ದೇಶಿಸಿತ್ತು. ಈಗಾಗಲೇ ಹಿಂದಿನ ಕಂಡಿಕೆಯಲ್ಲಿ ಚರ್ಚಿಸಿದಂತೆ, 4,361 ವಾಸಸ್ಥಳಗಳಿಗೆ ಪ್ರೌಢಶಿಕ್ಷಣಕ್ಕೆ ಪ್ರವೇಶವಿಲ್ಲದಂತಾಗಿದ್ದರಿಂದ ಪರಿಣಾಮಕಾರಿ ಮತ್ತು ಸುರಕ್ಷಿತ ಸಾರಿಗೆ ಸೌಲಭ್ಯ ಅಥವಾ ವಸತಿ ಶಾಲೆಗಳ ಅಗತ್ಯವಿರುವ ವಾಸಸ್ಥಳಗಳನ್ನು ಗುರುತಿಸುವುದು ಅತ್ಯಂತ ಮಹತ್ವದ್ದಾಗಿತ್ತು. ಆದರೆ, ಆರ್‌ಎಮ್‌ಎಸ್‌ಎಎಸ್‌ಕೆಯಿಂದ ಅಂತಹ ಯಾವುದೇ ಪ್ರಯತ್ನಗಳು ಇಲ್ಲದಿರುವುದನ್ನು ನಾವು ಗಮನಿಸಿದೆವು. ತತ್ಪರಿಣಾಮವಾಗಿ ಆರ್‌ಎಮ್‌ಎಸ್‌ಎಎಸ್‌ಕೆ ಯಾವುದೇ ವಾಸಸ್ಥಳಗಳಲ್ಲಿ ಸಾರಿಗೆ ಸೌಲಭ್ಯಗಳನ್ನು ಕಲ್ಪಿಸುವುದನ್ನಾಗಲೀ ಅಥವಾ ವಸತಿ ಶಾಲೆಗಳ ನಿರ್ಮಾಣಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸುವುದನ್ನಾಗಲೀ ಮಾಡಲಿಲ್ಲ. ಎರಡು ಜಿಲ್ಲೆಗಳಲ್ಲಿನ ವಾಸಸ್ಥಳಗಳನ್ನು ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಬನಹಳ್ಳಿ ವಾಸಸ್ಥಳದ ಮತ್ತು ಚಾಮರಾಜನಗರ ಜಿಲ್ಲೆಯ ಒಂಭತ್ತು[14] ವಾಸಸ್ಥಳಗಳ ಮಕ್ಕಳು, ಯಾವುದೇ ಸಾರಿಗೆ ಸೌಲಭ್ಯಗಳು ಲಭ್ಯವಿರದಿದ್ದುದರಿಂದ ತಮ್ಮ ಶಾಲೆಗಳಿಗೆ ಹೋಗಲು ಅರಣ್ಯ ಪ್ರದೇಶದ ಮೂಲಕ ಕನಿಷ್ಠ ಆರು ಕಿಲೋಮೀಟರ್‌ಗಳಷ್ಟು ದೂರವನ್ನು ನಡೆದುಕೊಂಡು ಹೋಗಬೇಕಿತ್ತು.

ಹೀಗೆ, ಪ್ರೌಢ ಶಾಲೆಗಳಿಗೆ ಪ್ರವೇಶಾವಕಾಶ ಅಥವಾ ಸಾರಿಗೆ ಸೌಲಭ್ಯದ ಅಥವಾ ವಸತಿ ಶಾಲೆಗಳ ಅಗತ್ಯವಿರುವ ವಾಸಸ್ಥಾನಗಳನ್ನು ಗುರುತಿಸದಿರುವುದರಿಂದ ಹಲವಾರು ವಾಸಸ್ಥಳಗಳ ಮಕ್ಕಳು ಪ್ರೌಢ ಶಿಕ್ಷಣದ ಪ್ರವೇಶವನ್ನು ಸುಲಭವಾಗಿ ಪಡೆಯುವ ಸೌಲಭ್ಯದಿಂದ ವಂಚಿತರಾದರು ಮತ್ತು ಶಾಲೆಯನ್ನು ತಲುಪಲು ಐದು ಕಿಲೋಮೀಟರ್‌ಗಳಿಗಿಂತ ಹೆಚ್ಚು ದೂರ ನಡೆಯಬೇಕಿತ್ತು.

### *2.1.7.3 ಮುಕ್ತ ಶಾಲೆಗಳು*

ಮುಕ್ತ ಶಾಲಾ ಶಿಕ್ಷಣವು ಶಾಲೆಗಳಿಗೆ ಪ್ರವೇಶವನ್ನು ಒದಗಿಸುವಲ್ಲಿ, ವಿಶೇಷವಾಗಿ ಎಸ್‌ಸಿ, ಎಸ್‌ಟಿ, ಬಾಲಕಿಯರು ಮತ್ತು ವಿಕಲಚೇತನ ಮಕ್ಕಳಂತಹ ಪ್ರತಿಕೂಲ ಗುಂಪುಗಳಿಗೆ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ, ಆರ್‌ಎಮ್‌ಎಸ್‌ಎಎಸ್‌ಕೆ ಮುಕ್ತ ಶಿಕ್ಷಣದ ಅವಶ್ಯಕತೆಯಿದ್ದ ವಾಸಸ್ಥಳಗಳನ್ನು ನಿರ್ಧರಿಸುವುದು ಮತ್ತು ಗುರುತಿಸುವುದನ್ನಾಗಲೀ ಅಥವಾ ರಾಜ್ಯದಲ್ಲಿ ಮುಕ್ತ ಶಾಲಾ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿದ್ದ ಮಕ್ಕಳ ಸಂಖ್ಯೆಯ ಬಗ್ಗೆ ದತ್ತಾಂಶವನ್ನಾಗಲೀ ಅದು ನಿರ್ವಹಿಸಿರಲಿಲ್ಲ. ಹೀಗೆ, ಮುಕ್ತ ಶಾಲೆಗಳ ಸಜ್ಜುಗೊಳಿಸುವಿಕೆ ಮತ್ತು ಪ್ರಚಾರಕ್ಕಾಗಿ ವಿವರವಾದ ಮತ್ತು ಉತ್ತಮವಾಗಿ ಯೋಚಿಸಿದ ಯೋಜನೆಯನ್ನು ಒದಗಿಸಲು ಎಸ್‌ಸಿ/ಎಸ್‌ಟಿ ಮತ್ತು ಬಾಲಕಿಯರು, ಹೀಗೆ ಪ್ರತಿಕೂಲ ವರ್ಗಗಳ ವಿದ್ಯಾರ್ಥಿಗಳನ್ನು ಗುರುತಿಸಲಿಲ್ಲ.

ಕರ್ನಾಟಕ ಮುಕ್ತ ವಿಶ್ವವಿದ್ಯಾಲಯವನ್ನು ಒಳಗೊಂಡು ಸ್ವಾಯತ್ತ ಸಂಸ್ಥೆಗಳು ಮುಕ್ತ ಶಾಲಾ ಶಿಕ್ಷಣವನ್ನು ನಿರ್ವಹಿಸುತ್ತಿವೆ ಎಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019). ಕರ್ನಾಟಕ ಮುಕ್ತ ವಿಶ್ವವಿದ್ಯಾಲಯವು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಮುಕ್ತ ಶಿಕ್ಷಣವನ್ನು ನೀಡುವುದರಿಂದ ಉತ್ತರವು ಸಮಂಜಸವಾಗಿಲ್ಲ ಮತ್ತು ಪ್ರೌಢ ಶಿಕ್ಷಣಕ್ಕಾಗಿ ಮುಕ್ತ ಶಾಲೆಗಳ ಅಗತ್ಯವಿರುವ ವಾಸಸ್ಥಳಗಳನ್ನು ಆರ್‌ಎಮ್‌ಎಸ್‌ಎಎಸ್‌ಕೆ ಇನ್ನೂ ನಿರ್ಧರಣೆ ಮಾಡಬೇಕಿದೆ.

[14] ಪದಸಲನಾಥ, ಇಂಡಿಗನಾಥ, ತೇಕನಿ, ತೋಕೆರೆ, ತುಳಸೀಕೆರೆ, ಕೊಕ್ಕಬಾರಿ, ಕೊಂಬುಡುಕ್ಕಿ, ದೊಡ್ಡಾನಿ ಮತ್ತು ಚಂಗಡಿ.

### *2.1.7.4 ಶಾಲೆಗಳ ಉನ್ನತೀಕರಣ*

ಶಾಲೆಗಳಿಗೆ ಹೆಚ್ಚಿನ ಪ್ರವೇಶಾವಕಾಶವನ್ನು ಒದಗಿಸುವುದು ಶಾಲೆಗಳ ಮ್ಯಾಪಿಂಗ್ ಆಧಾರದ ಮೇಲೆ ಅಸ್ತಿತ್ವದಲ್ಲಿರುವ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ಬಲಪಡಿಸುವುದು ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳನ್ನಾಗಿ ಅಥವಾ ಪ್ರೌಢಶಾಲೆಗಳನ್ನು ಪದವಿಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸುವುದು ಒಳಗೊಂಡಿತ್ತು. ಕರ್ನಾಟಕದ ಮುನ್ನೋಟ ಯೋಜನೆಯು 2012ರೊಳಗೆ 2,000 ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸುವುದನ್ನು ಆಲೋಚಿಸಿತ್ತು.

2009–10ರಿಂದ 2017–18ರ ಅವಧಿಯಲ್ಲಿ ರಾಜ್ಯವು ಕೇವಲ 558 ಶಾಲೆಗಳನ್ನು ಮಾತ್ರ ಉನ್ನತೀಕರಿಸಲು ಪ್ರಸ್ತಾವಿಸಿತ್ತೆಂದು ನಾವು ಗಮನಿಸಿದೆವು. ಈ ಪ್ರಸ್ತಾವನೆಗೆ ಪ್ರತಿಯಾಗಿ, ಯೋಜನಾ ಅನುಮೋದನಾ ಮಂಡಳಿಯು (ಪಿಎಬಿ) ಉನ್ನತೀಕರಣಕ್ಕಾಗಿ ಒಟ್ಟು 488 ಶಾಲೆಗಳನ್ನು ಅನುಮೋದಿಸಿತು ಮತ್ತು ಇದು ಭೌತಿಕ ಮೂಲಸೌಕರ್ಯಗಳ ನಿರ್ಮಾಣ, ಈ ಶಾಲೆಗಳಿಗೆ ಪೀಠೋಪಕರಣಗಳು ಮತ್ತು ಪ್ರಯೋಗಶಾಲಾ ಉಪಕರಣಗಳ ಖರೀದಿ ಹಾಗೂ ಶಿಕ್ಷಕರ ನೇಮಕಾತಿಯನ್ನು ಒಳಗೊಂಡಿತ್ತು. ಆದರೆ, ಈ 488 ಶಾಲೆಗಳಲ್ಲಿ ಸಿವಿಲ್ ಕಾಮಗಾರಿಗಳನ್ನು ಕೇವಲ 254 ಶಾಲೆಗಳಲ್ಲಿ ಕೈಗೆತ್ತಿಕೊಳ್ಳಲಾಗಿತ್ತು. ಅನುಮೋದಿತ ಕಾಮಗಾರಿಗಳನ್ನು ಪೂರ್ಣಗೊಳಿಸದಿರುವುದರಿಂದ ಆರ್‌ಎಮ್‌ಎಸ್‌ಎಎಸ್‌ಕೆಯ ಮತ್ತಷ್ಟು ಪ್ರಸ್ತಾವನೆಗಳನ್ನು ಪಿಎಬಿ ಪರಿಗಣಿಸಲಿಲ್ಲ. ಹೀಗೆ, ಉನ್ನತೀಕರಿಸಬೇಕಿದ್ದ 2,000 ಶಾಲೆಗಳಿಗೆ ಪ್ರತಿಯಾಗಿ ಕೇವಲ 254 ಶಾಲೆಗಳನ್ನು ಮಾತ್ರ ಭೌತಿಕವಾಗಿ ಉನ್ನತೀಕರಣ ಮಾಡಲು ಕೈಗೆತ್ತಿ ಕೊಳ್ಳಲಾಯಿತು (ಶಾಲೆಗಳ ನಿರ್ಮಾಣವನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ).

ಇದಲ್ಲದೆ, 399 ಶಾಲೆಗಳಲ್ಲಿ ಶಿಕ್ಷಕರನ್ನು ನೇಮಕ ಮಾಡಲಾಗಿದ್ದರೆ, ಉಳಿದ 65 ಶಾಲೆಗಳಿಗೆ ಪಿಎಬಿಯಿಂದ ಅನುಮೋದಿತವಾಗಿದ್ದ 455 ಶಿಕ್ಷಕರನ್ನು ಹಣಕಾಸು ಇಲಾಖೆಯಿಂದ ಪ್ರಸ್ತಾವನೆಗಳು ಅನುಮೋದನೆ ಆಗದಿದ್ದುದರಿಂದ ಸರ್ಕಾರವು ನೇಮಕ ಮಾಡಿರಲಿಲ್ಲ. ತತ್ಪರಿಣಾಮವಾಗಿ, ಈ ಉನ್ನತೀಕರಿಸಿದ ಶಾಲೆಗಳು ಸಾಕಷ್ಟು ಮೂಲಸೌಕರ್ಯಗಳಿಲ್ಲದೇ ಮತ್ತು ಶಿಕ್ಷಕರಿಲ್ಲದೇ ಕಾರ್ಯ ನಿರ್ವಹಿಸುತ್ತಿದ್ದವು.

ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾ–ತನಿಖೆ ನಡೆಸಿದ ಉನ್ನತೀಕರಿಸಿದ 91 ಸರ್ಕಾರಿ ಶಾಲೆಗಳಲ್ಲಿ ನಾಲ್ಕು ಶಾಲೆಗಳ ಕಾರ್ಯ ನಿರ್ವಹಣೆಯನ್ನು **ಅನುಬಂಧ–2.4ರಲ್ಲಿ** ನೀಡಲಾಗಿದೆ.

ಭಾರತ ಸರ್ಕಾರದ ಹಣವು ಬಿಡುಗಡೆಯಾಗದಿದ್ದುದರಿಂದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬವಾಗಿದೆ ಎಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019) ಹೀಗೆ, ಹಣದ ಬಿಡುಗಡೆಯಲ್ಲಿನ ವಿಳಂಬದಿಂದ ಶಾಲೆಗಳ ಉನ್ನತೀಕರಣವು ಕೇವಲ ನಾಮಕಾವಾಸ್ಥೆಯಾಗಿತ್ತು ಮತ್ತು ವಾಸ್ತವವಾಗಿ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲದಲ್ಲಿ ಉನ್ನತೀಕರಣವಾಗಲಿಲ್ಲ. ಮೂಲಸೌಕರ್ಯಗಳ ಮತ್ತು ಮಾನವ ಸಂಪನ್ಮೂಲಗಳ ಲಭ್ಯತೆ ಮೇಲಿನ ಅವಲೋಕನಗಳನ್ನು ಕಂಡಿಕೆ 2.1.8ರಲ್ಲಿ ಚರ್ಚಿಸಲಾಗಿದೆ.

**ಶಿಫಾರಸು–1: ವ್ಯಾಪ್ತಿಗೊಳಪಡಿಸದ ವಾಸಸ್ಥಳಗಳಲ್ಲಿ ಶಾಲೆಗಳಿಗೆ ಪ್ರವೇಶವನ್ನು ಒದಗಿಸಲು ಮತ್ತು ಪ್ರತಿ ಶಾಲೆಯ ಅವಶ್ಯಕತೆಯನ್ನು ಗುರುತಿಸಲು ರಾಜ್ಯ ಸರ್ಕಾರವು ಸಮಗ್ರ ಶಾಲಾ ಮ್ಯಾಪಿಂಗ್‌ಅನ್ನು ಕೈಗೆತ್ತಿಕೊಳ್ಳುವ ಅವಶ್ಯಕತೆಯಿದೆ.**

### *2.1.7.5 ಸಾಂಸ್ಥಿಕ ಸುಧಾರಣೆಗಳನ್ನು ಕೈಗೆತ್ತಿಕೊಳ್ಳದಿರುವುದು*

ಕರ್ನಾಟಕದ ಮುನ್ನೋಟ ಯೋಜನೆಯು ಶಾಲಾ ಶಿಕ್ಷಣದ ರಚನೆಯನ್ನು ರಾಷ್ಟ್ರೀಯ ಮಟ್ಟದ ಮಾದರಿಯೊಂದಿಗೆ ಮರುರೂಪಿಸಲು ಉದ್ದೇಶಿಸಿತ್ತು, ಅದರಲ್ಲಿ ಎಂಟನೇ ತರಗತಿಯನ್ನು ಪ್ರಾಥಮಿಕ ಶಾಲಾ ವ್ಯವಸ್ಥೆಗೆ ತರಬೇಕಿತ್ತು. ಆದರೆ ರಾಜ್ಯವು ಮುನ್ನೋಟ ಯೋಜನೆಯಲ್ಲಿ ಉದ್ದೇಶಿಸಿದ್ದಂತೆ ಸಾಂಸ್ಥಿಕ ಸುಧಾರಣೆಗಳನ್ನು ಕೈಗೆತ್ತಿಕೊಳ್ಳಲಿಲ್ಲ. ಬದಲಿಗೆ, ರಾಜ್ಯದಲ್ಲಿನ ಬಹುಪಾಲು ಶಾಲೆಗಳು 7+3+2 ಶಾಲಾ ವ್ಯವಸ್ಥೆಯನ್ನೇ ಅನುಸರಿಸುತ್ತಿದ್ದವು. 7+3 ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಡಿ ವ್ಯಾಪಿಸಿದ್ದರೆ, ಪದವಿಪೂರ್ವ ಶಿಕ್ಷಣವನ್ನು ಪದವಿಪೂರ್ವ ಮಂಡಳಿಯು ನಿರ್ವಹಿಸುತ್ತಿತ್ತು. ಶೈಕ್ಷಣಿಕ ಯೋಜನೆ ಮತ್ತು ಆಡಳಿತದ ರಾಷ್ಟ್ರೀಯ ವಿಶ್ವವಿದ್ಯಾಲಯ (ಎನ್‌ಯುಇಪಿಎ), ನವದೆಹಲಿಯ ಡಾ.ಆರ್.ಗೋವಿಂದ ಅವರ ಅಧ್ಯಕ್ಷತೆಯಲ್ಲಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರನ್ನು ಸದಸ್ಯರನ್ನಾಗಿ ಮಾಡಿ ಸರ್ಕಾರವು ಸಮಿತಿಯೊಂದನ್ನು ನೇಮಿಸಿತು (ಜನವರಿ 2012) ಮತ್ತು ರಾಜ್ಯದಲ್ಲಿ 1ನೇ ತರಗತಿಯಿಂದ

12ನೇ ತರಗತಿಯವರೆಗಿನ ಶಿಕ್ಷಣ ವ್ಯವಸ್ಥೆಯು ಹೇಗೆ ಕಾರ್ಯ ನಿರ್ವಹಿಸಬೇಕು ಎಂದು ವರದಿ ನೀಡಬೇಕೆಂದು ಆದೇಶಿಸಿತು. ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದರೂ (ಆಗಸ್ಟ್ 2012) ಅದರ ಅನುಷ್ಠಾನದ ಮೇಲೆ ಸರ್ಕಾರವು ಇನ್ನೂ ಕ್ರಮ ಕೈಗೊಳ್ಳಬೇಕಿದೆ. ಹೀಗೆ, ಪದವಿಪೂರ್ವ ಶಿಕ್ಷಣವು ಇನ್ನೂ ಆರ್‌ಎಮ್‌ಎಸ್‌ಎ ವ್ಯಾಪ್ತಿಯಲ್ಲಿರಲಿಲ್ಲ. ಹೀಗೆ, ಪದವಿಪೂರ್ವ ಕಾಲೇಜುಗಳಲ್ಲಿ ಮೂಲಸೌಕರ್ಯ, ಪ್ರವೇಶಾವಕಾಶ ಮತ್ತು ಮಾಹಿತಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಆರ್‌ಎಮ್‌ಎಸ್‌ಎ ಹಣವನ್ನು ಪಡೆಯುವ ಅವಕಾಶವನ್ನು ರಾಜ್ಯವು ಕಳೆದುಕೊಂಡಿತು.

## 2.1.8 ಪ್ರೌಢ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು

ಸರ್ಕಾರಿ/ಸರ್ಕಾರಿ ಅನುದಾನಿತ ಮತ್ತು ಸ್ಥಳೀಯ ಸಂಸ್ಥೆಗಳ ಶಾಲೆಗಳಲ್ಲಿ ಹಣಕಾಸಿನ ಬೆಂಬಲದ ಮೂಲಕ ಸುಧಾರಿತ ಭೌತಿಕ ಸೌಲಭ್ಯಗಳು, ಅರ್ಹ ಶಿಕ್ಷಕರು ಮತ್ತು ಕಲಿಕಾ ಸಂಪನ್ಮೂಲಗಳ ಮೂಲಕ ನಿಗದಿತ ಗುಣಮಟ್ಟಗಳ ಅನ್ವಯ ಕನಿಷ್ಠ ಮಟ್ಟಕ್ಕೆ ಪ್ರೌಢಶಾಲೆಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸಲು ಹಾಗೂ ಇತರೆ ಶಾಲೆಗಳಲ್ಲಿ ಸೂಕ್ತ ನಿಯಂತ್ರಣ ವ್ಯವಸ್ಥೆಗೆ ಆರ್‌ಎಮ್‌ಎಸ್‌ಎ ಪ್ರಯತ್ನಿಸಿತು.

2017ರ ವೇಳೆಗೆ ಶೇಕಡ 100ರಷ್ಟು ಕಲಿಕೆಯ ಸಾಧನೆಯ ಕಡೆಗೆ ಪ್ರಗತಿಯನ್ನು ಸಾಧಿಸಲು ರಾಜ್ಯವು ಆಲೋಚಿಸಿತ್ತು. ರಾಜ್ಯವು ಬಳಸಿದ ತಂತ್ರಗಳು ಶಾಲೆಗಳಲ್ಲಿ ಪ್ರಯೋಗಶಾಲೆಗಳು, ಗ್ರಂಥಾಲಯ ಮತ್ತು ಕಂಪ್ಯೂಟರ್ ಕಲಿಕಾ ಸೌಲಭ್ಯಗಳನ್ನು ಒದಗಿಸುವುದು, 1:30ರ ವಿದ್ಯಾರ್ಥಿ ಶಿಕ್ಷಕರ ಅನುಪಾತವನ್ನು (ಪಿಟಿಆರ್) ಖಚಿತಪಡಿಸಿಕೊಳ್ಳುವುದು, ಶಿಕ್ಷಕರ ನಿಯೋಜನೆಯನ್ನು ತರ್ಕಬದ್ಧಗೊಳಿಸುವುದು, ವಿಷಯ ನಿರ್ದಿಷ್ಟ ಶಿಕ್ಷಕರ ನೇಮಕಾತಿ, ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಹಾಜರಾತಿಯನ್ನು ಮೇಲ್ವಿಚಾರಣೆ ಮಾಡುವುದು, ಮುಂತಾದವುಗಳನ್ನು ಒಳಗೊಂಡಿತ್ತು. ನಿರ್ಮಾಣದಲ್ಲಿನ ವಿಳಂಬದ ಕಾರಣದಿಂದ 2017ರೊಳಗೆ ಎಲ್ಲ ಶಾಲೆಗಳಲ್ಲಿ ಮೂಲ ಸೌಕರ್ಯಗಳನ್ನು ಸಾಧಿಸುವ ಗುರಿಯನ್ನು ಮಾರ್ಚ್ 2018ರಲ್ಲಿದ್ದಂತೆಯೂ ಸಾಧಿಸಿರಲಿಲ್ಲ. ಯೋಜನೆಯ ಪ್ರಾರಂಭದಲ್ಲಿ ರಾಜ್ಯವು ಅನುಕೂಲಕರ ಪಿಟಿಆರ್ ಹೊಂದಿದ್ದರೂ ಅದು ಶಿಕ್ಷಕರ ನಿಯೋಜನೆಯನ್ನು ತರ್ಕಬದ್ಧವಾಗಿ ಮಾಡುವಲ್ಲಿ ಯಶಸ್ವಿಯಾಗಲಿಲ್ಲ. 2017ರೊಳಗೆ 10,000 ಶಿಕ್ಷಕರ ಅವಶ್ಯಕತೆಯನ್ನು ಮುನ್ನೋಟ ಯೋಜನೆಯು ಅಂದಾಜಿಸಿದ್ದರೆ ಅವರ ನೇಮಕಾತಿಯಲ್ಲಿ ಗಮನಾರ್ಹ ಕೊರತೆಯಿದ್ದಿತು. ತತ್ಪರಿಣಾಮವಾಗಿ ಹಲವಾರು ಶಾಲೆಗಳು ವಿಷಯ-ನಿರ್ದಿಷ್ಟ ಶಿಕ್ಷಕರುಗಳಿಲ್ಲದೇ ಬಳಲುತ್ತಿದ್ದವು. ವಿದ್ಯಾರ್ಥಿಗಳ ಹಾಜರಾತಿ ಪ್ರಮಾಣ, ವಿದ್ಯಾರ್ಥಿಗಳ ಸಾಧನೆಯ ಮಟ್ಟಗಳು, ಕಲಿಕೆಯ ಸೌಲಭ್ಯಗಳ ಲಭ್ಯತೆ ಮುಂತಾದವುಗಳ ಗುಣಮಟ್ಟದ ಸುಧಾರಣೆಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಆರ್‌ಎಮ್‌ಎಸ್‌ಎ ಫಲಿತಾಂಶ ಸೂಚಕಗಳನ್ನು ನಿರ್ದಿಷ್ಟ ಪಡಿಸಿದ್ದರೂ ಅವರ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಅಗತ್ಯವಿದ್ದ ದತ್ತಾಂಶವನ್ನು ಆರ್‌ಎಮ್‌ಎಸ್‌ಎಎಸ್‌ಕೆ ಸಂಗ್ರಹಿಸಿರಲಿಲ್ಲ. 2018ರ ಅವಧಿಯಲ್ಲಿನ ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯತಾ ಪರಿಷತ್‌ನ (ಕೆಎಸ್‌ಕ್ಯುಎಎಸಿ) ಕಲಿಕೆಯ ಸಾಧನೆಯ ಮಟ್ಟವನ್ನು ಮೌಲ್ಯಮಾಪನವು ಪ್ರೌಢಶಾಲಾ ಮಟ್ಟದಲ್ಲಿ ಶೇಕಡಾ 50ಕ್ಕಿಂತ ಕಡಿಮೆ ಸಾಧನೆಯನ್ನು ತೋರಿಸಿತು.

ಪ್ರೌಢಶಾಲಾ ಶಿಕ್ಷಣದಲ್ಲಿ ಗುಣಮಟ್ಟವನ್ನು ಖಾತರಿಪಡಿಸುವುದಕ್ಕೆ ಪ್ರತಿಯೊಂದು ಗುರಿಯ ಬಗೆಗಿನ ಲೆಕ್ಕಪರಿಶೋಧನಾ ಅವಲೋಕನಗಳನ್ನು ಕೆಳಗೆ ಚರ್ಚಿಸಲಾಗಿದೆ.

### *2.1.8.1 ಮೂಲಸೌಕರ್ಯ*

ಸಂಖ್ಯೆಗಳು ಮತ್ತು ಗುಣಮಟ್ಟದ ಸವಾಲನ್ನು ಎದುರಿಸಲು ಹೆಚ್ಚುವರಿ ಶಾಲೆಗಳು, ಹೆಚ್ಚುವರಿ ಶಾಲಾಕೊಠಡಿಗಳ ಮೂಲಕ ಶಾಲೆಗಳ ಉನ್ನತೀಕರಣ, ಮುಂತಾದ ಹೆಚ್ಚಿನ ಪ್ರಮಾಣದ ಒಳಹರಿವುಗಳನ್ನು ಒದಗಿಸಬೇಕಿದೆ. ಮೂಲಸೌಕರ್ಯದ ಬೆಂಬಲವು ಈ ಕೆಳಗಿನವುಗಳನ್ನು ಒಳಗೊಳ್ಳಬಹುದು:

- ಹೊಸ ಶಾಲೆಗಳನ್ನು ತೆರೆಯುವುದು/ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸುವುದು[15]
- ಅಸ್ತಿತ್ವದಲ್ಲಿರುವ ಪ್ರೌಢಶಾಲೆಗಳ ಮತ್ತು ಪದವಿಪೂರ್ವ ಕಾಲೇಜುಗಳ ಬಲಪಡಿಸುವಿಕೆ[16]
- ಪ್ರಮುಖ ದುರಸ್ತಿಗಳು

15 ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮೂಲಸೌಕರ್ಯದೊಂದಿಗೆ ಹೆಚ್ಚುವರಿ ಪ್ರೌಢ ತರಗತಿಗಳನ್ನು ಒದಗಿಸುವುದು.

16 ಅಸ್ತಿತ್ವದಲ್ಲಿರುವ ಪ್ರೌಢ ಶಾಲೆಗಳಿಗೆ ಹೆಚ್ಚುವರಿ ಶಾಲಾ ಕೊಠಡಿಗಳು, ವಿಜ್ಞಾನ ಪ್ರಯೋಗಶಾಲೆ, ಕಂಪ್ಯೂಟರ್ ಕೊಠಡಿ, ಕಲೆ ಮತ್ತು ಕರಕುಶಲ ಕೊಠಡಿ, ಗ್ರಂಥಾಲಯ, ಮುಂತಾದ ಘಟಕಗಳನ್ನು ಒದಗಿಸುವುದು.

- ➢ ಸಣ್ಣ ದುರಸ್ತಿಗಳು
- ➢ ಶಿಕ್ಷಕರ ವಸತಿಗೃಹಗಳು

ಮೇಲಿನ ಎಲ್ಲವುಗಳು ಅಸ್ತಿತ್ವದಲ್ಲಿರುವ ಭೌತಿಕ ಮೂಲಸೌಕರ್ಯಗಳ ಮೌಲ್ಯಮಾಪನ ಮಾಡುವುದನ್ನು ಒಳಗೊಂಡಿತ್ತು.

ಮೂಲಸೌಕರ್ಯಗಳ ಮೇಲಿನ ಲೆಕ್ಕಪರಿಶೋದನಾ ಅವಲೋಕನಗಳನ್ನು ಕೆಳಗೆ ಚರ್ಚಿಸಲಾಗಿದೆ:

### *(ಎ) ಹೊಸ ಶಾಲೆಗಳ ತೆರೆಯುವಿಕೆ/ಹಿರಿಯ ಪ್ರಾಥಮಿಕ ಶಾಲೆಗಳ ಉನ್ನತೀಕರಣ/ಅಸ್ತಿತ್ವದಲ್ಲಿರುವ ಪ್ರೌಢಶಾಲೆಗಳ ಬಲಪಡಿಸುವಿಕೆ*

2009–10ರಿಂದ 2017–18ರ ಅವಧಿಯಲ್ಲಿ ಶಾಲೆಗಳ ಉನ್ನತೀಕರಣ ಮತ್ತು ಬಲಪಡಿಸುವಿಕೆಯನ್ನು ಕೈಗೆತ್ತಿಕೊಂಡರೂ ಆರ್‌ಎಮ್‌ಎಸ್‌ಎ ಅಡಿಯಲ್ಲಿ ಯಾವುದೇ ಹೊಸ ಶಾಲೆಗಳನ್ನು ತೆರೆಯಲಿಲ್ಲ. 2009–10ರಿಂದ 2017–18ರ ಅವಧಿಯಲ್ಲಿ ಪಿಎಬಿ ಅನುಮೋದಿಸಿದ ಹಿರಿಯ ಪ್ರಾಥಮಿಕ ಶಾಲೆಗಳ ಉನ್ನತೀಕರಣ/ಅಸ್ತಿತ್ವದಲ್ಲಿರುವ ಪ್ರೌಢಶಾಲೆಗಳ ಬಲಪಡಿಸುವಿಕೆಯ ವಿವರಗಳನ್ನು **ಕೋಷ್ಟಕ–2.2**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.2: ಶಾಲೆಗಳ ಉನ್ನತೀಕರಣ/ಬಲಪಡಿಸುವಿಕೆ**

(₹ ಕೋಟಿಗಳಲ್ಲಿ)

| ವರ್ಷ | ಶಾಲೆಗಳ ಸಂಖ್ಯೆ | | ಮೊತ್ತ | ಶಾಲೆಗಳ ಸಂಖ್ಯೆ | | | | | |
|---|---|---|---|---|---|---|---|---|---|
| | | | | ಪೂರ್ಣಗೊಂಡಿರುವುದು | | ಪ್ರಗತಿಯಲ್ಲಿರುವುದು | | ಕೈಗೆತ್ತಿಕೊಂಡಿಲ್ಲದಿರುವುದು/ ಅಧ್ಯರ್ಪಣೆ ಮಾಡಿರುವುದು | |
| | ಉನ್ನತೀಕರಣ | ಬಲಪಡಿಸುವಿಕೆ | | ಉನ್ನತೀಕರಿಸಿದ್ದು | ಬಲಪಡಿಸಿದ್ದು | ಉನ್ನತೀಕರಿಸಿದ್ದು | ಬಲಪಡಿಸಿದ್ದು | ಉನ್ನತೀಕರಿಸಿದ್ದು | ಬಲಪಡಿಸಿದ್ದು |
| 2009–12 | 329 | 1,895 | 741.27 | 230 | 1,510 | 24 | 116 | 75 | 269 |
| 2013–14 | 28 | 00 | 22.56 | 0 | 0 | 0 | 0 | 28 | 0 |
| 2014–15 | 66 | 04 | 52.71 | 0 | 0 | 0 | 0 | 66 | 4 |
| 2015–16 | 45 | 09 | 42.69 | 0 | 0 | 0 | 0 | 45 | 9 |
| 2016–17 | 20 | 00 | 00 | 0 | 0 | 0 | 0 | 20 | 0 |
| 2017–18 | 00 | 00 | 00 | 0 | 0 | 0 | 0 | 0 | 0 |
| **ಒಟ್ಟು** | **488** | **1,908** | **859.23** | **230** | **1,510** | **24** | **116** | **234** | **282** |

ಆಧಾರ: ಆರ್‌ಎಮ್‌ಎಸ್‌ಎ ಯೋಜನಾ ನಿರ್ದೇಶಕರು ನೀಡಿದ ಮಾಹಿತಿ

2009–10ರಿಂದ 2017–18ರ ಅವಧಿಯಲ್ಲಿ 4,677 ಶಾಲೆಗಳಲ್ಲಿ ಉನ್ನತೀಕರಣ/ಬಲಪಡಿಸುವಿಕೆಗಾಗಿ 2,396 ಶಾಲೆಗಳನ್ನು ಕೈಗೆತ್ತಿಕೊಂಡಿರುವುದನ್ನು ಕೋಷ್ಟಕದಿಂದ ನಾವು ಗಮನಿಸಬಹುದು. ಇವುಗಳಲ್ಲಿ 1,740 ಶಾಲೆಗಳನ್ನು ಪೂರ್ಣಗೊಳಿಸಲಾಗಿದೆ ಮತ್ತು 140 ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿದ 516 ಶಾಲೆಗಳ ಸಂಬಂಧವಾಗಿ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಇನ್ನೂ ಆಹ್ವಾನಿಸಬೇಕಿದೆ. ಅಲ್ಲದೆ, 1,740 ಕಾಮಗಾರಿಗಳನ್ನು ಆರು ವರ್ಷಗಳಿಗೂ ಹೆಚ್ಚಿನ ವಿಳಂಬದ ನಂತರವೇ ಪೂರ್ಣಗೊಳಿಸಿರುವುದನ್ನು ನಾವು ಗಮನಿಸಿದೆವು. ನಿವೇಶನಗಳನ್ನು ಮತ್ತು ವಿನ್ಯಾಸಗಳನ್ನು ಹಸ್ತಾಂತರಿಸುವಲ್ಲಿನ ವಿಳಂಬ, ನಿವೇಶನಗಳ ಅಲಭ್ಯತೆ, ಮುಂತಾದವುಗಳಿಗೆ ವಿಳಂಬಗಳನ್ನು ಅಧ್ಯಾರೋಪಿಸಲಾಯಿತು. ಜೊತೆಗೆ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವಿಳಂಬದಿಂದ 2009–16ರ ಅವಧಿಯಲ್ಲಿ ಉನ್ನತೀಕರಣಕ್ಕಾಗಿ ಬಿಡುಗಡೆಯಾದ ₹123.74 ಕೋಟಿಗಳನ್ನು ಮತ್ತು 2009–10 ಹಾಗೂ 2010–11ರಲ್ಲಿ ಬಲಪಡಿಸುವಿಕೆಗೆ ಬಿಡುಗಡೆಯಾದ ₹65.96 ಕೋಟಿಗಳನ್ನು ಭಾರತ ಸರ್ಕಾರಕ್ಕೆ ಅಧ್ಯರ್ಪಣೆ (2016–17) ಮಾಡಿರುವುದನ್ನು ನಾವು ಗಮನಿಸಿದೆವು.

ಲೆಕ್ಕಪರಿಶೋಧನೆಯು ವಿಳಂಬವನ್ನು ವಿಶ್ಲೇಷಿಸಿತು ಮತ್ತು 2,396ರಲ್ಲಿ 2,024 ಕಾಮಗಾರಿಗಳಲ್ಲಿ ಅಗತ್ಯವಿದ್ದ ಭೂಮಿಯು ಆರ್‌ಎಮ್‌ಎಸ್‌ಎಎಸ್‌ಕೆ ಸ್ವಾಧೀನದಲ್ಲಿ ಇಲ್ಲದಿದ್ದುದರಿಂದ ಗುತ್ತಿಗೆದಾರರಿಗೆ ನಿವೇಶನವನ್ನು ಹಸ್ತಾಂತರಿಸುವಲ್ಲಿ ಎರಡು ದಿನಗಳಿಂದ 1,456 ದಿನಗಳವರೆಗಿನ ವಿಳಂಬಗಳಿದ್ದವು ಎಂಬುದನ್ನು ಗಮನಿಸಿತು (**ಅನುಬಂಧ–2.5**). ಇದು ಕಾಮಗಾರಿಗೆ ಅಗತ್ಯವಿರುವ ಭೂಮಿಯು ಸಂಬಂಧಪಟ್ಟ ಇಲಾಖೆಯ ಸ್ವಾಧೀನದಲ್ಲಿರದಿದ್ದರೆ ಕಾರ್ಯಗತಗೊಳಿಸಲು ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಾರದು ಎಂದು ನಿಗದಿಪಡಿಸುವ ಕರ್ನಾಟಕ ಲೋಕೋಪಯೋಗಿ ಇಲಾಖಾ (ಕೆಪಿಡಬ್ಲ್ಯುಡಿ) ಸಂಹಿತೆಯ ಉಲ್ಲಂಘನೆ ಮಾಡಿದಂತಾಗಿತ್ತು. ಒಪ್ಪಂದದ ಅನ್ವಯ ಕಾಮಗಾರಿಗಳನ್ನು ಕಾರ್ಯಾದೇಶ ನೀಡಿದ ದಿನಾಂಕದಿಂದ ನಿಗದಿತ 20 ತಿಂಗಳುಗಳೊಳಗೆ ಪೂರ್ಣಗೊಳಿಸಬೇಕಿತ್ತು. ನಿವೇಶನವನ್ನು

ಹಸ್ತಾಂತರಿಸುವಲ್ಲಿನ ವಿಳಂಬದ ಕಾರಣದಿಂದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬಗಳಿದ್ದವು ಮತ್ತು ಅದು ಒಂದರಿಂದ 48 ತಿಂಗಳುಗಳ ವ್ಯಾಪ್ತಿಯಲ್ಲಿದ್ದಿತು ಮತ್ತು ಅದರಲ್ಲಿ ವೆಚ್ಚವು ಅಧಿಕವಾಗುವ ಅಪಾಯವಿದ್ದಿತು. ಹೆಚ್ಚಿನ ಸಮಯಕ್ಕೆ ಅಧ್ಯಾರೋಪಿಸಬಹುದಾದ ಇತರೆ ಕಾರಣಗಳೆಂದರೆ ವಿನ್ಯಾಸಗಳನ್ನು/ಬಿಲ್ ಆಫ್ ಕ್ವಾಂಟಿಟೀಸ್ (ಬಿಓಕ್ಯು) ಮುಂತಾದವುಗಳನ್ನು ನೀಡುವುದರಲ್ಲಿನ ವಿಳಂಬಗಳು. ಸೆಪ್ಟೆಂಬರ್ 2018ರಲ್ಲಿದ್ದಂತೆ, 77 ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದರೆ, 69 ಕಾಮಗಾರಿಗಳು ಅಡಿಪಾಯ (10), ಮೇಲ್ಪಾಯ ಮಟ್ಟ (9) ಲಿಂಟಲ್ ಮಟ್ಟ (4) ಮತ್ತು ನೆಲಮಹಡಿ ಅಥವಾ ಮೊದಲನೇ ಮಹಡಿ ಅಥವಾ ಎರಡನೇ ಮಹಡಿ(46) ಮುಂತಾದ ನಿರ್ಮಾಣದ ವಿವಿಧ ಹಂತಗಳಲ್ಲಿದ್ದವು. ಈ ಎಲ್ಲ ಪ್ರಕರಣಗಳಲ್ಲಿನ ಕಾರ್ಯಗತಗೊಳಿಸುವುದರಲ್ಲಿನ ವಿಳಂಬವನ್ನು ಗುತ್ತಿಗೆದಾರರಿಗೆ ವಿನ್ಯಾಸಗಳನ್ನು ನೀಡುವುದರಲ್ಲಿನ/ಬಿಓಕ್ಯು ವಿಳಂಬಕ್ಕೆ ಅಧ್ಯಾರೋಪಿಸಲಾಯಿತು.

ಜೊತೆಗೆ, ನಿವೇಶನಗಳ ಅಲಭ್ಯತೆ ಮತ್ತು ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಕಾಮಗಾರಿಯ ಅವಶ್ಯಕತೆ ಇಲ್ಲದಿರುವುದು, ಇವುಗಳನ್ನು ಉಲ್ಲೇಖಿಸಿ ತಾವು ಅನುಮೋದಿಸಿದ್ದ 77 ಕಾಮಗಾರಿಗಳನ್ನು ಪಿಎಬಿ ಹಿಂಪಡೆಯಿತು. ಆರ್‌ಎಮ್‌ಎಸ್‌ಎಎಸ್‌ಕೆ ಸೂಕ್ತ ಅಗತ್ಯತೆಯ ವಿಶ್ಲೇಷಣೆಯನ್ನು ಕೈಗೊಳ್ಳದೇ ಮತ್ತು ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ಕಾಮಗಾರಿಗಳನ್ನು ಪ್ರಸ್ತಾವಿಸಿತ್ತು ಎಂಬುದನ್ನು ಸೂಚಿಸುತ್ತದೆ.

ಶಾಲೆಗಳ ಉನ್ನತೀಕರಣ ಮತ್ತು ಬಲಪಡಿಸುವಿಕೆಯನ್ನು ಕಾರ್ಯಗತಗೊಳಿಸುವಲ್ಲಿ ಗಮನಿಸಿದ ಅಕ್ರಮಗಳನ್ನು **ಅನುಬಂಧ-2.6ರಲ್ಲಿ** ಚರ್ಚಿಸಲಾಗಿದೆ.

ಚರ್ಚಿಸಿದ ಅಕ್ರಮಗಳು ಉನ್ನತೀಕರಣ ಮತ್ತು ಬಲಪಡಿಸುವ ಕಾಮಗಾರಿಗಳನ್ನು ಅತ್ಯಂತ ಅನಿಯಂತ್ರಿತ ರೀತಿಯಲ್ಲಿ ಕೈಗೊಳ್ಳಲಾಗಿತ್ತು ಮತ್ತು ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಅಧಿನಿಯಮ ಮತ್ತು ಕೆಪಿಡಬ್ಲ್ಯುಡಿ ಸಂಹಿತೆಗಳನ್ನು ಉಲ್ಲಂಘಿಸಲಾಗಿತ್ತು, ಅಂದರೆ ತಾಂತ್ರಿಕ ಮಂಜೂರಾತಿಯಿಲ್ಲದೇ ಮತ್ತು ಬಿಓಕ್ಯೂ ಇಲ್ಲದೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು, ಟೆಂಡರ್‌ಗಳನ್ನು ತೆರೆದ ಮೇಲೆ ಟೆಂಡರ್‌ಗಳನ್ನು ಮಾರ್ಪಡಿಸಲಾಗಿತ್ತು, ಟೆಂಡರ್‌ದಾರರೊಂದಿಗೆ ಸಂಧಾನಗಳನ್ನು ನಡೆಸಲಾಗಿತ್ತು, ಮುಂತಾದವುಗಳು.

ಅಕ್ರಮಗಳನ್ನು ತನಿಖೆ ಮಾಡಿ ವರದಿಯನ್ನು ಸಲ್ಲಿಸಲು ಒಂದು ಸಮಿತಿಯನ್ನು ರಚಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಫೆಬ್ರವರಿ 2019). ಸಮಿತಿಯ ವರದಿಯ ಆಧಾರದ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದೂ ಸಹ ತಿಳಿಸಲಾಯಿತು.

### *(ಬಿ) ಸಿವಿಲ್ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ಗುಣಮಟ್ಟ*

ಕಾಮಗಾರಿಯು ಪೂರ್ಣಗೊಂಡ ದಿನಾಂಕದಿಂದ ಮತ್ತು ಸಕ್ಷಮ ಪ್ರಾಧಿಕಾರದಿಂದ ಪೂರ್ಣಗೊಂಡ ಪ್ರಮಾಣಪತ್ರವನ್ನು ನೀಡಿದ ಬಳಿಕ 12 ತಿಂಗಳಗಳ ದೋಷ ಹೊಣೆಗಾರಿಕೆ ಅವಧಿಗೆ ಗುತ್ತಿಗೆ ಒಪ್ಪಂದವು ಅವಕಾಶ ನೀಡಿತ್ತು. ಆರ್‌ಎಮ್‌ಎಸ್‌ಎಎಸ್‌ಕೆ ಪೂರ್ಣಗೊಂಡ ಎಲ್ಲ ಕಾಮಗಾರಿಗಳನ್ನು ಪರೀಕ್ಷೆ ಮಾಡಬೇಕು ಮತ್ತು ಯಾವುದಾದರೂ ದೋಷವಿದ್ದರೆ ದೋಷ ಹೊಣೆಗಾರಿಕೆ ಅವಧಿಯು ಕೊನೆಗೊಳ್ಳುವ ಮೊದಲು ಅದನ್ನು ಗುತ್ತಿಗೆದಾರರಿಗೆ ತಿಳಿಸಬೇಕು. ಆದರೆ, ದಾವಣಗೆರೆಯಲ್ಲಿ ಹೊರತುಪಡಿಸಿ ಆರ್‌ಎಮ್‌ಎಸ್‌ಎಎಸ್‌ಕೆ ಅಂತಹ ಯಾವುದೇ ಪರೀಕ್ಷೆಗಳನ್ನು ನಡೆಸಿರಲಿಲ್ಲವೆಂದು ಲೆಕ್ಕಪರಿಶೋಧನೆಗೆ ಒದಗಿಸಿರುವ ದಾಖಲೆಗಳಿಂದ ನಾವು ಗಮನಿಸಿದೆವು. ದಾವಣಗೆರೆ ಜಿಲ್ಲೆಯಲ್ಲಿ ನೇಮಕ ಮಾಡಿದ ಸಮಾಲೋಚಕ ಇಂಜಿನಿಯರ್‌ಗಳು 48 ಪೂರ್ಣಗೊಂಡ ಕಾಮಗಾರಿಗಳನ್ನು ತಪಾಸಣೆ ಮಾಡಿ 45 ಪ್ರಕರಣಗಳಲ್ಲಿ ಕಟ್ಟಡದ ಗುಣಮಟ್ಟವು ತೃಪ್ತಿದಾಯಕವಾಗಿಲ್ಲವೆಂದು ವರದಿ ಮಾಡಿದ್ದರೂ ಸಹ ಆರ್‌ಎಮ್‌ಎಸ್‌ಎಎಸ್‌ಕೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಶಾಲೆಗಳ ಜಂಟಿ ಭೌತಿಕ ತಪಾಸಣೆಯಲ್ಲಿ ಗಮನಿಸಿದ ನಿರ್ಮಾಣದಲ್ಲಿನ ಕಳಪೆ ಗುಣಮಟ್ಟದ ಪ್ರಕರಣಗಳನ್ನು **ಪ್ರದರ್ಶಿಕೆ-2.1ರಲ್ಲಿ** ತೋರಿಸಲಾಗಿದೆ.

ಸರಿಪಡಿಸುವ ಕ್ರಮಗಳನ್ನು ಪ್ರಾರಂಭಿಸಲಾಗುವುದು ಎಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019).

### *(ಸಿ) ಪ್ರಮುಖ ಮತ್ತು ಸಣ್ಣ ದುರಸ್ತಿಗಳು*

ಆರ್‌ಎಮ್‌ಎಸ್‌ಎ ಪ್ರಮುಖ ದುರಸ್ತಿಗಳಿಗಾಗಿ ಆವರ್ತಕವಲ್ಲದ ಅನುದಾನಗಳನ್ನು ಮತ್ತು ಸಣ್ಣ ದುರಸ್ತಿಗಳಿಗಾಗಿ ಆವರ್ತಕ ಅನುದಾನಗಳನ್ನು ಒದಗಿಸುತ್ತದೆ. ಸ್ವಂತ ಕಟ್ಟಡಗಳಲ್ಲಿ ಅಸ್ತಿತ್ವದಲ್ಲಿರುವ ಶಾಲೆಗಳಿಗೆ ದುರಸ್ತಿಗಾಗಿ ಅನುದಾನಗಳು ಲಭ್ಯವಿರುತ್ತವೆ. ಪ್ರಮುಖ ದುರಸ್ತಿ ಅನುದಾನಗಳನ್ನು

**ಪ್ರದರ್ಶಿಕೆ-2.1**

**ಸಿವಿಲ್ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯಲ್ಲಿ ಕಳಪೆ ಗುಣಮಟ್ಟ**



ಆದರ್ಶ ವಿದ್ಯಾಲಯ, ಭೀಮಳ್ಳಿ, ಕಲಬುರಗಿ





ಸರ್ಕಾರಿ ಪ್ರೌಢಶಾಲೆ, ಅಂದೋಲ, ಕಲಬುರಗಿ

**ಪ್ರದರ್ಶಿಕೆ–2.2**

**ಪ್ರಮುಖ ದುರಸ್ತಿಗಳ ಅವಶ್ಯಕತೆಯಿದ್ದ ಶಿಥಿಲಗೊಂಡ ಕಟ್ಟಡಗಳು**



ಸರ್ಕಾರಿ ಪ್ರೌಢಶಾಲೆ, ಹಂಚೂರು, ಆಲೂರು ತಾಲ್ಲೂಕು, ಹಾಸನ



ಸರ್ಕಾರಿ ಪ್ರೌಢಶಾಲೆ, ಸೀಗೆ, ಹಾಸನ ತಾಲ್ಲೂಕು

ಅಸ್ತಿತ್ವದಲ್ಲಿರುವ ಕಟ್ಟಡದ ಪರಿಸರವನ್ನು (ಒಳಾಂಗಣ ಮತ್ತು ಹೊರಾಂಗಣ) ಹೊಸ ಶಿಕ್ಷಣದ ಕಡೆಗೆ ಅಥವಾ ಅಸ್ತಿತ್ವದಲ್ಲಿರುವ ಕಟ್ಟಡಗಳನ್ನು ಅಪಾಯ ನಿರೋಧಕತೆ, ಉಷ್ಣ ಸೌಕರ್ಯ, ಉತ್ತಮ ಗಾಳಿ ಮತ್ತು ಬೆಳಕಿನ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಬಳಸಿಕೊಳ್ಳಬೇಕಿತ್ತು. ಅದೇ ರೀತಿ ಸಣ್ಣ ದುರಸ್ತಿಗಳಿಗಾಗಿ ಬಿಡುಗಡೆ ಮಾಡಿದ ಅನುದಾನವನ್ನು ಶಾಲಾ ಕಟ್ಟಡದ, ಶೌಚಾಲಯಗಳು, ಟ್ಯಾಂಕ್‌ಗಳ, ಆಟದ ಮೈದಾನಗಳ, ಕ್ಯಾಂಪಸ್, ವಿದ್ಯುತ್/ನೈರ್ಮಲ್ಯ ಮತ್ತು ಇತರೆ ಉಪಯುಕ್ತತೆಗಳಿಗಾಗಿ ಬಳಸಿಕೊಳ್ಳಬೇಕು.

2010–11ರಲ್ಲಿ 113 ಶಾಲೆಗಳ ಪ್ರಮುಖ ದುರಸ್ತಿಗಳಿಗಾಗಿ ಪಿಎಬಿ ₹1.72 ಕೋಟಿಗಳನ್ನು ಬಿಡುಗಡೆ ಮಾಡಿದರೂ ಸಹ ಆರ್‌ಎಮ್‌ಎಸ್‌ಎಎಸ್‌ಕೆ ಯಾವುದೇ ಪ್ರಮುಖ ದುರಸ್ತಿ ಕಾರ್ಯವನ್ನು ಕೈಗೊಂಡಿಲ್ಲ. ತತ್ಪರಿಣಾಮವಾಗಿ, ಎಲ್ಲ 113 ಶಾಲೆಗಳೂ ಉತ್ತಮ ಗಾಳಿ ಮತ್ತು ಬೆಳಕಿನ ಸೌಲಭ್ಯವಿಲ್ಲದೇ ಉಳಿದಿದ್ದವು. ಈ ಹಿಂದೆ ಬಿಡುಗಡೆ ಮಾಡಿದ ಅನುದಾನಗಳನ್ನು ಬಳಸಿಕೊಳ್ಳದೇ ಆರ್‌ಎಮ್‌ಎಸ್‌ಎಎಸ್‌ಕೆ ಮತ್ತೆ 2014–15ರಲ್ಲಿ ಪ್ರಮುಖ ದುರಸ್ತಿಗಳನ್ನು (272) ಪ್ರಸ್ತಾವಿಸಿತು. ಪ್ರಮುಖ ದುರಸ್ತಿಗಳ ಅವಶ್ಯಕತೆ ಇರುವ ಶಾಲೆಗಳ ಪಟ್ಟಿಯನ್ನು ಆರ್‌ಎಮ್‌ಎಸ್‌ಎಎಸ್‌ಕೆ ಸಲ್ಲಿಸದಿದ್ದುದರಿಂದ ಪಿಎಬಿ ಕೋರಿಕೆಯನ್ನು ತಿರಸ್ಕರಿಸಿತು. ಆದರೆ, ಅದು ಪಟ್ಟಿಯನ್ನೂ ಸಲ್ಲಿಸಲಿಲ್ಲ ಅಥವಾ ನಂತರದ ವರ್ಷಗಳ ಪ್ರಸ್ತಾವನೆಯಲ್ಲಿ ದುರಸ್ತಿಗಳನ್ನು ಪ್ರಸ್ತಾವಿಸಲಿಲ್ಲ. ಶಾಲೆಗಳ ಅಗತ್ಯತೆಯನ್ನು ವಿಶ್ಲೇಷಣೆ ಮಾಡದೇ ಆರ್‌ಎಮ್‌ಎಸ್‌ಎಎಸ್‌ಕೆ ದುರಸ್ತಿ ಕಾರ್ಯಗಳನ್ನು ಪಿಎಬಿಗೆ ಪ್ರಸ್ತಾವಿಸಿತ್ತು ಎಂಬುದನ್ನು ಇದು ಸೂಚಿಸುತ್ತದೆ. ನಂತರ, ಆರ್‌ಎಮ್‌ಎಸ್‌ಎಎಸ್‌ಕೆ ₹1.72 ಕೋಟಿಯನ್ನು 2016–17ರಲ್ಲಿ ಅಧ್ಯರ್ಪಣೆ ಮಾಡಿತು. ಹೀಗೆ, 2013–14ರಿಂದ 2017–18ರ ಅವಧಿಯಲ್ಲಿ ಆರ್‌ಎಮ್‌ಎಸ್‌ಎಎಸ್‌ಕೆ ಯಾವುದೇ ಪ್ರಮುಖ ದುರಸ್ತಿ ಕಾರ್ಯವನ್ನು ಕೈಗೊಳ್ಳಲಿಲ್ಲ. ಅಲ್ಲದೆ, ಅದೇ ಅವಧಿಯಲ್ಲಿ ಯಾವುದೇ ಸಣ್ಣ ದುರಸ್ತಿ ಕಾರ್ಯಗಳನ್ನೂ ಸಹ ಕೈಗೆತ್ತಿಕೊಳ್ಳದಿರುವುದನ್ನು ನಾವು ಗಮನಿಸಿದೆವು.

ಇಲಾಖೆಯು ಒದಗಿಸಿದ ಮಾಹಿತಿಯು ಮಾರ್ಚ್ 2018ರಲ್ಲಿದ್ದಂತೆ, 1,367 ಶಾಲೆಗಳಿಗೆ ಪ್ರಮುಖ ದುರಸ್ತಿಗಳ ಹಾಗೂ 1,494 ಶಾಲೆಗಳಿಗೆ ಸಣ್ಣ ದುರಸ್ತಿಗಳ ಅವಶ್ಯಕತೆಯಿದ್ದಿತೆಂದು ತೋರಿಸಿತು.

ಹೀಗೆ, ಪ್ರಮುಖ ಮತ್ತು ಸಣ್ಣ ದುರಸ್ತಿಗಳಿಗೆ ಅನುದಾನಗಳನ್ನು ಬಳಸಿಕೊಳ್ಳದಿರುವುದರಿಂದ/ ಕೋರದಿರುವುದರಿಂದ ಶಾಲೆಗಳು ಶಿಥಿಲಗೊಂಡ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುವುದನ್ನು ಮುಂದುವರೆಸಿದ್ದವು. ಶಿಥಿಲಗೊಂಡ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಛಾಯಾಚಿತ್ರಗಳನ್ನು **ಪ್ರದರ್ಶಿಕೆ–2.2ರಲ್ಲಿ** ನೀಡಲಾಗಿದೆ.

**ಶಿಫಾರಸು–2: ಆರ್‌ಎಮ್‌ಎಸ್‌ಎ ಸಿವಿಲ್ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಬೇಕು ಮತ್ತು ಭೌತಿಕ ಮೂಲಸೌಕರ್ಯಗಳ ಗುಣಮಟ್ಟವನ್ನು ಉತ್ತಮಪಡಿಸಲು ಪ್ರಮುಖ ಹಾಗೂ ಸಣ್ಣ ದುರಸ್ತಿಗಳನ್ನು ಸಮಯಕ್ಕೆ ಸರಿಯಾಗಿ ಕೈಗೆತ್ತಿಕೊಳ್ಳಬೇಕು.**

ಸರ್ಕಾರವು ಶಿಫಾರಸನ್ನು ಒಪ್ಪಿಕೊಂಡಿತು (ಫೆಬ್ರವರಿ 2019).

### *(ಡಿ) ಶಿಕ್ಷಕರಿಗೆ ವಸತಿಗೃಹಗಳು*

ದೂರದ/ಗುಡ್ಡಗಾಡು ಪ್ರದೇಶಗಳಲ್ಲಿ/ಕಷ್ಟಕರವಾದ ಪ್ರದೇಶಗಳಲ್ಲಿ ಶಿಕ್ಷಕರಿಗೆ ವಸತಿಗೃಹಗಳನ್ನು ಒದಗಿಸಬೇಕೆಂದು ಆರ್‌ಎಮ್‌ಎಸ್‌ಎ ಚೌಕಟ್ಟು ನಿಗದಿಪಡಿಸುತ್ತದೆ. ಆದರೆ, ಆರ್‌ಎಮ್‌ಎಸ್‌ಎಎಸ್‌ಕೆ ಸಮೀಕ್ಷೆಯನ್ನು ನಡೆಸುವುದನ್ನಾಗಲೀ ಅಥವಾ ಕಷ್ಟಕರವಾದ ಪ್ರದೇಶಗಳಲ್ಲಿರುವ ಪ್ರೌಢಶಾಲೆಗಳಲ್ಲಿ ವಸತಿಗೃಹಗಳನ್ನು ನಿರ್ಮಿಸುವುದನ್ನಾಗಲೀ ಮಾಡಲಿಲ್ಲ.

### *(ಇ) ಮೂಲಸೌಕರ್ಯಗಳ ಲಭ್ಯತೆ*

ಉನ್ನತೀಕರಿಸಿದ ಪ್ರತಿಯೊಂದು ಹಿರಿಯ ಪ್ರಾಥಮಿಕ ಶಾಲೆ ಮತ್ತು ಬಲವರ್ಧನೆಗಾಗಿ ಗುರುತಿಸಿದ ಶಾಲೆಗಳಲ್ಲಿ ಹೆಚ್ಚುವರಿ ಶಾಲಾ ಕೊಠಡಿಗಳನ್ನು ನಿರ್ಮಿಸಬೇಕೆಂದು ಆರ್‌ಎಮ್‌ಎಸ್‌ಎ ಚೌಕಟ್ಟು ತಿಳಿಸುತ್ತದೆ. ಇದಲ್ಲದೆ, ಪ್ರತಿ ಶಾಲೆಯಲ್ಲಿಯೂ ಒಂದು ವಿಜ್ಞಾನ ಪ್ರಯೋಗಶಾಲೆ, ವೃತ್ತಿಪರ ಶಿಕ್ಷಣಕ್ಕಾಗಿ ಪ್ರಯೋಗಶಾಲೆ, ಮುಖ್ಯೋಪಾಧ್ಯಾಯರ/ಪ್ರಾಂಶುಪಾಲರ ಕೊಠಡಿ, ಕಛೇರಿ ಕೊಠಡಿ, ಕಂಪ್ಯೂಟರ್ ಕೊಠಡಿ, ಕಲೆ/ಕರಕುಶಲ/ಸಂಸ್ಕೃತಿ ಕೊಠಡಿ, ಬಾಲಕಿಯರ ಚಟುವಟಿಕೆ ಕೊಠಡಿ, ಗ್ರಂಥಾಲಯ ಕೊಠಡಿ, ಬಾಲಕರು ಮತ್ತು ಬಾಲಕರಿಯರಿಗೆ ಪ್ರತ್ಯೇಕ ಶೌಚಾಲಯಗಳು ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಬೇಕೆಂದು ಸಹ ಅದು ತಿಳಿಸುತ್ತದೆ. ಜೊತೆಗೆ ಎಲ್ಲ ಶಾಲೆಗಳೂ ಸಹ ತಮ್ಮ ಕಟ್ಟಡದ ನಕ್ಷೆಯಲ್ಲಿಯೇ

ಮಳೆನೀರು ಕೊಯ್ಲು ವ್ಯವಸ್ಥೆಯನ್ನು ಹೊಂದಿರಬೇಕು. ಭೌತಿಕ ಮೂಲಸೌಕರ್ಯಕ್ಕಾಗಿ ಅದು ವಿಶಾಲವಾದ ರಾಷ್ಟ್ರೀಯ ಮಾನದಂಡಗಳನ್ನು ನಿಗದಿಪಡಿಸಿತ್ತು ಮತ್ತು ಅದರ ಆಧಾರದ ಮೇಲೆ ರಾಜ್ಯಗಳು ತಮ್ಮದೇ ಆದ ಮಾನದಂಡಗಳನ್ನು ರಚಿಸಿಕೊಳ್ಳಬೇಕಿತ್ತು. ರಾಜ್ಯಸರ್ಕಾರವು ರಾಷ್ಟ್ರೀಯ ಮಾನದಂಡಗಳ ಅನ್ವಯ ತನ್ನದೇ ಆದ ಮಾನದಂಡಗಳನ್ನು ಹೊಂದಿದ್ದರೂ ಸಹ 2009-17ರ ಮುನ್ನೋಟ ಯೋಜನೆಯಲ್ಲಿ ಮೂಲಸೌಕರ್ಯಗಳ ಸಂಬಂಧವಾಗಿ ನಿಗದಿಪಡಿಸಿದ್ದ ಗುರಿಗಳನ್ನು, ಮುಂದಿನ ಕಂಡಿಕೆಗಳಲ್ಲಿ ಗಮನಿಸುವಂತೆ, ಇನ್ನೂ ಸಾಧಿಸಿರಲಿಲ್ಲ.

➢ ***ಶಾಲಾ ಕೊಠಡಿಗಳು***

ವಿದ್ಯಾರ್ಥಿಗೆ ಶಾಲಾ ಕೊಠಡಿಯ ಅನುಪಾತವು 1:40 ಇರಬೇಕೆಂದು ಆರ್‌ಎಮ್‌ಎಸ್‌ಎ ಚೌಕಟ್ಟು ನಿಗದಿಪಡಿಸುತ್ತವೆ. ಶಾಲಾ ಕೊಠಡಿಗಳು ಸಾಕಷ್ಟು ಬೆಂಚುಗಳು ಮತ್ತು ಡೆಸ್ಕ್‌ಗಳಿಗೆ ಸ್ಥಳವನ್ನು ಹೊಂದಿದ್ದು 40 ವಿದ್ಯಾರ್ಥಿಗಳಿಗೆ ಆರಾಮವಾಗಿ ಸ್ಥಳಾವಕಾಶವನ್ನು ಕಲ್ಪಿಸುವಂತಿರಬೇಕು. ಒಂದು ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ 50ನ್ನು ಮೀರಿದರೆ, ಕನಿಷ್ಠ ಎರಡು ವಿಭಾಗಗಳಿರಬೇಕು.

2016-17ರ ವರ್ಷಕ್ಕೆ ಆರ್‌ಎಮ್‌ಎಸ್‌ಎಎಸ್‌ಕೆ ಒದಗಿಸಿದ ದತ್ತಾಂಶದ ಅನ್ವಯ ಪ್ರೌಢಶಾಲೆಗಳ ಒಟ್ಟಾರೆ ಶಾಲಾ ಕೊಠಡಿಗಳ ಅನುಪಾತ ಮತ್ತು ಜಿಲ್ಲಾವಾರು ಶಾಲಾ ಕೊಠಡಿಗಳ ಅನುಪಾತವು 1:40ರ ಮಾನದಂಡದೊಳಗೆ ಇರುವುದನ್ನು ಗಮನಿಸಲಾಯಿತು ಮತ್ತು ಇದು ಶಾಲಾ ಕೊಠಡಿಗಳಲ್ಲಿ ದಾಖಲಾದ ವಿದ್ಯಾರ್ಥಿಗಳಿಗೆ ಸಾಕಷ್ಟು ಸ್ಥಳಾವಕಾಶವಿರುವುದನ್ನು ಸೂಚಿಸುತ್ತದೆ.

ಆದರೆ, ಜಿಲ್ಲಾವಾರು ಮತ್ತು ಶಾಲಾವಾರು ವಿಶ್ಲೇಷಣೆಯು ವಿಭಿನ್ನ ದೃಶ್ಯವನ್ನೇ ಸೂಚಿಸುತ್ತಿತ್ತು. ಮಾರ್ಚ್ 2018ರಲ್ಲಿದ್ದಂತೆ ರಾಜ್ಯದೆಲ್ಲೆಡೆ 34 ಶಿಕ್ಷಣ ಜಿಲ್ಲೆಗಳಲ್ಲಿ 4,677 ಸರ್ಕಾರಿ ಶಾಲೆಗಳಿದ್ದವು (ಗ್ರಾಮೀಣ ಪ್ರದೇಶಗಳಲ್ಲಿ 3,877/ಶೇಕಡಾ 83ರಷ್ಟು ಶಾಲೆಗಳು ಮತ್ತು ನಗರ ಪ್ರದೇಶಗಳಲ್ಲಿ 800/ಶೇಕಡಾ 17). ರಾಜ್ಯದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಶಾಲಾಕೊಠಡಿ ವಿದ್ಯಾರ್ಥಿಗಳ ಅನುಪಾತವನ್ನು **ಕೋಷ್ಟಕ-2.3**ರಲ್ಲಿ ನೀಡಲಾಗಿದೆ.

**ಕೋಷ್ಟಕ-2.3: ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಶಾಲಾಕೊಠಡಿ ವಿದ್ಯಾರ್ಥಿ ಅನುಪಾತ**

| ಶಾಲಾಕೊಠಡಿ-ವಿದ್ಯಾರ್ಥಿ ಅನುಪಾನ | ಶಾಲೆಗಳ ಒಟ್ಟು ಸಂಖ್ಯೆ | ಶಾಲೆಗಳ ಸಂಖ್ಯೆ (ಕಂಸಗಳಲ್ಲಿರುವ ಸಂಖ್ಯೆಗಳು ಶೇಕಡಾವಾರನ್ನು ಸೂಚಿಸುತ್ತವೆ) | |
|---|---|---|---|
| | | ಗ್ರಾಮೀಣ ಪ್ರದೇಶಗಳು | ನಗರ ಪ್ರದೇಶಗಳು |
| ಅನುಪಾತ 1:40 ರೊಳಗೆ | 1,956 | 1,699 (87) | 257 (13) |
| ಅನುಪಾತ > 1:40 | 2,721 | 2,178 (80) | 543 (20) |
| **ಒಟ್ಟು** | **4,677** | **3,877 (83)** | **800 (17)** |

ಆಧಾರ: ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಸಲ್ಲಿಸಿದ ಮಾಹಿತಿ

2,721 ಶಾಲೆಗಳ ಮತ್ತಷ್ಟು ವಿಶ್ಲೇಷಣೆಯು, ಈ ಶಾಲೆಗಳಲ್ಲಿ 1:40ರ ವ್ಯಾಪ್ತಿಗಿಂತ ಅಧಿಕವಾಗಿರುವುದನ್ನು ಹಾಗೂ 214 (ಶೇಕಡಾ 8) ಶಾಲೆಗಳಲ್ಲಿ (ಗ್ರಾಮೀಣ ಪ್ರದೇಶಗಳಲ್ಲಿ 134 ಶಾಲೆಗಳು-ಶೇಕಡಾ 63 ಹಾಗೂ ನಗರ ಪ್ರದೇಶಗಳಲ್ಲಿ 80 ಶಾಲೆಗಳು-ಶೇಕಡಾ 37) 1:61-69 ವ್ಯಾಪ್ತಿಯಲ್ಲಿರುವುದನ್ನು ತೋರಿಸಿತು.

342 ಶಾಲೆಗಳ ಜಂಟಿ ಭೌತಿಕ ಪರಿಶೀಲನೆಯಲ್ಲಿ 22 ಶಾಲೆಗಳಲ್ಲಿ ಶಾಲಾ ಕೊಠಡಿಗಳ ಕೊರತೆಯಿದ್ದಿತೆಂದು ಗಮನಿಸಲಾಯಿತು. ತತ್ಪರಿಣಾಮವಾಗಿ ಹಿರಿಯ ಪ್ರಾಥಮಿಕ ಶಾಲೆಗಳು, ಸೈನಿಕ ಶಾಲೆಗಳು, ಮುಂತಾದವುಗಳ ಶಾಲಾ ಕೊಠಡಿಗಳನ್ನು ಹಂಚಿಕೊಳ್ಳುವ ಮೂಲಕ ತರಗತಿಗಳನ್ನು ನಡೆಸಲಾಗುತ್ತಿತ್ತು. **ಕೋಷ್ಟಕ-2.3(ಎ)** ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾ-ತನಿಖೆ ನಡೆಸಿದ 342 ಶಾಲೆಗಳ ವಿವರಗಳನ್ನು ನೀಡುತ್ತದೆ.

**ಕೋಷ್ಟಕ–2.3(ಎ): ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಶಾಲಾ ಕೊಠಡಿಗಳ ಲಭ್ಯತೆ**

| ಪರೀಕ್ಷಾ–ನಡೆಸಿದ ಜಿಲ್ಲೆ | ಆಯ್ಕೆ ಮಾಡಿದ ಶಾಲೆಗಳ ಸಂಖ್ಯೆ | ಸಾಕಷ್ಟು ಶಾಲಾ ಕೊಠಡಿಗಳು ಲಭ್ಯವಿರದಿದ್ದ ಶಾಲೆಗಳ ಸಂಖ್ಯೆ | ಷರಾ |
|---|---|---|---|
| ಬೆಳಗಾವಿ | 59 | 3 | ಮಾನದಂಡಗಳ ಅನ್ವಯ, ಶಾಲಾಕೊಠಡಿಯ ಬಲವು 50ನ್ನು ಮೀರಿದರೆ ಮತ್ತೊಂದು ವಿಭಾಗವನ್ನು ರಚಿಸಬೇಕು. ಶಾಲೆಯ ಬಲ 50ರಿಂದ 145ರವರೆಗೆ ಇದ್ದರೂ ಸಹ ಮಕ್ಕಳನ್ನು ಒಂದೇ ತರಗತಿಯಲ್ಲಿ ಸ್ಥಳಾವಕಾಶ ಮಾಡಲಾಗಿತ್ತು. ತತ್ಪರಿಣಾಮವಾಗಿ ಬೆಂಚುಗಳಿಗೆ/ಡೆಸ್ಕ್‌ಗಳಿಗೆ ಹಾಗೂ ಮಕ್ಕಳಿಗೆ ಸಾಕಷ್ಟು ಸ್ಥಳವಿರಲಿಲ್ಲ. |
| ಬೆಂಗಳೂರು | 134 | 11 | |
| ಚಾಮರಾಜನಗರ | 9 | 0 | |
| ಚಿತ್ರದುರ್ಗ | 31 | 0 | |
| ಹಾಸನ | 28 | - | |
| ಕಲಬುರಗಿ | 43 | 2 | |
| ವಿಜಯಪುರ | 29 | 0 | |
| ಯಾದಗಿರ್ | 9 | 6 | |
| **ಒಟ್ಟು** | **342** | **22** | |

ಆಧಾರ: ಆಯ್ಕೆಯಾದ ಶಾಲೆಗಳು ಸಲ್ಲಿಸಿದ ಮಾಹಿತಿ

ಪರೀಕ್ಷಾ–ತನಿಖೆ ನಡೆಸಿದ ಇತರ ಪ್ರೌಢಶಾಲೆಗಳಲ್ಲಿ ಭೌತಿಕ ಮೂಲಸೌಕರ್ಯಗಳ ಲಭ್ಯತೆಯನ್ನು **ಅನುಬಂಧ–2.7**ರಲ್ಲಿರುವ ನಕ್ಷೆಗಳಲ್ಲಿ ತೋರಿಸಲಾಗಿದೆ. ಅನುದಾನಿತವಲ್ಲದ ಶಾಲೆಗಳು ಸರ್ಕಾರಿ ಶಾಲೆಗಳು ಮತ್ತು ಅನುದಾನಿತ ಶಾಲೆಗಳಿಗಿಂತ ಉತ್ತಮ ಸ್ಥಿತಿಯಲ್ಲಿದ್ದವು ಎಂದು ಅನುಬಂಧದಿಂದ ಸ್ಪಷ್ಟವಾಗುತ್ತದೆ.

ಇತರೆ ಸೌಕರ್ಯಗಳಿಗಾಗಿ ಪರೀಕ್ಷಾ–ತನಿಖೆ ನಡೆಸಿದ ಶಾಲೆಗಳಲ್ಲಿನ ನಿರ್ದಿಷ್ಟ ಅವಲೋಕನಗಳನ್ನು ಮುಂದಿನ ಕಂಡಿಕೆಗಳಲ್ಲಿ ಹೊರತರಲಾಗಿದೆ.

## ➢ *ಪ್ರಯೋಗಶಾಲಾ ಸೌಕರ್ಯಗಳು*

ಪ್ರತಿಯೊಂದು ಪ್ರೌಢಶಾಲೆಯೂ ಒಂದು ವಿಜ್ಞಾನ ಪ್ರಯೋಗಶಾಲೆ ಮತ್ತು ಒಂದು ಭಾಷಾ ಪ್ರಯೋಗಶಾಲೆಯನ್ನು ಹೊಂದಿರಬೇಕೆಂದು ಆರ್‌ಎಮ್‌ಎಸ್‌ಎ ಚೌಕಟ್ಟು ನಿಗದಿಪಡಿಸುತ್ತದೆ.

ಪರೀಕ್ಷಾ–ತನಿಖೆ ನಡೆಸಿದ ಯಾವುದೇ ಶಾಲೆಗಳೂ ಸಹ ಭಾಷಾ ಪ್ರಯೋಗಶಾಲೆಯನ್ನು ಸ್ಥಾಪಿಸಿರಲಿಲ್ಲ ಮತ್ತು 65 ಶಾಲೆಗಳು ವಿಜ್ಞಾನ ಪ್ರಯೋಗಶಾಲೆಯನ್ನು ಹೊಂದಿರಲಿಲ್ಲ ಎಂಬುದನ್ನು 342 ಶಾಲೆಗಳ ಜಂಟಿ ಭೌತಿಕ ಪರಿಶೀಲನೆಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ ಈ ಶಾಲೆಗಳ ಮಕ್ಕಳು ತಾವೇ ವಿವಿಧ ಪ್ರಯೋಗಗಳನ್ನು ಮಾಡುವ ಮೂಲಕ ಮೊದಲ ಕಲಿಕೆಯ ಅನುಭವ ಪಡೆಯುವ ಅವಕಾಶದಿಂದ ಹಾಗೂ ಶಿಕ್ಷಕರು ಪ್ರಯೋಗಗಳ ಮೂಲಕ ಮಕ್ಕಳಿಗೆ ಬೋಧನೆ ಮಾಡುವುದರಿಂದ ವಂಚಿತರಾದರು. ಅಲ್ಲದೆ, ಭಾಷಾ ಪ್ರಯೋಗಶಾಲೆಯನ್ನು ಸ್ಥಾಪಿಸದಿರುವುದರಿಂದ ಭಾಷೆಯನ್ನು ತ್ವರಿತವಾಗಿ ಮತ್ತು ಸುಲಭವಾಗಿ ಕಲಿಯುವ ಅವಕಾಶವು ತಪ್ಪಿದಂತಾಯಿತು.

ಪ್ರೌಢಶಾಲೆಗಳಿಗೆ ನಿಗದಿಪಡಿಸಿದ್ದ 123 ಪ್ರಯೋಗಶಾಲಾ ಉಪಕರಣಗಳಲ್ಲಿ ಪರೀಕ್ಷಾ–ತನಿಖೆ ನಡೆಸಿದ ಶೇಕಡಾ 26ರಷ್ಟು ಶಾಲೆಗಳು ನಿಗದಿಪಡಿಸಿದ್ದ ಉಪಕರಣಗಳಲ್ಲಿ ಅರ್ಧದಷ್ಟನ್ನೂ ಸಹ ಹೊಂದಿರಲಿಲ್ಲವೆಂದು ನಾವು ಗಮನಿಸಿದೆವು. ನಿಗದಿಪಡಿಸಿದ್ದ 40 ನಿರ್ದಿಷ್ಟ ಕಾರಕಗಳಲ್ಲಿ, ಪರೀಕ್ಷಾ–ತನಿಖೆ ನಡೆಸಿದ ಶೇಕಡಾ 33ರಷ್ಟು ಶಾಲೆಗಳು ಅರ್ಧದಷ್ಟು ನಿರ್ದಿಷ್ಟ ಕಾರಕಗಳನ್ನೂ ಹೊಂದಿರಲಿಲ್ಲ. ವಿಜ್ಞಾನ ಶಿಕ್ಷಕರಲ್ಲಿ ಪ್ರಯೋಗಶಾಲಾ ಸುರಕ್ಷತಾ ಕ್ರಮಗಳ ಬಗೆಗಿರುವ ಅರಿವಿನ ಕುರಿತು ಲೆಕ್ಕಪರಿಶೋಧನೆಯು ಸಮೀಕ್ಷೆಯೊಂದನ್ನು ನಡೆಸಿತು ಮತ್ತು ಅದರಲ್ಲಿ ಶೇಕಡಾ 65ರಷ್ಟು ಶಿಕ್ಷಕರಿಗೆ ಸುರಕ್ಷತಾ ಕ್ರಮಗಳ ಬಗ್ಗೆ ಅರಿವಿರಲಿಲ್ಲವೆಂದು ತಿಳಿದುಬಂದಿತು.

ಪ್ರಯೋಗಶಾಲೆಗಳಲ್ಲಿ ರಾಸಾಯನಿಕ ಕಾರಕಗಳನ್ನು ನಿರ್ವಹಿಸುವಾಗ ವಹಿಸಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಶಿಕ್ಷಕರಿಗೆ ಸೂಚನೆಗಳನ್ನು ನೀಡಲಾಗುವುದು ಎಂದು ಸರ್ಕಾರವು ತಿಳಿಸಿತು (ಫೆಬ್ರವರಿ 2019).

ಪ್ರಯೋಗಶಾಲಾ ಉಪಕರಣಗಳ ಖರೀದಿಯಲ್ಲಿ ನಿಗದಿಪಡಿಸಿದ್ದ ಕಾರ್ಯವಿಧಾನಗಳನ್ನು ಅನುಸರಿಸದಿರುವುದನ್ನು ಪರಿಶೀಲನೆಯು ತೋರಿಸಿತು ಮತ್ತು ಅವುಗಳನ್ನು **ಅನುಬಂಧ–2.8**ರಲ್ಲಿ ನೀಡಲಾಗಿದೆ.

### ➢ ಕಂಪ್ಯೂಟರ್ ಪ್ರಯೋಗಶಾಲೆ

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಪ್ರೌಢ ಶಿಕ್ಷಣ ವ್ಯವಸ್ಥೆಯ ಸಾರ್ವತ್ರಿಕ ಬೆಂಬಲವಾಗಿದೆ. ಈ ಸಂಬಂಧವಾಗಿ ಆರ್‌ಎಮ್‌ಎಸ್‌ಎ ಪ್ರತಿಯೊಂದು ಶಾಲೆಯಲ್ಲಿಯೂ ಕಂಪ್ಯೂಟರ್ ಪ್ರಯೋಗಶಾಲೆಗಳನ್ನು ಸ್ಥಾಪಿಸಿ ಕಂಪ್ಯೂಟರ್ ಶಿಕ್ಷಣವನ್ನು ನೀಡುವುದನ್ನು ಒತ್ತಿ ಹೇಳುತ್ತದೆ.

342ರಲ್ಲಿ 101 ಶಾಲೆಗಳಲ್ಲಿ ಕಂಪ್ಯೂಟರ್ ಪ್ರಯೋಗಶಾಲಾ ಸೌಕರ್ಯಗಳು ಇರಲಿಲ್ಲವೆಂದು ಜಂಟಿ ಪರಿಶೀಲನೆಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆ, ಪರೀಕ್ಷಾ-ತನಿಖೆ ನಡೆಸಿದ 342 ಶಾಲೆಗಳಲ್ಲಿ ಕಂಪ್ಯೂಟರ್ ಲಭ್ಯತೆಯನ್ನು ಲೆಕ್ಕಪರಿಶೋಧನೆಯು ವಿಶ್ಲೇಶಿಸಿತು. 153 ಶಾಲೆಗಳಲ್ಲಿ ಕಂಪ್ಯೂಟರ್‌ಗಳೇ ಇರಲಿಲ್ಲವಾದರೆ, 74 ಶಾಲೆಗಳಲ್ಲಿ ಕನಿಷ್ಠ ಅವಶ್ಯಕತೆಯಾದ 10 ಕ್ಕಿಂತ ಕಡಿಮೆ ಕಂಪ್ಯೂಟರ್‌ಗಳಿರುವುದನ್ನು ನಾವು ಗಮನಿಸಿದೆವು. ಈ ಎಲ್ಲ ಶಾಲೆಗಳಲ್ಲಿ ಮಕ್ಕಳ ನೋಂದಣಿಯು 17 ಮತ್ತು 669ರ ವ್ಯಾಪ್ತಿಯಲ್ಲಿದ್ದಿತು. ಪರೀಕ್ಷಾ-ತನಿಖೆ ನಡೆಸಿದ ಮೂರು ಜಿಲ್ಲೆಗಳ ಆಯ್ದ 66 ಶಾಲೆಗಳಲ್ಲಿ ಲೆಕ್ಕಪರಿಶೋಧನೆಯು ಮಕ್ಕಳಿಂದ ಪ್ರತಿಕ್ರಿಯೆಯನ್ನು ಪಡೆಯಿತು. 351ರಲ್ಲಿ 205 ಮಕ್ಕಳ ಪ್ರತಿಕ್ರಿಯೆಯು ಶಾಲೆಗಳಲ್ಲಿ ಕಂಪ್ಯೂಟರ್ ಸೌರ್ಕಯಗಳ ಕೊರತೆಯಿದ್ದಿತೆಂದು ಸೂಚಿಸುತ್ತಿತ್ತು.

ಕಂಪ್ಯೂಟರ್ ಸಾಕ್ಷರತೆಯ ಮತ್ತು ಮಕ್ಕಳನ್ನು ಡಿಜಿಟಲ್ ಭವಿಷ್ಯಕ್ಕಾಗಿ ತಯಾರಿಸುವ ದೃಷ್ಟಿಯಿಂದ ಭಾರತ ಸರ್ಕಾರವು 2004ರಲ್ಲಿ ಶಾಲೆಗಳಲ್ಲಿ ಮಾಹಿತಿ ಮತ್ತು ತಂತ್ರಜ್ಞಾನದ (ಐಸಿಟಿ) ಪ್ರಮುಖ ಯೋಜನೆಯೊಂದನ್ನು ಪರಿಚಯಿಸಿತು. ಯೋಜನೆಯನ್ನು 1, 2 ಮತ್ತು 3 ಎಂಬ ಮೂರು ಹಂತಗಳಲ್ಲಿ ಅನುಷ್ಠಾನಗೊಳಿಸಲಾಯಿತು. ಪ್ರತಿಯೊಂದು ಪ್ರೌಢಶಾಲೆಯಲ್ಲಿಯೂ ಕಂಪ್ಯೂಟರ್‌ಗಳನ್ನು ಲಭ್ಯ ಮಾಡಬೇಕೆಂದು ಐಸಿಟಿ ಹಂತ-3ನ್ನು 2008-09ರಲ್ಲಿ ಅನುಷ್ಠಾನಗೊಳಿಸಲಾಯಿತು. ಐಸಿಟಿ ಯೋಜನೆಯನ್ನು ರಾಜ್ಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಇಲಾಖೆಯು (ಡಿಎಸ್‌ಇಆರ್‌ಟಿ) ಅನುಷ್ಠಾನಗೊಳಿಸುತ್ತಿತ್ತು.

ಸಾಮಾನ್ಯ ಮತ್ತು ಸಾಮಾಜಿಕ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯ ಕಂಡಿಕೆ 4.11ರಲ್ಲಿ (2014ನೇ ವರ್ಷದ ವರದಿ ಸಂಖ್ಯೆ.10) ಹೆಚ್ಚಿನ ವೆಚ್ಚ, ಹಣವನ್ನು ನಿರ್ಭಂಧಿಸಿರುವುದು ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸದಿರುವುದರಲ್ಲಿ ಪರಿಣಮಿಸಿದ ಐಸಿಟಿ ಯೋಜನೆಯ ದೋಷಪೂರಿತ ಅನುಷ್ಠಾನದ ಬಗ್ಗೆ ವರದಿ ಮಾಡಲಾಗಿತ್ತು. ತದನಂತರ, 2014-15ರಿಂದ ಐಸಿಟಿ ಯೋಜನೆಯನ್ನು ಆರ್‌ಎಮ್‌ಎಸ್‌ಎ ಜೊತೆಗೆ ವಿಲೀನಗೊಳಿಸಲಾಯಿತು. 2013-18ರ ಅವಧಿಯಲ್ಲಿ ಈ ಘಟಕದ ಅಡಿಯಲ್ಲಿ ರಾಜ್ಯವು ಹಲವಾರು ಕ್ರಮಗಳನ್ನು ಪ್ರಸ್ತಾವಿಸಿದ್ದರೂ ಸಹ 2013-14ಕ್ಕೆ ಹಿಂದಿನ ಐಸಿಟಿ ಯೋಜನೆಯಲ್ಲಿನ ಅನುಷ್ಠಾನದಲ್ಲಿನ ಲೋಪದೋಷಗಳನ್ನು ಸರಿಪಡಿಸುವುದು ಬಾಕಿಯಿರುವುದರಿಂದ ಪಿಎಬಿ ಪ್ರಸ್ತಾವನೆಗಳನ್ನು ತಿರಸ್ಕರಿಸಿತ್ತು. ಐಸಿಟಿ ಯೋಜನೆಯ ಅನುಷ್ಠಾನದ ವಿವರಗಳನ್ನು **ಕೋಷ್ಟಕ-2.4**ರಲ್ಲಿ ನೀಡಲಾಗಿದೆ.

**ಕೋಷ್ಟಕ-2.4: ಐಸಿಟಿ ಯೋಜನೆಯ ಅನುಷ್ಠಾನ**

(₹ ಕೋಟಿಗಳಲ್ಲಿ)

| ಐಸಿಟಿ | ಅನುಮೋದಿತ ಶಾಲೆಗಳು | | ಭರಿಸಿದ ವೆಚ್ಚ | ಷರಾ |
|---|---|---|---|---|
| | ಅನುಮೋದಿತ | ಅನುಷ್ಠಾನಗೊಳಿಸಿದ | | |
| ಹಂತ-1 | 480 | 480 | 148.39 | - |
| ಹಂತ-2 | 2,279 | 1,568 | | 711 ಶಾಲೆಗಳನ್ನು ತೆಗೆದುಹಾಕಲಾಗಿತ್ತು ಮತ್ತು ತತ್ಪರಿಣಾಮವಾಗಿ ₹47.63 ಕೋಟಿಗಳನ್ನು ಅಧ್ಯರ್ಪಣೆ ಮಾಡಬೇಕಾಯಿತು |
| ಹಂತ-3 | 4,396 | - | | ಯಂತ್ರಾಂಶ ಮತ್ತು ತಂತ್ರಾಂಶಗಳ ಕಡೆಗೆ ವೆಚ್ಚವನ್ನು ಭರಿಸಿದರೂ ಸಹ ಯೋಜನೆಯನ್ನು ಅನುಷ್ಠಾನಗೊಳಿಸಲಿಲ್ಲ. |

ಆಧಾರ: ಡಿಎಸ್‌ಇಆರ್‌ಟಿ ಒದಗಿಸಿದ ಮಾಹಿತಿ

ಹೀಗೆ, ಪ್ರೌಢಶಾಲೆಗಳಲ್ಲಿ ಐಸಿಟಿ ಯೋಜನೆಯ ಅನುಷ್ಠಾನವಾಗಲಿಲ್ಲ ಮತ್ತು ತತ್ಪರಿಣಾಮವಾಗಿ ಪ್ರೌಢಶಾಲೆಗಳ ಮಕ್ಕಳು ಐಸಿಟಿ ಶಿಕ್ಷಣದಿಂದ ವಂಚಿತರಾದರು.

ಈ ಮಧ್ಯೆ, ಕರ್ನಾಟಕ ಸರ್ಕಾರವು ಐಸಿಟಿ ಘಟಕ, ಟೆಲಿ-ಎಜುಕೇಶನ್ ಸ್ಕೀಮ್ ಮತ್ತು ಜಾಲ ಆಧಾರಿತ ಯುಡೈಸ್ ವ್ಯವಸ್ಥೆಗಳನ್ನು ವಿಲೀನಗೊಳಿಸಿ ಐಸಿಟಿ ಉಪಕ್ರಮಗಳನ್ನು ತಂತ್ರಜ್ಞಾನ ಸಂಘಟಿತ ಕಲಿಕೆ

ಕಾರ್ಯಕ್ರಮ (ಟಿಎಎಲ್‌ಪಿ) ಎಂಬ ಹೆಸರಿನ ಸಮಗ್ರ ಕಾರ್ಯಕ್ರಮದಲ್ಲಿ ಮರುಸಂಘಟಿಸಿತು (ಜುಲೈ 2016). ಈ ಕಾರ್ಯಕ್ರಮವನ್ನು ಸರ್ಕಾರಿ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಕಾಲೇಜುಗಳನ್ನು ವ್ಯಾಪಿಸಿ ಐದು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿತ್ತು. ಅನುಷ್ಠಾನದ ಸೂಚಿಯ ಅನ್ವಯ ನವೆಂಬರ್ 2016ರೊಳಗೆ ಶಾಲಾ ಬೋಧನೆಯನ್ನು ಮತ್ತು ಜೂನ್ 2017ರೊಳಗೆ ವಿದ್ಯಾರ್ಥಿಗಳಿಗೆ ಸ್ವಂತ ಅಭ್ಯಾಸವನ್ನು ಪ್ರಾರಂಭಿಸಬೇಕಿತ್ತು. ಆದರೆ, ಶಾಲಾ ಕೊಠಡಿ ಬೋಧನೆಯನ್ನಾಗಲೀ ಅಥವಾ ಸ್ವಂತ ಅಭ್ಯಾಸವನ್ನಾಗಲೀ ಇದುವರೆಗೂ ಪ್ರಾರಂಭಿಸಿರಲಿಲ್ಲ.

ಹೀಗೆ, ಕಂಪ್ಯೂಟರ್‌ಗಳಿಗೆ ಪ್ರವೇಶಾವಕಾಶವನ್ನು ಹೆಚ್ಚಿಸಲು ಹಾಗೂ ಕಂಪ್ಯೂಟರ್‌ನಲ್ಲಿ ಪ್ರಾವೀಣ್ಯತೆಯನ್ನು ಹೆಚ್ಚಿಸಲು ಈ ಎಲ್ಲ ಯೋಜನೆಗಳನ್ನು ಪ್ರಾರಂಭಿಸಿದರೂ ಸಹ ವಾಸ್ತವವಾಗಿ ಶಾಲೆಗಳು ಅಗತ್ಯವಿದ್ದ ಸೌಕರ್ಯಗಳನ್ನು ಹೊಂದಿರಲಿಲ್ಲ ಮತ್ತು ಮಕ್ಕಳಿಗೆ ಕಂಪ್ಯೂಟರ್ ಸಾಕ್ಷರಸ್ಥರಾಗುವ ಅವಕಾಶವನ್ನು ವಂಚಿಸಿದಂತಾಯಿತು.

### ➢ *ಕಲೆ ಮತ್ತು ಕರಕುಶಲತೆ*

ಕಲೆಯನ್ನು ಪಠ್ಯೇತರ ಚಟುವಟಿಕೆಯನ್ನಾಗಿ ಪರಿಗಣಿಸದೇ ಪಠ್ಯಕ್ರಮದ ಒಂದು ಭಾಗವನ್ನಾಗಿ ಪರಿಗಣಿಸಬೇಕೆಂದು ಆರ್‌ಎಮ್‌ಎಸ್‌ಎ ಚೌಕಟ್ಟು ನಿಗದಿಪಡಿಸುತ್ತದೆ. ಆದುದರಿಂದ, ಕಲಾ ಶಿಕ್ಷಣವು ಎಲ್ಲ ವಿಷಯಗಳಲ್ಲಿಯೂ ಕಲಿಕೆಯ ಮೌಲ್ಯಮಾಪನಕ್ಕೆ ಒಂದು ಸಾಧನವಾಗಿರಬೇಕು ಹಾಗೂ 10ನೇ ತರಗತಿಯವರೆಗೆ ಪ್ರತಿ ಶಾಲೆಯಲ್ಲಿಯೂ ಕಲಿಸಬೇಕು ಮತ್ತು ಅದಕ್ಕೆ ಸೌಕರ್ಯಗಳನ್ನು ಒದಗಿಸಬೇಕು ಎಂದು ಅದು ನಿಗದಿಪಡಿಸಿತ್ತು.

ಪರೀಕ್ಷಾ–ತನಿಖೆ ನಡೆಸಿದ ಐದು[17] ಜಿಲ್ಲೆಗಳ 121ರಲ್ಲಿ 71 ಶಾಲೆಗಳಲ್ಲಿ ಕಲೆ ಮತ್ತು ಕರಕುಶಲತೆಯು ಪಠ್ಯಕ್ರಮದ ಭಾಗವಾಗಿರಲಿಲ್ಲ, 73 ಶಾಲೆಗಳಲ್ಲಿ ಕಲೆ ಮತ್ತು ಕರಕುಶಲತೆ ಶಿಕ್ಷಕರು ಇರಲಿಲ್ಲ, 95 ಶಾಲೆಗಳಲ್ಲಿ ವಸ್ತುಗಳು ಇರಲಿಲ್ಲ ಹಾಗೂ 109 ಶಾಲೆಗಳಲ್ಲಿ ಪ್ರತ್ಯೇಕ ಕಲೆ ಮತ್ತು ಕರಕುಶಲತೆ ಕೊಠಡಿಗಳಿರಲಿಲ್ಲ ಎಂಬುದನ್ನು ನಾವು ಗಮನಿಸಿದೆವು.

### ➢ *ಗ್ರಂಥಾಲಯ*

ಬಿಐಎಸ್ ಮಾನದಂಡಗಳ ಅನ್ವಯ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳು ಗ್ರಂಥಾಲಯ ಕಟ್ಟಡಗಳು ಸಂಗ್ರಹಣಾ ಕೊಠಡಿ, ಗ್ರಂಥಪಾಲಕರ ಕೊಠಡಿ ಮತ್ತು ಓದುವ ಕೊಠಡಿಗಳನ್ನು ಹೊಂದಿರಬೇಕು. ಜೊತೆಗೆ, ಗ್ರಂಥಾಲಯದಲ್ಲಿ ಉಲ್ಲೇಖ, ಪ್ರಸರಣ ಕೌಂಟರ್, ಉಲ್ಲೇಖದ ಡೆಸ್ಕ್, ಪುಸ್ತಕಗಳು, ನಿಯತಕಾಲಿಕಗಳು, ದಿನಪತ್ರಿಕೆಗಳು ಮುಂತಾದವುಗಳು ಇರಬೇಕು.

ಪರೀಕ್ಷಾ–ತನಿಖೆ ನಡೆಸಿದ 342 ಶಾಲೆಗಳಲ್ಲಿ 199 ಶಾಲೆಗಳು ತಮ್ಮಲ್ಲಿ ಗ್ರಂಥಾಲಯಗಳಿವೆ ಎಂದು ತಿಳಿಸಿದ್ದವು. ಆದರೆ, ಈ ಶಾಲೆಗಳ ಜಂಟಿ ಭೌತಿಕ ಪರಿಶೀಲನೆಯಲ್ಲಿ ಗಮನಿಸಿದಂತೆ 99 ಶಾಲೆಗಳಲ್ಲಿ ಪ್ರತ್ಯೇಕ ಗ್ರಂಥಾಲಯ ಕೊಠಡಿಗಳಿರಲಿಲ್ಲ, ಅದನ್ನು **ಪ್ರದರ್ಶಿಕೆ–2.3ರಲ್ಲಿ** ತೋರಿಸಲಾಗಿದೆ.

ಜೊತೆಗೆ ಪರೀಕ್ಷಾ–ತನಿಖೆ ನಡೆಸಿದ ಶಾಲೆಗಳಲ್ಲಿರುವ ಎಲ್ಲಾ ಗ್ರಂಥಾಲಯಗಳಲ್ಲಿ ಗ್ರಂಥಾಲಯಕ್ಕೆ ಬೇಕಿದ್ದ ಸೌಕರ್ಯಗಳಿರಲಿಲ್ಲ ಎಂಬುದನ್ನು ನಾವು ಗಮನಿಸಿದೆವು.

ಪರೀಕ್ಷಾ–ತನಿಖೆ ನಡೆಸಿದ ಐದು[18] ಜಿಲ್ಲೆಗಳಲ್ಲಿನ ಆಯ್ದ ಶಾಲೆಗಳಲ್ಲಿನ ಗ್ರಂಥಾಲಯ ಸೌಕರ್ಯಗಳ ವಿಶ್ಲೇಷಣೆಯನ್ನು **ನಕ್ಷೆ–2.3ರಲ್ಲಿ** ನೀಡಲಾಗಿದೆ.

[17] ಬೆಳಗಾವಿ, ಬೆಂಗಳೂರು (ಉತ್ತರ), ಹಾಸನ, ಕಲಬುರಗಿ ಮತ್ತು ಯಾದಗಿರಿ.

[18] ಬೆಳಗಾವಿ, ಬೆಂಗಳೂರು (ಉತ್ತರ), ಹಾಸನ, ಕಲಬುರಗಿ ಮತ್ತು ಯಾದಗಿರಿ.

**ನಕ್ಷೆ–2.3: ಪರೀಕ್ಷಾ–ತನಿಖೆ ನಡೆಸಿದ ಐದು ಜಿಲ್ಲೆಗಳಲ್ಲಿ ಗ್ರಂಥಾಲಯ ಸೌಕರ್ಯಗಳು**




ಗ್ರಂಥಾಲಯಗಳು ಯುವ ಮನಸ್ಸುಗಳಿಗೆ ಜ್ಞಾನದ ಪ್ರಮುಖ ಮೂಲವಾಗಿರುವುದರಿಂದ ಹಾಗೂ ಶೈಕ್ಷಣಿಕ ಸಾಧನೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರುವುದರಿಂದ ಹಲವಾರು ಶಾಲೆಗಳಲ್ಲಿ ಗ್ರಂಥಾಲಯಗಳ ಕೊರತೆಯಿಂದಾಗಿ ಮಕ್ಕಳು ಪರೀಕ್ಷೆಯ ಸಮಯದಲ್ಲಿ ತಮ್ಮ ಕಾರ್ಯಕ್ಷಮತೆಯನ್ನು ಉತ್ತಮಗೊಳಿಸುವ ಅವಕಾಶವನ್ನು ಕಳೆದುಕೊಂಡರು.

ಸಾಕಷ್ಟಿಲ್ಲದ ಹಂಚಿಕೆಯಿಂದಾಗಿ ಕಲೆ ಮತ್ತು ಕರಕುಶಲ ಕೊಠಡಿ, ಗ್ರಂಥಾಲಯ ಕೊಠಡಿ, ಮುಂತಾದ ಸೌಕರ್ಯಗಳಿಗೆ ಅವಕಾಶವನ್ನು ಮಾಡಲು ಸಾಧ್ಯವಾಗಲಿಲ್ಲ ಎಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019).

### ➢ *ಶೌಚಾಲಯಗಳು*

ಪ್ರತಿ ಶಾಲೆಯಲ್ಲಿಯೂ ಶಿಕ್ಷಕರಿಗೆ, ಬಾಲಕರಿಗೆ, ಬಾಲಕಿಯರಿಗೆ ಮತ್ತು ವಿಕಲಚೇತನರಿಗೆ ಪ್ರತ್ಯೇಕವಾಗಿ ಅಗತ್ಯವಿರುವಷ್ಟು ಸಂಖ್ಯೆಯ ಶೌಚಾಲಯಗಳನ್ನು ಆರ್‌ಎಮ್‌ಎಸ್‌ಎ ನಿಗದಿಪಡಿಸಿತ್ತು. 2013–14ರಿಂದ 2017–18ರ ಅವಧಿಯಲ್ಲಿ ಆರ್‌ಎಮ್‌ಎಸ್‌ಎಎಸ್‌ಕೆ 186 ಶಾಲೆಗಳಲ್ಲಿ ₹4.32 ಕೋಟಿ ವೆಚ್ಚದಲ್ಲಿ ಶೌಚಾಲಯಗಳ ನಿರ್ಮಾಣವನ್ನು ಕೈಗೆತ್ತಿಕೊಂಡಿತು. ಆರ್‌ಎಮ್‌ಎಸ್‌ಎ ಅಡಿಯಲ್ಲಿ ಕೈಗೆತ್ತಿಕೊಂಡ ಶೌಚಾಲಯಗಳ ನಿರ್ಮಾಣದ ವಿವರಗಳನ್ನು **ಕೋಷ್ಟಕ–2.5**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.5: ಆರ್‌ಎಮ್‌ಎಸ್‌ಎ ಅಡಿಯಲ್ಲಿ ಕೈಗೆತ್ತಿಕೊಂಡ ಶೌಚಾಲಯದ ನಿರ್ಮಾಣದ ವಿವರಗಳು**

(₹ ಕೋಟಿಗಳಲ್ಲಿ)

| ವರ್ಷ | ವಿವರಗಳು | ಶಾಲೆಗಳ ಸಂಖ್ಯೆ | ಶೌಚಾಲಯಗಳ ಸಂಖ್ಯೆ | | ಒಟ್ಟು | ಬಿಡುಗಡೆಯಾದ ಮೊತ್ತ |
|---|---|---|---|---|---|---|
| | | | ಬಾಲಕರು | ಬಾಲಕಿಯರು | | |
| 2014–15 | ಹೊಸ ಶೌಚಾಲಯಗಳು | 65 | 58 | 13 | 71 | 1.26 |
| 2014–15 | ನಿಷ್ಕ್ರಿಯ ಶೌಚಾಲಯಗಳ ದುರಸ್ತಿ | 75 | 59 | 42 | 101 | 0.86 |
| **ಒಟ್ಟು** | | **140** | **117** | **55** | **172** | **2.12** |
| 2015–16 | ನಿಷ್ಕ್ರಿಯ ಶೌಚಾಲಯಗಳ ಮರುನಿರ್ಮಾಣ | 46 | 63 | 63 | 126 | 2.20 |
| **ಒಟ್ಟು** | | **46** | **63** | **63** | **126** | **2.20** |
| **ಒಟ್ಟು ಮೊತ್ತ** | | **186** | **180** | **118** | **298** | **4.32** |

ಆಧಾರ: ಆರ್‌ಎಮ್‌ಎಸ್‌ಎ ರಾಜ್ಯ ಯೋಜನಾ ನಿರ್ದೇಶಕರು ಒದಗಿಸಿದ ಮಾಹಿತಿ

342 ಶಾಲೆಗಳ ಜಂಟಿ ಭೌತಿಕ ಪರಿಶೀಲನೆಯಲ್ಲಿ 110 ವಿದ್ಯಾರ್ಥಿಗಳಿದ್ದರೂ ಬಾಲಕರಿಗಾಗಲೀ ಅಥವಾ ಬಾಲಕಿಯರಿಗಾಗಲೀ ಯಾವುದೇ ಶೌಚಾಲಯಗಳನ್ನು ಹೊಂದಿರದ ಕಲಬುರಗಿಯ ಲಕ್ಷಣ್‌ರಾವ್ ಬೋರೆ ಪ್ರೌಢಶಾಲೆಯನ್ನು ಹೊರತುಪಡಿಸಿ ಎಲ್ಲ ಶಾಲೆಗಳು ಶೌಚಾಲಯ ಸೌಕರ್ಯವನ್ನು ಹೊಂದಿದ್ದವು ಎಂದು ನಾವು ಗಮನಿಸಿದೆವು. ಆದರೆ, ಪರೀಕ್ಷಾ–ತನಿಖೆ ನಡೆಸಿದ ಐದು[19] ಜಿಲ್ಲೆಗಳ 163ರಲ್ಲಿ 52

[19] ಬೆಳಗಾವಿ, ಬೆಂಗಳೂರು (ಉತ್ತರ), ಹಾಸನ, ಕಲಬುರಗಿ ಮತ್ತು ಯಾದಗಿರಿ.

**ಪ್ರದರ್ಶಿಕೆ–2.3**
**ಪ್ರತ್ಯೇಕ ಗ್ರಂಥಾಲಯ ಕೊಠಡಿಯಿಲ್ಲದ ಶಾಲೆಗಳು**




ಶ್ರೀ ರಾವಲ್‌ನಾಥ್ ಪ್ರೌಢಶಾಲೆ, ಶಿವಥಾನ್, ಬೆಳಗಾವಿ



ಸ್ವರ್ಣ ಪ್ರೌಢಶಾಲೆ, ಹೊಳೆನರಸೀಪುರ, ಹಾಸನ

**ಪ್ರದರ್ಶಿಕೆ–2.4**

**ಶೌಚಾಲಯಗಳನ್ನು ನಿರ್ವಹಿಸದಿರುವುದು**



ಸರ್ಕಾರಿ ಪ್ರೌಢಶಾಲೆ, ಕೊಲಗುಂಡ, ಹಾಸನ



ಸರ್ಕಾರಿ ಪ್ರೌಢಶಾಲೆ, ಸಾಂಗಲ್, ಬೆಳಗಾವಿ



ಆದರ್ಶ ವಿದ್ಯಾಲಯ, ಭೀಮಳ್ಳಿ, ಕಲಬುರಗಿ

**ಪ್ರದರ್ಶಿಕೆ–2.5**

**ಸುರಕ್ಷಿತ ಶಾಲಾ ವಾತಾವರಣವಿಲ್ಲದ ಶಾಲೆಗಳು**



ಸರ್ಕಾರಿ ಜೂನಿಯರ್ ಕಾಲೇಜ್, ಶ್ರೀರಾಮನಗರ, ಹಾಸನ
ಕಾಂಪೌಂಡ್ ಗೋಡೆ ಇಲ್ಲದ ಮತ್ತು ಶಾಲೆಯ ಆವರಣದಲ್ಲಿ ಹಾದುಹೋಗುವ ರಸ್ತೆ



ಶ್ರೀ ಸಾಯಿ ಕೇಂದ್ರೀಯ ಪ್ರೌಢಶಾಲೆ, ಕಲಬುರಗಿ
ಕಲ್ನಾರು ಶೀಟ್‌ಗಳಿಂದ ಮಾಡಿದ ಕೊಠಡಿ



ಎಮ್‌ಆರ್ ಅನುದಾನಿತ ಪ್ರೌಢಶಾಲೆ, ಸಕಲೇಶಪುರ
ರೈಲಿಂಗ್ ಇಲ್ಲದ ಮೆಟ್ಟಲುಗಳು

**ಪ್ರದರ್ಶಿಕೆ–2.6**

**ಪೀಠೋಪಕರಣಗಳಿಲ್ಲದೆ ಕಾರ್ಯ ನಿರ್ವಹಿಸುತ್ತಿರುವ ಶಾಲೆಗಳು**



ಆದರ್ಶ ವಿದ್ಯಾಲಯ, ರಾಮದುರ್ಗ, ಬೆಳಗಾವಿ



ಸರ್ಕಾರಿ ಪ್ರೌಢಶಾಲೆ, ಪೇಠ್‌ಶಿರೂರು, ಕಲಬುರಗಿ

ಶಾಲೆಗಳಲ್ಲಿನ ಶೌಚಾಲಯಗಳಲ್ಲಿ ನಿರ್ವಹಣೆಯ ಕೊರತೆಯಿದ್ದಿತು. ಅದನ್ನು **ಪ್ರದರ್ಶಿಕೆ–2.4ರಲ್ಲಿ** ನೀಡಲಾಗಿದೆ.

ಲೆಕ್ಕಪರಿಶೋಧನೆಯ ಅವಲೋಕನಗಳನ್ನು ಒಪ್ಪಿಕೊಳ್ಳುತ್ತಾ (ಫೆಬ್ರವರಿ 2019) ಶಾಲಾ ಮಟ್ಟದಲ್ಲಿ ಅಗತ್ಯತೆಯನ್ನು ಪೂರೈಸಲು ಲಭ್ಯವಿದ್ದ ಹಣವು ಸೌಕರ್ಯಗಳ ನಿರ್ವಹಣೆಗೆ ಸಾಕಷ್ಟಿರಲಿಲ್ಲ ಎಂದು ಸರ್ಕಾರವು ತಿಳಿಸಿತು. ಇದರ ಜೊತೆಗೆ ವರ್ತನೆಯ ಬದಲಾವಣೆಯು ಶೌಚಾಲಯಗಳ ನಿಷ್ಕ್ರಿಯತೆಗೆ ಕಾರಣವಾಯಿತು.

**ಶಿಫಾರಸು–3: ಮಕ್ಕಳ ಮತ್ತು ಅವರ ಕುಟುಂಬದ ಆರೋಗ್ಯ ಮತ್ತು ನೈರ್ಮಲ್ಯದ ಮೇಲೆ ಪರಿಣಾಮ ಬೀರುವುದರಿಂದ ಶೌಚಾಲಯಗಳ ನಿರ್ವಹಣೆಯು ಅತ್ಯಂತ ಮಹತ್ವದ್ದಾಗಿದೆ. ಆದ್ದರಿಂದ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಒತ್ತು ನೀಡುವ ಸಲುವಾಗಿ ಮಕ್ಕಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವ ಅಗತ್ಯವಿದೆ.**

ಸರ್ಕಾರವು ಶಿಫಾರಸನ್ನು ಒಪ್ಪಿಕೊಂಡಿತು ಮತ್ತು ಸ್ವಚ್ಛ ಭಾರತ್ ಅಭಿಯಾನದಡಿಯಲ್ಲಿ ಶೌಚಾಲಯಗಳ ನಿರ್ವಹಣೆಯನ್ನು ಮಾಡಲಾಗುವುದು ಎಂದು ತಿಳಿಸಿತು.

### ➢ *ಶಾಲೆಗಳಲ್ಲಿ ಸುರಕ್ಷತೆ*

ಸುರಕ್ಷಿತ ಶಾಲಾ ವಾತಾವರಣವು ಮಗುವಿನ ಸರ್ವತೋಮುಖ ಅಭಿವೃದ್ಧಿಯನ್ನು ಬೆಂಬಲಿಸುವ ಒಂದು ಸಕ್ರಿಯ ವಾತಾವರಣವಾಗಿದೆ. ಮಕ್ಕಳಿಗೆ ಸೇವೆಯನ್ನು ನೀಡುವ ಕರ್ನಾಟಕ ಸರ್ಕಾರದ ಎಲ್ಲ ಇಲಾಖೆಗಳು ಕರ್ನಾಟಕ ರಾಜ್ಯ ಮಕ್ಕಳ ಸಂರಕ್ಷಣಾ ನೀತಿಯ ನಿಬಂಧನೆಗಳನ್ನು ಅನುಷ್ಠಾನಗೊಳಿಸಲು ಕಾರ್ಯಾಚರಣಾ ಮಾರ್ಗದರ್ಶಿ ಸೂತ್ರಗಳು ಮತ್ತು ಕಾರ್ಯವಿಧಾನವನ್ನು ಅಧಿಸೂಚಿಸಬೇಕು. ಆದರೆ, ಇಲಾಖೆಯು ಈ ಮಾರ್ಗದರ್ಶಿ ಸೂತ್ರಗಳನ್ನು ಇನ್ನೂ ಅಂತಿಮಗೊಳಿಸಬೇಕಿದೆ.

ಪರೀಕ್ಷಾ–ತನಿಖೆ ನಡೆಸಿದ 342 ಶಾಲೆಗಳಲ್ಲಿ ನಾವು ಕೆಳಕಂಡಂತೆ ಗಮನಿಸಿದೆವು:

- ಶೇಕಡಾ 27ರಷ್ಟು ಶಾಲೆಗಳಲ್ಲಿ ಶಾಲಾ ಕಾಂಪೌಂಡ್ ಗೋಡೆ ಇರಲಿಲ್ಲ (**ಪ್ರದರ್ಶಿಕೆ–2.5**).
- ಶೇಕಡಾ 43ರಷ್ಟು ಮುಖ್ಯೋಪಾಧ್ಯಾಯರುಗಳಿಗೆ ವಿಪತ್ತು ನಿರ್ವಹಣಾ ಮಾರ್ಗದರ್ಶಿ ಸೂತ್ರಗಳ ಬಗ್ಗೆ ಅರಿವಿದ್ದರೂ ಸಹ ಶೇಕಡಾ 83ರಷ್ಟು ಶಾಲೆಗಳಲ್ಲಿ ವಿಪತ್ತು ನಿರ್ವಹಣಾ ಯೋಜನೆಯ ದಾಖಲೆಗಳಿರಲಿಲ್ಲ.
- ಕಟ್ಟಡದ ರಚನಾ ಸುರಕ್ಷತೆಯ ಲೆಕ್ಕಪರಿಶೋಧನೆಯನ್ನು ಶೇಕಡಾ 43ರಷ್ಟು ಶಾಲೆಗಳಲ್ಲಿ ನಡೆಸಿರಲಿಲ್ಲ.
- ಐದು[20] ಜಿಲ್ಲೆಗಳ ಎಂಟು ಶಾಲೆಗಳಲ್ಲಿ ರಚನೆಗಳು/ ಛಾವಣಿಗಳು ಆಸ್‌ಬೆಸ್ಟರ್ ಶೀಟ್‌ಗಳಿಂದ ಮಾಡಿದ್ದವುಗಳಾಗಿದ್ದವು ಮತ್ತು ಅವುಗಳಲ್ಲಿ ಸಾಕಷ್ಟು ಗಾಳಿ ಬೆಳಕು ಬರುತ್ತಿರಲಿಲ್ಲ ಹಾಗೂ ಬಾಗಿಲುಗಳು ಇರಲಿಲ್ಲ (**ಪ್ರದರ್ಶಿಕೆ–2.5**).
- ಶೇಕಡಾ 63ರಷ್ಟು ಖಾಸಗಿ ಅನುದಾನಿತ/ಅನುದಾನಿತವಲ್ಲದ ಶಾಲೆಗಳಲ್ಲಿ ಬೆಂಕಿ ಸುರಕ್ಷತಾ ಸಾಧನಗಳು ಲಭ್ಯವಿರಲಿಲ್ಲ ಅಥವಾ ಕಾರ್ಯ ನಿರ್ವಹಿಸುತ್ತಿರಲಿಲ್ಲ.
- 12 ಶಾಲೆಗಳಲ್ಲಿ ಮೆಟ್ಟಿಲುಗಳಿಗೆ ರೈಲಿಂಗ್‌ಗಳು ಇರಲಿಲ್ಲ, ಶಾಲಾ ಆವರಣದೊಳಗೆ ರಸ್ತೆಯಿದ್ದಿತು, ಆವರಣದೊಳಗೆ ತೆರೆದ ಕೊಳವಿದ್ದಿತು, ಶಾಲಾ ಆವರಣದ ಮೇಲೆ ವಿದ್ಯುತ್ ತಂತಿ ಹಾದು ಹೋಗಿದ್ದಿತು (**ಪ್ರದರ್ಶಿಕೆ–2.5**).

ಶಾಲಾ ಮಟ್ಟದ ಸುರಕ್ಷತೆ ಹಾಗೂ ವಿಪತ್ತು ನಿರ್ವಹಣಾ ಯೋಜನೆಯನ್ನು ತಯಾರಿಸಲು ಶಾಲೆಗಳಿಗೆ ಸೂಚಿಸಲು ಒಂದು ಸಿದ್ಧವಿನ್ಯಾಸವನ್ನು ತಯಾರಿಸಿ ಶಾಲೆಗಳಿಗೆ ವಿತರಿಸಲಾಗಿದೆ ಎಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019).

ಪರೀಕ್ಷಾ–ತನಿಖೆ ನಡೆಸಿದ 342 ಶಾಲೆಗಳಲ್ಲಿ ಲೆಕ್ಕಪರಿಶೋಧನೆಯು ಮೂಲಸೌಕರ್ಯಗಳ ಲಭ್ಯತೆಯನ್ನು ಐದು[21] ಮೂಲ ಪ್ರಮಿತಿಗಳೊಡನೆ ವಿಶ್ಲೇಷಿಸಿತು ಮತ್ತು ಕೇವಲ 58 ಶಾಲೆಗಳು ಮಾತ್ರ ಎಲ್ಲ ಐದು ಮೂಲಸೌಕರ್ಯಗಳನ್ನು ಹೊಂದಿದ್ದವೆಂದು ತಿಳಿದುಬಂದಿತು. ಹೀಗೆ, ಶೇಕಡಾ 56ರಷ್ಟು ಹಣದ

[20] ಬೆಳಗಾವಿ, ಬೆಂಗಳೂರು (ಉತ್ತರ), ಹಾಸನ, ಕಲಬುರಗಿ ಮತ್ತು ಯಾದಗಿರಿ.

[21] ವಿಜ್ಞಾನ ಪ್ರಯೋಗಶಾಲೆ, ಗ್ರಂಥಾಲಯ, ಕಂಪ್ಯೂಟರ್ ಪ್ರಯೋಗಶಾಲೆ, ಕಲೆ ಮತ್ತು ಕರಕುಶಲತೆ ಕೊಠಡಿ ಹಾಗೂ ಕಾಂಪೌಂಡ್ ಗೋಡೆ.

ಹಂಚಿಕೆಯು ಮೂಲಸೌಕರ್ಯಗಳ ಕಡೆಗಿದ್ದರೂ ಸಹ ಕಾಮಗಾರಿಗಳನ್ನು ಟೆಂಡರ್‌ಗೆ ಹಾಕುವಲ್ಲಿನ ವಿಳಂಬದಿಂದ ಮತ್ತು ಪ್ರಮುಖ ಹಾಗೂ ಸಣ್ಣ ದುರಸ್ತಿಗಳನ್ನು ಕೈಗೆತ್ತಿಕೊಳ್ಳದಿದ್ದುದರಿಂದ ಶಿಕ್ಷಣ ಗುಣಮಟ್ಟವನ್ನು ಉತ್ತಮಗೊಳಿಸಲು ಮೂಲಸೌಕರ್ಯಗಳನ್ನು ಒದಗಿಸುವಲ್ಲಿನ ಆರ್‌ಎಮ್‌ಎಸ್‌ಎಯ ಮಧ್ಯಪ್ರವೇಶವು ಸಾಕಷ್ಟಿರಲಿಲ್ಲ.

ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವ ಉದ್ದೇಶಕ್ಕೆ ಆರ್‌ಎಮ್‌ಎಸ್‌ಎಯ ಬದ್ಧತೆಯ ಕೊರತೆಯನ್ನು ಮೇಲಿನ ಪ್ರಕರಣಗಳು [ಕಂಡಿಕೆಗಳು 2.1.8.1(ಎ) ಯಿಂದ (ಇ)] ಸೂಚಿಸುತ್ತವೆ. ತತ್ಪರಿಣಾಮವಾಗಿ, ವಿದ್ಯಾರ್ಥಿಗಳಿಗೆ ಮೂಲಸೌಕರ್ಯಗಳನ್ನು ಒದಗಿಸುವಲ್ಲಿ ಲೋಪದೋಷಗಳಿದ್ದವು.

### *(ಎಫ್) ಇತರೆ ಸೌಕರ್ಯಗಳು*

ಭೌತಿಕ ಮೂಲಸೌಕರ್ಯಗಳ ಜೊತೆಗೆ, ಆರ್‌ಎಮ್‌ಎಸ್‌ಎ ಅಡಿಯಲ್ಲಿನ ಗುಣಮಟ್ಟದ ಮಧ್ಯಪ್ರವೇಶವು ಪೀಠೋಪಕರಣಗಳು ಮತ್ತು ಜೋಡಣೆಗಳು, ಪ್ರಯೋಗಶಾಲಾ ಉಪಕರಣಗಳು ಮತ್ತು ವಿಜ್ಞಾನ ಮತ್ತು ಗಣಿತದ ಕಿಟ್‌ಗಳನ್ನು ಒದಗಿಸುವುದನ್ನು ಒಳಗೊಂಡಿತ್ತು. ಈ ಸೌಕರ್ಯಗಳನ್ನು ಒದಗಿಸುವ ಬಗೆಗಿನ ಲೆಕ್ಕಪರಿಶೋಧನಾ ಅವಲೋಕನಗಳನ್ನು ಕೆಳಗೆ ಚರ್ಚಿಸಲಾಗಿದೆ.

### ➢ *ಪೀಠೋಪಕರಣಗಳು ಮತ್ತು ಜೋಡಣೆಗಳು*

ಅಸ್ತಿತ್ವದಲ್ಲಿರುವ ಪೀಠೋಪಕರಣಗಳನ್ನು ಸಾಧ್ಯವಾದಷ್ಟು ದುರಸ್ತಿ ಮಾಡಬೇಕು ಮತ್ತು ಶಾಲಾ ಕೊಠಡಿಗಳಿಗೆ, ಪ್ರಯೋಗಶಾಲೆಗಳಿಗೆ, ಗ್ರಂಥಾಲಯಗಳಿಗೆ ಮತ್ತು ಇತರೆ ಸ್ಥಳಗಳಿಗೆ ಪೀಠೋಪಕರಣಗಳು ಮತ್ತು ಜೋಡಣೆಗಳ ವಾಸ್ತವಿಕ ಅಗತ್ಯತೆಯನ್ನು ನಿರ್ಧರಿಸಿ ವಾರ್ಷಿಕ ಯೋಜನೆಗಳಲ್ಲಿ ಪ್ರಕ್ಷೇಪಿಸಬೇಕು. ಪೀಠೋಪಕರಣಗಳು ಮತ್ತು ಜೋಡಣೆಗಳ ಖರೀದಿಯ ದಾಖಲೆಗಳಿಂದ ನಾವು ಕೆಳಕಂಡಂತೆ ಗಮನಿಸಿದೆವು:

- ✓ ಆರ್‌ಎಮ್‌ಎಸ್‌ಎಎಸ್‌ಕೆ ಶಾಲೆಗಳಿಗೆ ಪೀಠೋಪಕರಣಗಳ ಮತ್ತು ಜೋಡಣೆಗಳ ಅಗತ್ಯತೆಯನ್ನು ನಿರ್ಧರಣೆ ಮಾಡಲಿಲ್ಲ. ಆದ್ದರಿಂದ ಉನ್ನತೀಕರಣ/ಬಲವರ್ಧನೆಗಾಗಿ ಕೈಗೆತ್ತಿಕೊಳ್ಳದ ಶಾಲೆಗಳ ಸಂಬಂಧವಾಗಿ ಅದು ಹಣವನ್ನು ಕೋರಲು ಸಾಧ್ಯವಾಗಲಿಲ್ಲ. ನಿರ್ಮಾಣ ಮಾಡಿದ/ಉನ್ನತೀಕರಿಸಿದ ಶಾಲೆಗಳ ಸಂಬಂಧವಾಗಿ ಯಾವುದೇ ಮೌಲ್ಯಮಾಪನ ಮಾಡದೇ ಪೀಠೋಪಕರಣಗಳನ್ನು ಖರೀದಿಸಲಾಯಿತು, ಹಾಗಾಗಿ, ಮುಂದಿನ ಕಂಡಿಕೆಯಲ್ಲಿ ಚರ್ಚಿಸಿದಂತೆ ಕೆಲವು ಪೀಠೋಪಕರಣಗಳನ್ನು ಬಳಕೆ ಮಾಡಲಾಗಲಿಲ್ಲ.
- ✓ ಪೀಠೋಪಕರಣಗಳನ್ನು ಖರೀದಿಸುವ ಮೊದಲು ಒತ್ತಾಗಿ ಇಡುವುದನ್ನು ತಪ್ಪಿಸಲು ಲಭ್ಯವಿರುವ ಕೊಠಡಿಯ ಸ್ಥಳಾವಕಾಶ, ಪೀಠೋಪಕರಣಗಳ ಇತರೆ ವಸ್ತುಗಳಿಗೆ ಅಗತ್ಯವಿರುವ ಸ್ಥಳಾವಕಾಶ, ಮುಂತಾದವುಗಳ ಸಂಬಂಧವಾಗಿ ಮೌಲ್ಯಮಾಪನ ಮಾಡಬೇಕು. ಆದರೆ, ಪೀಠೋಪಕರಣಗಳ ವಿಶಿಷ್ಟತೆಗಳ ಬಗ್ಗೆ ನಿರ್ಧರಿಸುವಾಗ ಆರ್‌ಎಮ್‌ಎಸ್‌ಎಎಸ್‌ಕೆ ಕೊಠಡಿಗಳ ವಿನ್ಯಾಸವನ್ನು ಪರಿಗಣಿಸಲಿಲ್ಲ. ತತ್ಪರಿಣಾಮವಾಗಿ, ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಖರೀದಿಸಿದ ಮಂಚ ಮುಂತಾದ ಪೀಠೋಪಕರಣಗಳಿಗೆ ಅನುಕೂಲಕರವಾಗಿ ಸ್ಥಳಾವಕಾಶ ಮಾಡಲಾಗಲಿಲ್ಲ.
- ✓ ಉನ್ನತೀಕರಣ ಮತ್ತು ಬಲವರ್ಧನೆಯ ಘಟಕಗಳ ಭಾಗವಾಗಿ ಪೀಠೋಪಕರಣಗಳ ಖರೀದಿಯ ಆಯವ್ಯಯಕ್ಕೆ ಪಿಎಬಿ ಅನುಮೋದನೆ ನೀಡಿತು (2009–10 ಮತ್ತು 2010–11) ಹಾಗೂ ರಾಜ್ಯ ಸರ್ಕಾರವು ಖರೀದಿಗಾಗಿ ₹71.24 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿತು (ಡಿಸೆಂಬರ್ 2016). ರಾಜ್ಯ ಯೋಜನಾ ಕಛೇರಿಯು (ಎಸ್‌ಪಿಒ) ಅಂತಿಮಗೊಳಿಸಿದ ವಿಶಿಷ್ಟತೆಗಳ ಅನ್ವಯ ಪೀಠೋಪಕರಣಗಳನ್ನು ಖರೀದಿಸಲು ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರ ನೀಡಲಾಯಿತು. ಪರೀಕ್ಷಾ–ತನಿಖೆ ನಡೆಸಿದ ಎಂಟು ಜಿಲ್ಲೆಗಳಲ್ಲಿ ಆರು ಜಿಲ್ಲೆಗಳಿಗೆ 18 ತಿಂಗಳುಗಳ ನಂತರವೂ ಪೀಠೋಪಕರಣಗಳ ಸರಬರಾಜನ್ನು ಇನ್ನೂ ಪೂರ್ಣಗೊಳಿಸಿರಲಿಲ್ಲವೆಂದು ನಾವು ಗಮನಿಸಿದೆವು. ಜೊತೆಗೆ, ಕಲಬುರಗಿಯಲ್ಲಿ ಟೆಂಡರ್‌ಗಳನ್ನು ಇನ್ನೂ ಅಂತಿಮಗೊಳಿಸಿರಲಿಲ್ಲ (ಅಕ್ಟೋಬರ್ 2018). ಖರೀದಿಯ ಸ್ಥಿತಿಯನ್ನು **ಅನುಬಂಧ–2.9ರಲ್ಲಿ** ನೀಡಲಾಗಿದೆ. ಎರಡು ಶಾಲೆಗಳಲ್ಲಿ ಕುರ್ಚಿಗಳು ಮತ್ತು ಡೆಸ್ಕ್‌ಗಳು ಇರಲಿಲ್ಲವಾಗಿ ಮಕ್ಕಳು ನೆಲದ ಮೇಲೆ ಕುಳಿತುಕೊಂಡಿರುವುದನ್ನು ನಾವು ಗಮನಿಸಿದೆವು (**ಪ್ರದರ್ಶಕ–2.6**).

ಅಂತಹ ಪ್ರಕರಣಗಳು ಮತ್ತು ಮುಂದಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ಮೂಲ ಅಗತ್ಯತೆಗಳ ಅನುಪಸ್ಥಿತಿಯ ಜೊತೆಗೂಡಿ ಈ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಉಳಿಸಿಕೊಳ್ಳುವುದರ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ.

- ✓ ₹ಎರಡು ಕೋಟಿಗೂ ಅಧಿಕವಿರುವ ಟೆಂಡರ್‌ಗಳ ಸಲ್ಲಿಕೆಗೆ ನೀಡಬೇಕಿರುವ ಕನಿಷ್ಠ ಸಮಯ 60 ದಿನಗಳಾಗಿರಬೇಕೆಂದು ಕೆಟಿಪಿಪಿ ನಿಯಮ, 2000 ನಿಗದಿಪಡಿಸುತ್ತದೆ. ನಿಗದಿಪಡಿಸಿದ ಸಮಯದಲ್ಲಿ ಯಾವುದೇ ಕಡಿತ ಮಾಡಬೇಕಾದರೆ ಟೆಂಡರ್ ಆಹ್ವಾನ ಸಮಿತಿಗಿಂತ ಉನ್ನತ ಪ್ರಾಧಿಕಾರವು ಲಿಖಿತವಾಗಿ ಕಾರಣಗಳನ್ನು ದಾಖಲಿಸಿ ಅನುಮೋದನೆಯನ್ನು ನೀಡಬೇಕು. ಇದನ್ನು ಆರ್ಥಿಕ ಇಲಾಖೆಯು ಒತ್ತಿ ಹೇಳಿತ್ತು. ಮೇಲಿನ ನಿಯಮವನ್ನು ಉಲ್ಲಂಘಿಸಿ, ಟೆಂಡರ್ ಮೊತ್ತ ₹ಎರಡು ಕೋಟಿಯನ್ನು ಮೀರಿದ್ದರೂ ಸಹ ಯಾವುದೇ ಕಾರಣಗಳನ್ನು ದಾಖಲಿಸದೇ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸುವಂತೆ ಎಸ್‌ಪಿಡಿ ಜಿಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

**ಶಿಫಾರಸು-4: ಶಾಲೆಗಳಲ್ಲಿರುವ ಮಕ್ಕಳಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಪೀಠೋಪಕರಣಗಳ ಹಾಗೂ ಜೋಡಣೆಗಳ ಮತ್ತು ಪ್ರಯೋಗಶಾಲಾ ಉಪಕರಣಗಳ ಖರೀದಿಯನ್ನು ಆದ್ಯತೀಕರಣಗೊಳಿಸುವ ಅಗತ್ಯವಿದೆ.**

ಸರ್ಕಾರವು ಶಿಫಾರಸನ್ನು ಒಪ್ಪಿಕೊಂಡಿತು ಮತ್ತು ಲಭ್ಯವಿರುವ ಹಣವನ್ನು ಒಟ್ಟುಗೂಡಿಸುವ ಮೂಲಕ ಅದನ್ನು ಅನುಷ್ಠಾನಗೊಳಿಸಲಾಗುವುದೆಂದು ತಿಳಿಸಿತು.

### ➢ *ವಿಜ್ಞಾನ ಮತ್ತು ಗಣಿತ ಕಿಟ್‌ಗಳು*

ಕಲಿಕೆಯನ್ನು ಸಂತೋಷದಾಯಕ ಮತ್ತು ಅರ್ಥಪೂರ್ಣವಾದ ಚಟುವಟಿಕೆಯನ್ನಾಗಿ ಮಾಡಲು ಮತ್ತು ಮಕ್ಕಳಲ್ಲಿ ವಿಜ್ಞಾನ ಮತ್ತು ಗಣಿತದಲ್ಲಿ ಆಸಕ್ತಿಯನ್ನು ಬೆಳೆಸುವ ಉದ್ದೇಶದಿಂದ ಉಪಘಟಕವಾದ ರಾಷ್ಟ್ರೀಯ ಅವಿಷ್ಕಾರ ಅಭಿಯಾನದ ಅಡಿಯಲ್ಲಿ ₹2.39 ಕೋಟಿ ಮೌಲ್ಯದ ವಿಜ್ಞಾನ ಮತ್ತು ಗಣಿತ ಕಿಟ್‌ಗಳನ್ನು ಖರೀದಿಸಲು ಪಿಎಬಿ ಅನುಮೋದನೆ ನೀಡಿತು (2016-18). ಆದರೆ, ₹2.39 ಕೋಟಿ ಮೌಲ್ಯದ ಕಿಟ್‌ಗಳನ್ನು ಇನ್ನೂ ಖರೀದಿಸಬೇಕಿದೆ. ಈ ಚಟುವಟಿಕೆಯ ಅನುಷ್ಠಾನದ ಸ್ಥಿತಿಯನ್ನು **ಅನುಬಂಧ-2.10**ರಲ್ಲಿ ನೀಡಲಾಗಿದೆ.

### ➢ *ಆಟದ ಸೌಲಭ್ಯಗಳು*

ದೈಹಿಕ ಸಾಮರ್ಥ್ಯ ಮತ್ತು ಒಟ್ಟಾರೆ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಯುವ ಪೀಳಿಗೆಗೆ ದೈಹಿಕ ಶಿಕ್ಷಣ ಮತ್ತು ಯೋಗವನ್ನು ಆರ್‌ಎಮ್‌ಎಸ್‌ಎ ಚೌಕಟ್ಟು ರೂಪಿಸಿದೆ. ಆದ್ದರಿಂದ, ಶಾಲಾ ಆವರಣದಲ್ಲಿ ಕೆಲವು ಕನಿಷ್ಠ ಹೊರಾಂಗಣ ಮತ್ತು ಒಳಾಂಗಣ ಸೌಲಭ್ಯಗಳು ಅಗತ್ಯವೆಂದು ಅದು ನಿಗದಿಪಡಿಸಿತ್ತು.

ಐದು[22] ಜಿಲ್ಲೆಗಳ ಪರೀಕ್ಷಾ-ತನಿಖೆ ನಡೆಸಿದ 121 ಶಾಲೆಗಳಲ್ಲಿ 52 ಶಾಲೆಗಳಲ್ಲಿ ಆಟದ ಮೈದಾನವಿರಲಿಲ್ಲ ಮತ್ತು 100 ಶಾಲೆಗಳಲ್ಲಿ (ಶೇಕಡಾ 83) ಆಟದ ಉಪಕರಣಗಳು ಲಭ್ಯವಿರಲಿಲ್ಲ.

### *2.1.8.2 ನಿಯಂತ್ರಕ ಚಟುವಟಿಕೆ*

ಅನುದಾನಿತ ಮತ್ತು ಅನುದಾನಿತವಲ್ಲದ ಶಾಲೆಗಳಲ್ಲಿ ಭೌತಿಕ ಸೌಲಭ್ಯಗಳು ಮತ್ತು ಸಿಬ್ಬಂದಿಯ ಮೂಲಕ ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು ಆರ್‌ಎಮ್‌ಎಸ್‌ಎ ಶಿಷ್ಟಾಚಾರವೊಂದನ್ನು ರೂಪಿಸಿತು. ಈ ಸಂಬಂಧವಾಗಿ ಲೆಕ್ಕಪರಿಶೋಧನಾ ಅವಲೋಕನಗಳನ್ನು ಮುಂದಿನ ಕಂಡಿಕೆಗಳಲ್ಲಿ ಹೊರತರಲಾಗಿದೆ.

### ➢ *ತಪಶೀಲು ಪಟ್ಟಿಯನ್ನು ಪರಿಷ್ಕರಿಸದಿರುವುದು*

ಖಾಸಗಿ ಪ್ರೌಢಶಾಲೆಗಳಲ್ಲಿ ಬೋಧನಾ ಮತ್ತು ಕಲಿಕಾ ಸೌಕರ್ಯಗಳು ಸಾಕಷ್ಟಿರುವುದನ್ನು ನಿರ್ಧರಿಸಲು ಶಾಲಾ ಕೊಠಡಿ, ಗ್ರಂಥಾಲಯ, ಮುಂತಾದ ಪ್ರತಿಯೊಂದು ಘಟಕಗಳಿಗೆ ವಿಶಿಷ್ಟತೆಯೊಂದಿಗೆ ಇಲಾಖೆಯು

---

[22] ಬೆಳಗಾವಿ, ಬೆಂಗಳೂರು (ಉತ್ತರ), ಹಾಸನ, ಕಲಬುರಗಿ ಮತ್ತು ಯಾದಗಿರಿ.

ತಪಶೀಲು ಪಟ್ಟಿಯೊಂದನ್ನು ಬಳಸುತ್ತದೆ. ಆರ್‌ಎಮ್‌ಎಸ್‌ಎ ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಲು ತಪಶೀಲುಪಟ್ಟಿಯಲ್ಲಿನ ವಿಶಿಷ್ಟತೆಗಳನ್ನು ಪರಿಷ್ಕರಿಸದಿರುವುದನ್ನು ನಾವು ಗಮನಿಸಿದೆವು. ಇದರಿಂದ ಅನರ್ಹ ಶಾಲೆಗಳಿಗೆ ಮಾನ್ಯತೆಯನ್ನು ಅಥವಾ ಅನುದಾನವನ್ನು ವಿಸ್ತರಿಸುವ ಅಪಾಯವಿದ್ದಿತು.

➢ ***ವಾಡಿಕೆಯ ರೀತಿಯಲ್ಲಿ ಮಾನ್ಯತೆಯನ್ನು ನವೀಕರಿಸಿರುವುದು***

ಮೂಲಸೌಕರ್ಯಗಳ ಲಭ್ಯತೆ ಅಥವಾ ಬೋಧನಾ ಸೌಲಭ್ಯಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ವಾಡಿಕೆಯ ರೀತಿಯಲ್ಲಿ ಮಾನ್ಯತೆಯನ್ನು ನವೀಕರಿಸಲಾಗುತ್ತಿತ್ತು. ಪರೀಕ್ಷಾ-ತನಿಖೆ ನಡೆಸಿದ ಜಿಲ್ಲೆಗಳಲ್ಲಿನ 252ರಲ್ಲಿ 73 ಅನುದಾನಿತ ಮತ್ತು ಅನುದಾನಿತವಲ್ಲದ ಶಾಲೆಗಳಲ್ಲಿ ಮೂಲಸೌಕರ್ಯಗಳು ಮತ್ತು ಬೋಧನಾ ಸೌಲಭ್ಯಗಳು ರಾಜ್ಯವು ನಿಗದಿಪಡಿಸಿದ ರೀತಿಯಲ್ಲಿ ಇರದಿದ್ದರೂ ಸಹ ಶಾಲೆಗಳ ಮಾನ್ಯತೆಯನ್ನು ನವೀಕರಿಸಿರುವುದನ್ನು ನಾವು ಗಮನಿಸಿದೆವು. ತತ್ಪರಿಣಾಮವಾಗಿ ರಾಜ್ಯದಲ್ಲಿ ಶಾಲೆಗಳ ಗುಣಮಟ್ಟವನ್ನು ವೃದ್ಧಿಸುವಲ್ಲಿ ಮಾನ್ಯತಾ ಪ್ರಕ್ರಿಯೆಯು ಯಶಸ್ವಿಯಾಗಲಿಲ್ಲ. ಜೊತೆಗೆ ಎರಡು[23] ಶಾಲೆಗಳು ಮಾನ್ಯತೆಯ ನವೀಕರಣವಿಲ್ಲದೇ ಕಾರ್ಯ ನಿರ್ವಹಿಸುತ್ತಿದ್ದವು. ಇದು ಮೇಲ್ವಿಚಾರಣೆಯಲ್ಲಿ ಕೊರತೆಯನ್ನು ಸೂಚಿಸುತ್ತದೆ.

➢ ***ಅನರ್ಹ ಶಾಲೆಗಳಿಗೆ ಸಹಾಯಾನುದಾನವನ್ನು ವಿಸ್ತರಿಸಿರುವುದು***

ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಮತ್ತು ಕಾಲಕಾಲಕ್ಕೆ ಜಾರಿಮಾಡಿದ ತಿದ್ದುಪಡಿಗಳ ಅನ್ವಯ ಸಹಾಯಾನುದಾನಕ್ಕೆ ಅರ್ಹವಾಗಲು ಖಾಸಗಿ ಶಾಲೆಯೊಂದು 30 ವರ್ಷಗಳ ಅವಧಿಗೆ ಅದರ ಆಡಳಿತ ಮಂಡಳಿಯ ಅಥವಾ ಆಡಳಿತ ಸಮಿತಿಯ ಹೆಸರಿನಲ್ಲಿ ಗುತ್ತಿಗೆ ಇರುವ ಭೂಮಿಯನ್ನು ಹೊಂದಿರಬೇಕಿರುವುದು ಅಗತ್ಯವಾಗಿದೆ. ನಿಯಮಗಳು ಕನಿಷ್ಠ ಮೂಲಸೌಕರ್ಯಗಳ ಗುಣಮಟ್ಟವನ್ನೂ ಸಹ ನಿಗದಿಪಡಿಸಿದ್ದವು, ಉದಾಹರಣೆಗೆ ಶಾಲಾ ಕೊಠಡಿಗಳು ಗಾತ್ರದಲ್ಲಿ ಕನಿಷ್ಠ 360 ಚದರ ಅಡಿಗಳಿರಬೇಕು ಮತ್ತು ಸಹಾಯಾನುದಾನವನ್ನು ವಿಸ್ತರಿಸುವ ಮೊದಲು ಅಧಿಕಾರಿಗಳಿಗೆ ನಿರ್ಧರಿಸಲು ಮತ್ತು ಅಂಕ ನೀಡಲು ವಿವರವಾದ ತಪಶೀಲುಪಟ್ಟಿಯನ್ನು ಹೊಂದಿರಬೇಕು. ಮಾರ್ಗದರ್ಶಿ ಸೂತ್ರಗಳ ಅನ್ವಯ ಮೌಲ್ಯಮಾಪನದಲ್ಲಿ ಕನಿಷ್ಠ 60 ಅಂಕಗಳನ್ನು ಪಡೆಯುವ ಶಾಲೆಗಳು ಸಹಾಯಾನುದಾನಕ್ಕೆ ಅರ್ಹವಾಗುತ್ತವೆ.

ಪರೀಕ್ಷಾ-ತನಿಖೆ ನಡೆಸಿದ ಎಂಟು ಜಿಲ್ಲೆಗಳಲ್ಲಿ ನಾಲ್ಕರಲ್ಲಿ[24] 80 ಅನುದಾನಿತ ಶಾಲೆಗಳಲ್ಲಿ ಅಗತ್ಯವಿರುವ ಮಾನದಂಡಗಳನ್ನು ಅನುಪಾಲಿಸದಿದ್ದರೂ ಸಹ 23 ಶಾಲೆಗಳಿಗೆ ಸಹಾಯಾನುದಾನವನ್ನು ವಿಸ್ತರಿಸಿರುವುದನ್ನು ನಾವು ಗಮನಿಸಿದೆವು **(ಅನುಬಂಧ-2.11)**.

ಹೀಗೆ, ನಿಯಂತ್ರಕ ವ್ಯವಸ್ಥೆಯು ಅನುದಾನಿತ ಮತ್ತು ಅನುದಾನಿತವಲ್ಲದ ಪ್ರೌಢಶಾಲೆಗಳ ವಲಯದ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸುವ ಸಾಧನವಾಗಿದ್ದರೂ ಸಹ ಸರ್ಕಾರವು ತನ್ನ ಗುರಿಯನ್ನು ಸಾಧಿಸಲು ಆ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಿಲ್ಲ.

ಪ್ರಸ್ತುತ ಉತ್ತಮ ಶಾಲಾ ಮೌಲ್ಯಮಾಪನ ಸಾಧನಗಳು ಲಭ್ಯವಿದೆ ಮತ್ತು ಈ ಸಾಧನಗಳ ಅನುಷ್ಠಾನದ ನಂತರ ಅನುದಾನಿತ ಮತ್ತು ಅನುದಾನಿತವಲ್ಲದ ಶಾಲೆಗಳ ಗುಣಮಟ್ಟವು ಸುಧಾರಿಸಲಿದೆ ಎಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019).

**ಶಿಫಾರಸು-5: ಶಾಲೆಗಳ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ನಿಯತಕಾಲಿಕವಾಗಿ ತಪಾಸಣೆಯನ್ನು ನಡೆಸಲು ಇಲಾಖೆಯು ವ್ಯವಸ್ಥೆಯೊಂದನ್ನು ರೂಪಿಸಬೇಕಿದೆ, ಇದು ಶಾಲೆಗಳ ನೋಂದಣೆಯ ನವೀಕರಣದ ಸಮಯದಲ್ಲಿ ಮತ್ತು ಸಹಾಯಾನುದಾನದ ವಿಸ್ತರಣೆಯ ಸಮಯದಲ್ಲಿ ಸಹಾಯಕ್ಕೆ ಬರುತ್ತದೆ.**

ಶಾಲೆಗಳ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ತಾನು ಉತ್ತಮ ವ್ಯವಸ್ಥೆಯೊಂದನ್ನು ಪಾಲಿಸುವುದಾಗಿ ಸರ್ಕಾರವು ಉತ್ತರಿಸಿತು (ಫೆಬ್ರವರಿ 2019).

[23] ಯತೀಶ್ ಇಂಗ್ಲೀಷ್ ಪ್ರೌಢಶಾಲೆ-ಬೆಂಗಳೂರು ದಕ್ಷಿಣ ಮತ್ತು ಹೊಯ್ಸಳ ಪ್ರೌಢಶಾಲೆ-ಬೆಂಗಳೂರು ಉತ್ತರ.

[24] ಬೆಂಗಳೂರು (ಉತ್ತರ), ಚಿತ್ರದುರ್ಗ, ಹಾಸನ ಮತ್ತು ವಿಜಯಪುರ.

### *2.1.8.3 ಮಾನವ ಸಂಪನ್ಮೂಲಗಳು*

ಗುಣಮಟ್ಟದ ಸವಾಲನ್ನು ಎದುರಿಸಲು ಮೂಲಸೌಕರ್ಯಗಳ ಜೊತೆಗೆ ಮುಖ್ಯೋಪಾಧ್ಯಾಯರು, ಶಿಕ್ಷಕರು, ಪ್ರಯೋಗಶಾಲಾ ಸಹಾಯಕರು ಮುಂತಾದ ಮಾನವ ಸಂಪನ್ಮೂಲವನ್ನು ಒದಗಿಸುವುದು ಅಗತ್ಯವಾಗಿದೆ. ಎಲ್ಲ ಶಾಲೆಗಳಲ್ಲಿಯೂ ವಿಷಯವಾರು ಶಿಕ್ಷಕರನ್ನು ಹಾಗೂ ದೈಹಿಕ ಶಿಕ್ಷಣ, ಕಲೆ ಮತ್ತು ಕರಕುಶಲ ಮುಂತಾದವುಗಳಿಗೆ ವಿಶೇಷ ಶಿಕ್ಷಕರನ್ನು ನಿಯೋಜಿಸಬೇಕೆಂದು ಆರ್‌ಎಮ್‌ಎಸ್‌ಎ ನಿಗದಿಪಡಿಸಿತ್ತು. ಶಿಕ್ಷಕರ/ಮುಖ್ಯೋಪಾಧ್ಯಾಯರ ಲಭ್ಯತೆ ಮತ್ತು ಅರ್ಹತೆಯ ಮೇಲಿನ ಅವಲೋಕನಗಳನ್ನು ಕೆಳಗೆ ಚರ್ಚಿಸಲಾಗಿದೆ.

### *(ಎ) ಶಿಕ್ಷಕರ ಅಗತ್ಯತೆಯ ನಿರ್ಧಾರಣೆ*

ಕರ್ನಾಟಕದ ಮುನ್ನೋಟ ಯೋಜನೆಯಲ್ಲಿ ರಾಜ್ಯದಲ್ಲಿನ ಪ್ರೌಢಶಾಲೆಗಳಲ್ಲಿ ಸಾಕಷ್ಟು ಶಿಕ್ಷಕರಿದ್ದಾರೆ ಎಂದು ದಾಖಲಿಸಲಾಗಿತ್ತು. ಅದರಲ್ಲಿ ಶಿಕ್ಷಕರಿಗೆ ಸೂಕ್ತ ಸೇವಾ ತರಬೇತಿ ಸೌಲಭ್ಯಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಇರಲಿಲ್ಲ ಎಂದೂ ಸಹ ತಿಳಿಸಲಾಗಿತ್ತು. ತತ್ಪರಿಣಾಮವಾಗಿ ಕರ್ನಾಟಕದ ಮುನ್ನೋಟ ಯೋಜನೆಯಲ್ಲಿ ಅಸ್ತಿತ್ವದಲ್ಲಿರುವ ಪ್ರೌಢಶಾಲೆಗಳಿಗೆ ಹೆಚ್ಚುವರಿ ಶಿಕ್ಷಕರ ನೇಮಕಾತಿಗೆ ಯಾವುದೇ ಗುರಿಗಳನ್ನು ನಿಗದಿಪಡಿಸಿರಲಿಲ್ಲ. ಆದರೆ, ಉನ್ನತೀಕರಿಸಿದ ಶಾಲೆಗಳಿಗೆ 2017ರೊಳಗೆ 7,000 ಶಿಕ್ಷಕರನ್ನು ನೇಮಕಾತಿ ಮಾಡಬೇಕೆಂಬ ಗುರಿಯನ್ನು ಅದು ಸೂಚಿಸಿತ್ತು. ಅಸ್ತಿತ್ವದಲ್ಲಿರುವ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಅಗತ್ಯತೆಯನ್ನು ನಿರ್ಣಯಿಸುವಾಗ ಪ್ರಾಥಮಿಕ ಹಂತದಿಂದ ಪ್ರೌಢ ಹಂತದವರೆಗೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಜನಸಂಖ್ಯಾ ಬದಲಾವಣೆಗಳು ಮತ್ತು ಪರಿವರ್ತನಾ ದರಗಳು, ಸರ್ಕಾರಿ ಮತ್ತು ಖಾಸಗಿ ಶಾಲೆಗಳ ನಡುವಿನ ಚಲನೆ, ಶಾಲೆಗಳಲ್ಲಿನ ಜನಸಂಖ್ಯೆ ಮತ್ತು ಪ್ರತಿಯೊಂದು ತರಗತಿಯಲ್ಲಿಯೂ ವಿಭಾಗಗಳ ಸಂಖ್ಯೆ, ಭಾಷಾ ಮಾಧ್ಯಮ, ಶಿಕ್ಷಕರ ನಿವೃತ್ತಿ, ಮುಂತಾದವುಗಳನ್ನು ಗಣನೆಗೆ ತೆಗೆದುಕೊಂಡಿರಲಿಲ್ಲ ಎಂದು ಪರಿಶೀಲನೆಯು ತಿಳಿಯಪಡಿಸಿತು. ಹೀಗೆ, ಪ್ರೌಢಶಾಲೆಗಳ ಮಟ್ಟದಲ್ಲಿ ಶಿಕ್ಷಕರ ಅಗತ್ಯತೆಯನ್ನು ನಿರ್ಧರಿಸಲು ಯಾವುದೇ ವ್ಯವಸ್ಥೆ ಇರಲಿಲ್ಲ.

### *(ಬಿ) ಶಿಕ್ಷಕರ ಲಭ್ಯತೆ*

ಆರ್‌ಎಮ್‌ಎಸ್‌ಎ ಐದು ವಿಷಯ ನಿರ್ದಿಷ್ಟ ಶಿಕ್ಷಕರ ಮತ್ತು ಓರ್ವ ಮುಖ್ಯೋಪಾಧ್ಯಾಯರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದನ್ನು ಪ್ರಯತ್ನಿಸುತ್ತದೆ. ಕರ್ನಾಟಕದ ಪ್ರೌಢಶಾಲೆಗಳಲ್ಲಿನ ಒಟ್ಟು ಶಿಕ್ಷಕರ ಸಂಖ್ಯೆಯನ್ನು **ಅನುಬಂಧ–2.12**ರಲ್ಲಿ ನೀಡಲಾಗಿದೆ.

ಆರ್‌ಎಮ್‌ಎಸ್‌ಎಸ್‌ಕೆ ದಾಖಲೆಗಳ ಪರಿಶೀಲನೆಯು ಕೆಳಕಂಡಂತೆ ತಿಳಿಯಪಡಿಸಿತು.

- ಮಂಜೂರಾದ ಬಲದ 1,16,999 ಶಿಕ್ಷಕರಿಗೆ ಪ್ರತಿಯಾಗಿ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ 1,02,865 ಶಿಕ್ಷಕರಿದ್ದರು ಅಂದರೆ, ಶೇಕಡಾ 12ರಷ್ಟು ಶಿಕ್ಷಕರ ಖಾಲಿ ಹುದ್ದೆಗಳಿದ್ದವು. ಅನುದಾನ ರಹಿತ ಖಾಸಗಿ ಶಾಲೆಗಳಲ್ಲಿ ಖಾಲಿಹುದ್ದೆಗಳ ಶೇಕಡಾವಾರು ಕನಿಷ್ಠವಾಗಿತ್ತು ಎಂಬುದನ್ನು ನಾವು ಗಮನಿಸಿದೆವು. ಖಾಲಿಹುದ್ದೆಗಳ ಶೇಕಡಾವಾರು ಸರ್ಕಾರಿ ಶಾಲೆಗಳಿಗಿಂತ ಅನುದಾನಿತ ಶಾಲೆಗಳಲ್ಲಿ ಅಧಿಕವಾಗಿದ್ದಿತು.
- 1,712 ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಮಂಜೂರು ಮಾಡಲಾಗಿರಲಿಲ್ಲ. ಜೊತೆಗೆ 706 ಸರ್ಕಾರಿ ಶಾಲೆಗಳಲ್ಲಿ ಮತ್ತು 570 ಅನುದಾನಿತ ಶಾಲೆಗಳಲ್ಲಿ ಮಂಜೂರಾದ ಮುಖ್ಯೋಪಾಧ್ಯಾಯರ ಹುದ್ದೆಯಿದ್ದರೂ ಸಹ ಅವುಗಳು ಖಾಲಿ ಉಳಿದಿದ್ದವು. ಆದರೂ ಮುಖ್ಯೋಪಾಧ್ಯಾಯರ ಹುದ್ದೆಗಳಿಗೆ ನೇಮಕಾತಿಯನ್ನು 2012ರಿಂದ ಈಚೆಗೆ ಮಾಡಿರಲಿಲ್ಲ. ಶಾಲಾ ಅಭಿವೃದ್ಧಿ ಯೋಜನೆಯ ವಿನ್ಯಾಸಕ್ಕೆ, ಯೋಜನೆಯನ್ನು ಕಾರ್ಯಗತಗೊಳಿಸಲು, ಕೆಲಸದ ಹಂಚಿಕೆಗೆ ಮತ್ತು ಸಮನ್ವಯ ಹಾಗೂ ಮೇಲ್ವಿಚಾರಣೆಗೆ ಮುಖ್ಯೋಪಾಧ್ಯಾಯರು ಜವಾಬ್ದಾರರಾಗಿರುವ ಕಾರಣ 8,525ರಲ್ಲಿ 2,988 ಸರ್ಕಾರಿ ಮತ್ತು ಅನುದಾನಿತ ಶಾಲೆಗಳು ಮುಖ್ಯೋಪಾಧ್ಯಾಯರುಗಳಿಲ್ಲದೆ ಮೌಲ್ಯಮಾಪನದ ಮತ್ತು ಸೌಲಭ್ಯಗಳ ಸಂಬಂಧವಾಗಿ ಬಾಧಿತವಾಗಿದ್ದವು.
- 1,068 ಸರ್ಕಾರಿ ಪ್ರೌಢಶಾಲೆಗಳು ಅಧಿಕ ಶಿಕ್ಷಕರನ್ನು ಹೊಂದಿದ್ದರೆ, 2,566 ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿದ್ದಿತು ಎಂಬುದನ್ನು ಶಿಕ್ಷಕರ ಲಭ್ಯತೆಯ ಮತ್ತಷ್ಟು ವಿಶ್ಲೇಷಣೆಯು ತೋರಿಸಿತು. ಆದ್ದರಿಂದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ನಿಯೋಜನೆಯಲ್ಲಿ ಯಾವುದೇ ತರ್ಕವಿರಲಿಲ್ಲ.

- ವಿಷಯ ನಿರ್ದಿಷ್ಟ ಶಿಕ್ಷಕರ ಸಂಬಂಧವಾಗಿ 42,337 ಶಿಕ್ಷಕರ ಮಂಜೂರಾದ ಹುದ್ದೆಗಳಿಗೆ ಪ್ರತಿಯಾಗಿ ಸರ್ಕಾರಿ ಶಾಲೆಗಳಲ್ಲಿ 5,633 ಹುದ್ದೆಗಳು (ಶೇಕಡಾ 13ರಷ್ಟು ಕೊರತೆ) ಖಾಲಿಯಿದ್ದವು ಮತ್ತು 33,470 ಶಿಕ್ಷಕರ ಮಂಜೂರಾದ ಹುದ್ದೆಗಳಿಗೆ ಪ್ರತಿಯಾಗಿ 5,909 ಹುದ್ದೆಗಳು (ಶೇಕಡಾ 18) ಖಾಲಿಯಿದ್ದವು. ರಾಜ್ಯದಲ್ಲಿನ 15,666 ಪ್ರೌಢಶಾಲೆಗಳಲ್ಲಿ 642, 491 ಮತ್ತು 500 ಶಾಲೆಗಳು ಅನುಕ್ರಮವಾಗಿ ಗಣಿತ, ವಿಜ್ಞಾನ ಮತ್ತು ಸಮಾಜವಿಜ್ಞಾನ ಶಿಕ್ಷಕರನ್ನು ಹೊಂದಿರಲಿಲ್ಲ. ಈ ಪ್ರವೃತ್ತಿಯು ಪರೀಕ್ಷಾ-ತನಿಖೆ ನಡೆಸಿದ ಶಾಲೆಗಳಲ್ಲಿಯೂ ಸಹ ಅಸ್ತಿತ್ವದಲ್ಲಿತ್ತು. ಹೀಗೆ, ಆರ್‌ಎಮ್‌ಎಸ್‌ಎ ಮಾನದಂಡಗಳು ವಿಷಯ ನಿರ್ದಿಷ್ಟ ಶಿಕ್ಷಕರ ಸೂಕ್ತ ಸಮತೋಲನವನ್ನು ನಿಗದಿಪಡಿಸಿದ್ದರೂ ಸಹ ಪ್ರತಿಯೊಂದು ಶಾಲೆಯಲ್ಲಿಯೂ ವಿಷಯ ನಿರ್ದಿಷ್ಟ ಶಿಕ್ಷಕರ ಸೂಕ್ತ ಸಮತೋಲನವನ್ನು ಇಲಾಖೆಯು ಖಚಿತ ಪಡಿಸಿಕೊಳ್ಳಲಿಲ್ಲ.

### *(ಸಿ) ವಿದ್ಯಾರ್ಥಿ-ಶಿಕ್ಷಕರ ಅನುಪಾತ (ಪಿಟಿಆರ್)*

ಆರ್‌ಎಮ್‌ಎಸ್‌ಎ ಚೌಕಟ್ಟು 30:1ರ ವಿದ್ಯಾರ್ಥಿ-ಶಿಕ್ಷಕರ ಅನುಪಾತವನ್ನು (ಪಿಟಿಆರ್) ನಿಗದಿಪಡಿಸಿತ್ತು. ಕರ್ನಾಟಕದ ಮುನ್ನೋಟ ಯೋಜನೆಯು ಎಲ್ಲ ಶಾಲೆಗಳಲ್ಲಿಯೂ ಮೇಲಿನ ಪಿಟಿಆರ್‌ಅನ್ನು 2017ರೊಳಗೆ ಸಾಧಿಸಬೇಕು ಎನ್ನುವ ಗುರಿ ಹೊಂದಿತ್ತು. 2013-14ರಿಂದ 2017-18ರ ಅವಧಿಯಲ್ಲಿನ ರಾಜ್ಯದ ಪಿಟಿಆರ್ ಅನ್ನು **ಕೋಷ್ಟಕ-2.6**ರಲ್ಲಿ ನೀಡಲಾಗಿದೆ.

**ಕೋಷ್ಟಕ-2.6: 2013-14ರಿಂದ 2017-18ರ ವರ್ಷಗಳಿಗೆ ಪಿಟಿಆರ್**

| ವರ್ಷ | ಸರ್ಕಾರಿ | | | ಅನುದಾನಿತ | | | ಅನುದಾನಿತವಲ್ಲದ | | |
|---|---|---|---|---|---|---|---|---|---|
| | ವಿದ್ಯಾರ್ಥಿಗಳ ಸಂಖ್ಯೆ | ಶಿಕ್ಷಕರ ಸಂಖ್ಯೆ | ಪಿಟಿಆರ್ | ವಿದ್ಯಾರ್ಥಿಗಳ ಸಂಖ್ಯೆ | ಶಿಕ್ಷಕರ ಸಂಖ್ಯೆ | ಪಿಟಿಆರ್ | ವಿದ್ಯಾರ್ಥಿಗಳ ಸಂಖ್ಯೆ | ಶಿಕ್ಷಕರ ಸಂಖ್ಯೆ | ಪಿಟಿಆರ್ |
| **2013-14** | 6,14,280 | 38,982 | 15.76 | 5,43,220 | 29,030 | 18.71 | 4,67,602 | 35,233 | 13.27 |
| **2014-15** | 6,43,112 | 39,113 | 16.44 | 5,59,428 | 28,835 | 19.40 | 5,02,368 | 36,573 | 13.74 |
| **2015-16** | 6,35,860 | 38,923 | 16.34 | 5,53,952 | 28,854 | 19.20 | 5,22,266 | 37,091 | 14.08 |
| **2016-17** | 6,30,185 | 38,259 | 16.47 | 5,37,792 | 28,545 | 18.84 | 5,64,648 | 37,263 | 15.15 |
| **2017-18** | 5,97,332 | 38,401 | 15.56 | 5,06,976 | 28,188 | 17.99 | 5,96,157 | 36,276 | 16.43 |

ಆಧಾರ: ಆರ್‌ಎಮ್‌ಎಸ್‌ಎ ರಾಜ್ಯ ಯೋಜನಾ ನಿರ್ದೇಶಕರು ಸಲ್ಲಿಸಿದ ಮಾಹಿತಿ

ಆರ್‌ಎಮ್‌ಎಸ್‌ಎ ಅಡಿ ಎಲ್ಲ ಐದು ವರ್ಷಗಳಲ್ಲಿಯೂ ಪಿಟಿಆರ್ ಸರಾಸರಿಯು ಅಗತ್ಯತೆಗಿಂತ ಅಧಿಕವಾಗಿದ್ದಿತು, ಮತ್ತು ಇದು ಒಂದು ಸಕಾರಾತ್ಮಕ ಸೂಚಕವಾಗಿದೆ. ಆದರೆ, ಹಿಂದಿನ ಕಂಡಿಕೆಗಳಲ್ಲಿ ಚರ್ಚಿಸಿದಂತೆ, 874 ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಅಸಮತೋಲನ ನಿಯೋಜನೆ ಇದ್ದು ಅದು, **ಕೋಷ್ಟಕ-2.7**ರಲ್ಲಿ ತೋರಿಸಿರುವಂತೆ, ಶಾಲೆಗಳಲ್ಲಿ ಹೆಚ್ಚಿನ ಪಿಟಿಆರ್ ಅನುಪಾತದಲ್ಲಿ ಪರಿಣಮಿಸಿತ್ತು.

**ಕೋಷ್ಟಕ-2.7: ಶಿಕ್ಷಕರ ಅಸಮತೋಲನ ನಿಯೋಜನೆ**

| ವಿದ್ಯಾರ್ಥಿ-ಶಿಕ್ಷಕರ ಅನುಪಾತ | ಶಾಲೆಗಳ ಒಟ್ಟು ಸಂಖ್ಯೆ | ಶಾಲೆಗಳ ಸಂಖ್ಯೆ (ಕಂಸಗಳಲ್ಲಿರುವ ಸಂಖ್ಯೆಗಳು ಶೇಕಡಾವಾರನ್ನು ಸೂಚಿಸುತ್ತವೆ) | |
|---|---|---|---|
| | | ಗ್ರಾಮೀಣ ಪ್ರದೇಶಗಳು | ನಗರ ಪ್ರದೇಶಗಳು |
| ಅನುಪಾತ 30:1 ರೊಳಗೆ | 3,782 | 3,147 (83) | 635 (17) |
| ಅನುಪಾತ > 30:1 | 874 | 710 (81) | 164 (19) |
| **ಒಟ್ಟು** | **4,656*** | **3,857 (83)** | **799 (17)** |

ಆಧಾರ: ಸಾರ್ವಜನಿಕ ಶಿಕ್ಷಣ ಆಯುಕ್ತರು ಸಲ್ಲಿಸಿದ ಮಾಹಿತಿ

* 21 ಶಾಲೆಗಳ ಸಂಬಂಧವಾಗಿ ಮಾಹಿತಿಯು ಲಭ್ಯವಿಲ್ಲ.

874 ಶಾಲೆಗಳ ಮತ್ತಷ್ಟು ವಿಶ್ಲೇಷಣೆಯು 33 ಶಾಲೆಗಳು (ಶೇಕಡಾ 4) 100-226:1 ವ್ಯಾಪ್ತಿಯಲ್ಲಿದ್ದವೆಂದು ತೋರಿಸಿತು. ಈ 33 ಶಾಲೆಗಳಲ್ಲಿ, 31 ಶಾಲೆಗಳು (ಶೇಕಡಾ 94) ಗ್ರಾಮೀಣ ಪ್ರದೇಶಗಳಲ್ಲಿದ್ದವು ಮತ್ತು ಎರಡು ಶಾಲೆಗಳು (ಶೇಕಡಾ 6) ನಗರ ಪ್ರದೇಶಗಳಲ್ಲಿದ್ದವೆಂದು ನಾವು ಗಮನಿಸಿದೆವು. ಪರೀಕ್ಷಾ-ತನಿಖೆ ನಡೆಸಿದ ಕಲಬುರಗಿ ಜಿಲ್ಲೆಯ ಎರಡು ಶಾಲೆಗಳು, ಸರ್ಕಾರಿ ಪ್ರೌಢಶಾಲೆ-ದುಗನೂರು ಮತ್ತು ಅಂಜುಮಾನ್ ಉರ್ದು ಬಾಲಕಿಯರ ಪ್ರೌಢಶಾಲೆ-ಶಹಬಾದ್, ಇವುಗಳು ಅನುಕ್ರಮವಾಗಿ 249 ಮತ್ತು 206 ವಿದ್ಯಾರ್ಥಿಗಳನ್ನು ಹೊಂದಿದ್ದವು. ಇದಕ್ಕೆ ಪ್ರತಿಯಾಗಿ ಎರಡೂ ಶಾಲೆಗಳಲ್ಲಿ ಕೇವಲ ನಾಲ್ಕು ಶಿಕ್ಷಕರು ಮಾತ್ರ ಲಭ್ಯವಿದ್ದರು.

### *(ಡಿ) ಬೋಧನಾ ಮತ್ತು ಬೋಧನೇತರ ಸಿಬ್ಬಂದಿಯ ನೇಮಕಾತಿ*

ಯೋಜನಾ ಅನುಮೋದನಾ ಸಮಿತಿಯು (ಪಿಎಬಿ), **ಕೋಷ್ಟಕ–2.8**ರಲ್ಲಿ ತಿಳಿಸಿರುವ ವರ್ಷಗಳಿಗೆ ಪ್ರತಿಯಾಗಿ ಮುಖ್ಯೋಪಾಧ್ಯಾಯರು ಮತ್ತು ವಿಷಯ ನಿರ್ದಿಷ್ಟ ಶಿಕ್ಷಕರ ನೇಮಕಾತಿಗೆ ಅನುಮೋದನೆ ನೀಡಿತು. ಪಿಎಬಿಯು ಮುಖ್ಯೋಪಾಧ್ಯಾಯರು ಮತ್ತು ವಿಷಯ ನಿರ್ದಿಷ್ಟ ಶಿಕ್ಷಕರುಗಳಿಗೆ ತಾನು ಅನುಮೋದಿಸಿದ ವರ್ಷಗಳಿಗೆ ಹಣಕಾಸಿನ ಬೆಂಬಲವನ್ನೂ ಸಹ ಅನುಮೋದಿಸಿತು.

**ಕೋಷ್ಟಕ–2.8: ಪಿಎಬಿಯು ಅನುಮೋದಿಸಿದ ನೇಮಕಾತಿಗಳು**

| ಅವಧಿ | ಮುಖ್ಯೋಪಾಧ್ಯಾಯರು | ವಿಷಯ ನಿರ್ದಿಷ್ಟ ಶಿಕ್ಷಕರು | ಸರ್ಕಾರದ ಮಂಜೂರಾತಿ |
|---|---|---|---|
| 2009–14 | 333 | 1,970 | ಮಾರ್ಚ್ 2012 ಮತ್ತು ಫೆಬ್ರವರಿ 2014 |
| 2014–15 | 66 | 330 | ಡಿಸೆಂಬರ್ 2015 |
| 2015–16 | 45 | 225 | ಇನ್ನೂ ಮಂಜೂರು ಮಾಡಬೇಕಿದೆ |

ಆಧಾರ: ಸಾರ್ವಜನಿಕ ಶಿಕ್ಷಣ ಆಯುಕ್ತರು ಸಲ್ಲಿಸಿದ ಮಾಹಿತಿ

ರಾಜ್ಯ ಸರ್ಕಾರದಿಂದ ಹುದ್ದೆಗಳನ್ನು ಮಂಜೂರು ಮಾಡುವಲ್ಲಿ ವಿಳಂಬಗಳಿದ್ದವೆಂದು ಕೋಷ್ಟಕದಿಂದ ಸ್ಪಷ್ಟವಾಗುತ್ತದೆ. ಜೊತೆಗೆ, 2009–14ರ ಅವಧಿಯಲ್ಲಿ ಅನುಮೋದನೆ ನೀಡಿದ ಹುದ್ದೆಗಳಿಗೆ ಆರ್‌ಎಮ್‌ಎಸ್‌ಎಸ್‌ಕೆ ಇನ್ನೂ 284 ಹುದ್ದೆಗಳನ್ನು (45 ಮುಖ್ಯೋಪಾಧ್ಯಾಯರು ಮತ್ತು 239 ವಿಷಯ ನಿರ್ದಿಷ್ಟ ಶಿಕ್ಷಕರು) ಭರ್ತಿ ಮಾಡಬೇಕಿದೆ. ಡಿಸೆಂಬರ್ 2015ರಲ್ಲಿ ಮಂಜೂರು ಮಾಡಿದ ಹುದ್ದೆಗಳ ಸಂಬಂಧವಾಗಿ ನೇಮಕಾತಿ ಪ್ರಕ್ರಿಯೆಯು ಇನ್ನೂ ಪೂರ್ಣಗೊಳ್ಳಬೇಕಿದೆ. ತತ್ಪರಿಣಾಮವಾಗಿ ಅನುಮೋದಿತ ಹುದ್ದೆಗಳ ಸಂಬಂಧವಾಗಿ ವೇತನ ಮತ್ತು ಭತ್ಯೆಗಳ ಕಡೆಗಿನ ಆವರ್ತಕ ನೆರವನ್ನು ರಾಜ್ಯವು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ₹78.23 ಕೋಟಿಯ ಕೇಂದ್ರ ಅನುದಾನವನ್ನು ಕಳೆದುಕೊಂಡಿತು.

ಅದೇ ರೀತಿ, 2013–14ರ ಅವಧಿಯಲ್ಲಿ ಪಿಎಬಿ 305 ಕಛೇರಿ ಸಹಾಯಕರು/ಎಮ್‌ಟಿಎಸ್‌ಗಳ ನೇಮಕಾತಿಯನ್ನು ಅನುಮೋದಿಸಿ ₹1.83 ಕೋಟಿಯನ್ನು ಹಂಚಿಕೆ ಮಾಡಿದ್ದರೂ ಸಹ ಮೇಲೆ ತಿಳಿಸಿದ ಹುದ್ದೆಗಳಿಗೆ ಯಾವುದೇ ನೇಮಕಾತಿಯನ್ನು ಕೈಗೊಂಡಿರಲಿಲ್ಲ.

ಶಿಕ್ಷಕರ ಅಗತ್ಯತೆಯನ್ನು ನಿಯತಕಾಲಿಕವಾಗಿ ನಿರ್ಧರಿಸಲು ವ್ಯವಸ್ಥೆ ಇಲ್ಲದಿರುವುದು ಹಲವಾರು ಶಾಲೆಗಳಲ್ಲಿ ಮಕ್ಕಳನ್ನು ವಿಷಯ ನಿರ್ದಿಷ್ಟ ಶಿಕ್ಷಕರುಗಳಿಂದ ವಂಚಿತರನ್ನಾಗಿಸಿತು ಮತ್ತು ಶಿಕ್ಷಣದ ಗುಣಮಟ್ಟದ ಮೇಲೆ ಪ್ರಭಾವ ಬೀರಿತ್ತು.

ಸರ್ಕಾರವು ಕೆಳಗಿನಂತೆ ಉತ್ತರಿಸಿತು (ಫೆಬ್ರವರಿ 2019):

- ಮುಖ್ಯೋಪಾಧ್ಯಾಯರ ಹುದ್ದೆಯು ಪದೋನ್ನತಿಯ ಹುದ್ದೆಯಾಗಿದ್ದು ಆರ್‌ಎಮ್‌ಎಸ್‌ಎ ಅವಧಿಯಲ್ಲಿ ಈ ಹುದ್ದೆಗೆ ನೇರ ನೇಮಕಾತಿಯನ್ನು ಮಾಡಲಾಗಲಿಲ್ಲ.
- 2016–17ರಲ್ಲಿ ಶಿಕ್ಷಕರ ನಿಯೋಜನೆಯನ್ನು ಮಾಡಲಾಗಿದ್ದು ಅಧಿಕ ಶಿಕ್ಷಕರುಗಳಿರುವ ಶಾಲೆಗಳನ್ನು ಗುರುತಿಸಿದ್ದು ಶಿಕ್ಷಕರ ಅಗತ್ಯವಿರುವ ಶಾಲೆಗಳಿಗೆ ಮರುನಿಯೋಜನೆ ಮಾಡಲಾಗಿದೆ.
- ಪ್ರೌಢಶಾಲೆಗಳನ್ನು ಒಳಗೊಂಡು 15,000 ಶಿಕ್ಷಕರನ್ನು ನೇಮಕಾತಿ ಮಾಡಲು ಇಲಾಖೆಯಿಂದ ಅನುಮತಿ ಪಡೆಯಲಾಗಿದೆ.

ಉತ್ತರವನ್ನು ಭಾಗಶಃ ಒಪ್ಪಬಹುದಾದರೂ ಸಹ ಉನ್ನತ ಅರ್ಹತೆ ಹೊಂದಿರುವ ಮುಖ್ಯೋಪಾಧ್ಯಾಯರನ್ನು ಹೊಂದಲು ಸರ್ಕಾರವು ಪದವೃಂದ ಮತ್ತು ನೇಮಕಾತಿ ನಿಯಮಗಳು, 1965ನ್ನು ತಿದ್ದುಪಡಿ ಮಾಡುವ ಅಗತ್ಯವಿದೆ.

### *(ಇ) ಶಿಕ್ಷಕರ/ಮುಖ್ಯೋಪಾಧ್ಯಾಯರ ವಿದ್ಯಾರ್ಹತೆ*

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಎನ್‌ಸಿಟಿಇ) ಸೆಪ್ಟಂಬರ್ 2001ರಲ್ಲಿ ಜಾರಿ ಮಾಡಿದ ತನ್ನ ನಿಯಮಗಳ ಅನ್ವಯ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ಒಳಗೊಂಡಂತೆ ಶಾಲೆಗಳಲ್ಲಿನ ಶಿಕ್ಷಕರಾಗಿ ಕೆಲಸ ಮಾಡುವ ವ್ಯಕ್ತಿಯ ಅರ್ಹತೆಯನ್ನು ನಿಯಂತ್ರಿಸುತ್ತದೆ. ರಾಜ್ಯ ಸರ್ಕಾರದ ಶಾಲೆಗಳ ಶಿಕ್ಷಕರನ್ನು ರಾಜ್ಯ ಸರ್ಕಾರವು ನಿಯುಕ್ತಿ ಮಾಡುತ್ತದೆ. ಅನುದಾನಿತ ಶಾಲೆಗಳ ಸಂಬಂಧವಾಗಿ ಇಲಾಖೆಯು ಅನುಮೋದಿಸಿದ ನೇಮಕಾತಿ ಪ್ರಕ್ರಿಯೆಯನ್ನು ಅನುಸರಿಸಿದ ಬಳಿಕ ಸಂಬಂಧಪಟ್ಟ ಆಡಳಿತ ಮಂಡಳಿಯು

ಶಿಕ್ಷಕರನ್ನು ನೇಮಕಾತಿ ಮಾಡುತ್ತದೆ. ಖಾಸಗಿ ಶಾಲೆಗಳ ಸಂಬಂಧವಾಗಿ ಶಿಕ್ಷಕರನ್ನು ಸಂಬಂಧಪಟ್ಟ ಖಾಸಗಿ ಆಡಳಿತ ಮಂಡಳಿಯು ನೇಮಕಾತಿ ಮಾಡುತ್ತದೆ. ಸರ್ಕಾರಿ ಮತ್ತು ಖಾಸಗಿ ಆಡಳಿತ ಮಂಡಳಿಗಳು ಎನ್‌ಸಿಟಿಇ ನಿಯಮಗಳನ್ನು ಪಾಲಿಸಬೇಕು. ಕೆಳಗೆ ಚರ್ಚಿಸಿದಂತೆ, ಶಿಕ್ಷಕರ ನೇಮಕಾತಿಯಲ್ಲಿ ಎನ್‌ಸಿಟಿಇ ನಿಯಮಗಳನ್ನು ಪಾಲಿಸದಿರುವುದನ್ನು ನಾವು ಗಮನಿಸಿದೆವು.

- ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರ ನೇಮಕಾತಿಯನ್ನು ಜೂನ್ 2003ರಲ್ಲಿ ರಾಜ್ಯ ಸರ್ಕಾರವು ಹೊರಡಿಸಿದ ಪದವೃಂದ ಮತ್ತು ನೇಮಕಾತಿ (ಸಿ&ಆರ್) ನಿಯಮಗಳ ಮೂಲಕ ನಿಯಂತ್ರಿಸಲಾಗುತ್ತದೆ. ಆದರೆ, ಮೇಲಿನ ಸಿ&ಆರ್ ನಿಯಮಗಳು ಎನ್‌ಸಿಟಿಇ ನಿಗದಿಪಡಿಸಿದ ನಿಯಮಗಳಿಗೆ ಅನುಗುಣವಾಗಿರಲಿಲ್ಲ. ತತ್ಪರಿಣಾಮವಾಗಿ ಮಾರ್ಚ್-ಏಪ್ರಿಲ್ 2015ರಲ್ಲಿ ಅಧಿಸೂಚಿಸಿದ ರಾಜ್ಯ ಸರ್ಕಾರದ ನೇಮಕಾತಿ ಪ್ರಕ್ರಿಯೆಯು (1,137 ಸಹಾಯಕ ಶಿಕ್ಷಕರ ಶ್ರೇಣಿ ಮತ್ತು ದೈಹಿಕ ಶಿಕ್ಷಣ ಶಿಕ್ಷಕರು, ಆದರ್ಶ ವಿದ್ಯಾಲಯಗಳಿಗೆ 444 ಶಿಕ್ಷಕರು ಮತ್ತು ಉನ್ನತೀಕರಿಸಿದ ಶಾಲೆಗಳಿಗೆ 146 ಶಿಕ್ಷಕರು) ಎನ್‌ಸಿಟಿಇ ನಿಗದಿಪಡಿಸಿದ ಮಾನದಂಡಗಳಿಗೆ ಅನುಗುಣವಾಗಿರಲಿಲ್ಲ.
- ನಂತರ ರಾಜ್ಯ ಸರ್ಕಾರವು ಮಾರ್ಚ್ 2015ರಿಂದ ಪೂರ್ವಾನ್ವಯವಾಗುವಂತೆ ಸಿ&ಆರ್ ನಿಯಮಗಳನ್ನು ಪರಿಷ್ಕರಿಸಿತು (ಸೆಪ್ಟಂಬರ್ 2016). ಪರಿಷ್ಕೃತ ಸಿ&ಆರ್ ನಿಯಮಗಳು ಎನ್‌ಸಿಟಿಇ ನಿಗದಿಪಡಿಸಿದ ಗುಣಮಟ್ಟಗಳಿಗೆ ಭಾಗಶಃ ಅನುಗುಣವಾಗಿತ್ತು. ಸಿ&ಆರ್ ನಿಯಮಗಳ ಪರಿಷ್ಕರಣೆಗೆ ಮೊದಲೇ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದರಿಂದ ಸರ್ಕಾರಿ ಪ್ರೌಢಶಾಲೆಗಳಿಗೆ ನೇಮಕಾತಿ ಮಾಡಿದ ಏಳು ಶಿಕ್ಷಕರು ಮತ್ತು ಅನುದಾನಿತ ಖಾಸಗಿ ಪ್ರೌಢಶಾಲೆಗಳಿಗೆ ನೇಮಕಾತಿ ಮಾಡಿದ 20 ಶಿಕ್ಷಕರು (**ಅನುಬಂಧ-2.13**) ಎನ್‌ಸಿಟಿಇ ನಿಗದಿಪಡಿಸಿದ್ದಕ್ಕಿಂತ ಕಡಿಮೆ ಅರ್ಹತೆಯನ್ನು ಹೊಂದಿದ್ದರು.
- ಪರೀಕ್ಷಾ-ತನಿಖೆ ನಡೆಸಿದ 172 ಅನುದಾನರಹಿತ ಖಾಸಗಿ ಶಾಲೆಗಳಲ್ಲಿ, 3,163ರಲ್ಲಿ 647 ಬೋಧನಾ ಸಿಬ್ಬಂದಿ ಬಿ.ಎಡ್ ವಿದ್ಯಾರ್ಹತೆಯನ್ನು ಪಡೆದಿರಲಿಲ್ಲ.
- ಶಿಕ್ಷಣ ಇಲಾಖೆಯಲ್ಲಿನ ಮುಖ್ಯೋಪಾಧ್ಯಾಯರುಗಳ ನೇಮಕಾತಿಯನ್ನು ಸಿ&ಆರ್ ನಿಯಮಗಳು, 1965ರಿಂದ ನಿಯಂತ್ರಿಸಲಾಗುತ್ತದೆ ಮತ್ತು ಅದನ್ನು ಇದುವರೆವಿಗೂ ತಿದ್ದುಪಡಿ ಮಾಡಿರುವುದಿಲ್ಲ (ಅಕ್ಟೋಬರ್ 2018). ಆದರೆ, ಮೇಲೆ ಚರ್ಚಿಸಿದಂತೆ ರಾಜ್ಯ ಸರ್ಕಾರವು ಸೆಪ್ಟಂಬರ್ 2016ರಲ್ಲಿ ಸಿ&ಆರ್ ನಿಯಮಗಳನ್ನು ಪರಿಷ್ಕರಿಸಿತು ಮತ್ತು ಅದರಲ್ಲಿ ಶಿಕ್ಷಕರಿಗೆ ನಿಗದಿಪಡಿಸಲಾಗಿದ್ದ ವಿದ್ಯಾರ್ಹತೆಯು ಮುಖ್ಯೋಪಾಧ್ಯಾಯರಿಗೆ ನಿಗದಿಪಡಿಸಿದ ಅರ್ಹತೆಗಿಂತ ಹೆಚ್ಚಾಗಿದ್ದಿತು. ಹೀಗಾಗಿ, ಶಿಕ್ಷಕರಿಗಿಂತ ಕಡಿಮೆ ವಿದ್ಯಾರ್ಹತೆ ಇರುವ ಮುಖ್ಯೋಪಾಧ್ಯಾಯರ ನೇಮಕಾತಿಯನ್ನು ತಳ್ಳಿಹಾಕಲಾಗುವುದಿಲ್ಲ.

**ಶಿಫಾರಸು-6: ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಮಾನದಂಡಗಳಲ್ಲಿ ನಿಗದಿಪಡಿಸಿರುವಂತೆ ಶಿಕ್ಷಕರ ನೇಮಕಾತಿಯನ್ನು ಮಾಡಬೇಕು**

ಸರ್ಕಾರವು ಶಿಫಾರಸುಗಳನ್ನು ಒಪ್ಪಿಕೊಂಡಿತು.

### 2.1.9 ಪ್ರೌಢ ಶಿಕ್ಷಣದಲ್ಲಿ ಸಮಾನತೆ

ಶಿಕ್ಷಣದಲ್ಲಿ ಸಮಾನತೆಯನ್ನು ಒದಗಿಸಲು ಆರ್‌ಎಮ್‌ಎಸ್‌ಎ ಗುಂಪುಗಳಿಗೆ ಅಂದರೆ, ಬಾಲಕಿಯರು, ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಗಿರಿಜನ (ಎಸ್‌ಟಿ) ಮಕ್ಕಳು, ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರ ಸಮುದಾಯ ಮತ್ತು ವಿಕಲಚೇತನ ಮಕ್ಕಳಿಗೆ ವಿಶೇಷ ಗಮನ ನೀಡುತ್ತದೆ.

ಕರ್ನಾಟಕದ ಮುನ್ನೋಟ ಯೋಜನೆಯು 2017ರೊಳಗೆ ವಿಶೇಷ ಗುಂಪಿನಲ್ಲಿ ಶೇಕಡಾ 100ರ ಒಟ್ಟು ದಾಖಲಾತಿ ಅನುಪಾತವನ್ನು (ಜಿಇಆರ್) ಆಲೋಚಿಸಿತ್ತು. ರಾಜ್ಯದಲ್ಲಿ ಬಾಲಕಿಯರ ಜಿಇಆರ್ ಶೇಕಡಾ 83ರಷ್ಟಿತ್ತು ಮತ್ತು ಬಾಲಕರ ಜಿಇಆರ್‌ಗಿಂತ (ಶೇಕಡಾ 81.5) ಅಧಿಕವಾಗಿತ್ತು. ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳ ಜಿಇಆರ್ ಕ್ರಮವಾಗಿ ಶೇಕಡಾ 79 ಮತ್ತು 73ರಷ್ಟಿತ್ತು. ಹೀಗೆ, ಮುನ್ನೋಟ ಯೋಜನೆಯಲ್ಲಿ ಆಲೋಚಿಸಿದ್ದಂತೆ ಶೇಕಡಾ 100ರ ಜಿಇಆರ್ ಅನ್ನು ರಾಜ್ಯವು ಸಾಧಿಸದಿದ್ದರೂ ಸಹ ಅದು ವಿಶೇಷ ಗುಂಪು ಅಂದರೆ ಬಾಲಕಿಯರು ಮತ್ತು ಎಸ್‌ಸಿ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಗಣನೀಯ ಭಾಗವಹಿಸುವಿಕೆಯನ್ನು ಸಾಧಿಸಿತು. ಆದರೆ, ಎಸ್‌ಟಿ ಗುಂಪಿನಲ್ಲಿ ಮತ್ತಷ್ಟು ಮಧ್ಯಸ್ತಿಕೆಯ ಅವಶ್ಯಕತೆಯಿದೆ.

ರಾಜ್ಯವು ವಿಕಲಚೇತನ ಮಕ್ಕಳ ಸಂಬಂಧವಾಗಿ ಜಿಇಆರ್‌ಅನ್ನು ಲೆಕ್ಕ ಹಾಕಿಲ್ಲವಾದ್ದರಿಂದ ಅದು ಪ್ರೌಢ ಶಿಕ್ಷಣದಲ್ಲಿ ವಿಕಲಚೇತನ ಮಕ್ಕಳ ಭಾಗವಹಿಸುವಿಕೆಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲಾಗಲಿಲ್ಲ.

ಲೆಕ್ಕಪರಿಶೋಧನಾ ಅವಲೋಕನಗಳನ್ನು ಕೆಳಕಂಡ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *2.1.9.1 ಬಾಲಕಿಯರ ಶಿಕ್ಷಣ*

ಬಾಲಕಿಯರ ಶಿಕ್ಷಣವು ಆರ್‌ಎಮ್‌ಎಸ್‌ಎಯ ನಿರ್ಣಾಯಕ ಕೇಂದ್ರಬಿಂದುವಾಗಿದೆ. ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಬಾಲಕಿಯು ಶಾಲೆ ಬಿಡುವುದನ್ನು ಕಡಿಮೆ ಮಾಡಲು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಲಿಂಗ ಅಸಮಾನತೆಯನ್ನು ನಿವಾರಿಸಲು ರಾಜ್ಯ ಸರ್ಕಾರದ ಸಹಕಾರದೊಂದಿಗೆ ಭಾರತ ಸರ್ಕಾರವು ವಿದ್ಯಾರ್ಥಿನಿಲಯಗಳು/ವಸತಿ ಶಾಲೆಗಳು, ನಗದು ಉತ್ತೇಜನ, ಸಮವಸ್ತ್ರಗಳು, ಪುಸ್ತಕಗಳು, ಇತ್ಯಾದಿ ಹಲವಾರು ಯೋಜನೆಗಳನ್ನು ಪ್ರಾರಂಭಿಸಿತು.

### *(ಎ) ಬಾಲಕಿಯರ ವಿದ್ಯಾರ್ಥಿನಿಲಯ ಯೋಜನೆ*

ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳು (ಇಇಬಿ) ಮತ್ತು ಗುರಿಯಾಗಿಸಿರುವ ಗುಂಪುಗಳ ಸಾಂದ್ರತೆಯು ಸಮೀಪದಲ್ಲಿರುವ ಪ್ರದೇಶಗಳಲ್ಲಿ ವಿದ್ಯಾರ್ಥಿನಿಲಯಗಳು ಮತ್ತು ವಸತಿ ಮತ್ತು ಊಟದ ಸೌಕರ್ಯಗಳನ್ನು ಸ್ಥಾಪಿಸುವುದನ್ನು ಯೋಜನೆಯು ಆಲೋಚಿಸಿತ್ತು, ಅದರಿಂದ ಬಾಲಕಿಯರು ಸಾಮಾಜಿಕ ಕಾರಣಗಳಿಂದ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುವ ಅವಕಾಶವನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಮಾಧ್ಯಮಿಕ ಮತ್ತು ಪ್ರೌಢಶಾಲಾ ಶಿಕ್ಷಣಕ್ಕೆ ಹೆಚ್ಚಿನ ಸಂಖ್ಯೆಯ ಬಾಲಕಿಯರಿಗೆ ಪ್ರವೇಶಾವಕಾಶವನ್ನು ಒದಗಿಸುವುದು ಯೋಜನೆಯ ಇನ್ನೊಂದು ಉದ್ದೇಶವಾಗಿತ್ತು. ಕೆಳಕಂಡವುಗಳು ಲೆಕ್ಕಪರಿಶೋಧನಾ ಅವಲೋಕನಗಳಾಗಿದ್ದವು:

- ✓ ಪಿಎಬಿ ರಾಜ್ಯಕ್ಕೆ 74 ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು (2009-10ರಲ್ಲಿ 62 ಮತ್ತು 2013-14ರಲ್ಲಿ 12) ಮಂಜೂರು ಮಾಡಿತ್ತು, ಅವುಗಳಲ್ಲಿ 66 ವಿದ್ಯಾರ್ಥಿನಿಲಯಗಳು ತಾತ್ಕಾಲಿಕ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಉಳಿದ ಎಂಟು ವಿದ್ಯಾರ್ಥಿನಿಲಯಗಳು ಇನ್ನೂ ಕಾರ್ಯಾರಂಭ ಮಾಡಬೇಕಿದೆ. ಕಾರ್ಯ ನಿರ್ವಹಿಸುತ್ತಿದ್ದ 66 ವಿದ್ಯಾರ್ಥಿನಿಲಯಗಳಲ್ಲಿ 47ರಲ್ಲಿ ಕಟ್ಟಡಗಳ ನಿರ್ಮಾಣವು ಪೂರ್ಣಗೊಂಡರೂ ಸಹ ಅವುಗಳು ಶಾಶ್ವತ ಸ್ಥಳಗಳಿಗೆ ಇನ್ನೂ ಸ್ಥಳಾಂತರ ಗೊಂಡಿರಲಿಲ್ಲ.
- ✓ ಪರೀಕ್ಷಾ-ತನಿಖೆ ನಡೆಸಿದ ಏಳರಲ್ಲಿ ಐದು[25] ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ 100 ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಪ್ರತಿಯಾಗಿ ಎರಡು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ (ಹೊಳೆನರಸೀಪುರ-ಹಾಸನ, ಕೋಟಗಾಲ್-ಬೆಳಗಾವಿ) ಅಧಿಕ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗಿತ್ತು ಎಂದು ನಾವು ಗಮನಿಸಿದೆವು. ಮುಂದುವರೆದು, ಚಿಂಚೋಳಿಯಲ್ಲಿನ ವಿದ್ಯಾರ್ಥಿನಿಲಯದಲ್ಲಿ ಅಡಿಗೆ ಸ್ಟೋವ್ ಇರಲಿಲ್ಲವಾಗಿ ಸೌದೆಯನ್ನು ಉಪಯೋಗಿಸಿ ಆಹಾರವನ್ನು ತಯಾರಿಸಲಾಗುತ್ತಿತ್ತು. ಎಲ್ಲ ಐದು ವಿದ್ಯಾರ್ಥಿನಿಲಯಗಳಲ್ಲಿಯೂ ಆಹಾರವನ್ನು ತಯಾರಿಸಲು ಮತ್ತು ಸೇವಿಸಲು ಪಾತ್ರೆಗಳು ಸಾಕಷ್ಟಿರಲಿಲ್ಲ. ವಿದ್ಯಾರ್ಥಿನಿಲಯಗಳಿಗೆ ಮಂಚಗಳು, ಹಾಸಿಗೆಗಳು, ದಿಂಬುಗಳು, ಬೆಡ್‌ಶೀಟ್‌ಗಳು ಮುಂತಾದವುಗಳನ್ನು ಒದಗಿಸಬೇಕಿತ್ತು. ಆದರೆ, ಎಲ್ಲ ಐದು ವಿದ್ಯಾರ್ಥಿನಿಲಯಗಳಲ್ಲಿಯೂ ಮಕ್ಕಳಿಗೆ ಮೇಲಿನ ಸೌಕರ್ಯಗಳನ್ನು ಒದಗಿಸಿರಲಿಲ್ಲ. ತತ್ಪರಿಣಾಮವಾಗಿ ಮಕ್ಕಳು ಹಾಸಿಗೆಯಿಲ್ಲದೇ ನೆಲದ ಮೇಲೆ ಚಾಪೆಗಳ ಮೇಲೆ ಮಲಗುತ್ತಿದ್ದರು (**ಪ್ರದರ್ಶಿಕೆ-2.7**).

ಬಾಕಿ ಉಳಿದಿರುವ ಕಟ್ಟಡಗಳ ನಿರ್ಮಾಣವನ್ನು ಪೂರ್ಣಗೊಳಿಸಿ ಕಾರ್ಯಾರಂಭಗೊಳಿಸಲಾಗುವುದೆಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019).

**ಶಿಫಾರಸು-7: ವಿದ್ಯಾರ್ಥಿನಿಲಯಗಳಲ್ಲಿ ಅವಶ್ಯಕವಿರುವ ಎಲ್ಲ ಮೂಲ ಸೌಕರ್ಯಗಳನ್ನು ಒದಗಿಸಲು ಬಾಲಕಿಯರ ವಿದ್ಯಾರ್ಥಿನಿಲಯಗಳ ನಿರ್ಮಾಣವನ್ನು ಮೂಲಸೌಕರ್ಯಗಳೊಂದಿಗೆ ಲಭ್ಯತೆಯೊಂದಿಗೆ ಒಟ್ಟುಗೂಡಿಸಬೇಕು.**

[25] ಹೊಳೆನರಸೀಪುರ-ಹಾಸನ, ಕೋಟಗಾಲ್ ಮತ್ತು ಸವದತ್ತಿ-ಬೆಳಗಾವಿ ಮತ್ತು ಚಿಂಚೋಳಿ ಮತ್ತು ಭೀಮನಹಳ್ಳಿ-ಕಲಬುರಗಿ.

ಸರ್ಕಾರವು ಶಿಫಾರಸನ್ನು ಒಪ್ಪಿಕೊಂಡಿತು ಮತ್ತು ನಿರ್ಮಾಣದ ವೆಚ್ಚದ ಜೊತೆಗೆ ಮೂಲ ಸೌಕರ್ಯಗಳ ವೆಚ್ಚವನ್ನು ಸೇರಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿತು.

### *(ಬಿ) ಸ್ವರಕ್ಷಣೆ ತಂತ್ರದಿಂದ ಬಾಲಕಿಯರನ್ನು ಸಶಕ್ತಗೊಳಿಸುವುದು*

ಬಾಲಕಿಯರಲ್ಲಿ ಆತ್ಮವಿಶ್ವಾಸದ ಮಟ್ಟವನ್ನು ಹೆಚ್ಚಿಸುವ ಮತ್ತು ಆಪತ್ತನ್ನು ಎದುರಿಸಲು ಅವಶ್ಯಕ ಕೌಶಲ್ಯಗಳಿಂದ ಅವರನ್ನು ಸಜ್ಜುಗೊಳಿಸುವ ತನ್ನ ಪ್ರಯತ್ನದ ಭಾಗವಾಗಿ ಪ್ರೌಢಶಾಲಾ ಬಾಲಕಿಯರಿಗೆ ಸ್ವರಕ್ಷಣಾ ತರಗತಿಗಳನ್ನು ನಡೆಸಲಾಗುತ್ತಿತ್ತು. ಈ ಘಟಕದಡಿಯಲ್ಲಿ 2013-18ರ ಅವಧಿಯಲ್ಲಿ ಪಿಎಬಿ ₹10.4 ಕೋಟಿಗಳನ್ನು ಅನುಮೋದಿಸಿತ್ತು. ಶಾಲೆಗಳು ವೇಳಾಪಟ್ಟಿಯ ಆಧಾರದ ಮೇಲೆ ಸ್ವರಕ್ಷಣಾ ತರಗತಿಗಳನ್ನು ನಡೆಸಬೇಕಿತ್ತು. ವೇಳಾಪಟ್ಟಿಯ ಅನ್ವಯ ಶಾಲೆಗಳು ವಾರಕ್ಕೆ ಎರಡು ತರಗತಿಗಳನ್ನು ಮಾತ್ರ ನಡೆಸಬೇಕಿತ್ತು ಮತ್ತು ಆ ತರಗತಿಗಳನ್ನು ನಿಯಮಿತ ಶಾಲಾ ವೇಳೆಯಲ್ಲಿಯೇ ನಡೆಸಬೇಕಿತ್ತು. ಪರೀಕ್ಷಾ-ತನಿಖೆ ನಡೆಸಿದ ಶಾಲೆಗಳಲ್ಲಿ ಲೆಕ್ಕಪರಿಶೋಧನೆಯು ಬಾಲಕಿಯರಿಂದ ಪ್ರತಿಕ್ರಿಯೆಯನ್ನು ಪಡೆಯಿತು ಮತ್ತು ಪಡೆದ ಪ್ರತಿಕ್ರಿಯೆಯು ಸಕಾರಾತ್ಮಕವಾಗಿದ್ದು ಬಾಲಕಿಯರಲ್ಲಿ ಉತ್ತಮವಾಗಿ ಸ್ವೀಕರಿಸಲ್ಪಟ್ಟಿದೆ ಎಂಬುದನ್ನು ಸೂಚಿಸುತ್ತಿತ್ತು. ಆದರೆ, ಅನುಮೋದಿತ ವೇಳಾಪಟ್ಟಿಗಳು ಪಾವತಿ ಕ್ಲೇಮುಗಳ ಭಾಗವಾಗಿರಲಿಲ್ಲ ಮತ್ತು ಪರೀಕ್ಷಾ-ತನಿಖೆ ನಡೆಸಿದ ಎರಡು ಜಿಲ್ಲೆಗಳಲ್ಲಿ (ಹಾಸನ ಮತ್ತು ಬೆಳಗಾವಿ) ಭಾನುವಾರದಂದು ಕೂಡ ತರಗತಿಗಳನ್ನು ನಡೆಸಲಾಗಿತ್ತು ಎಂಬುದನ್ನು ನಾವು ಗಮನಿಸಿದೆವು. ಹಾಸನ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿನ ಪಾವತಿ ವೋಚರ್‌ಗಳು ಒಬ್ಬರೇ ಬೋಧಕರು ಒಂದೇ ಸಮಯದಲ್ಲಿ ಅನೇಕ ಶಾಲೆಗಳಲ್ಲಿ ದಿನಕ್ಕೆ ಎಂಟಕ್ಕಿಂತ ಹೆಚ್ಚಿನ ತರಗತಿಗಳನ್ನು ಮಾಡಿದ್ದರೆಂದು ತೋರಿಸಿರುವುದು ಅನುಮಾನಾಸ್ಪದ ಕ್ಲೈಮುಗಳನ್ನು ಮಾಡಿರುವುದನ್ನು ಸೂಚಿಸುತ್ತದೆ.

### *2.1.9.2 ವಿಶೇಷ ಅಗತ್ಯತೆಗಳಿರುವ ಮಕ್ಕಳಿಗೆ ಶಿಕ್ಷಣ*

ಶಿಕ್ಷಣಕ್ಕೆ ವಿಕಲಚೇತನ ಮಕ್ಕಳು ಮತ್ತು ಯುವಕರನ್ನು ಸೇರಿಸುವುದು ಮಾನವ ಹಕ್ಕು ಮಾತ್ರವಲ್ಲ, ಸಾಮಾಜಿಕ ಕೌಶಲ್ಯಗಳ ಅಭಿವೃದ್ಧಿಯನ್ನೂ ಸಹ ಉತ್ತೇಜಿಸುತ್ತದೆ ಎಂಬುದನ್ನು ಮನಗಂಡ ಭಾರತ ಸರ್ಕಾರವು ಪ್ರೌಢ ಹಂತದಲ್ಲಿ ವಿಕಲಚೇತನರಿಗೆ ಅಂತರ್ಗತ ಶಿಕ್ಷಣ (ಐಇಡಿಎಸ್‌ಎಸ್) ಎಂಬ ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯು ಎಂಟು ವರ್ಷಗಳ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿರುವ ಎಲ್ಲಾ ವಿಕಲಚೇತನ ಮಕ್ಕಳಿಗೆ ಒಂದು ಅಂತರ್ಗತ ಮತ್ತು ಸಕ್ರಿಯ ವಾತಾವರಣದಲ್ಲಿ ನಾಲ್ಕು ವರ್ಷಗಳ ಪ್ರೌಢ ಶಿಕ್ಷಣವನ್ನು (9ರಿಂದ 12ನೇ ತರಗತಿ) ಪೂರ್ಣಗೊಳಿಸುವ ಅವಕಾಶವನ್ನು ಒದಗಿಸುತ್ತದೆ. ಐಇಡಿಎಸ್‌ಎಸ್ ಸಾಮಾನ್ಯ ಶಾಲಾ ಶಿಕ್ಷಕರಿಗೆ ವಿಕಲಚೇತನ ಮಕ್ಕಳ ಅಗತ್ಯತೆಗಳನ್ನು ಪೂರೈಸುವ ತರಬೇತಿ ಕಾರ್ಯಕ್ರಮಗಳನ್ನೂ ಸಹ ಬೆಂಬಲಿಸುತ್ತದೆ ಮತ್ತು ಆರ್‌ಎಮ್‌ಎಸ್‌ಎಯ ಭಾಗವಾಗುತ್ತದೆ. ಎಲ್ಲ ಶಾಲೆಗಳೂ ವಿಕಲಚೇತನ ಸ್ನೇಹಿಯಾಗಿರಬೇಕು ಎಂದು ಯೋಜನೆಯು ನಿಗದಿಪಡಿಸುತ್ತದೆ.

ಐಇಡಿಎಸ್‌ಎಸ್ ಯೋಜನೆಯ ಅನುಷ್ಠಾನದ ಮೇಲಿನ ಲೆಕ್ಕಪರಿಶೋಧನಾ ಅವಲೋಕನಗಳನ್ನು ಕೆಳಗೆ ಚರ್ಚಿಸಲಾಗಿದೆ:

- ✓ ರಾಜ್ಯದ ಶಿಕ್ಷಣದಲ್ಲಿ 2013-18ರ ಅವಧಿಯಲ್ಲಿ ವಿಶೇಷ ಅಗತ್ಯತೆಗಳ ಅವಶ್ಯಕತೆಯಿರುವ ಮಕ್ಕಳ (ಸಿಡಬ್ಲ್ಯುಎಸ್‌ಎನ್) ದಾಖಲಾತಿಯ ವಿವರಗಳನ್ನು **ಕೋಷ್ಟಕ-2.9**ರಲ್ಲಿ ನೀಡಲಾಗಿದೆ.

**ಕೋಷ್ಟಕ-2.9: 2013-18ರ ಅವಧಿಯಲ್ಲಿ ಶಿಕ್ಷಣದಲ್ಲಿ ಸಿಡಬ್ಲ್ಯುಎಸ್‌ಎನ್ ದಾಖಲಾತಿ**

| ವರ್ಷ | 2013-14 | 2014-15 | 2015-16 | 2016-17 | 2017-18 |
|---|---|---|---|---|---|
| 2011ರ ಜನಗಣತಿಯ ಅನ್ವಯ ವಿಕಲ ಚೇತನರ ಸಂಖ್ಯೆ (5ರಿಂದ 19 ವರ್ಷಗಳು) | 3,30,781 (2011ರ ಜನಗಣತಿ ಅನ್ವಯ) | | | | |
| ಶಿಕ್ಷಣದಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ (6ರಿಂದ 16 ವರ್ಷಗಳು) | 1,32,467 | 1,25,039 | 1,19,734 | 93,251 | 1,01,276 |
| ಶೇಕಡಾವಾರು | 40 | 38 | 36 | 28 | 31 |

ಆಧಾರ: ಯು-ಡೈಸ್ ದತ್ತಾಂಶ

ಒಟ್ಟು ಸಿಡಬ್ಲ್ಯುಎಸ್‌ಎನ್ ಮಕ್ಕಳಿಗೆ ಶಾಲೆಗಳಲ್ಲಿ ದಾಖಲಾದ (ಪ್ರಾಥಮಿಕ ಮತ್ತು ಪ್ರೌಢ ಎರಡೂ) ಸಿಡಬ್ಲ್ಯುಎಸ್‌ಎನ್ ಮಕ್ಕಳ ಸಂಖ್ಯೆಯ ಅನುಪಾತವು ಇಳಿಮುಖವಾಗಿರುವುದನ್ನು ಕೋಷ್ಟಕದಿಂದ ನಾವು ಗಮನಿಸಬಹುದು. ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣಕ್ಕೆ

**ಪ್ರದರ್ಶಿಕೆ–2.7**
**ಬಾಲಕಿಯರ ವಿದ್ಯಾರ್ಥಿನಿಲಯದ ಸ್ಥಿತಿ**



ಆರ್‌ಎಮ್‌ಎಸ್‌ಎ ಬಾಲಕಿಯರ ವಿದ್ಯಾರ್ಥಿನಿಲಯ, ಚಿಂಚೋಳಿ, ಕಲಬುರಗಿ
ಸೌದೆಯನ್ನು ಉಪಯೋಗಿಸಿ ಆಹಾರವನ್ನು ತಯಾರಿಸುತ್ತಿರುವುದು



ಆರ್‌ಎಮ್‌ಎಸ್‌ಎ ಬಾಲಕಿಯರ ವಿದ್ಯಾರ್ಥಿನಿಲಯ, ಭೀಮಳ್ಳಿ, ಕಲಬುರಗಿ
ಮಂಚಗಳು, ಹಾಸಿಗೆ ಮತ್ತು ದಿಂಬುಗಳನ್ನು ಒದಗಿಸದಿರುವುದು



ಆರ್‌ಎಮ್‌ಎಸ್‌ಎ ಬಾಲಕಿಯರ ವಿದ್ಯಾರ್ಥಿನಿಲಯ, ಸವದತ್ತಿ, ಬೆಳಗಾವಿ
ಡೈನಿಂಗ್ ಟೇಬಲ್‌ಗಳು ಲಭ್ಯವಿಲ್ಲದಿರುವುದು

**ಪ್ರದರ್ಶಿಕೆ–2.8**
**ನಿಷ್ಕ್ರಿಯವಾದ ಸ್ನೇಹಪರವಲ್ಲದ ರ್‍ಯಾಂಪ್‌ಗಳು**



ರೈಲಿಂಗ್ ಇಲ್ಲದ ರ್‍ಯಾಂಪ್
ಸರ್ಕಾರಿ ಪ್ರೌಢಶಾಲೆ, ಬನ್ನೂರು, ಹಾಸನ



ಡಬಲ್ ರೈಲಿಂಗ್ ಇಲ್ಲದ ಮತ್ತು ಗಾಲಿಕುರ್ಚಿಯಿಂದ ಪ್ರವೇಶಿಸಲು ಸಾಧ್ಯವಾಗದ ರ್‍ಯಾಂಪ್, ಸರ್ಕಾರಿ ಪ್ರೌಢಶಾಲೆ, ಬೆಳಗಾವಿ



ಜಾರುತ್ತಿರುವ ಮತ್ತು ರೈಲಿಂಗ್ ಇಲ್ಲದ ರ್‍ಯಾಂಪ್
ಸರ್ಕಾರಿ ಪ್ರೌಢಶಾಲೆ, ಸೀಗೆ, ಹಾಸನ

ಇಲಾಖೆಯಿಂದ ಯಾವುದೇ ಸಮೀಕ್ಷೆಯು ಇಲ್ಲದಿದ್ದುದರಿಂದ ರಾಜ್ಯದಲ್ಲಿ 13ರಿಂದ 18 ವರ್ಷಗಳ ವಯೋಮಾನದ ಜನಸಂಖ್ಯೆಯು ಲಭ್ಯವಿರಲಿಲ್ಲ. ಆದ್ದರಿಂದ ಪ್ರೌಢ ಶಿಕ್ಷಣದಲ್ಲಿ ಸಿಡಬ್ಲ್ಯುಎಸ್‌ಎನ್ ಮಕ್ಕಳ ಮೇಲೆ ಲೆಕ್ಕಪರಿಶೋಧನೆಯು ಅರ್ಥಪೂರ್ಣ ಅವಲೋಕನ ಅಥವಾ ತೀರ್ಮಾನಕ್ಕೆ ಬರಲು ಸಾಧ್ಯವಾಗಲಿಲ್ಲ.

- ✓ ವಿಕಲಚೇತನರ (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 ವಿಕಲಚೇತನ ವ್ಯಕ್ತಿಗಳಿಗೆ ಮುಕ್ತ ವಾತಾವರಣವನ್ನು ಕಲ್ಪಿಸುವ ಮತ್ತು ಮುಖ್ಯ ವಾಹಿನಿಗೆ ವಿಕಲಚೇತನರ ಸಂಯೋಜನೆಗೆ ವಿಶೇಷ ನಿಬಂಧನೆಗಳನ್ನು ಮಾಡಲು ಸರ್ಕಾರಗಳಿಗೆ ಆದೇಶಿಸುತ್ತದೆ. ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ತಮ್ಮ ಆರ್ಥಿಕ ಸಾಮರ್ಥ್ಯದ ವ್ಯಾಪ್ತಿಯಲ್ಲಿ ಗಾಲಿಕುರ್ಚಿ ಬಳಕೆದಾರರು ಪಾದಚಾರಿ ರಸ್ತೆಗಳಲ್ಲಿ ಸುಲಭವಾಗಿ ಪ್ರವೇಶಿಸಲು ಅಂಚುಗಳನ್ನು ಮತ್ತು ಇಳಿಜಾರುಗಳನ್ನು ಮಾಡಬೇಕು ಮತ್ತು ಸೂಕ್ತ ಸ್ಥಳಗಳಲ್ಲಿ ಅಂಗವಿಕಲತೆ ಮತ್ತು ಎಚ್ಚರಿಕೆ ಸಂಕೇತಗಳನ್ನು ರೂಪಿಸಲು ಅದು ಆದೇಶಿಸುತ್ತದೆ. ಶಾಲೆಗಳಿಗೆ ಪ್ರವೇಶಾವಕಾಶ ಸಾಧ್ಯತೆಯು ವಿಕಲಚೇತನ ಮಕ್ಕಳಿಗೆ ಸಮಾನ ಅವಕಾಶವನ್ನು ಒದಗಿಸುತ್ತದೆ.

  ಪ್ರವೇಶಿಸಬಹುದಾದ ಶಾಲಾಕೊಠಡಿಗಳು, ವಿದ್ಯಾರ್ಥಿನಿಲಯಗಳು, ಪ್ರಯೋಗಶಾಲೆಗಳು ಮತ್ತು ಆಟದ ಮೈದಾನಗಳಲ್ಲಿ ಇಳಿಜಾರುಗಳು ಮತ್ತು ವಿಕಲಚೇತನ ಸ್ನೇಹಿ ಶೌಚಾಲಯಗಳನ್ನು ನಿರ್ಮಿಸುವುದಕ್ಕೆ ಆರ್‌ಎಮ್‌ಎಸ್‌ಎ ಚೌಕಟ್ಟು ನಿಗದಿಪಡಿಸಿತ್ತು. ಆದರೆ, ತಡೆಮುಕ್ತ ಪ್ರವೇಶದ ಕಲ್ಪನೆಯು ಕೇವಲ ಇಳಿಜಾರುಗಳನ್ನು ಒದಗಿಸುವುದಕ್ಕೆ ಮಾತ್ರ ಸೀಮಿತವಾಗಿದ್ದಿತು ಮತ್ತು ತಡೆಮುಕ್ತ ಶಾಲಾ ಪರಿಸರದ ಕಲ್ಪನೆಯನ್ನು ಪರಿಗಣಿಸಿರಲಿಲ್ಲ. ಪರೀಕ್ಷಾ-ತನಿಖೆ ನಡೆಸಿದ ಐದು[26] ಜಿಲ್ಲೆಗಳ 121 ಶಾಲೆಗಳ ಮೌಲ್ಯಮಾಪನವು ಈ ಅಂಶವನ್ನು ಖಚಿತಪಡಿಸಿತು (**ನಕ್ಷೆ–2.4**).

**ನಕ್ಷೆ–2.4: ಶಾಲೆಗಳಲ್ಲಿ ತಡೆಮುಕ್ತ ವಾತಾವರಣ**




- ✓ ಶಾಲೆಗಳಲ್ಲಿ ಇಳಿಜಾರುಗಳು ಮತ್ತು ವಿಕಲಚೇತನ ಸ್ನೇಹಿ ಶೌಚಾಲಯ ಸಂಬಂಧವಾಗಿ 15,666 ಪ್ರೌಢಶಾಲೆಗಳಲ್ಲಿ 10,047 ಶಾಲೆಗಳು ವಿಕಲಚೇತನ ಸ್ನೇಹಿ ಶೌಚಾಲಯಗಳನ್ನು ಮತ್ತು 11,162 ಶಾಲೆಗಳು ಇಳಿಜಾರುಗಳನ್ನು ಹೊಂದಿರಲಿಲ್ಲ ಎಂದು ನಾವು ಗಮನಿಸಿದೆವು. 4,504 ಶಾಲೆಗಳಲ್ಲಿ ಇಳಿಜಾರುಗಳು ಇದ್ದರೂ ಸಹ ಅವುಗಳ ವಿಕಲಚೇತನ ಮಕ್ಕಳ ಅವಶ್ಯಕತೆಗಳನ್ನು ಪೂರೈಸಿರಲಿಲ್ಲ. ಪರೀಕ್ಷಾ-ತನಿಖೆ ನಡೆಸಿದ ಜಿಲ್ಲೆಗಳಲ್ಲಿ ನಿರ್ಮಿಸಿದ ಇಳಿಜಾರುಗಳು 1:12ರ ಅನುಪಾತದಲ್ಲಿ ಇರಲಿಲ್ಲ, ಎರಡು ರೈಲಿಂಗ್‌ಗಳನ್ನು ಹೊಂದಿರಲಿಲ್ಲ, ಗಾಲಿಕುರ್ಚಿಯ ಮೂಲಕ ಪ್ರವೇಶಿಸಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಜಾರುವಂತಹ ವಸ್ತುಗಳನ್ನು ಬಳಸಿ ನಿರ್ಮಿಸಲಾಗಿತ್ತು ಎಂಬುದನ್ನು ನಾವು ಗಮನಿಸಿದೆವು (**ಪ್ರದರ್ಶಿಕೆ–2.8**).
- ✓ ಪ್ರೌಢ ಮಟ್ಟದಲ್ಲಿ ಅಂಗವೈಕಲ್ಯ ಹೊಂದಿರುವ ಪ್ರತಿಯೊಂದು ಮಗುವನ್ನೂ ಗುರುತಿಸಿ ಆ ಮಗುವಿನ ಶೈಕ್ಷಣಿಕ ಅಗತ್ಯತೆಗಳನ್ನು ನಿರ್ಧರಣೆ ಮಾಡಲು ಆರ್‌ಎಮ್‌ಎಸ್‌ಎ ಆಲೋಚಿಸಿತ್ತು. ಅಂತಹ ವಿದ್ಯಾರ್ಥಿಗಳಿಗೆ ವಿಶೇಷ ಬೋಧಕರಂತಹ ಬೆಂಬಲ ಸೇವೆಗಳನ್ನು ಒದಗಿಸಬೇಕಿತ್ತು. ವಿಶೇಷ ಶಿಕ್ಷಕರಿಗಾಗಿ ಬಿಡುಗಡೆ ಮಾಡಿದ ₹21.20 ಕೋಟಿಯನ್ನು, ಶಿಕ್ಷಕರ ನೇಮಕಾತಿಯನ್ನು ಮಾಡಿಲ್ಲದಿದ್ದರಿಂದ ರಾಜ್ಯದಲ್ಲಿ 2013–14ರಿಂದ 2017–18ರ ಅವಧಿಯಲ್ಲಿ ಬಳಸಿಕೊಂಡಿರಲಿಲ್ಲ.

[26] ಬೆಳಗಾವಿ, ಬೆಂಗಳೂರು (ಉತ್ತರ), ಹಾಸನ, ಕಲಬುರಗಿ ಮತ್ತು ಯಾದಗಿರಿ.

ಪರೀಕ್ಷಾ-ತನಿಖೆ ನಡೆಸಿದ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಜಿಲ್ಲೆಯು ಸಿಡಬ್ಲ್ಯುಎಸ್ಎನ್ ಮಕ್ಕಳನ್ನು ಗುರುತಿಸಿತ್ತು ಹಾಗೂ 2013-18ರ ಅವಧಿಗೆ ವಿಶೇಷ ಶಿಕ್ಷಕರ ಅಗತ್ಯತೆಯನ್ನು ನಿರ್ಧರಣೆ ಮಾಡಿತ್ತು ಎಂಬುದನ್ನು ಗಮನಿಸಲಾಯಿತು. ನೇಮಕಾತಿಗೆ ಪ್ರತಿ ವರ್ಷವೂ ಎಸ್‌ಪಿಒಗೆ ಪ್ರಸ್ತಾವನೆಗಳನ್ನು ಸಲ್ಲಿಸಿದರೂ ಸಹ ಅವರ ನೇಮಕಾತಿಗೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ.

- ✓ ಮೌಲ್ಯಮಾಪನದ ಆಧಾರದ ಮೇಲೆ ಸಹಾಯಕ ಸಾಧನಗಳು ಅಗತ್ಯವಿರುವ ಎಲ್ಲಾ ಮಕ್ಕಳಿಗೂ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ರಾಜ್ಯ ಕಲ್ಯಾಣ ಇಲಾಖೆಗಳು, ರಾಷ್ಟ್ರೀಯ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳು/ಎನ್‌ಜಿಒಗಳು ಮುಂತಾದವುಗಳ ಸಹಯೋಗದೊಂದಿಗೆ ಸಾಧನಗಳು ಮತ್ತು ಉಪಕರಣಗಳನ್ನು ಒದಗಿಸಬೇಕು.

ಪರೀಕ್ಷಾ-ತನಿಖೆ ನಡೆಸಿದ ಬೆಳಗಾವಿ ಜಿಲ್ಲೆಯಲ್ಲಿ 2016-18ರ ನಡುವೆ ನಡೆದ ವೈದ್ಯಕೀಯ ಕ್ಯಾಂಪ್‌ಗಳಲ್ಲಿ 232 ಮಕ್ಕಳನ್ನು ಸಾಧನ ಮತ್ತು ಉಪಕರಣಗಳ ಅಗತ್ಯತೆ ಇರುವ ಮಕ್ಕಳೆಂದು ಹಾಗೂ 21 ಮಕ್ಕಳನ್ನು ಶಸ್ತ್ರಚಿಕಿತ್ಸೆಗಳ ಅಗತ್ಯವಿರುವವರೆಂದು ಗುರುತಿಸಲಾಯಿತು. ಆದರೆ, ಕೇವಲ 88 ಮಕ್ಕಳಿಗೆ ಸಾಧನ ಮತ್ತು ಉಪಕರಣಗಳನ್ನು ಒದಗಿಸಲಾಗಿತ್ತು ಮತ್ತು ಗುರುತಿಸಿದ್ದ 21 ಮಕ್ಕಳಿಗೆ ಯಾವುದೇ ಶಸ್ತ್ರಚಿಕಿತ್ಸೆ ನಡೆಸಲಾಗಿರಲಿಲ್ಲ. ಅಲ್ಲದೆ, 88 ಮಕ್ಕಳಿಗೆ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಸಾಧನ ಮತ್ತು ಉಪಕರಣಗಳನ್ನು ವಿತರಿಸಲಾಗಿತ್ತು. ಕಲಬುರಗಿ ಮತ್ತು ಹಾಸನದಲ್ಲಿ ಸಾಧನ ಮತ್ತು ಉಪಕರಣಗಳಿಗಾಗಿ ವೈದ್ಯಕೀಯ ಕ್ಯಾಂಪ್‌ಗಳಲ್ಲಿ ಡಾಕ್ಟರ್‌ರವರ ಶಿಫಾರಸು ಮತ್ತು ಅವುಗಳನ್ನು ನೀಡಿರುವುದಕ್ಕೆ ಯಾವುದೇ ದಾಖಲೆಗಳು ಲಭ್ಯವಿರಲಿಲ್ಲ. ಬೆಂಗಳೂರು (ದಕ್ಷಿಣ) ದಲ್ಲಿ ಆರ್‌ಎಮ್‌ಎಸ್‌ಎಎಸ್‌ಕೆ 2017-18ರ ವರ್ಷದ ಸಾಧನ ಮತ್ತು ಉಪಕರಣಗಳನ್ನು ಇದುವರೆಗೂ (ಆಗಸ್ಟ್ 2018) ಇನ್ನೂ ಖರೀದಿ ಮಾಡಿರಲಿಲ್ಲ.

**ಶಿಫಾರಸು-8: ಎಲ್ಲ ಶಾಲೆಗಳಲ್ಲಿಯೂ ಇಳಿಜಾರುಗಳನ್ನು ಮತ್ತು ವಿಕಲಚೇತನ-ಸ್ನೇಹಿ ಶೌಚಾಲಯಗಳನ್ನು ಒದಗಿಸಬೇಕು.**

ಸಂಪನ್ಮೂಲಗಳ ಲಭ್ಯತೆಯ ಮೇರೆಗೆ ಅನುಷ್ಠಾನವನ್ನು ಮಾಡಲಾಗುವುದು ಎಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019).

ಆರ್‌ಎಮ್‌ಎಸ್‌ಎ ಅಡಿಯಲ್ಲಿ ರಾಜ್ಯದಲ್ಲಿ ವಿಶೇಷ ಅಗತ್ಯತೆಗಳ ಅವಶ್ಯಕತೆಯಿರುವ ಮಕ್ಕಳ ಶಿಕ್ಷಣಕ್ಕೆ ಆದ್ಯತೆಯನ್ನು ನೀಡಲಾಗಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

### *2.1.9.3 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗಗಳ/ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರ ಮಕ್ಕಳ ಶಿಕ್ಷಣ*

ಪರಿಶಿಷ್ಟ ಜಾತಿ (ಎಸ್‌ಸಿ)/ಪರಿಶಿಷ್ಟ ಪಂಗಡ (ಎಸ್‌ಟಿ)/ಇತರೆ ಹಿಂದುಳಿದ ವರ್ಗಗಳ(ಒಬಿಸಿ)/ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯು ಆರ್‌ಎಮ್‌ಎಸ್‌ಎ ಅಡಿಯಲ್ಲಿ ವಿಶೇಷವಾಗಿ ಕೇಂದ್ರೀಕೃತವಾಗಿತ್ತು. ಈ ಯೋಜನೆಯಡಿ ಗುರುತಿಸಲಾದ ಮಧ್ಯಸ್ಥಿಕೆಯು ಸರ್ಕಾರಿ ಶಾಲೆಗಳ ಸ್ಥಾಪನೆ, ವಿದ್ಯಾರ್ಥಿನಿಲಯಗಳ ಸೌಲಭ್ಯ ಹಾಗೂ ವಿದ್ಯಾರ್ಥಿವೇತನವನ್ನು ಒದಗಿಸುವುದು ಇತ್ಯಾದಿಗಳ ಜೊತೆಗೆ ತೀವ್ರವಾದ ಸೂಕ್ಷ್ಮ ಯೋಜನೆ ಆಧಾರಿತವಾಗಿರಬೇಕು. ರಾಜ್ಯ ಸರ್ಕಾರವು ಶಿಕ್ಷಣ ಇಲಾಖೆಯಡಿಯಲ್ಲಿನ ವಿವಿಧ ಕಾರ್ಯಕ್ರಮಗಳ ಮೂಲಕ ಹಾಗೂ ಸಮಾಜಕಲ್ಯಾಣ ಇಲಾಖೆಯಿಂದ ಎಸ್‌ಸಿ/ಎಸ್‌ಟಿ/ಒಬಿಸಿ ಮತ್ತು ಇತರೆ ಅಲ್ಪಸಂಖ್ಯಾತರ ಅನುಕೂಲಕ್ಕಾಗಿ ಶಾಲೆಗಳನ್ನು ಮತ್ತು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿತ್ತು. ಸಮಾಜಕಲ್ಯಾಣ ಇಲಾಖೆಯ ಮೂಲಕ ವಿದ್ಯಾರ್ಥಿವೇತನದ ಯೋಜನೆಯನ್ನೂ ಸಹ ಅನುಷ್ಠಾನಗೊಳಿಸಲಾಗಿತ್ತು. ಮೇಲಿನ ಯೋಜನೆಗಳ ಅನುಷ್ಠಾನಕ್ಕಾಗಿ ರಾಜ್ಯವು ಸರಿಸುಮಾರು ₹4,185 ಕೋಟಿ ವೆಚ್ಚವನ್ನು ಭರಿಸುತ್ತಿತ್ತು.

ಸಮಾಜಕಲ್ಯಾಣ ಇಲಾಖೆಯು ನಿರ್ವಹಿಸುತ್ತಿರುವ ಆಯ್ದ 11 ಶಾಲೆಗಳಲ್ಲಿ ಲೆಕ್ಕಪರಿಶೋಧನೆಯು ಪರಿಶೀಲನೆ ನಡೆಸಿತು ಮತ್ತು ಆಯ್ದ ಯಾವ ಶಾಲೆಯೂ ಆರ್‌ಎಮ್‌ಎಸ್‌ಎ ಅಡಿಯಲ್ಲಿ ನಿಗದಿಪಡಿಸಿದ್ದ ಅಗತ್ಯವಿರುವ ಮೂಲಸೌಕರ್ಯಗಳ ಮಟ್ಟವನ್ನು ಹೊಂದಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಇವುಗಳಲ್ಲಿ, ನಾಲ್ಕು ಶಾಲೆಗಳು ಹತ್ತಿರದ ಶಾಲೆಗಳ ಶಾಲಾ ಮತ್ತು ವಸತಿ ಸೌಲಭ್ಯಗಳನ್ನು ಹಂಚಿಕೊಳ್ಳುತ್ತಿದ್ದವು. ತತ್ಪರಿಣಾಮವಾಗಿ, ಈ ಶಾಲೆಗಳಲ್ಲಿನ ಮಕ್ಕಳ ಸಂಖ್ಯೆಯು ಲಭ್ಯವಿದ್ದ ಸಾಮರ್ಥ್ಯಕ್ಕಿಂತ

ಅಧಿಕವಾಗಿದ್ದಿತು. ಹೀಗೆ, ಲಭ್ಯವಿದ್ದ ಶಾಲಾ ಕೊಠಡಿಗಳನ್ನು ಹಗಲಿನ ಸಮಯದಲ್ಲಿ ಬೋಧನೆ ಮತ್ತು ಕಲಿಕೆಗಾಗಿ ಹಾಗೂ ರಾತ್ರಿಯ ಸಮಯದಲ್ಲಿ ವಸತಿಗಾಗಿ ಬಳಸಿಕೊಳ್ಳಲಾಗುತ್ತಿತ್ತು.

ಸಮಾಜಕಲ್ಯಾಣ ಇಲಾಖೆಯೊಂದಿಗೆ ಒಮ್ಮುಖವಾಗುವುದು ಅತ್ಯಂತ ಮಹತ್ವದ ವಿಷಯವಾಗಿದೆ. ಆದರೆ, ಕಂಡಿಕೆ 2.1.12.1(ಡಿ) ಮತ್ತು 2.1.12.2ರಲ್ಲಿ ಚರ್ಚಿಸಿದಂತೆ, ಆರ್‌ಎಮ್‌ಎಸ್‌ಎಎಸ್‌ಕೆ ಇದನ್ನು ಖಚಿತಪಡಿಸಿಕೊಳ್ಳಲಿಲ್ಲ.

## 2.1.10 ಇತರೆ ಘಟಕಗಳು

### *2.1.10.1 ವೃತ್ತಿಪರ ಶಿಕ್ಷಣ*

ಬೇಡಿಕೆ ಚಾಲಿತ, ಸಾಮರ್ಥ್ಯ ಆಧಾರಿತ ಮಾಡ್ಯುಲರ್ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಮೂಲಕ ಯುವಕರ ಉದ್ಯೋಗ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಅದೇ ಸಮಯದಲ್ಲಿ ಪ್ರೌಢ ಹಂತದಲ್ಲಿ ಶಾಲೆ ಬಿಡುವವರನ್ನು ಕಡಿಮೆ ಮಾಡುವುದು ಮಾಧ್ಯಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ವೃತ್ತಿಪರ ಶಿಕ್ಷಣವನ್ನು ಪರಿಚಯಿಸುವ ಉದ್ದೇಶವಾಗಿತ್ತು. ನಾಲ್ಕು ರಾಷ್ಟ್ರೀಯ ಉದ್ಯೋಗ ಮಾನದಂಡಗಳಲ್ಲಿ ವೃತ್ತಿಪರ ಶಿಕ್ಷಣವನ್ನು ಅಂದರೆ ಆಟೋಮೊಬೈಲ್ (ಸೇವಾ ತಂತ್ರಜ್ಞತೆ), ಐಟಿ ಮತ್ತು ಐಟಿಇಎಸ್ (ಐಟಿ ಸೇವಾ ಡೆಸ್ಕ್ ಅಟೆಂಡೆಂಟ್), ರೀಟೇಲ್ (ಸೇಲ್ಸ್ ಅಸೋಸಿಯೇಟ್) ಮತ್ತು ಭದ್ರತೆ (ನಿರಾಯುಧ ಸೆಕ್ಯುರಿಟಿ ಗಾರ್ಡ್), ಇವುಗಳನ್ನು ಪರಿಚಯಿಸಲು 250 ಶಾಲೆಗಳನ್ನು ಪಿಎಬಿ ಅನುಮೋದಿಸಿತು (2012–13) ಮತ್ತು ₹134.26 ಕೋಟಿಗಳನ್ನು ಹಂಚಿಕೆ ಮಾಡಿತು. ವೃತ್ತಿಪರ ಶಿಕ್ಷಣದ ಅನುಷ್ಠಾನಕ್ಕಾಗಿ, ಮಾರ್ಚ್ 2018ರಲ್ಲಿದ್ದಂತೆ ಭಾರತ ಸರ್ಕಾರವು ₹22.44 ಕೋಟಿಗಳನ್ನು ಬಿಡುಗಡೆ ಮಾಡಿದರೆ ರಾಜ್ಯ ಸರ್ಕಾರವು ₹10.18 ಕೋಟಿಗಳನ್ನು ಬಿಡುಗಡೆ ಮಾಡಿತು. ಈ ಸಂಬಂಧವಾಗಿ ನಾವು ಕೆಳಕಂಡಂತೆ ಗಮನಿಸಿದೆವು:

- ✓ ವೃತ್ತಿಪರ ಶಿಕ್ಷಣವನ್ನು 9ರಿಂದ 12ನೆಯ ತರಗತಿಯವರೆಗೆ ನೀಡಲು ಉದ್ದೇಶಿಸಲಾಗಿತ್ತು, ಆದ್ದರಿಂದ ಪ್ರಸ್ತಾವಿತ ಶಾಲೆಗಳು ಪ್ರೌಢ ಮತ್ತು ಪದವಿಪೂರ್ವ ತರಗತಿಗಳೆರಡನ್ನೂ ಹೊಂದಿರಬೇಕಿತ್ತು. ರಾಜ್ಯದಲ್ಲಿ ಪ್ರಸ್ತಾವಿಸಿದ 250 ಶಾಲೆಗಳಿಗೆ ಪ್ರತಿಯಾಗಿ 119 ಶಾಲೆಗಳು ಕೇವಲ ಪ್ರೌಢಶಾಲೆ ಅಥವಾ ಪದವಿಪೂರ್ವ ಕಾಲೇಜುಗಳಾಗಿದ್ದರಿಂದ ಪಿಎಬಿ ಅವುಗಳನ್ನು ರದ್ದುಗೊಳಿಸಿತು. ಉಳಿದ 131 ಶಾಲೆಗಳಲ್ಲಿ 2014–15ರಿಂದ ಆರ್‌ಎಮ್‌ಎಸ್‌ಎಎಸ್‌ಕೆ ಕೇವಲ 100 ಶಾಲೆಗಳಲ್ಲಿ ವೃತ್ತಿಪರ ಶಿಕ್ಷಣವನ್ನು ಅನುಷ್ಠಾನಗೊಳಿಸಿತು. ಅಲ್ಲದೆ, ಈ ಶಾಲೆಗಳಿಗೆ ಅದು ಪ್ರಯೋಗಶಾಲಾ ಉಪಕರಣಗಳನ್ನು ಖರೀದಿಸಿರಲಿಲ್ಲ. ಹೀಗಾಗಿ, ಆರ್‌ಎಮ್‌ಎಸ್‌ಎಎಸ್‌ಕೆ ಯೋಜನೆಗಾಗಿ ಬಿಡುಗಡೆ ಮಾಡಿದ್ದ ₹32.62 ಕೋಟಿಯಲ್ಲಿ ₹13.18 ಕೋಟಿಯನ್ನು ಬಳಸಿಕೊಳ್ಳಲಾಗಲಿಲ್ಲ.
- ✓ ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡಿ ಕಲಿತುಕೊಂಡಿರುವ ಕೌಶಲ್ಯಗಳಲ್ಲಿ ಅವರ ಪ್ರಾವೀಣ್ಯತೆಯನ್ನು ಸೂಚಿಸುವ ಪ್ರಮಾಣಪತ್ರಗಳನ್ನು ನೀಡಬೇಕಿತ್ತು. ಆದರೆ, ಆರ್‌ಎಮ್‌ಎಸ್‌ಎಎಸ್‌ಕೆ 2014–15 ಮತ್ತು 2015–16ರ ಅವಧಿಯಲ್ಲಿ ಅಂತಹ ಯಾವುದೇ ಮೌಲ್ಯಮಾಪನವನ್ನು ಮಾಡಿರಲಿಲ್ಲ. 2016–17 ಮತ್ತು 2017–18ರ ಅವಧಿಯಲ್ಲಿ ಅದು ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಿದ್ದರೂ ಸಹ ಪ್ರಮಾಣಪತ್ರಗಳನ್ನು ನೀಡಿರಲಿಲ್ಲ. ಹೀಗೆ, ಎಲ್ಲ ನಾಲ್ಕು ವರ್ಷಗಳಲ್ಲಿ ವಿದ್ಯಾರ್ಥಿಗಳು ಪಡೆದುಕೊಂಡ ಕೌಶಲ್ಯಗಳಲ್ಲಿನ ಪ್ರಾವೀಣ್ಯತೆಯನ್ನು ನಿರ್ಣಯಿಸಲಾಗಲಿಲ್ಲ.
- ✓ ಪರೀಕ್ಷಾ–ತನಿಖೆ ನಡೆಸಿದ 121 ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನವನ್ನು ಒದಗಿಸಲು ಇರುವ ಮಾರ್ಗದರ್ಶನ ಸಾಮಗ್ರಿಗಳ ಲಭ್ಯತೆಯನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಿತು ಮತ್ತು 106 ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅಂತಹ ಯಾವುದೇ ಮಾರ್ಗದರ್ಶನವನ್ನು ನೀಡಿರಲಿಲ್ಲ ಎಂದು ತಿಳಿದುಬಂದಿತು.

ಹೀಗೆ, ರಾಜ್ಯದಲ್ಲಿ ವೃತ್ತಿ ಶಿಕ್ಷಣ ಪರಿಚಯದ ಅನುಚಿತ ಅನುಷ್ಠಾನವು ವಿದ್ಯಾರ್ಥಿಗಳ ಉದ್ಯೋಗ ಸಾಮರ್ಥ್ಯವನ್ನು ಹೆಚ್ಚಿಸುವ ಅಪೇಕ್ಷಿತ ಉದ್ದೇಶವನ್ನು ಪೂರ್ಣಗೊಳಿಸುವ ಸಾಧ್ಯತೆಯಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಯೋಜನೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ಉದ್ಯೋಗ ಮತ್ತು ತರಬೇತಿ ಹಾಗೂ ಕೌಶಲಾಭಿವೃದ್ಧಿ ನಿರ್ದೇಶನಾಲಯದೊಂದಿಗೆ ನಿಕಟವಾಗಿ ಕೆಲಸ ಮಾಡಲು ತಾನು ಯೋಜಿಸುತ್ತಿರುವುದಾಗಿ ಸರ್ಕಾರವು ಉತ್ತರಿಸಿತು (ಫೆಬ್ರವರಿ 2019).

### *2.1.10.2 ಮಾದರಿ ಶಾಲೆಗಳು*

ಭಾರತ ಸರ್ಕಾರದ ಮಾದರಿ ಶಾಲೆಗಳ ಯೋಜನೆಯ ಅನ್ವಯ ಮಾದರಿ ಶಾಲೆಯು ಕನಿಷ್ಠ ಕೇಂದ್ರೀಯ ವಿದ್ಯಾಲಯದ (ಕೆವಿ) ಗುಣಮಟ್ಟವಿರುವ ಮೂಲಸೌಕರ್ಯ ಮತ್ತು ಸೌಲಭ್ಯಗಳನ್ನು ಹೊಂದಿರಬೇಕು ಮತ್ತು ವಿದ್ಯಾರ್ಥಿ-ಶಿಕ್ಷಕರ ಅನುಪಾತ, ಐಸಿಟಿ ಬಳಕೆ, ಸಮಗ್ರ ಶೈಕ್ಷಣಿಕ ವಾತಾವರಣ, ಸೂಕ್ತ ಪಠ್ಯಕ್ರಮ ಮತ್ತು ಉತ್ಪಾದನೆ ಮತ್ತು ಫಲಿತಾಂಶಕ್ಕೆ ಒತ್ತು ನೀಡಿರಬೇಕು. ಭಾರತ ಸರ್ಕಾರವು ಕರ್ನಾಟಕದ ಶೈಕ್ಷಣಿಕವಾಗಿ ಹಿಂದುಳಿದ ಕ್ಷೇತ್ರಗಳಲ್ಲಿ (ಇಬಿಬಿ) 74 ಮಾದರಿ ಶಾಲೆಗಳಿಗೆ ಅನುಮೋದನೆ (ಸೆಪ್ಟಂಬರ್ 2009) ನೀಡಿತು.

ಈ ಸಂಬಂಧವಾದ ಅವಲೋಕನಗಳನ್ನು ಕೆಳಗೆ ಚರ್ಚಿಸಲಾಗಿದೆ.

- ***ಮಾದರಿ ಶಾಲೆಗಳ ನಿರ್ಮಾಣದ ಸ್ಥಿತಿ***

ಅನುಮೋದಿತ 74 ಮಾದರಿ ಶಾಲೆಗಳ ನಿರ್ಮಾಣದ ಸ್ಥಿತಿಯನ್ನು **ಕೋಷ್ಟಕ-2.10**ರಲ್ಲಿ ನೀಡಲಾಗಿದೆ.

**ಕೋಷ್ಟಕ-2.10: ಮಾದರಿ ಶಾಲೆಗಳ ನಿರ್ಮಾಣದ ಸ್ಥಿತಿ**

(₹ ಕೋಟಿಗಳಲ್ಲಿ)

| ನಿರ್ಮಾಣದ ಸ್ಥಿತಿ | ಸಂಖ್ಯೆ | ಅಂದಾಜು ಮೊತ್ತ | ಗುತ್ತಿಗೆ ಮೊತ್ತ | ಪರಿಷ್ಕೃತ ಮೊತ್ತ | ವೆಚ್ಚ |
|---|---|---|---|---|---|
| ಪೂರ್ಣಗೊಂಡು ಹಸ್ತಾಂತರಿಸಿರುವುದು | 67 | 258.51 | 308.46 | 358.02 | 344.40 |
| ಪ್ರಗತಿಯಲ್ಲಿರುವುದು | 4 | 15.47 | 19.00 | 21.25 | 18.03 |
| ಪೂರ್ಣಗೊಂಡು ಇನ್ನೂ ಹಸ್ತಾಂತರಿಸಬೇಕಿರುವುದು | 3 | 11.22 | 13.67 | 15.88 | 14.73 |
| **ಒಟ್ಟು** | **74** | **285.20** | **341.13** | **395.15** | **377.16** |

ಆಧಾರ: ಆರ್‌ಎಮ್‌ಎಸ್‌ಎ ರಾಜ್ಯ ಯೋಜನಾ ನಿರ್ದೇಶಕರು ಒದಗಿಸಿದ ಮಾಹಿತಿ

ಯೋಜನೆಯು ಸೆಪ್ಟಂಬರ್ 2009ರಲ್ಲಿ ಅನುಮೋದಿತವಾಗಿ ಮಾದರಿ ಶಾಲೆಗಳು 2010-11ರ ಶೈಕ್ಷಣಿಕ ವರ್ಷದಿಂದಲೇ ತಾತ್ಕಾಲಿಕ ಸ್ಥಳಗಳಲ್ಲಿ ಕೆಲಸ ಮಾಡುವುದನ್ನು ಪ್ರಾರಂಭಿಸಿದ್ದರೂ ಸಹ ಕಟ್ಟಡಗಳ ನಿರ್ಮಾಣವು ಕೇವಲ 2013-14ರಲ್ಲಿ (50) ಮತ್ತು 2015-16ರಲ್ಲಿ (24) ಪ್ರಾರಂಭಗೊಂಡಿತು. ಮಾದರಿ ಶಾಲೆಗಳ ನಿರ್ಮಾಣವು 20 ತಿಂಗಳುಗಳೊಳಗೆ ಪೂರ್ಣಗೊಳ್ಳಬೇಕಿದ್ದರೂ ಸಹ, ಕೋಷ್ಟಕದಿಂದ ಗಮನಿಸಿದಂತೆ, ಏಳು ಮಾದರಿ ಶಾಲೆಗಳ ನಿರ್ಮಾಣವು ಇನ್ನೂ ಪೂರ್ಣಗೊಂಡು ಹಸ್ತಾಂತರಗೊಳ್ಳಬೇಕಿದೆ. ಆದ್ದರಿಂದ ಮಾದರಿ ಶಾಲೆಗಳು ಪ್ರಾರಂಭವಾದ ಎಂಟು ವರ್ಷಗಳ ನಂತರವೂ ನಿರ್ಬಂಧಿತ ಮೂಲಸೌಕರ್ಯಗಳೊಂದಿಗೆ ತಾತ್ಕಾಲಿಕ ಸ್ಥಳಗಳಲ್ಲಿ ಕೆಲಸ ಮಾಡುವುದನ್ನು ಮುಂದುವರೆಸಿದ್ದವು (ಆಗಸ್ಟ್ 2018).

ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದೆಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019).

- ***ಮಾದರಿ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ***

74 ಮಾದರಿ ಶಾಲೆಗಳಲ್ಲಿ 592 ಬೋಧಕ ಮತ್ತು 370 ಬೋಧಕೇತರ ಸಿಬ್ಬಂದಿಯ ನೇಮಕಾತಿಯನ್ನು ರಾಜ್ಯ ಸರ್ಕಾರವು ಅನುಮೋದಿಸಿತು (ಆಗಸ್ಟ್ 2010). ಪರೀಕ್ಷಾ-ತನಿಖೆ ನಡೆಸಿದ ಮೂರು ಜಿಲ್ಲೆಗಳ ಅಂದರೆ ಚಾಮರಾಜನಗರ, ಕಲಬುರಗಿ ಮತ್ತು ವಿಜಯಪುರ ಜಿಲ್ಲೆಗಳ ಮಾದರಿ ಶಾಲೆಗಳ ಶಿಕ್ಷಕರ ವಿಶ್ಲೇಷಣೆಯು ಕೆಳಕಂಡಂತೆ ತೋರಿಸಿತು:

- ಚಾಮರಾಜನಗರ ಜಿಲ್ಲೆಯ ನಾಲ್ಕು ಮಾದರಿ ಶಾಲೆಗಳಲ್ಲಿ ಮಂಜೂರಾದ 56 ಶಿಕ್ಷಕರ ಹುದ್ದೆಗಳಲ್ಲಿ 2013 ಮತ್ತು 2017ರಲ್ಲಿ ಅನುಕ್ರಮವಾಗಿ 32 (ಶೇಕಡಾ 57.14) ಮತ್ತು 12 (ಶೇಕಡಾ 21.42) ಹುದ್ದೆಗಳು ಖಾಲಿ ಉಳಿದಿದ್ದವು.

- ಚಾಮರಾಜನಗರ ಜಿಲ್ಲೆಯ ನಾಲ್ಕು ಮಾದರಿ ಶಾಲೆಗಳಲ್ಲಿ ಒಂದರಲ್ಲಿ (ಆದರ್ಶ ವಿದ್ಯಾಲಯ, ಕೊಳ್ಳೇಗಾಲ) ಮುಖ್ಯೋಪಾಧ್ಯಾಯರನ್ನು ನೇಮಿಸಿರಲಿಲ್ಲ.
- ವಿಜಯಪುರದ ಐದು ಮಾದರಿ ಶಾಲೆಗಳಲ್ಲಿನ 70 ಬೋಧಕ ಸಿಬ್ಬಂದಿಯಲ್ಲಿ 36 ಹುದ್ದೆಗಳು (ಶೇಕಡಾ 51.42) ಮತ್ತು 10 ಹುದ್ದೆಗಳು (ಶೇಕಡಾ 14.28) ಅನುಕ್ರಮವಾಗಿ 2013 ಮತ್ತು 2017ರಲ್ಲಿ ಖಾಲಿ ಉಳಿದಿದ್ದವು.
- ವಿಜಯಪುರ ಜಿಲ್ಲೆ (ಇಂಡಿ ಮತ್ತು ಹುಣಶಾಯಲ್) ಹಾಗೂ ಕಲಬುರಗಿ ಜಿಲ್ಲೆ (ಭೀಮಳ್ಳಿ ಮತ್ತು ಬೀಬಳ್ಳಿ) ಗಳಲ್ಲಿನ ನಾಲ್ಕು ಮಾದರಿ ಶಾಲೆಗಳಿಗೆ ಮುಖ್ಯೋಪಾಧ್ಯಾಯರುಗಳನ್ನು ನೇಮಕಾತಿ ಮಾಡಿರಲಿಲ್ಲ.

ಮಾದರಿ ಶಾಲೆಗಳಿಗೆ ಪ್ರತ್ಯೇಕ ನೇಮಕಾತಿಗಳನ್ನು ಪ್ರಸ್ತಾವಿಸಿಲ್ಲ ಎಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019).

ಆದರೂ, ಪಿಟಿಆರ್ ಅನ್ನು ಗರಿಷ್ಠ ಮಟ್ಟವನ್ನು ಖಚಿತಪಡಿಸಿಕೊಳ್ಳಲು ಹಾಗೂ ನಿಗದಿಪಡಿಸಿದ ಶಿಕ್ಷಣದ ಗುಣಮಟ್ಟವನ್ನು ಒದಗಿಸಲು ಸರ್ಕಾರವು ಮಾದರಿ ಶಾಲೆಗಳಿಗೆ ಅಗತ್ಯವಿರುವ ಸಂಖ್ಯೆಯ ಶಿಕ್ಷಕರನ್ನು ನಿಯೋಜಿಸುವ ಅವಶ್ಯಕತೆಯಿದೆ.

- ***ತಾತ್ಕಾಲಿಕ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾದರಿ ಶಾಲೆಗಳ ಸಂಬಂಧವಾಗಿನ ಅವಲೋಕನಗಳು***

ಪರೀಕ್ಷಾ–ತನಿಖೆ ನಡೆಸಿದ ಎಂಟು ಮಾದರಿ ಶಾಲೆಗಳಲ್ಲಿ ಮೂರು ಮಾದರಿ ಶಾಲೆಗಳ ಕಾಮಗಾರಿ ಇನ್ನೂ ಪೂರ್ಣಗೊಳಿಸಬೇಕಿದ್ದರಿಂದ ಅವುಗಳು 2010–11ರಿಂದ ತಾತ್ಕಾಲಿಕ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದನ್ನು ನಾವು ಗಮನಿಸಿದೆವು. ನಿರ್ಮಿಸಿದ ಮೂರು ಮಾದರಿ ಶಾಲೆಗಳ ಮತ್ತು ತಾತ್ಕಾಲಿಕ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎರಡು ಶಾಲೆಗಳ ಸ್ಥಿತಿಯನ್ನು **ಅನುಬಂಧ–2.14ರಲ್ಲಿ** ನೀಡಲಾಗಿದೆ.

ಹೀಗೆ, ಮಾದರಿ ಶಾಲೆಗಳ ನಿರ್ಮಾಣದಲ್ಲಿನ ವಿಳಂಬದಿಂದ ಆ ಶಾಲೆಗಳಲ್ಲಿನ ಮಕ್ಕಳು ಕೇಂದ್ರೀಯ ವಿದ್ಯಾಲಯಗಳ ಸರಿಸಮಾನವಾದ ಸೌಕರ್ಯಗಳಿಂದ ವಂಚಿತರಾದರು.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಬಗ್ಗೆ ಗಮನ ಹರಿಸಲಾಗುವುದು ಎಂದು ಸರ್ಕಾರವು ಉತ್ತರಿಸಿತು (ಫೆಬ್ರವರಿ 2019).

## 2.1.11 ಆರ್‌ಎಮ್‌ಎಸ್‌ಎ ಫಲಿತಾಂಶ ಸೂಚಕಗಳು

ಆರ್‌ಎಮ್‌ಎಸ್‌ಎ ಮೂರು ಹಂತಗಳಲ್ಲಿ, ಅಂದರೆ, ಪ್ರಮುಖ ಕಾರ್ಯಕ್ಷಮತೆ ಸೂಚಕಗಳು, ಗುಣಮಟ್ಟ ಸೂಚಕಗಳು ಮತ್ತು ವ್ಯವಸ್ಥೆ ಸೂಚಕಗಳೆಂಬ ಮೂರು ಹಂತಗಳಲ್ಲಿ ಅಳೆಯಬಹುದಾದ ಶಿಕ್ಷಣ ಸೂಚಕಗಳನ್ನು ಒದಗಿಸಿದೆ. ಪ್ರಮುಖ ಸೂಚಕಗಳ ಸಂಬಂಧವಾಗಿ ಆರ್‌ಎಮ್‌ಎಸ್‌ಎಯ ಸಂಪೂರ್ಣ ಅವಧಿಯಲ್ಲಿ ರಾಜ್ಯದ ಕಾರ್ಯಕ್ಷಮತೆಯನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *2.1.11.1 ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ*

2009–10ರಿಂದ 2017–18ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳು ನಡೆಸುವ ಶಾಲೆಗಳನ್ನು ಒಳಗೊಂಡು ಸರ್ಕಾರಿ ಶಾಲೆಗಳ ಸಂಖ್ಯೆಯು 4,504ರಿಂದ 4,722ಕ್ಕೆ ಏರಿದರೂ ಸಹ ಪ್ರೌಢಶಾಲೆಗಳ ಒಟ್ಟು ಶೇಕಡಾವಾರು ಅನುಪಾತವು 36ರಿಂದ 30ಕ್ಕೆ ಇಳಿದಿತ್ತು. ಅದೇ ಅವಧಿಯಲ್ಲಿ ಅನುದಾನಿತ ಮತ್ತು ಅನುದಾನಿತವಲ್ಲದ ಶಾಲೆಗಳು 7,854ರಿಂದ 10,336ಕ್ಕೆ ಶೇಕಡಾ 32ರಷ್ಟು ಏರಿದ್ದವು. ಸರ್ಕಾರಿ ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳ ದಾಖಲಾತಿಯು 7.02 ಲಕ್ಷದಿಂದ 6.56 ಲಕ್ಷಕ್ಕೆ ಇಳಿದಿದ್ದರೆ ಅನುದಾನಿತ ಮತ್ತು ಅನುದಾನಿತವಲ್ಲದ ಶಾಲೆಗಳಲ್ಲಿನ ದಾಖಲಾತಿಯು 9.28 ಲಕ್ಷದಿಂದ 11.03 ಲಕ್ಷಕ್ಕೆ ಏರಿದ್ದಿತು (**ಅನುಬಂಧ–2.15**).

ಶಾಲೆಗಳ ಸಂಖ್ಯೆಯಲ್ಲಿ ಏರಿಕೆಯಾಗಿದ್ದರೂ ಸಹ ಸ್ಥಳೀಯ ಸಂಸ್ಥೆಗಳನ್ನೊಳಗೊಂಡು ಸರ್ಕಾರಿ ಶಾಲೆಗಳಲ್ಲಿನ ದಾಖಲಾತಿಯ ಇಳಿಕೆಯು ಹೊಸ ಶಾಲೆಗಳನ್ನು ತೆರೆಯುವುದಕ್ಕೆ ಒತ್ತು ನೀಡಲಾಗಿದ್ದರೂ

ಸಹ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ/ಉಳಿಸುಕೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ದೃಢವಾದ ಪ್ರಯತ್ನಗಳನ್ನು ಮಾಡಿರಲಿಲ್ಲ. ಇದು ಸರ್ಕಾರಿ ಶಾಲೆಗಳಲ್ಲಿನ ಸೌಲಭ್ಯಗಳ ಕೊರತೆಯೊಂದಿಗೆ ಸೇರಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯ ಇಳಿಕೆಗೆ ಕಾರಣವಾಯಿತು.

### *2.1.11.2 ಒಟ್ಟು ದಾಖಲಾತಿ ಅನುಪಾತ*

ಒಟ್ಟು ದಾಖಲಾತಿ ಅನುಪಾತವು (ಜಿಇಆರ್) ಶಾಲೆಗಳಲ್ಲಿ ಮಕ್ಕಳ ದಾಖಲಾತಿಯ ಮಟ್ಟದ ಮತ್ತು ಮಕ್ಕಳ ಶಾಲೆಯನ್ನು ಬಿಡುವ ಮಟ್ಟದ ಸೂಚಕವಾಗಿದೆ. 2008-09ರ ಜಿಇಆರ್ ಅನ್ನು ಆಧಾರವನ್ನಾಗಿ ತೆಗೆದುಕೊಂಡು ಕರ್ನಾಟಕದ ಮುನ್ನೋಟ ಯೋಜನೆಯು 2011-12ರ ವೇಳೆಗೆ ಶೇಕಡಾ 81ರಷ್ಟು ಜಿಇಆರ್ ಮತ್ತು 2017ರ ವೇಳೆಗೆ ಶೇಕಡಾ 100ರಷ್ಟು ಜಿಇಆರ್‌ಅನ್ನು ಪ್ರಕ್ಷೇಪಿಸಿತ್ತು. ಸಮಾನತೆಯ ಸೂಚಕವಾದ ರಾಜ್ಯದ ಜಿಇಆರ್, ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ಜಿಇಆರ್ ಮತ್ತು ಬಾಲಕಿಯರ/ಬಾಲಕರ ಜಿಇಆರ್‌ಗಳನ್ನು **ಅನುಬಂಧ-2.16**ರಲ್ಲಿ ನೀಡಲಾಗಿದೆ.

2017-18ರಲ್ಲಿದ್ದಂತೆ ರಾಜ್ಯದ ಜಿಇಆರ್ ಶೇಕಡಾ 100ರ ಗುರಿಗೆ ಪ್ರತಿಯಾಗಿ ಶೇಕಡಾ 82.37ರಷ್ಟಿರುವುದನ್ನು **ಅನುಬಂಧ-2.16**ರಿಂದ ನಾವು ಗಮನಿಸಿದೆವು. ಅಲ್ಲದೆ, ಸರಿಸುಮಾರು ಎಲ್ಲ ವರ್ಷಗಳಲ್ಲಿಯೂ ಬಾಲಕಿಯರ ಜಿಇಆರ್ ಬಾಲಕರ ಜಿಇಆರ್‌ಗಿಂತ ಅಧಿಕವಾಗಿದ್ದಿತು, ಇದು ಬಾಲಕಿಯರ ಶಿಕ್ಷಣಕ್ಕೆ ಉತ್ತೇಜನದ ರೂಪದಲ್ಲಿನ ಮಧ್ಯಸ್ಥಿಕೆಯ ಪರಿಣಾಮವನ್ನು ಸೂಚಿಸುತ್ತಿತ್ತು. ಜೊತೆಗೆ ಎಸ್‌ಸಿ/ಎಸ್‌ಟಿಗಳ ಜಿಇಆರ್ ಏರಿಕೆಯ ಪ್ರವೃತ್ತಿಯನ್ನು ತೋರಿಸಿತ್ತು.

ರಾಜ್ಯ ಮಟ್ಟದ ಸರಾಸರಿಗೆ ಹೋಲಿಸಿದರೆ ಜಿಲ್ಲೆಗಳ ನಡುವೆ ವ್ಯಾಪಕ ಅಸಮಾನತೆಗಳಿರುವುದನ್ನು 2017-18ರ ವರ್ಷದ ಜಿಲ್ಲಾವಾರು ಜಿಇಆರ್‌ನ ವಿಶ್ಲೇಷಣೆಯು ತೋರಿಸಿತು. 12 ಜಿಲ್ಲೆಗಳು ರಾಜ್ಯದ ಸರಾಸರಿಗಿಂತ ಹೆಚ್ಚಿನ ಜಿಇಆರ್ ಅನ್ನು ದಾಖಲಿಸಿದರೆ, 18 ಜಿಲ್ಲೆಗಳು ರಾಜ್ಯದ ಸರಾಸರಿಗಿಂತ ಕಡಿಮೆ ಜಿಇಆರ್ ಅನ್ನು ವರದಿ ಮಾಡಿದ್ದವು ಅದರಲ್ಲಿ ಯಾದಗಿರಿಯು ಶೇಕಡಾ 56.49ರಲ್ಲಿ ಕೊನೆಯದಾಗಿದ್ದಿತು (**ಅನುಬಂಧ-2.17**). 2009-10ರ ಜಿಇಆರ್‌ನೊಂದಿಗೆ 2017-18ರ ಜಿಇಆರ್‌ನ ಜಿಲ್ಲಾವಾರು ಹೋಲಿಕೆಯು ಆರು[27] ಜಿಲ್ಲೆಗಳಲ್ಲಿ ಜಿಇಆರ್ ಗಣನೀಯವಾಗಿ ಕುಸಿದಿರುವುದನ್ನು ಸೂಚಿಸಿತು. ಆರ್‌ಎಮ್‌ಎಸ್‌ಎಎಸ್‌ಕೆ ಜಿಲ್ಲೆಗಳ ನಡುವೆ ಅಂತಹ ವ್ಯಾಪಕ ವ್ಯತ್ಯಾಸಗಳಿಗೆ ಹಾಗೂ ಆರು ಜಿಲ್ಲೆಗಳಲ್ಲಿ ಜಿಇಆರ್‌ನ ಕುಸಿತಕ್ಕೆ ಇರುವ ಕಾರಣಗಳನ್ನು ತಿಳಿದುಕೊಳ್ಳಲು ಯಾವುದೇ ವಿಶ್ಲೇಷಣೆಗಳನ್ನು ನಡೆಸಲಿಲ್ಲ. ಅಲ್ಲದೆ, ಯಾದಿಗಿರಿಯ ಜಿಇಆರ್‌ನ ಕನಿಷ್ಠ ಮಟ್ಟಕ್ಕೆ ಕಾರಣಗಳನ್ನೂ ಸಹ ಪರಿಶೀಲಿಸಲಿಲ್ಲ.

ರಾಜ್ಯವು ಶೇಕಡಾ 100ರಷ್ಟು ಗುರಿಯನ್ನು ಸಾಧಿಸಲಾಗದಿದ್ದರೂ ಸಹ ಅದು ರಾಷ್ಟ್ರೀಯ ಜಿಇಆರ್‌ಗಿಂತ ಉತ್ತಮವಾಗಿದೆ ಎಂದು ನಿರ್ಗಮನ ಸಭೆಯಲ್ಲಿ ತಿಳಿಸಲಾಯಿತು. 2009-10ರ ಅವಧಿಯಲ್ಲಿ ಶೇಕಡಾ 75ರಷ್ಟಿದ್ದ ಜಿಇಆರ್ 2017-18ರ ಅವಧಿಯಲ್ಲಿ ಶೇಕಡಾ 82ರಷ್ಟಾಗಿರುವುದು ಒಂದು ಸಾಧನೆಯೇ ಎಂದೂ ತಿಳಿಸಲಾಯಿತು. ಕರ್ನಾಟಕದ ಮುನ್ನೋಟ ಯೋಜನೆ ಮತ್ತು ವಾರ್ಷಿಕ ಯೋಜನೆಗಳು 2017ರೊಳಗೆ ಶೇಕಡಾ 84ರಷ್ಟು ಜಿಇಆರ್ ಅನ್ನು ಪ್ರಕ್ಷೇಪಿಸಿದ್ದವು ಮತ್ತು ಇದು ಆರ್‌ಎಮ್‌ಎಸ್‌ಎಯ ಮಧ್ಯಸ್ಥಿಕೆಯಿಲ್ಲದೇ ಹಿಂದಿನ ಕಾರ್ಯಕ್ಷಮತೆಯ ಆಧಾರಿತ ಲೆಕ್ಕಾಚಾರವಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಹೀಗೆ, ಶೇಕಡಾ 82ರಷ್ಟು ಸಾಧನೆಯು ರಾಜ್ಯ ಸರ್ಕಾರದ ಸ್ವಂತ ಅಂದಾಜಿನಂತೆಯೇ ಆರ್‌ಎಮ್‌ಎಸ್‌ಎಗೆ ಅಧ್ಯಾರೋಪಿಸಲು ಸಾಧ್ಯವಾಗುವುದಿಲ್ಲ.

### *2.1.11.3 ದಕ್ಷತೆಯ ಸೂಚಕಗಳು*

ಮಕ್ಕಳ ಹಾಜರಾತಿಯ ಮೇಲ್ವಿಚಾರಣೆ, ಮಕ್ಕಳನ್ನು ಶಾಲೆಗಳಲ್ಲಿ ಉಳಿಸಿಕೊಳ್ಳುವ ವಿಧಾನಗಳು, 8ನೇ ತರಗತಿಯ ನಂತರ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸುವುದು, ನಿಯತಕಾಲಿಕವಾಗಿ ಶಾಲೆಗಳಿಗೆ ಹಾಜರಾಗದ ಮಕ್ಕಳಿಗೆ ಮಧ್ಯಸ್ಥಿಕೆಗಳು, ಮುಂತಾದ ಕ್ರಮಗಳನ್ನು ಆರ್‌ಎಮ್‌ಎಸ್‌ಎ ಶಿಫಾರಸು ಮಾಡಿತ್ತು. ಕರ್ನಾಟಕ ಮುನ್ನೋಟ ಯೋಜನೆಯು 2017ರೊಳಗೆ ಧಾರಣ ಮತ್ತು ಪರಿವರ್ತನೆಯ ದರವನ್ನು ಶೇಕಡಾ 99ಕ್ಕೆ ಹೆಚ್ಚಿಸುವ ಮತ್ತು ಶಾಲೆಯನ್ನು ಬಿಡುವವರ ದರವನ್ನು ಶೇಕಡಾ 2ಕ್ಕೆ ಇಳಿಸುವ

[27] ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಮಂಡ್ಯ ಮತ್ತು ಮೈಸೂರು.

ಗುರಿಯನ್ನು ಹೊಂದಿತ್ತು. 2017–18ರಲ್ಲಿದ್ದಂತೆ ಪ್ರೌಢಶಾಲಾ ಮಟ್ಟದಲ್ಲಿ ಶಾಲೆಯನ್ನು ಬಿಡುವವರ[28], ಧಾರಣ ದರ[29] ಮತ್ತು ಪರಿವರ್ತನಾ ದರ[30] ಇವುಗಳನ್ನು **ಅನುಬಂಧ–2.18**ರಲ್ಲಿ ನೀಡಲಾಗಿದೆ.

ರಾಜ್ಯ ಮಟ್ಟದಲ್ಲಿ 2013–14ರಿಂದ 2017–18ರ ಅವಧಿಯಲ್ಲಿ 2016–17ನ್ನು ಹೊರತುಪಡಿಸಿ ಶಾಲೆಯನ್ನು ಬಿಡುವವರ ದರವು ಇಳಿಕೆಯ ಪ್ರವೃತ್ತಿಯನ್ನು ತೋರಿದರೂ ಸಹ 2017ರ ಅಂತ್ಯದಲ್ಲಿ ಸಹ ಶಾಲೆಯನ್ನು ಬಿಡುವವರ ದರವು ಶೇಕಡಾ ಆರಕ್ಕಿಂತ ಅಧಿಕವಾಗಿದ್ದಿತು. ಮೇಲಿನ ಅವಧಿಯಲ್ಲಿ 2016–17ನ್ನು ಹೊರತುಪಡಿಸಿ ಬಾಲಕರು ಶಾಲೆ ಬಿಡುವ ದರವು ಬಾಲಕಿಯರು ಶಾಲೆ ಬಿಡುವ ದರಕ್ಕಿಂತ ಹೆಚ್ಚಾಗಿರುವುದು ಮುಂದುವರೆದಿತ್ತು. ಹಾವೇರಿ, ದಕ್ಷಿಣಕನ್ನಡ, ಬಾಗಲಕೋಟೆ, ಬಳ್ಳಾರಿ, ಚಿಕ್ಕಮಗಳೂರು, ಗದಗ, ಕೊಡಗು, ಶಿವಮೊಗ್ಗ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಶಾಲೆ ಬಿಡುವವರ ದರವು ಶೇಕಡಾ 10ಕ್ಕಿಂತ ಅಧಿಕವಾಗಿದ್ದಿತು **(ಅನುಬಂಧ–2.19)** ಎಂಬುದನ್ನು ಜಿಲ್ಲಾವಾರು ಶಾಲೆ ಬಿಡುವವರ ದರದ ವಿಶ್ಲೇಷಣೆಯು ಸೂಚಿಸಿತು ಮತ್ತು ಮೇಲಿನ ಜಿಲ್ಲೆಗಳಲ್ಲಿ ಹೆಚ್ಚಿನ ಶಾಲೆ ಬಿಡುವವರ ಸಂಖ್ಯೆಗೆ ಕಾರಣಗಳನ್ನು ಆರ್‌ಎಮ್‌ಎಸ್‌ಎಸ್‌ಕೆ ಸಂಶೋಧನೆ ಮಾಡಲಿಲ್ಲ.

ಪರೀಕ್ಷಾ–ತನಿಖೆ ನಡೆಸಿದ ಶಾಲೆಗಳಲ್ಲಿ ವಿವಿಧ ವರ್ಗಗಳಲ್ಲಿ ಶಾಲೆ ಬಿಡುವವರ ಪ್ರವೃತ್ತಿಯನ್ನು ನಾವು ವಿಶ್ಲೇಷಣೆ ಮಾಡಿದೆವು **(ನಕ್ಷೆ–2.5)** ಮತ್ತು ಖಾಸಗಿ ಶಾಲೆಗಳಲ್ಲಿ ಶಾಲೆಯನ್ನು ಬಿಡುವವರ ಸಂಖ್ಯೆಯು ಕಡಿಮೆಯಿದ್ದಿತೆಂದು ನಾವು ಗಮನಿಸಿದೆವು. ಆರ್‌ಎಮ್‌ಎಸ್‌ಎ ಮತ್ತು ರಾಜ್ಯದ ಇತರ ಯೋಜನೆಗಳ ಮೂಲಕ ರಾಜ್ಯ ಸರ್ಕಾರದ ಮಧ್ಯಸ್ಥಿಕೆಯು ಸಾಕಷ್ಟಿರಲಿಲ್ಲವೆಂದು ಇದು ಸೂಚಿಸುತ್ತಿತ್ತು.

**ನಕ್ಷೆ–2.5: ಪರೀಕ್ಷಾ–ತನಿಖೆ ನಡೆಸಿದ ಶಾಲೆಗಳಲ್ಲಿನ ವಿವಿಧ ವರ್ಗಗಳಲ್ಲಿ ಶಾಲೆ ಬಿಡುವವರ ಪ್ರವೃತ್ತಿ**




ಎಂಟನೇ ತರಗತಿಯಿಂದ ತೇರ್ಗಡೆಯಾಗುವ ಮಕ್ಕಳನ್ನು ಸೂಕ್ತವಾಗಿ ಪತ್ತೆಹಚ್ಚುವ ಅಗತ್ಯತೆಯನ್ನು ಪಿಎಬಿ ಒತ್ತಿ ಹೇಳಿತ್ತು (ಜನವರಿ 2010). 8ರಿಂದ 10ನೇ ತರಗತಿಯವರೆಗೆ ಪ್ರೌಢಶಿಕ್ಷಣವೆಂದು ಪರಿಗಣಿಸುವ ಕರ್ನಾಟಕದಲ್ಲಿನ ಶಾಲಾ ಶಿಕ್ಷಣದ ರಚನೆಯನ್ನು ಪರಿಗಣಿಸಿ 7ನೇ ತರಗತಿಯಿಂದ ತೇರ್ಗಡೆಯಾಗಿ ಹೊರಹೋಗುವ ಮಕ್ಕಳನ್ನು ಪತ್ತೆ ಹಚ್ಚುವುದು ಅತ್ಯಂತ ಪ್ರಮುಖವಾಗಿದೆ. ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ದಾಖಲಾಗಿ ಉತ್ತೀರ್ಣರಾದ ಎಲ್ಲ ಮಕ್ಕಳನ್ನು ಪ್ರೌಢಶಿಕ್ಷಣ ವ್ಯವಸ್ಥೆಗೆ ತರಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಲು 7ರಿಂದ 8ನೇ ತರಗತಿಯವರೆಗಿನ ಮಕ್ಕಳನ್ನು ಪತ್ತೆ ಹಚ್ಚಲು ಯಾವುದೇ ಸೂಕ್ತ ವ್ಯವಸ್ಥೆ ಇರಲಿಲ್ಲವೆಂದು ಶಾಲೆಗಳ ಕ್ಷೇತ್ರ ಭೇಟಿಯಿಂದ ತಿಳಿದುಬಂದಿತು. ತತ್ಪರಿಣಾಮವಾಗಿ ಪ್ರಾಥಮಿಕ ವಲಯದಲ್ಲಿ ಪಡೆದ ಸಾರ್ವತ್ರಿಕ ದಾಖಲಾತಿಯನ್ನು ಪ್ರೌಢಶಿಕ್ಷಣ ವಲಯದಲ್ಲಿ ಪುನರಾವರ್ತಿಸಲು ಸಾಧ್ಯವಾಗಲಿಲ್ಲ.

[28] ಒಂದು ವರ್ಷದಲ್ಲಿ ದಾಖಲಾದ ಒಟ್ಟು ಮಕ್ಕಳ ಸಂಖ್ಯೆಗೆ ಪ್ರತಿಯಾಗಿ ಅದೇ ವರ್ಷದಲ್ಲಿ ಶಾಲೆ ಬಿಟ್ಟ ಮಕ್ಕಳ ಒಟ್ಟು ಸಂಖ್ಯೆಯ ಶೇಕಡಾವಾರು.

[29] ನಿರ್ದಿಷ್ಟ ಶೈಕ್ಷಣಿಕ ವರ್ಷದಲ್ಲಿ ಮುಂದಿನ ವರ್ಷಗಳಲ್ಲಿ ಶಾಲೆಗೆ ಬರುವುದನ್ನು ಮುಂದುವರೆಸಿರುವ ಮಕ್ಕಳನ್ನು ಪ್ರತಿನಿಧಿಸುತ್ತದೆ.

[30] ಮುಂದಿನ ಉನ್ನತ ಮಟ್ಟದ ಶಿಕ್ಷಣಕ್ಕೆ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಹೋಗಲು ಸಾಧ್ಯವಾಗುತ್ತದೆ ಎಂಬುದನ್ನು ಸೂಚಿಸುತ್ತದೆ.

ಹೀಗೆ, ಮುನ್ನೋಟ ಯೋಜನೆಯಲ್ಲಿ ನಿಗದಿಪಡಿಸಲಾಗಿದ್ದ ವಿದ್ಯಾರ್ಥಿಗಳ ಧಾರಣ ದರವಾದ ಶೇಕಡಾ 99, ಶಾಲೆ ಬಿಡುವವರ ದರವಾದ ಶೇಕಡಾ ಎರಡು ಮತ್ತು ವಿದ್ಯಾರ್ಥಿ ಸಾಧನೆಯ ಮಟ್ಟವಾದ ಶೇಕಡಾ 100ರಷ್ಟನ್ನು ಯೋಜನಾ ಅನುಷ್ಠಾನದ ಅವಧಿಯಲ್ಲಿ ಸಾಧಿಸಲಾಗಲಿಲ್ಲ.

### *2.1.11.4 ಪರೀಕ್ಷಾ ಫಲಿತಾಂಶಗಳು*

ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಆರ್‌ಎಮ್‌ಎಸ್‌ಎ ಉದ್ದೇಶವನ್ನು ಸಾಧಿಸಲಾಯಿತೆ ಎಂಬುದನ್ನು ಪರಿಶೀಲಿಸಲು ಗುಣಮಟ್ಟದ ಶಿಕ್ಷಣದ ಸೂಚಕವಾದ 10ನೇ ತರಗತಿಯ ಪರೀಕ್ಷೆಯಲ್ಲಿ ಸರ್ಕಾರಿ ಮತ್ತು ಇತರೆ ಶಾಲೆಗಳ 10ನೇ ತರಗತಿಯ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ವಿಶ್ಲೇಷಿಸಲಾಯಿತು.

2009-18ರ ಅವಧಿಯಲ್ಲಿ ರಾಜ್ಯದಲ್ಲಿ 10ನೇ ತರಗತಿಯ ಮಕ್ಕಳ ವರ್ಷಾವಾರು ಫಲಿತಾಂಶಗಳನ್ನು **ಅನುಬಂಧ-2.20ರಲ್ಲಿ** ನೀಡಲಾಗಿದೆ.

ಎಸ್‌ಎಸ್‌ಎಲ್‌ಸಿ ತೇರ್ಗಡೆಯ ಶತಾಂಶವು 2009-10ರಲ್ಲಿನ 66.81ರಿಂದ 2013-14ರ ಅವಧಿಯಲ್ಲಿ 85.41ಕ್ಕೆ ಏರಿಕೆಯಾಯಿತು. ನಂತರ ಅದು ಇಳಿಕೆ ಪ್ರವೃತ್ತಿಯನ್ನು ತೋರಿಸಿ 2016-17ರ ಅವಧಿಯಲ್ಲಿ ಕನಿಷ್ಠ ಮಟ್ಟವಾದ ಶೇಕಡಾ 73.46ಕ್ಕೆ ತಲುಪಿತು ಮತ್ತು 2017-18ರ ಅವಧಿಯಲ್ಲಿ ಶೇಕಡಾ 78.11ಕ್ಕೆ ತಲುಪಿತು. ಆದ್ದರಿಂದ ಹಿಂದಿನ ಒಂಭತ್ತು ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶಗಳಲ್ಲಿ ವಿದ್ಯಾರ್ಥಿಗಳ ಸಾಧನೆಯಲ್ಲಿ ಗಣನೀಯ ಸುಧಾರಣೆ ಕಂಡುಬರಲಿಲ್ಲ. ಹೀಗೆ, ಆರ್‌ಎಮ್‌ಎಸ್‌ಎ ಮಧ್ಯಸ್ತಿಕೆಯು ಎಸ್‌ಎಸ್‌ಎಲ್‌ಸಿ ಫಲಿತಾಂಶಗಳ ಮೇಲೆ ಅತ್ಯಲ್ಪ ಪರಿಣಾಮ ಬೀರಿತ್ತು.

### *2.1.11.5 ಸಾಧನೆಯ ಸಮೀಕ್ಷೆ*

ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯ ಮಂಡಳಿಯು (ಕೆಎಸ್‌ಕ್ಯುಎಎಸಿ) 2015-16ರ ಅವಧಿಯಲ್ಲಿ ಪ್ರೌಢಶಾಲೆಗಳ ಮೌಲ್ಯಮಾಪನವನ್ನು ನಡೆಸಿ ಶಾಲಾ ಸೌಕರ್ಯಗಳ ಮಟ್ಟವನ್ನು ನಿರ್ಧರಿಸಲು 814 ಸರ್ಕಾರಿ/ಅನುದಾನಿತ/ಖಾಸಗಿ ಶಾಲೆಗಳ ಮೌಲ್ಯಮಾಪನ ಮಾಡಿತು. ಈ ಮೌಲ್ಯಮಾಪನದಲ್ಲಿ 495 ಶಾಲೆಗಳು ಶೇಕಡಾ 50ಕ್ಕಿಂತ ಕಡಿಮೆ ಸಾಧನೆಯನ್ನು ಪ್ರತಿನಿಧಿಸುವ 'ಸಿ' ದರ್ಜೆಯನ್ನು ಪಡೆದಿದ್ದವು. ಅಲ್ಲದೆ, ಕೆಎಸ್‌ಕ್ಯುಎಎಸಿ 2017-18ರ ಅವಧಿಯಲ್ಲಿ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಖಾಸಗಿ ಶಾಲೆಗಳ 4ರಿಂದ 9ನೇ ತರಗತಿಯವರೆಗಿನ 35.66 ಲಕ್ಷ ವಿದ್ಯಾರ್ಥಿಗಳನ್ನು ಒಳಗೊಂಡ ಜನಗಣತಿ ಆಧಾರಿತ ರಾಜ್ಯ ಸಾಧನೆ ಸಮೀಕ್ಷೆಯನ್ನು ನಡೆಸಿತು. 2017-18ರಲ್ಲಿ ನಡೆಸಿದ ಸಮೀಕ್ಷೆಯ ಫಲಿತಾಂಶದ ಸಾರಾಂಶವನ್ನು ಕೆಳಗೆ ನೀಡಲಾಗಿದೆ.

| | |
|---|---|
| 4ರಿಂದ 7ನೇ ತರಗತಿಯವರೆಗಿನ ವಿದ್ಯಾರ್ಥಿಗಳ ಸಾಧನಾ ಮಟ್ಟ | ಶೇಕಡಾ 73-79 |
| 8ನೇ ತರಗತಿಯ ವಿದ್ಯಾರ್ಥಿಗಳ ಸಾಧನಾ ಮಟ್ಟ | ಶೇಕಡಾ 48 |
| 9ನೇ ತರಗತಿಯ ವಿದ್ಯಾರ್ಥಿಗಳ ಸಾಧನಾ ಮಟ್ಟ | ಶೇಕಡಾ 51 |

ಪ್ರೌಢಶಾಲೆಗಳಲ್ಲಿನ ಮೂಲಸೌಕರ್ಯಗಳ ವಿಷಯದಲ್ಲಿ ಆರ್‌ಎಮ್‌ಎಸ್‌ಎ ಮಧ್ಯಸ್ತಿಕೆ ಸಾಕಷ್ಟಿರಲಿಲ್ಲ ಎಂದು 2015-16ರಲ್ಲಿ ನಡೆಸಿದ ಸಮೀಕ್ಷೆಯು ತೋರಿಸಿದರೆ 2017-18ರಲ್ಲಿ ನಡೆಸಿದ ಸಮೀಕ್ಷೆಯು ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಖಾಸಗಿ ಶಾಲೆಗಳಲ್ಲಿ ಬೋಧನೆಯ ಗುಣಮಟ್ಟದಲ್ಲಿನ ಕೊರತೆಯನ್ನು ಎತ್ತಿ ತೋರಿಸಿತ್ತು. ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಾಧನೆಯು ಶೇಕಡಾ 50ರ ಹತ್ತಿರ ಇದ್ದ ಕಾರಣ ಇಲಾಖೆಯ ಗಮನವು ಅರ್ಹ ಶಿಕ್ಷಕರ ನೇಮಕಾತಿ, ಸೇವಾ ತರಬೇತಿ ಕಾರ್ಯಕ್ರಮಗಳನ್ನು ಮತ್ತು ಬೋಧನೆ-ಕಲಿಕೆ ಸೌಕರ್ಯಗಳನ್ನು ನೀಡುವುದು, ಮುಂತಾದವುಗಳಾಗಿರಬೇಕಿತ್ತು. ಅಲ್ಲದೆ, ಸಾಧನೆಯ ಸಮೀಕ್ಷೆಯ ಆಧಾರದ ಮೇಲೆ ಗುಣಮಟ್ಟವನ್ನು ಉತ್ತಮಪಡಿಸುವುದಕ್ಕೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲವೆಂದು ದಾಖಲೆಗಳಿಂದ ನಾವು ಗಮನಿಸಿದೆವು.

ಇತರೆ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದ ಕಾರ್ಯಕ್ಷಮತಾ ಸೂಚಕಗಳು ಶ್ಲಾಘನೀಯವಾಗಿವೆ ಎಂದು ಸರ್ಕಾರವು ಉತ್ತರಿಸಿತು (ಫೆಬ್ರರಿ 2019). ಆದರೆ, ರಾಜ್ಯವು ಕರ್ನಾಟಕ ಮುನ್ನೋಟ ಯೋಜನೆಯಲ್ಲಿ ಸೂಚಿಸಿರುವ ತನ್ನದೇ ಗುರಿಗಳನ್ನು ಸಾಧಿಸುವುದರಲ್ಲಿದೆ. ಪರಿಹಾರಕ ಬೋಧನೆಯನ್ನು ಹೊರತರಲು ಸಮೀಕ್ಷೆಯು ಸಹಾಯ ಮಾಡಿದೆ ಎಂದೂ ಸಹ ಸರ್ಕಾರವು ತಿಳಿಸಿತು.

**ಶಿಫಾರಸು-9: ಸರ್ವ ಶಿಕ್ಷ ಅಭಿಯಾನದಲ್ಲಿ ನಡೆಸಿರುವಂತೆ ಸರ್ಕಾರವು ಆರ್‌ಎಮ್‌ಎಸ್‌ಎ ಸಾಧನೆಯನ್ನು ಮೂರನೆ ವ್ಯಕ್ತಿಯಿಂದ ಮೌಲ್ಯಮಾಪನ ಮಾಡಿಸುವ ಅಗತ್ಯವಿದೆ.**

## 2.1.12 ಯೋಜನೆ, ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಸಂಶೋಧನೆ

ಯಾವುದೇ ಒಂದು ಯೋಜನೆ ಅಥವಾ ಕಾರ್ಯಕ್ರಮದ ಯಶಸ್ಸಿಗೆ ಯೋಜಿಸುವಿಕೆ ಮತ್ತು ಮೇಲ್ವಿಚಾರಣೆಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ. ಪರಿಣಾಮಕಾರಿಯಲ್ಲದ ಯೋಜನೆ ಮತ್ತು ಮೇಲ್ವಿಚಾರಣೆಯ ಕಾರಣದಿಂದ ಆರ್‌ಎಮ್‌ಎಸ್‌ಎ ಗುರಿಗಳನ್ನು ಸಾಧಿಸಲಾಗಲಿಲ್ಲ. ಇದನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *2.1.12.1 ಯೋಜನೆ*

ಆರ್‌ಎಮ್‌ಎಸ್‌ಎ ಚೌಕಟ್ಟು ಪೂರ್ವಸಿದ್ಧತಾ ಚಟುವಟಿಕೆಗಳಿಗೆ ಪ್ರಾಮುಖ್ಯತೆ ನೀಡಿತ್ತು ಏಕೆಂದರೆ ಅವುಗಳು ಯೋಜನೆಯ ಗುಣಮಟ್ಟದ ಅನುಷ್ಠಾನದಲ್ಲಿ ಸಹಾಯ ಮಾಡುತ್ತವೆ. ಇದು ಮುಖ್ಯವಾಗಿ ಸಮಗ್ರ ಶಾಲಾ ಮ್ಯಾಪಿಂಗ್ ಅಭ್ಯಾಸ, ಸೂಕ್ಷ್ಮ ಯೋಜನೆ ಅಭ್ಯಾಸ, ಅದರಲ್ಲಿ ಜಿಲ್ಲೆಯೊಂದರಲ್ಲಿ ಬೇಸ್‌ಲೈನ್ ಮೌಲ್ಯಮಾಪನದ ಅಭ್ಯಾಸಗಳು ಮತ್ತು ಶೈಕ್ಷಣಿಕ ಯೋಜನೆಗಳ ರಚನೆ, ಜಿಲ್ಲಾ ಮಟ್ಟದಲ್ಲಿ ತಂಡವನ್ನು ಗುರುತಿಸುವುದು ಮುಂತಾದವುಗಳನ್ನು ಒಳಗೊಂಡಿತ್ತು. ಈ ಸಂಬಂಧವಾಗಿ ಲೆಕ್ಕಪರಿಶೋಧನಾ ಅವಲೋಕನಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *(ಎ) ಸಮಗ್ರ ಶಾಲಾ ಮ್ಯಾಪಿಂಗ್*

ಅಸ್ತಿತ್ವದಲ್ಲಿರುವ ಪ್ರೌಢಶಾಲೆಗಳು, ಪ್ರೌಢಶಾಲೆಗಳಲ್ಲಿ ನ್ಯೂನತೆಗಳನ್ನು ಗುರುತಿಸಲು, ಉನ್ನತೀಕರಣಕ್ಕಾಗಿ ಮಾಧ್ಯಮಿಕ ಶಾಲೆಗಳನ್ನು ಗುರುತಿಸಲು, ಹೊಸ ಶಾಲೆಗಳನ್ನು ಸ್ಥಾಪಿಸಲು ಶಾಲೆಗಳಿಲ್ಲದ ಸ್ಥಳಗಳನ್ನು ಗುರುತಿಸಲು, ಸರ್ಕಾರೇತರ ಶಾಲೆಗಳನ್ನು ವ್ಯವಸ್ಥಿತವಾಗಿಸಲು, ಮುಂತಾದವುಗಳಿಗೆ ದತ್ತಸಂಚಯವೊಂದನ್ನು ಹೊಂದಲು ಸಮಗ್ರ ಶಾಲಾ ಮ್ಯಾಪಿಂಗ್ ಅವಶ್ಯಕವಾಗಿದೆ. ಆ ನಂತರ ಶಾಲೆಗಳಿಲ್ಲದ ಸ್ಥಳಗಳನ್ನು ಭೌತಿಕವಾಗಿ ಪರಿಶೀಲಿಸಬೇಕು ಮತ್ತು ದತ್ತಾಂಶದ ಆಧಾರದ ಮೇಲೆ ಆದ್ಯತೀಕರಣಗೊಳಿಸಬೇಕು. ಅಸ್ತಿತ್ವದಲ್ಲಿರುವ ಪ್ರೌಢಶಾಲೆಗಳಲ್ಲಿ ವರ್ಷಾವಾರು ಅಂತರವನ್ನು ಗುರುತಿಸಿ ಅದರ ಆಧಾರದ ಮೇಲೆ ಹೊಸ ಪ್ರೌಢಶಾಲೆಗಳನ್ನು ಸ್ಥಾಪಿಸುವ ಮತ್ತು ವಸತಿ ಶಾಲೆಗಳು/ ವಿದ್ಯಾರ್ಥಿನಿಲಯಗಳು/ಸಾರಿಗೆ ಸೌಕರ್ಯ, ಮುಂತಾದ ಇತರೆ ಕಾರ್ಯತಂತ್ರಗಳನ್ನು ಯೋಜಿಸಬೇಕಿತ್ತು. ಪರ್ಯಾಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಸ್ಥಳಗಳ ಮ್ಯಾಪಿಂಗ್‌ಅನ್ನು ಕೈಗೊಳ್ಳಲು ರಾಜ್ಯವು ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ (ಎನ್‌ಆರ್‌ಡಬ್ಲ್ಯುಡಿಪಿ) ಪ್ರತಿ ವರ್ಷದ ವಾಸಸ್ಥಳಗಳ ದತ್ತಾಂಶವನ್ನು ಬಳಸಬಹುದು.

ಆದರೆ, ಅಂತಹ ಮ್ಯಾಪಿಂಗ್ ಮತ್ತು ಆದ್ಯತೀಕರಣವನ್ನು ಮಾಡಿರುವ ಬಗ್ಗೆ ರಾಜ್ಯ ಮಟ್ಟದಲ್ಲಾಗಲೀ ಅಥವಾ ಪರೀಕ್ಷಾ–ತನಿಖೆ ನಡೆಸಿದ ಎಂಟು ಜಿಲ್ಲೆಗಳಲ್ಲಾಗಲೀ ಲೆಕ್ಕಪರಿಶೋಧನೆಗೆ ಲಭ್ಯಗೊಳಿಸಿದ ದಾಖಲೆಗಳಿಂದ ಪುರಾವೆಗಳು ಕಂಡುಬರಲಿಲ್ಲ. ತತ್ಪರಿಣಾಮವಾಗಿ ಆರ್‌ಎಮ್‌ಎಸ್‌ಎಎಸ್‌ಕೆ ವಾಸಸ್ಥಳಗಳ ಮೇಲೆ ಅಥವಾ ಕಂಡಿಕೆ 2.1.7.1ರಲ್ಲಿ ಚರ್ಚಿಸಿರುವಂತೆ ವಾಸಸ್ಥಳಗಳ ವ್ಯಾಪ್ತಿಯ ಮೇಲಾಗಲೀ ದತ್ತ ಸಂಚಯವನ್ನು ನಿರ್ವಹಣೆ ಮಾಡಲು ಸಾಧ್ಯವಾಗಲಿಲ್ಲ. ಹೀಗೆ, ರಾಜ್ಯವು ಪ್ರವೇಶಾವಕಾಶದ ಮಧ್ಯಸ್ತಿಕೆಯನ್ನು ಗುರುತಿಸಲು ವ್ಯವಸ್ಥಿತ ವಿಧಾನವೊಂದನ್ನು ಅಳವಡಿಸಿಕೊಳ್ಳಲು ವಿಫಲವಾಯಿತು.

**ಶಿಫಾರಸು–10: ಪ್ರೌಢಶಾಲಾ ಮಟ್ಟದಲ್ಲಿ ವಿಶ್ವಾಸಾರ್ಹ ದತ್ತಸಂಚಯವೊಂದನ್ನು ಅಭಿವೃದ್ಧಿಪಡಿಸಲು ಸಮಗ್ರ ಶಾಲಾ ಮ್ಯಾಪಿಂಗ್ ಮಾಡುವ ಅವಶ್ಯಕತೆಯಿದೆ.**

### *(ಬಿ) ಯೋಜನಾ ಪ್ರಕ್ರಿಯೆ*

ಆರ್‌ಎಮ್‌ಎಸ್‌ಎ ಯೋಜನೆಯ ಎಲ್ಲ ಅಂಶಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಪರಿಸ್ಥಿತಿಯನ್ನು ಪ್ರತಿಬಿಂಬಿಸಲು ಶಾಲಾ ಮಟ್ಟದ ಯೋಜನೆಯಿಂದ ಪ್ರಾರಂಭವಾಗುವ ಮತ್ತು ರಾಜ್ಯ ಮಟ್ಟದ ಯೋಜನೆಯಲ್ಲಿ ಕೊನೆಗೊಳ್ಳುವ ತಳದಿಂದ ಮೇಲಿನವರೆಗಿನ ವಿಧಾನವನ್ನು ಆರ್‌ಎಮ್‌ಎಸ್‌ಎ ಚೌಕಟ್ಟಿನಲ್ಲಿ ರೂಪಿಸಲಾಗಿದೆ. ಯೋಜನಾ ಪ್ರಕ್ರಿಯೆಯಲ್ಲಿ ಶಾಲೆಯು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಮತ್ತು ಅದರಲ್ಲಿ ಮುಖ್ಯೋಪಾಧ್ಯಾಯರು ಮತ್ತು ಅವರ ತಂಡ ಯೋಜನೆಗಾಗಿ ಸ್ಥಳೀಯ ಸಂಪನ್ಮೂಲ

ತಂಡವಾಗಿ ಕಾರ್ಯ ನಿರ್ವಹಿಸುತ್ತದೆ. ಗುರುತಿಸಿದ ಪ್ರತಿಯೊಂದು ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಶಾಲಾ ಆಡಳಿತ ಸಮಿತಿಯು ಶಾಲಾ ಮಟ್ಟದ ಮುನ್ನೋಟ ಯೋಜನೆ ಮತ್ತು ವಾರ್ಷಿಕ ಯೋಜನೆಯನ್ನು ತಯಾರಿಸಬೇಕು. ಇದರ ಆಧಾರದ ಮೇಲೆ ಪ್ರತಿ ಜಿಲ್ಲೆಯು ಮುನ್ನೋಟ ಯೋಜನೆ ಮತ್ತು ಕಾರ್ಯಯೋಜನೆಗಳನ್ನು ತಯಾರಿಸುತ್ತವೆ. ಹೀಗೆ, ಜಿಲ್ಲೆಯು ಆರ್‌ಎಮ್‌ಎಸ್‌ಎ ಅನುಷ್ಠಾನಕ್ಕೆ ಯೋಜನಾ ಘಟಕವಾಗುತ್ತದೆ. ಜಿಲ್ಲಾ ಮಟ್ಟದಲ್ಲಿ ಯೋಜನೆಯ ಪ್ರಾರಂಭದ ಹಂತವೆಂದರೆ ಸರ್ಕಾರಿ ಮತ್ತು ಸರ್ಕಾರೇತರ ವ್ಯಕ್ತಿಗಳ ಒಂದು ಪ್ರಮುಖ ತಂಡವನ್ನು ರಚಿಸುವುದು, ಮತ್ತು ಅದು ಶೈಕ್ಷಣಿಕ ಸ್ಥಿತಿ ಮತ್ತು ಅಗತ್ಯವನ್ನು ಖಚಿತಪಡಿಸಿಕೊಳ್ಳಲು ವಾಸಸ್ಥಳಗಳ ಮತ್ತು ಗ್ರಾಮಗಳ ವ್ಯಾಪಕ ಭೇಟಿಯನ್ನು ಕೈಗೊಳ್ಳಬೇಕು.

ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ಶಾಲಾ ಮಟ್ಟದಲ್ಲಿರುವ ವಿವಿಧ ಯೋಜನಾ ಗುಂಪುಗಳ/ಸಮಿತಿಗಳ/ಕಾರ್ಯಪಡೆಗಳನ್ನು **ನಕ್ಷೆ-2.6**ರಲ್ಲಿ ನೀಡಲಾಗಿದೆ.

**ನಕ್ಷೆ-2.6: ಆರ್‌ಎಮ್‌ಎಸ್‌ಎ ಅಡಿಯಲ್ಲಿ ಗುಂಪುಗಳ/ಸಮಿತಿಗಳ/ಕಾರ್ಯಪಡೆಗಳ ಮಟ್ಟಗಳು**




ಯೋಜನೆಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ಅವಲೋಕನಗಳು ಕೆಳಕಂಡಂತಿವೆ:

- ಪರೀಕ್ಷಾ-ತನಿಖೆ ನಡೆಸಿದ ಯಾವುದೆ ಶಾಲೆಗಳಲ್ಲಿ ಶಾಲಾ ಮುನ್ನೋಟ ಯೋಜನೆಗಳನ್ನು ತಯಾರಿಸಲಿಲ್ಲವಾದರೆ, ವಾರ್ಷಿಕ ಯೋಜನೆಗಳನ್ನು 170ರಲ್ಲಿ ಕೇವಲ 60 ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ತಯಾರಿಸಲಾಗಿತ್ತು.
- ಪರೀಕ್ಷಾ-ತನಿಖೆ ನಡೆಸಿದ ಎಲ್ಲ ಎಂಟು ಜಿಲ್ಲೆಗಳಲ್ಲಿಯೂ ಮತ್ತು ರಾಜ್ಯ ಮಟ್ಟದಲ್ಲಿಯೂ ಕೋರ್ ಸಮಿತಿಯನ್ನು ರಚಿಸಿರಲಿಲ್ಲ.
- ಜಿಲ್ಲಾಮಟ್ಟದ ಯೋಜನಾ ಸಮಿತಿಯು (ಡಿಪಿಸಿ) ಮುನ್ನೋಟ ಯೋಜನೆಯಲ್ಲಿ ಗುರಿಗಳನ್ನು ಸೇರಿಸಬೇಕಿತ್ತು ಮತ್ತು ಅವುಗಳನ್ನು ವಾರ್ಷಿಕವಾಗಿಸಿ ವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕಿತ್ತು. ಆರ್‌ಎಮ್‌ಎಸ್‌ಎಯ ಪ್ರಮುಖ ಘಟಕಗಳಿಗೆ ಯೋಜನಾ ಗುರಿಗಳನ್ನು ನಿರ್ದಿಷ್ಟಪಡಿಸಬೇಕಿತ್ತು. ಜೊತೆಗೆ, ಡಿಪಿಸಿ ಪ್ರಮುಖ ಚಟುವಟಿಕೆಗಳನ್ನು ಗುರುತಿಸಿ ಒಂದು ವಾಸ್ತವಿಕ ಅನುಷ್ಠಾನ ಸೂಚಿಯನ್ನು ಅಭಿವೃದ್ಧಿಪಡಿಸಬೇಕಿತ್ತು. ಯೋಜನಾ ಅವಧಿಯಲ್ಲಿ ಕೈಗೊಳ್ಳಬೇಕಾದ ಘಟಕವಾರು ಪ್ರಮುಖ ಚಟುವಟಿಕೆಗಳನ್ನು, ಅಪಾಯಗಳ ನಿರ್ಧರಣೆ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ಅನಿಶ್ಚತೆಗಳನ್ನು ಗುರುತಿಸಬೇಕಿತ್ತು. ಆದರೆ, ಪರೀಕ್ಷಾ-ತನಿಖೆ ನಡೆಸಿದ ಯಾವುದೇ ಜಿಲ್ಲೆಗಳಲ್ಲಿ ಡಿಪಿಸಿಯನ್ನು ರಚಿಸಿರಲಿಲ್ಲ. ತತ್ಪರಿಣಾಮವಾಗಿ ಪರೀಕ್ಷಾ-ತನಿಖೆ ನಡೆಸಿದ ಎಂಟು ಜಿಲ್ಲೆಗಳಲ್ಲಿ ಹಾಗೂ ರಾಜ್ಯ ಮಟ್ಟದ ಯೋಜನೆಯಲ್ಲಿ ಯಾವುದೇ ಗುರಿಗಳನ್ನು ನಿರ್ದಿಷ್ಟಪಡಿಸಿರಲಿಲ್ಲ. ಜೊತೆಗೆ, ಪ್ರಮುಖ ಚಟುವಟಿಕೆಗಳು ಮತ್ತು ಅನುಷ್ಠಾನ ಸೂಚಿಯನ್ನು ಗುರುತಿಸಿ ಅಭಿವೃದ್ಧಿಪಡಿಸಿರಲಿಲ್ಲ.

ಹೀಗೆ, ಆರ್‌ಎಮ್‌ಎಸ್‌ಎ ಚೌಕಟ್ಟಿನಲ್ಲಿ ತಿಳಿಸಿದ್ದ ಯೋಜನೆಯ ಅನುಪಸ್ಥಿತಿಯಲ್ಲಿ ತಯಾರು ಮಾಡಿದ ಜಿಲ್ಲಾಮಟ್ಟದ ಯೋಜನೆಗಳು ಅಗತ್ಯತೆಯ ಆಧಾರವಾಗಿದ್ದವೇ ಮತ್ತು ವಾಸ್ತವಿಕವಾಗಿದ್ದವೇ ಎಂಬುದನ್ನು ನಾವು ನಿರ್ಧರಿಸಲಾಗಲಿಲ್ಲ.

ಲೆಕ್ಕಪರಿಶೋಧನಾ ಅವಲೋಕನಗಳು ನೈಜವೆಂದು ಸರ್ಕಾರವು ಒಪ್ಪಿಕೊಂಡಿತು (ಫೆಬ್ರವರಿ 2019) ಮತ್ತು ಜಿಲ್ಲಾ ಯೋಜನೆಗಳಲ್ಲಿ ಪ್ರತ್ಯೇಕ ಶಾಲೆಗಳಿಂದ ಅಗತ್ಯವಾದ ಒಳಹರಿವುಗಳನ್ನು ಸೇರಿಸಲು ಅನೌಪಚಾರಿಕ ವ್ಯವಸ್ಥೆ ಅಸ್ತಿತ್ವದಲ್ಲಿದೆ ಎಂದು ತಿಳಿಸಿತು. ಆದರೆ, ಆರ್‌ಎಮ್‌ಎಸ್‌ಎ ಚೌಕಟ್ಟು ಸಾಕ್ಷ್ಯಾಧಾರಿತ ಕಾರ್ಯತಂತ್ರ ಯೋಜನೆಯನ್ನು ನಿಗದಿಪಡಿಸಿದ್ದರಿಂದ ಯೋಜನಾ ಪ್ರಕ್ರಿಯೆಯನ್ನು ಉತ್ಕೃಷ್ಟಗೊಳಿಸಲು ಸರ್ಕಾರವು ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ಪರಿಶೀಲಿಸುವ ಅಗತ್ಯವಿದೆ ಎಂದು ನಾವು ಭಾವಿಸುತ್ತೇವೆ.

**ಶಿಫಾರಸು–11: ಆರ್‌ಎಮ್‌ಎಸ್‌ಎ ಚೌಕಟ್ಟಿನಲ್ಲಿ ಆಲೋಚಿಸಿದ ಕಾರ್ಯಗಳನ್ನು ನಿರ್ವಹಿಸಲು ಜಿಲ್ಲೆಗಳಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಕೋರ್ ಗುಂಪುಗಳನ್ನು ರಚಿಸಬಹುದು.**

ಸರ್ಕಾರವು ಶಿಫಾರಸನ್ನು ಒಪ್ಪಿಕೊಂಡಿತು ಮತ್ತು ಇದೇ ರೀತಿಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಈ ಮನೋಭಾವನೆಯನ್ನು ಅನುಸರಿಸಲಾಗುವುದು ಎಂದು ತಿಳಿಸಿತು.

### *(ಸಿ) ಮೂಲಸೌಕರ್ಯಗಳು ಮತ್ತು ಖರೀದಿಗೆ ಯೋಜನೆಗಳು*

ಆರ್‌ಎಮ್‌ಎಸ್‌ಎ ಅಡಿಯಲ್ಲಿ ಸಿವಿಲ್ ಕಾಮಗಾರಿಗಳು ಭೌತಿಕ ಮತ್ತು ಹಣದ ಅವಶ್ಯಕತೆಗಳ ಶಾಲಾವಾರು ಸಂಕಲನದೊಂದಿಗೆ ಪ್ರಾರಂಭವಾಗಬೇಕು. ಆ ನಂತರ ಪ್ರತಿಯೊಂದು ಜಿಲ್ಲೆಯ ಮೂಲಸೌಕರ್ಯದ ಅಗತ್ಯತೆಯನ್ನು ನಿರ್ಣಯಿಸಬೇಕು. ಅಸ್ತಿತ್ವದಲ್ಲಿರುವ ಮೂಲಸೌಕರ್ಯಗಳ ದುರಸ್ತಿಗಳ ಸಾಧ್ಯತೆಯನ್ನು ಅನ್ವೇಷಿಸಿದ ನಂತರವೇ ಹೆಚ್ಚುವರಿ ಶಾಲಾಕೊಠಡಿಗಳನ್ನು ಒದಗಿಸುವುದನ್ನು ಪರಿಗಣಿಸಬೇಕು. ಜಿಲ್ಲೆಯ ಒಟ್ಟು ಅವಶ್ಯಕತೆಯನ್ನು ಪಡೆದ ನಂತರ ಪ್ರಗತಿಯಲ್ಲಿರುವ ಯೋಜನೆಗಳ ಮೂಲಕ ಅವುಗಳಲ್ಲಿ ಎಷ್ಟು ಅಗತ್ಯತೆಗಳಿಗೆ ಹಣವನ್ನು ಒದಗಿಸಬಹುದು ಹಾಗೂ ಆರ್‌ಎಮ್‌ಎಸ್‌ಎ ಮೂಲಕ ಎಷ್ಟು ಹಣವನ್ನು ನೀಡಬಹುದು ಎಂಬುದನ್ನು ನಿರ್ಣಯಿಸುವ ಅಗತ್ಯವಿದೆ.

ಕಾಮಗಾರಿಗಳನ್ನು ಪ್ರಸ್ತಾವಿಸುವ ಮೊದಲು ಅಸ್ತಿತ್ವದಲ್ಲಿರುವ ಕಟ್ಟಡಗಳು, ಅವುಗಳ ಸ್ಥಿತಿ ಮತ್ತು ದುರಸ್ತಿಯ ಸಂಭಾವ್ಯತೆ ಮುಂತಾದವುಗಳನ್ನು ನಿರ್ಣಯಿಸಿರುವ ಯಾವುದೇ ಪುರಾವೆಗಳನ್ನು ಲೆಕ್ಕಪರಿಶೋಧನೆಯು ಗಮನಿಸಲಿಲ್ಲ. ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ, **ಕೋಷ್ಟಕ–2.11**ರಲ್ಲಿ ತೋರಿಸಿರುವಂತೆ, ಮೂಲಸೌಕರ್ಯಗಳ ಅಧಿಕ ರಚನೆಯನ್ನು ಗಮನಿಸಲಾಯಿತು.

**ಕೋಷ್ಟಕ–2.11: ಅಧಿಕ ಮೂಲಸೌಕರ್ಯಗಳ ರಚನೆ**

| ಜಿಲ್ಲೆ | ಶಾಲೆಯ ಹೆಸರು | ಷರಾ |
|---|---|---|
| ಬೆಳಗಾವಿ | ಸರ್ಕಾರಿ ಪ್ರೌಢಶಾಲೆ, ಕಡೋಲಿ | ಪಂಚ ಸೌಲಭ್ಯ ಯೋಜನೆ ಮತ್ತು ಆರ್‌ಎಮ್‌ಎಸ್‌ಎ ಅಡಿಯಲ್ಲಿ ಒಂದೊಂದು ಕಟ್ಟಡಗಳನ್ನು ನಿರ್ಮಿಸಲಾಯಿತು. ಆರ್‌ಎಮ್‌ಎಸ್‌ಎ ಅಡಿಯಲ್ಲಿ ನಿರ್ಮಿಸಿದ ಕಟ್ಟಡವು ಖಾಲಿ ಉಳಿದಿದೆ |
| ಬೆಳಗಾವಿ | ಸರ್ಕಾರಿ ಪ್ರೌಢಶಾಲೆ, ಹಳಿಯಾಳ, ಅಥಣಿ | ಶಾಲೆಯು, ಸಾಕಷ್ಟಿದ್ದ ತನ್ನದೇ ಕಟ್ಟಡವನ್ನು ಹೊಂದಿದ್ದರೂ ಸಹ ಆರ್‌ಎಮ್‌ಎಸ್‌ಎ ಅಡಿಯಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಲಾಯಿತು. ತತ್ಪರಿಣಾಮವಾಗಿ ಹಳೆಯ ಕಟ್ಟಡವು ಖಾಲಿ ಉಳಿದಿದೆ. |
| ಹಾಸನ | ಸರ್ಕಾರಿ ಪೌಢಶಾಲೆ, ಸೋಮನಹಳ್ಳಿ | ಶಾಲೆಯು ತನ್ನದೇ ಕಟ್ಟಡವನ್ನು ಹೊಂದಿದ್ದರೂ ಸಹ ಆರ್‌ಎಮ್‌ಎಸ್‌ಎ ಅಡಿಯಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಲಾಯಿತು. ಅದು ಪೂರ್ಣಗೊಂಡ ನಂತರವೂ ಸಹ ಶಾಲೆಯು ಹಳೆಯ ಕಟ್ಟಡದಲ್ಲಿಯೇ ಕಾರ್ಯ ನಿರ್ವಹಿಸುತ್ತಿರುವುದರಿಂದ ಹೊಸ ಕಟ್ಟಡವು ಖಾಲಿ ಉಳಿದಿದೆ |

ಆಧಾರ: ಜಂಟಿ ಭೌತಿಕ ಪರಿಶೀಲನೆ ಆಧಾರಿತ ಮಾಹಿತಿ.

ಅದೇ ರೀತಿ, ಆರ್‌ಎಮ್‌ಎಸ್‌ಎಗಾಗಿನ ಹಣಕಾಸು ನಿರ್ವಹಣೆ ಮತ್ತು ಖರೀದಿ ಮೇಲಿನ ಕೈಪಿಡಿಯ ನಿಬಂಧನೆಗಳ ಅನ್ವಯ ವರ್ಷವೊಂದರ ಖರೀದಿ ಯೋಜನೆಯನ್ನು ಪ್ರತಿ ಹಣಕಾಸು ವರ್ಷದ ಪ್ರಾರಂಭದಲ್ಲಿಯೇ ತಯಾರಿಸಬೇಕು. ಇದು ವಾಸ್ತವಿಕ ಅಗತ್ಯತೆಯ ಮೇಲೆ ಆಧಾರಿತವಾಗಿರಬೇಕು ಮತ್ತು

ಎಸ್‌ಪಿಡಿ ಕಛೇರಿ, ಜಿಲ್ಲಾ ಮಟ್ಟದ ಕಛೇರಿಗಳು ಮತ್ತು ಶಾಲೆಗಳ ಸರಕುಗಳ ಅಗತ್ಯತೆಯನ್ನು ನಿರ್ಧರಿಸಿದ ನಂತರ ತಯಾರಿಸಬೇಕು. ಆದರೆ, ಅಂತಹ ಯಾವುದೇ ಖರೀದಿ ಯೋಜನೆಯನ್ನು ತಯಾರಿಸಿರಲಿಲ್ಲವೆಂದು ನಾವು ಗಮನಿಸಿದೆವು.

ಯಾವುದೇ ಪ್ರತ್ಯೇಕ ದಾಖಲೆ ಅಸ್ತಿತ್ವದಲ್ಲಿಲ್ಲ ಎಂದು ಸರ್ಕಾರವು ಒಪ್ಪಿಕೊಂಡಿತು (ಫೆಬ್ರವರಿ 2019). ಆದರೆ, ಪ್ರತ್ಯೇಕ ಖರೀದಿ ಯೋಜನೆಯು ಕಡ್ಡಾಯವಾಗಿದ್ದರಿಂದ ಸಿವಿಲ್ ಕಾಮಗಾರಿಗಳ ಪೂರ್ಣಗೊಳಿಸುವಿಕೆಯನ್ನು ಖರೀದಿಗಳೊಂದಿಗೆ ಒಟ್ಟುಗೂಡಿಸಲು ಖರೀದಿ ಯೋಜನೆಯನ್ನು ತಯಾರಿಸುವುದನ್ನು ಸರ್ಕಾರವು ಪರಿಗಣಿಸುವ ಅಗತ್ಯವಿದೆ

### *(ಡಿ) ಇತರೆ ಇಲಾಖೆಗಳೊಂದಿಗೆ ಹಾಗೂ ಯೋಜನೆಗಳೊಂದಿಗೆ ಸೇರ್ಪಡೆಯಾಗದಿರುವುದು*

ಆರ್‌ಎಮ್‌ಎಸ್‌ಎ ಅನುಷ್ಠಾನವು ಇತರೆ ವಿವಿಧ ಇಲಾಖೆಗಳೊಂದಿಗೆ ಒಮ್ಮುಖವಾಗುವುದು ಮತ್ತು ಸಮನ್ವಯವನ್ನು ಕೋರುತ್ತದೆ. ಅದರಂತೆ, ಸಮಾಜಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಯುವಕರ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಂಸದರ ಕ್ಷೇತ್ರೀಯ ಅಭಿವೃದ್ಧಿ ನಿಧಿ, ಶಾಸಕರ ಕ್ಷೇತ್ರೀಯ ಅಭಿವೃದ್ಧಿ ನಿಧಿ, ಮುಂತಾದ ವಿವಿಧ ಇಲಾಖೆಗಳ ಪ್ರತಿನಿಧಿಗಳನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟದ ಯೋಜನಾ ಸಮಿತಿಗಳಲ್ಲಿ ಸೇರಿಸುವ ಮೂಲಕ ಒಮ್ಮುಖವಾಗುವುದನ್ನು ಮತ್ತು ಸಮನ್ವಯವನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಒಂದು ಸಾಂಸ್ಥಿಕ ವ್ಯವಸ್ಥೆಯನ್ನು ರಚಿಸುವ ಅಗತ್ಯವಿದೆ. ಆದರೆ, ಇತರೆ ಇಲಾಖೆಗಳ ಪ್ರತಿನಿಧಿಗಳನ್ನು ಈ ಯಾವುದೇ ಸಮಿತಿಗಳನ್ನು ಸೇರಿಸಿರಲಿಲ್ಲವಾಗಿ ಅವರುಗಳನ್ನು ಯೋಜನಾ ಪ್ರಕ್ರಿಯೆಯಿಂದ ಹೊರಗಿಡಲಾಗಿತ್ತು.

ತತ್ಪರಿಣಾಮವಾಗಿ, ನಿಧಿಗಳನ್ನು ಒಟ್ಟುಗೂಡಿಸುವುದನ್ನು ಉತ್ತೇಜಿಸಲಿಲ್ಲ ಮತ್ತು ಸಾರಿಗೆ ಇಲಾಖೆಯ ಮೂಲಕ ಒದಗಿಸಬಹುದಾದ ಶಾಲೆಗಳಿಗೆ ಸಾರಿಗೆ ಸೌಕರ್ಯಗಳು, ಸಂಸದರ ಕ್ಷೇತ್ರೀಯ ಅಭಿವೃದ್ಧಿ ನಿಧಿ ಹಾಗೂ ಶಾಸಕರ ಕ್ಷೇತ್ರೀಯ ಅಭಿವೃದ್ಧಿ ನಿಧಿಯಿಂದ ಒದಗಿಸಬಹುದಾಗಿದ್ದ ಶಾಲೆಗಳಿಗೆ ಕಾಂಪೌಂಡ್ ಗೋಡೆಗಳು/ಆಟದ ಮೈದಾನಗಳು, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಮೂಲಕ ವಿಕಲಚೇತನರಿಗೆ ಒದಗಿಸಬಹುದಾಗಿದ್ದ ಸಹಾಯ ಮತ್ತು ಉಪಕರಣಗಳು ಮುಂತಾದವುಗಳನ್ನು ಅನ್ವೇಷಿಸಲಿಲ್ಲ. ಜೊತೆಗೆ ಮಾದಕದ್ರವ್ಯದ ಕೆಟ್ಟ ಪರಿಣಾಮಗಳು, ಅಂತರ್ಜಾಲದ ಬಳಕೆ, ಉದ್ಯೋಗದ ಅವಕಾಶಗಳು, ಬಾಲಕಿಯರ ಸಬಲೀಕರಣ ಮುಂತಾದವುಗಳ ಬಗ್ಗೆ ಅರಿವನ್ನು ಮೂಡಿಸಲು ಆರ್‌ಎಮ್‌ಎಸ್‌ಎಎಸ್‌ಕೆ ಗೃಹ, ಉದ್ಯೋಗ ಮತ್ತು ತರಬೇತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮುಂತಾದ ಇಲಾಖೆಗಳೊಂದಿಗೆ ಸಮನ್ವಯ ಮಾಡಲಿಲ್ಲ. ಅದೇ ರೀತಿ ಲೋಕೋಪಯೋಗಿ ಇಲಾಖೆ, ಅಗ್ನಿಶಾಮಕ ಇಲಾಖೆ ಮುಂತಾದವುಗಳೊಂದಿಗಿನ ಸಮನ್ವಯವು ಎಲ್ಲ ಹಂತಗಳಲ್ಲಿನ ವಿಪತ್ತು ನಿರ್ವಹಣಾ ತಯಾರಿಕೆಗೆ ಸುರಕ್ಷತಾ ಕ್ರಮಗಳನ್ನು ಅನುಕೂಲಗೊಳಿಸುತ್ತಿತ್ತು.

### *2.1.12.2 ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಸಂಶೋಧನೆ*

ಆರ್‌ಎಮ್‌ಎಸ್‌ಎ ಚೌಕಟ್ಟು ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಗೆ ಮತ್ತು ಅನುಷ್ಠಾನವನ್ನು ಸದೃಢಗೊಳಿಸಲು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು ವಿವಿಧ ಹಂತಗಳನ್ನು ಮತ್ತು ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಸಂಶೋಧನೆಯ ವಿಧಾನಗಳನ್ನು ನಿಗದಿಪಡಿಸಿದೆ. ರಾಜ್ಯದಲ್ಲಿ ಆರ್‌ಎಮ್‌ಎಸ್‌ಎ ಮತ್ತು ಇತರ ವಿಲೀನಗೊಂಡ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಸಂಶೋಧನೆಯಲ್ಲಿ ಲೆಕ್ಕಪರಿಶೋಧನೆಯು ಕೆಳಕಂಡ ನ್ಯೂನತೆಗಳನ್ನು ಗಮನಿಸಿತು.

- ***ಆಡಳಿತ ಮಂಡಳಿ ಮತ್ತು ಕಾರ್ಯನಿರ್ವಾಹಕ ಮಂಡಳಿಯಿಂದ ಪರಿಶೀಲನೆ***

ಆಡಳಿತ ಮಂಡಳಿ (ಜಿಸಿ) ಮತ್ತು ಕಾರ್ಯನಿರ್ವಾಹಕ ಮಂಡಳಿಗಳು (ಇಸಿ) ಅನುಕ್ರಮವಾಗಿ ಒಂದು ಮತ್ತು ನಾಲ್ಕು ಸಭೆಗಳನ್ನು ನಡೆಸುವುದು ಅಗತ್ಯವಾಗಿದೆ. ಆದರೆ, ಹಿಂದಿನ ಎಂಟು ವರ್ಷಗಳಲ್ಲಿ ಆಡಳಿತ ಮಂಡಳಿಯು ಕೇವಲ ಒಂದು ಸಭೆಯನ್ನು ನಡೆಸಿದ್ದರೆ ಮತ್ತು ಕಾರ್ಯನಿರ್ವಾಹಕ ಮಂಡಳಿಯು 2009-10ರಿಂದ 2017-18ರ ಅವಧಿಯಲ್ಲಿ 11 ಬಾರಿ ಸಭೆ ನಡೆಸಿತ್ತು. ಅಲ್ಲದೆ, ಕಾರ್ಯನಿರ್ವಾಹಕ ಮಂಡಳಿಯು 2010-11 ಹಾಗೂ 2014-15ರ ಅವಧಿಯಲ್ಲಿ ಒಂದು ಬಾರಿಯೂ ಸಭೆ ಸೇರಿರಲಿಲ್ಲ ಎಂಬುದನ್ನು ನಾವು ಗಮನಿಸಿದೆವು. 2015-16ರಿಂದ 2017-18ರ ಅವಧಿಯಲ್ಲಿ ಮಂಡಳಿಯು

ಪ್ರತಿವರ್ಷದಲ್ಲಿ ಕೇವಲ ಒಂದು ಬಾರಿ ಮಾತ್ರ ಸಭೆ ಸೇರಿತ್ತು. ಹೀಗೆ, ಆಡಳಿತ ಮಂಡಳಿ ಮತ್ತು ಕಾರ್ಯನಿರ್ವಾಹಕ ಮಂಡಳಿಗಳ ನಿಯತಕಾಲಿಕ ಸಭೆಗಳ ಅನುಪಸ್ಥಿತಿಯಲ್ಲಿ ವಿವಿಧ ಚಟುವಟಿಕೆಗಳ ಮೇಲ್ವಿಚಾರಣೆಯು ಸಾಕಷ್ಟಿರಲಿಲ್ಲ.

ಜಿಲ್ಲಾಧಿಕಾರಿಗಳು ಮತ್ತು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಒಂದು ಬಾರಿಯೂ ಸಭೆಗೆ ಹಾಜರಿರಲಿಲ್ಲವೆಂದು ನಡೆಸಿದ ಸಭೆಗಳ ಟಿಪ್ಪಣಿಗಳ ಪರಿಶೀಲನೆಯು ತೋರಿಸಿತು. ಜೊತೆಗೆ, ಜಿಲ್ಲಾಮಟ್ಟದ ಅನುಷ್ಠಾನ ಏಜೆನ್ಸಿಗಳಿಗೆ ಮತ್ತು ರಾಜ್ಯಕ್ಕೆ ಫಲಿತಾಂಶ ಸೂಚಕಗಳ ದೃಷ್ಟಿಯಿಂದ ಗುರಿಗಳನ್ನು ನಿಗದಿಪಡಿಸಿರಲಿಲ್ಲ ಎಂಬುದನ್ನು ನಾವು ಗಮನಿಸಿದೆವು. ಹೀಗೆ, ಕಾರ್ಯನಿರ್ವಹಣಾ ಮಟ್ಟದಲಿ ಮೇಲ್ವಿಚಾರಣೆಯ ಕೊರತೆಯಿದ್ದಿತು.

- ***ರಾಜ್ಯ ಸರ್ಕಾರದಿಂದ ಮೇಲ್ವಿಚಾರಣೆ***

ಎಲ್ಲಾ ಜಿಲ್ಲೆಗಳ ಕಾರ್ಯಕ್ಷಮತೆಯನ್ನು ಒಳಗೊಂಡಂತೆ ಆರ್‌ಎಮ್‌ಎಸ್‌ಎ ಅನುಷ್ಠಾನದ ಎಲ್ಲ ಅಂಶಗಳನ್ನು ರಾಜ್ಯ ಮಿಷನ್ ಮತ್ತು ರಾಜ್ಯ ಸರ್ಕಾರ ಮೇಲ್ವಿಚಾರಣೆ ಮಾಡುವ ಅಗತ್ಯತೆಯಿದ್ದಿತು. ಈ ಸಂಬಂಧವಾಗಿ ಆರು ತಿಂಗಳುಗಳಿಗೊಮ್ಮೆ ರಾಜ್ಯ ಸರ್ಕಾರವು ಕ್ರೋಢೀಕೃತ ವರದಿಯನ್ನು ಭಾರತ ಸರ್ಕಾರಕ್ಕೆ ಕಳುಹಿಸಬೇಕಿತ್ತು. ಆದರೆ, 2009–10ರಿಂದ 2017–18ರ ಅವಧಿಯಲ್ಲಿ ವರದಿಯನ್ನು ಕಳುಹಿಸದಿರುವುದನ್ನು ನಾವು ಗಮನಿಸಿದೆವು.

- ***ಜಿಲ್ಲಾ ಮಟ್ಟದ ಸಮಿತಿಗಳು***

ಆರ್‌ಎಮ್‌ಎಸ್‌ಎ ಹಣಕಾಸು ನಿರ್ವಹಣೆ ಮತ್ತು ಖರೀದಿ ಕೈಪಿಡಿಯ ನಿಬಂಧನೆಗಳ ಅಡಿಯಲ್ಲಿ ಆರ್‌ಎಮ್‌ಎಸ್‌ಎ ಅಡಿಯಲ್ಲಿನ ವಿವಿಧ ಕ್ರಮಗಳ ಅನುಷ್ಠಾನದಲ್ಲಿನ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಜಿಲ್ಲಾ ಮಟ್ಟದ ಸಮಿತಿಯೊಂದನ್ನು ರಚಿಸುವ ಅಗತ್ಯವಿದೆ. ಪರೀಕ್ಷಾ–ತನಿಖೆ ನಡೆಸಿದ ಎಲ್ಲ ಎಂಟು ಜಿಲ್ಲೆಗಳಲ್ಲಿಯೂ ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಿರಲಿಲ್ಲವಾಗಿ ಆರ್‌ಎಮ್‌ಎಸ್‌ಯ ಎಲ್ಲ ಘಟಕಗಳ ಅನುಷ್ಠಾನ, ಕಾಮಗಾರಿಗಳ ಪ್ರಗತಿ ಮತ್ತು ಗುಣಮಟ್ಟ, ಅವುಗಳಿಗೆ ಪಾವತಿಗಳು, ಮುಂತಾದವುಗಳನ್ನು ಮೇಲ್ವಿಚಾರಣೆ ಮಾಡಲಾಗಲಿಲ್ಲ.

- ***ಗ್ರಾಮ ಸಭೆಗಳಿಂದ ಮತ್ತು ಗ್ರಾಮ ಪಂಚಾಯತಿಗಳಿಂದ ಮೇಲ್ವಿಚಾರಣೆ***

ಗ್ರಾಮ ಸಭೆಗಳು ಮತ್ತು ಗ್ರಾಮ ಪಂಚಾಯತಿಗಳು ಸಹ ಶಾಲಾ ಮಟ್ಟದಲ್ಲಿ ಆರ್‌ಎಮ್‌ಎಸ್‌ಎಯ ಎಲ್ಲ ಘಟಕಗಳ ಅನುಷ್ಠಾನದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಬೇಕಿತ್ತು. ಪರೀಕ್ಷಾ–ತನಿಖೆ ನಡೆಸಿದ ಎಲ್ಲ ಎಂಟು ಜಿಲ್ಲೆಗಳಲ್ಲಿ ಗ್ರಾಮ ಸಭೆಗಳು ಮತ್ತು ಗ್ರಾಮ ಪಂಚಾಯತಿಗಳು ಯಾವುದೇ ಶಾಲೆಗಳನ್ನು ಮೇಲ್ವಿಚಾರಣೆ ಮಾಡದಿರುವುದನ್ನು ನಾವು ಗಮನಿಸಿದೆವು.

- ***ಶಾಲಾ ಅಭಿವೃದ್ಧಿ ನಿರ್ವಹಣಾ ಸಮಿತಿ (ಎಸ್‌ಡಿಎಮ್‌ಸಿ)***

ಆರ್‌ಎಮ್‌ಎಸ್‌ಎ ಚೌಕಟ್ಟಿನ ನಿಬಂಧನೆಗಳ ಅನ್ವಯ ಎಸ್‌ಡಿಎಮ್‌ಸಿ ಶಾಲಾ ಮಟ್ಟದಲ್ಲಿ ಆರ್‌ಎಮ್‌ಎಸ್‌ಎಯ ಎಲ್ಲ ಘಟಕಗಳ ಅನುಷ್ಠಾನದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಬೇಕಿತ್ತು. ಅಲ್ಲದೆ, ಶಾಲಾ ಅಭಿವೃದ್ಧಿ ನಿರ್ವಹಣಾ ಸಮಿತಿಯು ಕಾಮಗಾರಿಗಳ ನಿವೇಶನಗಳನ್ನು ತಪಾಸಣೆ ಮಾಡಬೇಕಿತ್ತು, ಆವರ್ತಕವಲ್ಲದ ವೆಚ್ಚದ ಪ್ರಗತಿಯ ವರದಿಗಳನ್ನು ಪಡೆಯಬೇಕಿತ್ತು, ಶಿಕ್ಷಣ ಸ್ಥಿತಿ, ಸಮಾನತೆಯ ಸ್ಥಿತಿ ಮತ್ತು ಗುಣಮಟ್ಟದ ಸ್ಥಿತಿಗಳನ್ನು ಪರಿಶೀಲಿಸಬೇಕಿತ್ತು. ಪರೀಕ್ಷಾ–ತನಿಖೆ ನಡೆಸಿದ 91 ಸರ್ಕಾರಿ ಶಾಲೆಗಳಲ್ಲಿ ಲೆಕ್ಕಪರಿಶೋಧನೆಗೆ ಸಲ್ಲಿಸಿದ ದಾಖಲೆಗಳಿಂದ ಅಂತಹ ಯಾವುದೇ ಮೇಲ್ವಿಚಾರಣೆಗಳನ್ನು ನಡೆಸಿರಲಿಲ್ಲವೆಂದು ನಾವು ಗಮನಿಸಿದೆವು.

- ***ದೂರು ಪರಿಹಾರ ಕೋಶ***

ಆರ್‌ಎಮ್‌ಎಸ್‌ಎ ಮಾರ್ಗದರ್ಶಿ ಸೂತ್ರಗಳ ಅನ್ವಯ, ರಾಜ್ಯಸರ್ಕಾರವು ರಾಜ್ಯ, ಜಿಲ್ಲಾ ಮತ್ತು ಶಾಲಾ ಮಟ್ಟದಲ್ಲಿ ದೂರು ಪರಿಹಾರ ವ್ಯವಸ್ಥೆಯನ್ನು ಸ್ಥಾಪಿಸುವ ಅಗತ್ಯವಿದೆ. ಆದರೆ, ಯಾವುದೇ ಮಟ್ಟದಲ್ಲಿ ಅಂತಹ ಕೋಶವನ್ನು ಸ್ಥಾಪಿಸಿರಲಿಲ್ಲ ಮತ್ತು ದೂರುಗಳ ಸ್ವೀಕೃತಿ ಮತ್ತು ವಿಲೇವಾರಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ.

- ***ಮೌಲ್ಯಮಾಪನ***

ಜಿಲ್ಲಾ ಮಟ್ಟದಲ್ಲಿ ನಿಯತಕಾಲಿಕ ಮೌಲ್ಯಮಾಪನಗಳನ್ನು ಹಾಗೂ ಮಾದರಿ ಸಮೀಕ್ಷೆಗಳನ್ನು ನಡೆಸಿ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು ಫಲಿತಾಂಶಗಳನ್ನು ಬಳಸಿಕೊಳ್ಳಬೇಕೆಂದು ಆರ್‌ಎಮ್‌ಎಸ್‌ಎ ಚೌಕಟ್ಟು ನಿಗದಿಪಡಿಸುತ್ತದೆ. ಕಂಡಿಕೆ 2.1.11.5ರಲ್ಲಿ ಈಗಾಗಲೇ ಚರ್ಚಿಸಿರುವಂತೆ, 2015–16ರಿಂದ 2017–18ರ ಅವಧಿಯಲ್ಲಿ ಕೇವಲ ಎರಡು ಸಮೀಕ್ಷೆಗಳನ್ನು ನಡೆಸಲಾಗಿದ್ದಿತು.

- ***ಸಂಶೋಧನೆ***

ಪ್ರತಿಷ್ಠಿತ ಸ್ವತಂತ್ರ ಸಂಸ್ಥೆಗಳನ್ನು ತೊಡಗಿಸಿಕೊಂಡು ಆರ್‌ಎಮ್‌ಎಸ್‌ಎಯ ವಿವಿಧ ಚಟುವಟಿಕೆಗಳ ಮೇಲೆ ರಾಜ್ಯ ಸರ್ಕಾರವು ಸ್ವತಂತ್ರ ಸಂಶೋಧನೆಗಳನ್ನು ನಡೆಸಬೇಕಿತ್ತು. ಆದರೆ, ಲೆಕ್ಕಪರಿಶೋಧನೆಗೆ ಸಲ್ಲಿಸಿದ ದಾಖಲೆಗಳಿಂದ ಅಂತಹ ಯಾವುದೇ ಸಂಶೋಧನಾ ಅಧ್ಯಯನಗಳು ಕಂಡುಬರುತ್ತಿಲ್ಲ.

ಆರ್‌ಎಮ್‌ಎಸ್‌ಎಯಲ್ಲಿ ಅಂತರ್ನಿರ್ಮಿತ ಮೇಲ್ವಿಚಾರಣಾ ಮತ್ತು ಮೌಲ್ಯಮಾಪನ ವ್ಯವಸ್ಥೆಯು ಅಸ್ತಿತ್ವದಲ್ಲಿದ್ದರೂ ಸಹ ಈ ವಿಷಯದಲ್ಲಿ ಅಸಮರ್ಪಕ ಕ್ರಮವು, ಈ ಹಿಂದಿನ ಕಂಡಿಕೆಗಳಲ್ಲಿ ಹೊರತಂದಿರುವಂತೆ, ಯೋಜನೆಯ ಅನುಷ್ಠಾನದಲ್ಲಿ ವಿವಿಧ ನ್ಯೂನತೆಗಳಿಗೆ ಕಾರಣವಾಯಿತು.

**ಶಿಫಾರಸು–12: ಆರ್‌ಎಮ್‌ಎಸ್‌ಎ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಎಲ್ಲ ಮಟ್ಟಗಳಲ್ಲಿಯೂ ಅಂದರೆ, ಜಿಲ್ಲಾ ಮಟ್ಟದ ಸಮಿತಿಗಳ ರಚನೆ, ಗ್ರಾಮ ಸಭೆ ಮತ್ತು ಗ್ರಾಮ ಪಂಚಾಯತಿಗಳಿಂದ ಮೇಲ್ವಿಚಾರಣೆ ಮುಂತಾದ ಅಂತರ್ನಿರ್ಮಿತ ಮೇಲ್ವಿಚಾರಣಾ ವ್ಯವಸ್ಥೆಯನ್ನು ಸರ್ಕಾರವು ಬಲಪಡಿಸುವ ಅಗತ್ಯತೆಯಿದೆ.**

## 2.1.13 ನಿರ್ಣಯ

ಸುಧಾರಿತ ಭೌತಿಕ ಸೌಕರ್ಯಗಳು ಮತ್ತು ಅರ್ಹ ಶಿಕ್ಷಕರ ಮೂಲಕ ಹಾಗೂ ಬಾಲಕಿಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳ ಮತ್ತು ವಿಕಲಚೇತನ ಮಕ್ಕಳಿಗೆ ವಿಶೇಷ ಗಮನ ನೀಡುವ ಮೂಲಕ ಸಮಂಜಸವಾದ ಅಂತರದಲ್ಲಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಪ್ರವೇಶವನ್ನು ಒದಗಿಸುವ ಮೂಲಕ ಪ್ರವೇಶ, ಗುಣಮಟ್ಟ ಮತ್ತು ಸಮಾನತೆಯನ್ನು ಸಾಧಿಸುವುದು ಆರ್‌ಎಮ್‌ಎಸ್‌ಎ ಉದ್ದೇಶವಾಗಿತ್ತು. ಆದರೆ, ಆರ್‌ಎಮ್‌ಎಸ್‌ಯ ವಿವಿಧ ಘಟಕಗಳ ನಡುವೆ ಹಣದ ಹಂಚಿಕೆಯಲ್ಲಿ ಅಸಮಾನತೆಯಿದ್ದಿತು, ಏಕೆಂದರೆ ಹೆಚ್ಚಿನ ಹಣವನ್ನು ಭೌತಿಕ ಮೂಲಸೌಕರ್ಯಗಳ ಕಡೆಗೆ ಮಾತ್ರ ಕೇಂದ್ರೀಕರಿಸಲಾಗಿತ್ತು.

ಪ್ರೌಢಶಿಕ್ಷಣದಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಸುಧಾರಿಸಲು ರಾಜ್ಯಕ್ಕೆ ಸಾಧ್ಯವಾದರೂ ಸಹ 2017ರೊಳಗೆ ಶೇಕಡಾ 100ರಷ್ಟು ಜಿಇಆರ್ ಗುರಿಯನ್ನು ಇನ್ನೂ ಸಾಧಿಸಲಾಗಿಲ್ಲ. ಜೊತೆಗೆ ಪದವಿಪೂರ್ವ ಶಿಕ್ಷಣವನ್ನು ಆರ್‌ಎಮ್‌ಎಸ್‌ಎ ಆವರಣಕ್ಕೆ ತರಲು ಅಗತ್ಯವಾದ ಸಾಂಸ್ಥಿಕ ಸುಧಾರಣೆಯನ್ನು ಅದು ಕೈಗೊಳ್ಳಲಿಲ್ಲ. ಇದು 16–18 ವರ್ಷ ಗುಂಪಿನ ಮಕ್ಕಳನ್ನು ಗುಣಮಟ್ಟದ ಶಿಕ್ಷಣದಿಂದ ವಂಚಿಸಿದಂತಾಯಿತು.

ಸಾಕಷ್ಟು ಶಾಲಾಕೊಠಡಿಗಳು, ಪ್ರಯೋಗಶಾಲೆಗಳು, ಗ್ರಂಥಾಲಯಗಳು, ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳು ಮುಂತಾದ ಮೂಲಸೌಕರ್ಯಗಳ ಮೂಲಕ ಪ್ರೌಢ ಶಿಕ್ಷಣದಲ್ಲಿನ ಗುಣಮಟ್ಟವನ್ನು ಸುಧಾರಿಸಲು ರಾಜ್ಯ ಸರ್ಕಾರವು ತನ್ನ ಮುನ್ನೋಟ ಯೋಜನೆಯಲ್ಲಿ ನಿಗದಿಪಡಿಸಿದ್ದ ಗುರಿಗಳನ್ನು ಇನ್ನೂ ಸಾಧಿಸಲಾಗಿಲ್ಲ. ರಾಜ್ಯದ ಪಿಟಿಆರ್, ನಿಗದಿತ ಅನುಪಾತವಾದ 30:1ರ ಒಳಗಿದ್ದರೂ ಸಹ ಪಿಟಿಆರ್ ಅನುಪಾತವು 30:1ಕ್ಕಿಂತ ಹೆಚ್ಚಿಗೆ ಇದ್ದ ಅನೇಕ ಶಾಲೆಗಳಿದ್ದವು ಏಕೆಂದರೆ ಶಾಲಾ ಮಟ್ಟದಲ್ಲಿ ಶಿಕ್ಷಕರನ್ನು ನಿಯೋಜಿಸುವುದಕ್ಕೆ ಯಾವುದೇ ಮೇಲ್ವಿಚಾರಣೆಯಿರಲಿಲ್ಲ. ಪ್ರತಿಯೊಂದು ಶಾಲೆಗೂ ವಿಷಯ–ನಿರ್ದಿಷ್ಟ ಶಿಕ್ಷಕರನ್ನು ನಿಯೋಜಿಸುವ ಅಗತ್ಯತೆಯನ್ನು ಆರ್‌ಎಮ್‌ಎಸ್‌ಎ ನಿಗದಿಪಡಿಸಿದ್ದರೂ ಸಹ ಅನೇಕ ಶಾಲೆಗಳಲ್ಲಿ ಗಣಿತ, ವಿಜ್ಞಾನ ಮತ್ತು ಸಮಾಜವಿಜ್ಞಾನ ಮುಂತಾದ ಪ್ರಮುಖ ವಿಷಯಗಳಿಗೆ ಶಿಕ್ಷಕರೇ ಇರದಿದ್ದರಿಂದ ಆರ್‌ಎಮ್‌ಎಸ್‌ಎಎಸ್‌ಕೆ ಶಿಕ್ಷಕರ ಸಮರ್ಪಕ ಸಮತೋಲನವನ್ನು ಖಚಿತಪಡಿಸಿಕೊಳ್ಳಲಿಲ್ಲ. ಪ್ರಾರಂಭಿಕ ವರ್ಷಗಳಲ್ಲಿ ಸಿವಿಲ್ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿನ ಅತಿಯಾದ ವಿಳಂಬವು ಉನ್ನತೀಕರಿಸಿದ ಮತ್ತು ಬಲಪಡಿಸಿದ ಶಾಲೆಗಳಲ್ಲಿ ಸೌಕರ್ಯಗಳನ್ನು ಒದಗಿಸುವುದರ ಮೇಲೆ ಪರಿಣಾಮ ಬೀರಿತು. ಪ್ರೌಢಶಾಲೆಗಳಲ್ಲಿ ಪರಿಚಯಿಸಿದ ಐಸಿಟಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಿಲ್ಲ. ಜೊತೆಗೆ ಅನೇಕ ಶಾಲೆಗಳಲ್ಲಿ ಕಂಪ್ಯೂಟರ್‌ಗಳು ಮತ್ತು ಕಂಪ್ಯೂಟರ್ ಪ್ರಯೋಗಶಾಲೆಗಳು ಇರಲಿಲ್ಲ. ಹೀಗೆ, ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ರಾಜ್ಯವು ಡಿಜಿಟಲ್ ಭವಿಷ್ಯಕ್ಕೆ ತಯಾರಿಸಲು ಸಾಧ್ಯವಾಗಲಿಲ್ಲ.

ರಾಜ್ಯದ ಜಿಇಆರ್ ಶೇಕಡಾ 82ಕ್ಕೆ ಪ್ರತಿಯಾಗಿ ಬಾಲಕಿಯರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳ ಜಿಇಆರ್ ಅನುಕ್ರಮವಾಗಿ ಶೇಕಡಾ 83, ಶೇಕಡಾ 79 ಮತ್ತು ಶೇಕಡಾ 73ರಷ್ಟಿತ್ತು. ಕರ್ನಾಟಕದ ಮುನ್ನೋಟ ಯೋಜನೆಯಲ್ಲಿ ಪ್ರಕ್ಷೇಪಿಸಿದ್ದಂತೆ ಶೇಕಡಾ 100ರ ಗುರಿಯನ್ನು ರಾಜ್ಯವು ಸಾಧಿಸದಿದ್ದರೂ ಸಹ ಪ್ರೌಢ ಶಿಕ್ಷಣದಲ್ಲಿ ವಿಶೇಷ ಗಮನ ನೀಡಬೇಕಾದ ಗುಂಪುಗಳಿಂದ ಸಮಾನ ಭಾಗವಹಿಸುವಿಕೆಯನ್ನು ಅದು ಬಹತೇಕ ಖಚಿತಪಡಿಸಿಕೊಂಡಿತ್ತು. ಆದರೆ, ಪ್ರೌಢ ಶಿಕ್ಷಣದಲ್ಲಿ ವಿಕಲಚೇತನ ಮಕ್ಕಳ ಭಾಗವಹಿಸುವಿಕೆಯ ಪ್ರಗತಿಯನ್ನು ಅದು ಮೇಲ್ವಿಚಾರಣೆ ಮಾಡಿರಲಿಲ್ಲ.

ಮಾದರಿ ಶಾಲೆಗಳ ನಿರ್ಮಾಣದಲ್ಲಿನ ವಿಳಂಬದಿಂದ ಮತ್ತು ಈ ಮಾದರಿ ಶಾಲೆಗಳಿಗೆ ಶಿಕ್ಷಕರ ನೇಮಕಾತಿಯ ವಿಳಂಬದಿಂದ ಆ ಶಾಲೆಗಳು ಕೇಂದ್ರೀಯ ವಿದ್ಯಾಲಯದ ಮಟ್ಟವನ್ನು ಇನ್ನೂ ತಲುಪಲು ಸಾಧ್ಯವಾಗಿಲ್ಲ. ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಆರ್‌ಎಮ್‌ಎಸ್‌ಎ ವೃತ್ತಿಪರ ಶಿಕ್ಷಣವನ್ನು ರೂಪಿಸಿದ್ದರೂ ಸಹ ರಾಜ್ಯವು ಪ್ರೌಢ ಶಿಕ್ಷಣ ವ್ಯವಸ್ಥೆಯಲ್ಲಿ ಇನ್ನೂ ವೃತ್ತಿಪರ ಶಿಕ್ಷಣವನ್ನು ಸಂಯೋಜಿಸಲು ಸಾಧ್ಯವಾಗಿಲ್ಲ.

ತಳದಿಂದ ಮೇಲಿನವರೆಗಿನ ವಿಕೇಂದ್ರೀಕೃತ ಭಾಗವಹಿಸುವಿಕೆ ಯೋಜನೆಯು ಯಶಸ್ವಿಯಾಗಲಿಲ್ಲವಾಗಿ ಅಗತ್ಯತೆ ಮತ್ತು ವಾಸ್ತವಿಕತೆಯ ಆಧಾರದ ಮೇಲಿರದಿದ್ದ ಯೋಜನೆಗಳಿಗೆ ಅದು ಕಾರಣವಾಯಿತು. ಎಲ್ಲ ಹಂತಗಳಲ್ಲಿಯೂ ಮೇಲ್ವಿಚಾರಣೆಯ ಕೊರತೆಯಿದ್ದಿತು. ಹೀಗೆ ಪರಿಣಾಮಕಾರಿಯಲ್ಲದ ಯೋಜನೆಯಿಂದ ಆರ್‌ಎಮ್‌ಎಸ್‌ಎ ಉದ್ದೇಶಗಳನ್ನು ಸಾಧಿಸದಿರುವಲ್ಲಿ ಪರಿಣಮಿಸಿತು. ಹೀಗೆ, ರಾಜ್ಯದ ಮಧ್ಯಸ್ತಿಕೆಗೆ ಹೋಲಿಸಿದರೆ (ಸರಿಸುಮಾರು ₹5,100 ಕೋಟಿ ಪ್ರತಿ ವರ್ಷ) ಆರ್ಥಿಕ ಮತ್ತು ಫಲಿತಾಂಶ ಸೂಚಕಗಳ ವಿಷಯದಲ್ಲಿ ಪ್ರೌಢ ಶಿಕ್ಷಣದ ಮೇಲೆ ಆರ್‌ಎಮ್‌ಎಸ್‌ಎ ಪ್ರಭಾವವು ಕಂಡುಬರಲಿಲ್ಲ.

# ಅಧ್ಯಾಯ-III
# ಅನುಪಾಲನಾ ಲೆಕ್ಕಪರಿಶೋಧನೆ

# ಅಧ್ಯಾಯ-III

# ಅನುಪಾಲನಾ ಲೆಕ್ಕಪರಿಶೋಧನೆ

# ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## 3.1 ಕರ್ನಾಟಕದಲ್ಲಿ ಭಾಷೆ ಮತ್ತು ಸಂಸ್ಕೃತಿಯ ಉತ್ತೇಜನ ಮತ್ತು ಪ್ರಚಾರದ ಮೇಲಿನ ಅನುಪಾಲನಾ ಲೆಕ್ಕಪರಿಶೊಧನೆ

### 3.1.1 ಪರಿಚಯ

ಕರ್ನಾಟಕ ರಾಜ್ಯವು ವಿವಿಧ ಧರ್ಮಗಳು ಮತ್ತು ತತ್ವಗಳನ್ನು ಪ್ರೋತ್ಸಾಹಿಸಿದೆ ಮತ್ತು ಅದಕ್ಕೆ ಪ್ರತಿಯಾಗಿ ಅವುಗಳು ಸಾಹಿತ್ಯ, ವಾಸ್ತುಶಿಲ್ಪ, ಜಾನಪದ, ಸಂಗೀತ, ಚಿತ್ರಕಲೆ ಮತ್ತು ಇತರ ಕಲೆಗಳ ಮೇಲೆ ಪ್ರಭಾವ ಬೀರಿವೆ. ರಾಜ್ಯದ ಸಾಂಸ್ಕೃತಿಕ ಪರಂಪರೆ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಮಾತ್ರವಲ್ಲದೇ ಅದರ ಭಾಷೆಯಲ್ಲಿಯೂ ಕೂಡ ಅಡಗಿದೆ. ಕನ್ನಡ ಭಾಷೆಯನ್ನು ಕರ್ನಾಟಕದ ಸುಮಾರು ಶೇಕಡಾ 66ರಷ್ಟು ಜನರು (2011ರ ಜನಗಣತಿ) ಸ್ಥಳೀಯ ಭಾಷೆಯನ್ನಾಗಿ ಮಾತನಾಡುತ್ತಾರೆ. ಅದು ಕರ್ನಾಟಕ ರಾಜ್ಯದ ಆಡಳಿತ ಭಾಷೆಯಾಗಿದೆ ಮತ್ತು ಅದನ್ನು ಶಾಸ್ತ್ರೀಯ ಭಾಷೆಯನ್ನಾಗಿ ಸಹ ಗುರುತಿಸಲಾಗಿದೆ[31].

ಕರ್ನಾಟಕದ ಭಾಷೆ ಮತ್ತು ಸಂಸ್ಕೃತಿಯ ಪ್ರಚಾರ ಮತ್ತು ಪ್ರಸರಣದ ಒಟ್ಟಾರೆ ಮೇಲ್ವಿಚಾರಣೆಯು ಕನ್ನಡ, ಸಂಸ್ಕೃತಿ ಮತ್ತು ಮಾಹಿತಿ ಇಲಾಖೆಯ (ಇಲಾಖೆ) ಕಾರ್ಯದರ್ಶಿಗಳ ನಿಯಂತ್ರಣದಲ್ಲಿದೆ. ಇಲಾಖೆಯ ಸಾಂಸ್ಥಿಕ ನಕ್ಷೆಯನ್ನು **ನಕ್ಷೆ–3.1**ರಲ್ಲಿ ನೀಡಲಾಗಿದೆ.

**ನಕ್ಷೆ–3.1: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಾಂಸ್ಥಿಕ ನಕ್ಷೆ**




ಪ್ರಾದೇಶಿಕ ಭಾಷೆಗಳಾದ ತುಳು, ಕೊಂಕಣಿ, ಕೊಡವ ಮತ್ತು ಬೇರಿ ಇವುಗಳನ್ನೊಳಗೊಂಡು ಕನ್ನಡ ಭಾಷೆಯನ್ನು ಉತ್ತೇಜಿಸಲು ಹಾಗೂ ಪ್ರಚಾರ ಮಾಡಲು ಹೊರಡಿಸಿರುವ ಮಾರ್ಗದರ್ಶಿ ಸೂತ್ರಗಳನ್ನು ಇಲಾಖೆಯು ಅನುಪಾಲಿಸಿತೇ ಎಂಬುದನ್ನು ನಿರ್ಧರಿಸಲು 2013–14ರಿಂದ 2017–18ರ ಅವಧಿಯನ್ನು ವ್ಯಾಪಿಸುವ ಲೆಕ್ಕಪರಿಶೋಧನೆಯನ್ನು ಏಪ್ರಿಲ್ 2018ರಿಂದ ಆಗಸ್ಟ್ 2018ರವರೆಗೆ ನಡೆಸಲಾಯಿತು. ಇದನ್ನು ಸಚಿವಾಲಯ, ನಿರ್ದೇಶನಾಲಯ ಮತ್ತು ಸರಳ ಯಾದೃಚ್ಛಿತ ಮಾದರಿ ಆಯ್ಕೆ ವಿಧಾನದಿಂದ ಆರಿಸಿ ಪರೀಕ್ಷಾ–ತನಿಖೆ ನಡೆಸಿದ 10 ಜಿಲ್ಲೆಗಳ[32] ಸಹಾಯಕ ನಿರ್ದೇಶಕರುಗಳ ದಾಖಲೆಗಳನ್ನು ಪರೀಕ್ಷಾ–ತನಿಖೆ ನಡೆಸುವ ಮೂಲಕ ಮಾಡಲಾಯಿತು. ಜೊತೆಗೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಡಿ

[31] ಭಾರತ ಸರ್ಕಾರದಿಂದ ಭಾಷೆಯೊಂದನ್ನು ಶಾಸ್ತ್ರೀಯ ಭಾಷೆಯನ್ನಾಗಿ ನಿರ್ಧರಿಸುವ ಮಾನದಂಡವು 1500–2000 ವರ್ಷಗಳ ಅವಧಿಯಲ್ಲಿ ಅದರ ಆರಂಭಿಕ ಪಠ್ಯಗಳು/ದಾಖಲಾದ ಇತಿಹಾಸದ ಪ್ರಾಚೀನತೆಯಾಗಿದೆ, ಸಾಹಿತ್ಯ ಸಂಪ್ರದಾಯಗಳು ತನ್ನದೇ ಆಗಿರುತ್ತವೆ ಮತ್ತು ಬೇರೆ ಸಮುದಾಯದಿಂದ ಎರವಲು ಪಡೆದುಕೊಂಡಿರುವುದಲ್ಲ ಮತ್ತು ಶಾಸ್ತ್ರೀಯ ಭಾಷೆ ಮತ್ತು ಸಾಹಿತ್ಯವು ಭಾಷೆಯ ಆಧುನಿಕ ಸ್ವರೂಪದಿಂದ ಭಿನ್ನವಾಗಿರುತ್ತದೆ.

[32] ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಬೆಂಗಳೂರು, ಬೀದರ್, ಚಿತ್ರದುರ್ಗ, ದಕ್ಷಿಣ ಕನ್ನಡ, ಮಂಡ್ಯ, ಮೈಸೂರು, ಶಿವಮೊಗ್ಗ.

ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಪರೀಕ್ಷಾ-ತನಿಖೆ ನಡೆಸಿದ 10 ಜಿಲ್ಲೆಗಳಲ್ಲಿರುವ 12ರಲ್ಲಿನ[33] 10 ಅಕ್ಯಾಡೆಮಿಗಳು[34], ಎಲ್ಲ ನಾಲ್ಕು ರಂಗಾಯಣಗಳು, ಕನ್ನಡ ಸಾಹಿತ್ಯ ಪರಿಷತ್ ಮತ್ತು ಕನ್ನಡ ಜಾನಪದ ಪರಿಷತ್‌ಗಳನ್ನೂ ಸಹ ಪರೀಕ್ಷಾ-ತನಿಖೆ ಮಾಡಲಾಯಿತು. ಲೆಕ್ಕಪರಿಶೋಧನಾ ವಿಧಾನವು ಇಲಾಖೆಯಿಂದ ನಾಮಕರಣಗೊಂಡ ಪ್ರತಿನಿಧಿಗಳೊಂದಿಗೆ ಸಾಂಸ್ಕೃತಿಕ ಭವನಗಳ ಜಂಟಿ ಭೌತಿಕ ಪರಿಶೀಲನೆಗಳನ್ನೂ ಸಹ ಒಳಗೊಂಡಿತ್ತು. ಇಲಾಖೆಗೆ ಕಳುಹಿಸಿದ ಲೆಕ್ಕಪರಿಶೋಧನಾ ವ್ಯಾಖ್ಯಾನಗಳಿಗೆ ಸರ್ಕಾರದಿಂದ ಬಂದ ಪ್ರತಿಕ್ರಿಯೆಗಳನ್ನೂ ಸಹ ವರದಿಯಲ್ಲಿ ಪರಿಗಣಿಸಲಾಗಿದೆ.

## 3.1.2 ಹಣದ ಬಳಕೆ

2013-14ರಿಂದ 2017-18ರ ಅವಧಿಯಲ್ಲಿ ಆಯವ್ಯಯ ಹಂಚಿಕೆ ಮತ್ತು ವೆಚ್ಚಗಳನ್ನು **ಕೋಷ್ಟಕ-3.1**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ-3.1: ಆಯವ್ಯಯ ಹಂಚಿಕೆ ಮತ್ತು ವೆಚ್ಚ**

(₹ ಕೋಟಿಗಳಲ್ಲಿ)

| ವರ್ಷ | ಆಯವ್ಯಯ ಹಂಚಿಕೆ | ವೆಚ್ಚ | ಹಂಚಿಕೆಗೆ ವೆಚ್ಚದ ಶೇಕಡಾವಾರು |
|---|---|---|---|
| 2013-14 | 372.41 | 309.67 | 83 |
| 2014-15 | 399.00 | 321.81 | 81 |
| 2015-16 | 433.77 | 399.55 | 92 |
| 2016-17 | 471.10 | 426.47 | 91 |
| 2017-18 | 544.06 | 505.15 | 93 |

ಆಧಾರ: ಇಲಾಖೆಯು ಸಲ್ಲಿಸಿದ ಮಾಹಿತಿ

ವೆಚ್ಚವು ಹಂಚಿಕೆಯ ಶೇಕಡಾ 81ರಿಂದ 93ರ ವ್ಯಾಪ್ತಿಯಲ್ಲಿರುವುದನ್ನು ಕೋಷ್ಟಕದಿಂದ ನಾವು ಗಮನಿಸಿದೆವು. ಹಂಚಿಕೆ ಮಾಡಿದ್ದ ಬಹುಭಾಗ ಹಣವನ್ನು ವೆಚ್ಚಮಾಡಿದ್ದಾಗ್ಯೂ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಉತ್ತೇಜನ ಮತ್ತು ಪ್ರಚಾರಕ್ಕಾಗಿ ಯೋಜನೆಗಳ ಅನುಷ್ಠಾನದಲ್ಲಿ ಕೊರತೆಗಳಿದ್ದವು ಮತ್ತು ಅವುಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 3.1.3 ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು

### *3.1.3.1 ಸಾಂಸ್ಕೃತಿಕ ನೀತಿಯನ್ನು ರಚಿಸುವಲ್ಲಿ ವಿಳಂಬ*

ಇಲಾಖೆಯು 1977ರಿಂದ ಅಸ್ತಿತ್ವದಲ್ಲಿದ್ದರೂ ಸಹ ರಾಜ್ಯಕ್ಕಾಗಿ ಯಾವುದೇ ಸಾಂಸ್ಕೃತಿಕ ನೀತಿಯನ್ನು ರಚಿಸಿರಲಿಲ್ಲ. ಹಾಗಾಗಿ, ರಾಜ್ಯಕ್ಕಾಗಿ ಸಾಂಸ್ಕೃತಿಕ ನೀತಿಯೊಂದನ್ನು ರೂಪಿಸಲು ಕರ್ನಾಟಕ ಸರ್ಕಾರವು ಜೂನ್ 2012ರಲ್ಲಿ 'ಕರಡು ಸಮೀಕ್ಷಾ ಸಮಿತಿ'ಯೊಂದನ್ನು ರಚಿಸಿತು ಮತ್ತು ಆಗಸ್ಟ್ 2013ರಲ್ಲಿ ಅದನ್ನು ಮತ್ತೆ ಪುನರ್-ರಚಿಸಿತು. ಸಮಿತಿಯು ತತ್ವಗಳನ್ನು ಮತ್ತು ಶಿಫಾರಸುಗಳನ್ನೊಳಗೊಂಡ ಕರಡು ಸಾಂಸ್ಕೃತಿಕ ನೀತಿಯೊಂದನ್ನು ಸಲ್ಲಿಸಿತು (ಜೂನ್ 2014). ರಾಜ್ಯ ಸರ್ಕಾರವು ಕರಡು ಸಾಂಸ್ಕೃತಿಕ ನೀತಿಯನ್ನು ಅಧ್ಯಯನ ಮಾಡಿ ಶಿಫಾರಸುಗಳನ್ನು ನೀಡಲು ಮತ್ತೊಂದು ಉಪ ಸಮಿತಿಯೊಂದನ್ನು ರಚಿಸಿತು (ಮೇ 2016). ಉಪಸಮಿತಿಯು ತನ್ನ ಶಿಫಾರಸುಗಳನ್ನು ಮೇ 2017ರಲ್ಲಿ ನೀಡಿತು ಮತ್ತು ಅದನ್ನು ಸರ್ಕಾರವು ಅಕ್ಟೋಬರ್ 2017ರಲ್ಲಿ ಅನುಮೋದಿಸಿತು. ಆದರೆ, ಅದರ ಅನುಷ್ಠಾನಕ್ಕೆ ಇಲಾಖೆಯು ಕಾರ್ಯ ಯೋಜನೆಯೊಂದನ್ನು ಇನ್ನೂ ತಯಾರಿಸಬೇಕಿದೆ (ಸೆಪ್ಟಂಬರ್ 2018).

ಪ್ರಶಸ್ತಿಗಳು, ಅಕ್ಯಾಡೆಮಿಗಳನ್ನು ಸ್ಥಾಪಿಸುವುದು, ಇವುಗಳಿಗೆ ಸಂಬಂಧಿಸಿದಂತೆ ಆದೇಶಗಳನ್ನು ಮತ್ತು ಇಲಾಖೆಯಡಿಯಲ್ಲಿನ ವಿವಿಧ ಟ್ರಸ್ಟ್‌ಗಳಿಗೆ/ಪ್ರತಿಷ್ಠಾನಗಳಿಗೆ ಅಧ್ಯಕ್ಷರು/ಸದಸ್ಯರ ನೇಮಕಾತಿಗೆ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಲಾಗಿದೆ ಎಂದು ಸರ್ಕಾರವು ಉತ್ತರಿಸಿತು (ಡಿಸೆಂಬರ್ 2018). ನೀತಿಯಲ್ಲಿನ

[33] (1) ಕರ್ನಾಟಕ ಸಂಗೀತ ಮತ್ತು ನೃತ್ಯ ಅಕ್ಯಾಡೆಮಿ (2) ಕರ್ನಾಟಕ ನಾಟಕ ಅಕ್ಯಾಡೆಮಿ (3) ಕರ್ನಾಟಕ ಸಾಹಿತ್ಯ ಅಕ್ಯಾಡೆಮಿ (4) ಕರ್ನಾಟಕ ಲಲಿತ ಕಲೆಗಳ ಅಕ್ಯಾಡೆಮಿ (5) ಕರ್ನಾಟಕ ಜನಪದ ಅಕ್ಯಾಡೆಮಿ (6) ಕರ್ನಾಟಕ ಕೊಡವ ಅಕ್ಯಾಡೆಮಿ (7) ಕರ್ನಾಟಕ ಕೊಂಕಣಿ ಅಕ್ಯಾಡೆಮಿ (8) ಕರ್ನಾಟಕ ತುಳು ಅಕ್ಯಾಡೆಮಿ (9) ಕರ್ನಾಟಕ ಶಿಲ್ಪಕಲಾ ಅಕ್ಯಾಡೆಮಿ (10) ಕರ್ನಾಟಕ ಯಕ್ಷಗಾನ ಅಕ್ಯಾಡೆಮಿ (11) ಕನಾಟಕ ಬ್ಯಾರಿ ಅಕ್ಯಾಡೆಮಿ (12) ಕರ್ನಾಟಕ ಅರೆಭಾಷೆ ಅಕ್ಯಾಡೆಮಿ.

[34] ರಂಗಾಯಣ-ಮೈಸೂರು, ರಂಗಾಯಣ-ಕಲಬುರಗಿ, ರಂಗಾಯಣ-ಶಿವಮೊಗ್ಗ ಮತ್ತು ರಂಗಾಯಣ-ಧಾರವಾಡ.

ಇತರೆ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದೂ ಸಹ ಅದು ತಿಳಿಸಿತು. ಹೀಗೆ, ಸರ್ಕಾರದ ಅನುಮೋದನೆಯಾದ ನಂತರವೂ ಇಲಾಖೆಯು ಎಲ್ಲ ಶಿಫಾರಸುಗಳ ಮೇಲೆ ಇನ್ನೂ ಕ್ರಮ ಕೈಗೊಳ್ಳಬೇಕಿದೆ.

### *3.1.3.2 ಕನ್ನಡ ಭಾಷೆಯ ಉತ್ತೇಜನ ಮತ್ತು ಪ್ರಚಾರ*

### *(ಎ) ಬೆಂಗಳೂರಿನಲ್ಲಿ ಶಾಸ್ತ್ರೀಯ ಕನ್ನಡದ ಅಧ್ಯಯನದಲ್ಲಿ ಪ್ರತ್ಯೇಕ ಶ್ರೇಷ್ಠತೆಯ ಕೇಂದ್ರವನ್ನು ಸ್ಥಾಪಿಸದಿರುವುದು*

ಕನ್ನಡವನ್ನು ಶಾಸ್ತ್ರೀಯ ಭಾಷೆಯನ್ನಾಗಿ ಮಾನ್ಯ ಮಾಡಿದ (ಅಕ್ಟೋಬರ್ 2008) ನಂತರ, ಭಾರತ ಸರ್ಕಾರವು ಮೈಸೂರಿನಲ್ಲಿ ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆಯಲ್ಲಿ (ಸಿಐಐಎಲ್) ಶಾಸ್ತ್ರೀಯ ಕನ್ನಡದಲ್ಲಿ ಅಧ್ಯಯನ ಮಾಡಲು ಪ್ರತ್ಯೇಕ ಶ್ರೇಷ್ಠತೆಯ ಕೇಂದ್ರವೊಂದನ್ನು ಸ್ಥಾಪಿಸಿತು (ಕೇಂದ್ರ) (ಸೆಪ್ಟಂಬರ್ 2011). ಭಾರತ ಸರ್ಕಾರದ ಅನುದಾನಗಳನ್ನು 2011–12ರಿಂದ 2016–17ರ ಅವಧಿಯಲ್ಲಿ ₹8.91 ಕೋಟಿಯಷ್ಟು ಬಿಡುಗಡೆ ಮಾಡಲಾಯಿತು ಮತ್ತು ಕರ್ನಾಟಕದಲ್ಲಿ ಭಾಷೆ, ಸಂಸ್ಕೃತಿ ಮತ್ತು ಪರಂಪರೆಯ ಸಂರಕ್ಷಣೆ, ಉತ್ತೇಜನ ಮತ್ತು ಪ್ರಚಾರಕ್ಕಾಗಿ ₹2.78 ಕೋಟಿಗಳನ್ನು ವೆಚ್ಚ ಮಾಡಲಾಯಿತು.

ಮೈಸೂರಿನ ಸಿಐಐಎಲ್‌ನಲ್ಲಿನ ಕೇಂದ್ರವು ಭಾರತ ಸರ್ಕಾರವು ಬಿಡುಗಡೆ ಮಾಡಿದ ₹2.73 ಕೋಟಿ ಅನುದಾನಕ್ಕೆ ಪ್ರತಿಯಾಗಿ 2011–13ರ ಅವಧಿಯಲ್ಲಿ ₹0.68 ಕೋಟಿ ವೆಚ್ಚವನ್ನು (ಶೇಕಡಾ 25) ಭರಿಸಿತ್ತು. ಅನುದಾನಗಳ ಬಳಕೆಯು ಅತ್ಯಂತ ಕಡಿಮೆಯಿದೆ ಎಂದು ಭಾವಿಸಿದ ಕರ್ನಾಟಕ ಸರ್ಕಾರವು ರಾಜ್ಯ ಸರ್ಕಾರದ ಮಾರ್ಗದರ್ಶನದೊಂದಿಗೆ ಬೆಂಗಳೂರಿನಲ್ಲಿ ಆ ಕೇಂದ್ರವನ್ನು ಸ್ವತಂತ್ರ ಸಂಸ್ಥೆಯನ್ನಾಗಿ ಸ್ಥಾಪಿಸಲು ಪ್ರಸ್ತಾವಿಸಿತು (ಮೇ 2013). ಅದಕ್ಕೆ ಪ್ರತಿಕ್ರಿಯೆಯಾಗಿ ಭಾರತ ಸರ್ಕಾರವು ಪ್ರಸ್ತಾವನೆಯನ್ನು ತಾತ್ವಿಕವಾಗಿ ಒಪ್ಪಿಕೊಂಡಿತು (ಅಕ್ಟೋಬರ್ 2013) ಆದರೆ ಷರತ್ತೊಂದನ್ನು ವಿಧಿಸಿತು. ಮೈಸೂರಿನ ಸಿಐಐಎಲ್ ಸಂಸ್ಥೆಯು ಭಾಷೆಗಳ ವಿಷಯದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರಗಳಿಗೆ ನೀತಿ ಬೋಧಕ ಸಂಸ್ಥೆಯಾಗಿರುವುದರಿಂದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಬೆಂಗಳೂರಿಗೆ ಸ್ಥಳಾಂತರಿಸಿದ ನಂತರವೂ ಕೇಂದ್ರವು ಮೈಸೂರಿನ ಸಿಐಐಎಲ್ ಒಡೆತನದಲ್ಲಿಯೇ ಇರುವುದು ಆದರೆ ಸ್ವತಂತ್ರ ಕಾರ್ಯ ನಿರ್ವಹಣೆ ಹೊಂದಿರುವುದು ಎಂದು ನಿಗದಿಪಡಿಸಿತು. ಈ ವಿಷಯದಲ್ಲಿ ಮುಂದುವರೆಯುವುದಕ್ಕಾಗಿ ಬೆಂಗಳೂರಿನಲ್ಲಿ ಕೇಂದ್ರವನ್ನು ಸ್ಥಾಪಿಸಲು ಅಗತ್ಯವಿರುವ ಮೂಲ ಸೌಕರ್ಯಗಳ ವಿವರಗಳನ್ನು ಸಲ್ಲಿಸುವಂತೆ ಭಾರತ ಸರ್ಕಾರವು ಕೋರಿತು. ರಾಜ್ಯ ಸರ್ಕಾರವು ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಅಗತ್ಯವಿರುವ ಭೂಮಿಯನ್ನು ಗುರುತಿಸಿದರೂ ಸಹ ಭೂಮಿಯನ್ನು ಇನ್ನೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಸ್ತಾಂತರಿಸಬೇಕಿದೆ (ಸೆಪ್ಟಂಬರ್ 2018). ಹೀಗೆ, ತನ್ನ ಉದ್ದೇಶಗಳ ಅನುಷ್ಠಾನಕ್ಕಾಗಿ ಸ್ವತಂತ್ರ ಸಂಸ್ಥೆಯೊಂದನ್ನು ಸ್ಥಾಪಿಸುವ ರಾಜ್ಯ ಸರ್ಕಾರದ ಕೋರಿಕೆಯು ಸಫಲವಾಗಲಿಲ್ಲ ಏಕೆಂದರೆ ಭಾರತ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಕಳುಹಿಸಿದ ಐದು ವರ್ಷಗಳ ನಂತರವೂ ಸಹ ಕೇಂದ್ರವನ್ನು ಸ್ಥಾಪಿಸಲಾಗಲಿಲ್ಲ.

ಕರ್ನಾಟಕ ಸರ್ಕಾರವು ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸುವ ಕೋರಿಕೆ ಸಲ್ಲಿಸಿದ್ದರಿಂದ ಅಸ್ತಿತ್ವದಲ್ಲಿರುವ ಕೇಂದ್ರಕ್ಕೂ ಸಹ ಸಿಐಐಎಲ್ ಸಿಬ್ಬಂದಿಯ ನೇಮಕಾತಿಯನ್ನು ವಿಳಂಬ ಮಾಡಿರುವುದನ್ನು ನಾವು ಗಮನಿಸಿದೆವು. ಹೀಗೆ, ಯೋಜನಾ ನಿರ್ದೇಶಕರು, ಸೀನಿಯರ್ ಫೆಲೋ, ಅಸೋಸಿಯೇಟ್ ಫೆಲೋ ಮತ್ತು ಇತರೆ ಆಡಳಿತಾತ್ಮಕ ಸಿಬ್ಬಂದಿಯನ್ನು ಕೇವಲ ಸೆಪ್ಟಂಬರ್ 2015ರ ನಂತರವೇ ನೇಮಕಾತಿ ಮಾಡಲಾಗಿತ್ತು.

ಹೀಗೆ, ಮೂಲಸೌಕರ್ಯವನ್ನು ಪಡೆಯುವಲ್ಲಿ ರಾಜ್ಯ ಸರ್ಕಾರದ ನಿಷ್ಕ್ರಿಯತೆಯು ಕೇಂದ್ರದ ನೆರವನ್ನು ಪೂರ್ಣವಾಗಿ ಬಳಸಿಕೊಳ್ಳದಿರುವಲ್ಲಿ ಪರಿಣಮಿಸಿತು.

ಸಿಐಐಎಲ್ ಮತ್ತು ಕೇಂದ್ರದ ನಡುವೆ ಸಮನ್ವಯತೆಯನ್ನು ಸ್ಥಾಪಿಸುವುದಕ್ಕಾಗಿ ಕೇಂದ್ರದ ಸಮಿತಿಯಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಯೊಬ್ಬರನ್ನು ನಾಮನಿರ್ದೇಶನ ಮಾಡುವ ಪ್ರಸ್ತಾವನೆಯೊಂದನ್ನು ಇಲಾಖೆಯಿಂದ ಸಲ್ಲಿಸಲಾಗಿದೆ (ಆಗಸ್ಟ್ 2018) ಎಂದು ಸರ್ಕಾರವು ತಿಳಿಸಿತು (ಡಿಸೆಂಬರ್ 2018). ಆದರೆ, ಅದರ ಒಪ್ಪಿಗೆಯ ಸಂಬಂಧವಾಗಿ ಮತ್ತು ಭೂಮಿಯನ್ನು ಹಸ್ತಾಂತರಿಸುವಲ್ಲಿ ವಿಳಂಬದ ಕಾರಣಗಳ ಮೇಲೆ ಉತ್ತರವು ಮೌನವಾಗಿದೆ.

### (ಬಿ) ಕನ್ನಡ ಭಾಷೆ ಕಲಿಕೆ ಅಧಿನಿಯಮ, 2015ರ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡದಿರುವುದು

ರಾಜ್ಯದಾದ್ಯಂತ ಎಲ್ಲ ಶಾಲೆಗಳಲ್ಲಿ ಕನ್ನಡವನ್ನು ಭಾಷೆಗಳಲ್ಲಿ ಒಂದನ್ನಾಗಿ ಕಲಿಯುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಕನ್ನಡ ಭಾಷೆ ಕಲಿಕೆ ಅಧಿನಿಯಮ, 2015ನ್ನು ಜಾರಿಗೊಳಿಸಿತು (ಮೇ 2015). ಅಧಿನಿಯಮದ ಅನ್ವಯ 2015–16ರ ಶೈಕ್ಷಣಿಕ ವರ್ಷದಿಂದ ಹಂತಹಂತವಾಗಿ ಕನ್ನಡ ಭಾಷೆಯನ್ನು ಮೊದಲನೆ ಅಥವಾ ಎರಡನೇ ಭಾಷೆಯನ್ನಾಗಿ ರಾಜ್ಯದ ಎಲ್ಲ ಶಾಲೆಗಳ ಎಲ್ಲ ತರಗತಿಗಳಲ್ಲಿ ಕಡ್ಡಾಯ ಭಾಷೆಯನ್ನಾಗಿ ಕಲಿಸಬೇಕು. ಜಿಲ್ಲೆಗಳ ಉಪನಿರ್ದೇಶಕರುಗಳು ಮತ್ತು ನಿರ್ದೇಶಕರುಗಳನ್ನು[35] ಇತ್ತೀಚೆಗೆ ಮೇ 2017ರಲ್ಲಿ ಈ ಅಧಿನಿಯಮದ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ನೇಮಿಸಲಾಯಿತು. ನಂತರ, ರಾಜ್ಯ ಸರ್ಕಾರವು (ಶಿಕ್ಷಣ ಇಲಾಖೆ) ಕನ್ನಡ ಭಾಷೆ ಕಲಿಕೆ ನಿಯಮಗಳನ್ನು ಕೇವಲ ಅಕ್ಟೋಬರ್ 2017ರಲ್ಲಿ ರಚಿಸಿತು ಮತ್ತು 2017–18ನೇ ವರ್ಷವನ್ನು ಅನುಷ್ಠಾನ ವರ್ಷವನ್ನಾಗಿ ನಿಗದಿಪಡಿಸಿತು. ರಾಜ್ಯದ 26,031 ಶಾಲೆಗಳ ಪೈಕಿ 47 ಶಾಲೆಗಳಲ್ಲಿ[36] ಕನ್ನಡ ಭಾಷೆಯನ್ನು ಕಡ್ಡಾಯ ಭಾಷೆಯನ್ನಾಗಿ ಪರಿಚಯಿಸದಿರುವುದನ್ನು ನಾವು ಗಮನಿಸಿದೆವು. ಈ 47 ಶಾಲೆಗಳಲ್ಲಿ 31 ಶಾಲೆಗಳು[37] ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿದ್ದವು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಪತ್ರವೊಂದನ್ನು ಬರೆಯಲಾಗುವುದು ಎಂದು ಸರ್ಕಾರವು ತಿಳಿಸಿತು (ಡಿಸೆಂಬರ್ 2018).

### (ಸಿ) ಕನ್ನಡ ಮತ್ತು ಪ್ರಾದೇಶಿಕ ಚಲನಚಿತ್ರಗಳಲ್ಲಿ ಕನ್ನಡ ಭಾಷೆಯ ಉತ್ತೇಜನ

ಕರ್ನಾಟಕ ಚಲನಚಿತ್ರೋದ್ಯಮದಲ್ಲಿ ಕನ್ನಡ ಮತ್ತು ಇತರೆ ಪ್ರಾದೇಶಿಕ ಭಾಷೆಗಳಿಗೆ ಉತ್ತೇಜನ ನೀಡುವುದಕ್ಕಾಗಿ ರಾಜ್ಯ ಸರ್ಕಾರವು ಕನ್ನಡ ಚಲನಚಿತ್ರ ನೀತಿ, 2011ನ್ನು ಜಾರಿಗೊಳಿಸಿತು. ಈ ನೀತಿಯು ಕನ್ನಡ ಪ್ರಾದೇಶಿಕ ಚಲನಚಿತ್ರಗಳ ವಿವಿಧ ವರ್ಗಗಳಡಿಯಲ್ಲಿ ಅಂದರೆ, ಮಕ್ಕಳ ಚಲನಚಿತ್ರಗಳು, ಸ್ವಾತಂತ್ರಪೂರ್ವ ಕಥೆಗಳ ಅಥವಾ ಸಾಹಿತ್ಯ ಕೃತಿಗಳ ಮೇಲೆ ಆಧಾರಿತ ಚಲನಚಿತ್ರಗಳು, ಪ್ರಶಸ್ತಿ ವಿಜೇತ ಚಲನಚಿತ್ರಗಳು ಮತ್ತು ಉತ್ತಮ ಸಂದೇಶಗಳನ್ನು ಸಾರಲು ಉದ್ದೇಶಿಸಿರುವ ಸಾಮಾನ್ಯ ವರ್ಗದ ಚಲನಚಿತ್ರಗಳು, ಇವುಗಳಿಗೆ ಸಹಾಯಧನವನ್ನು ಒದಗಿಸಿತ್ತು. ಸಾಮಾನ್ಯ ವರ್ಗದಡಿಯಲ್ಲಿ ಪ್ರತಿಯೊಂದು ಚಲನಚಿತ್ರಕ್ಕೆ ಸಹಾಯಧನವು ₹10 ಲಕ್ಷವಾಗಿತ್ತು. ಸಾಮಾನ್ಯ ವರ್ಗದಡಿಯಲ್ಲಿ ಸಹಾಯಧನ ನೀಡಿರುವ ಚಲನಚಿತ್ರಗಳ ವಿವರಗಳನ್ನು **ಕೋಷ್ಟಕ-3.2ರಲ್ಲಿ** ನೀಡಲಾಗಿದೆ.

**ಕೋಷ್ಟಕ-3.2: ಸಾಮಾನ್ಯ ವರ್ಗದಡಿಯಲ್ಲಿ ಸಹಾಯಧನ ನೀಡಲಾದ ಚಲನಚಿತ್ರಗಳ ವಿವರಗಳು**

(ಮೊತ್ತ ₹ ಕೋಟಿಗಳಲ್ಲಿ)

| ವರ್ಷ | ಸಹಾಯಧನ ನೀಡಲಾದ ಚಲನಚಿತ್ರಗಳು | ಸಹಾಯಧನದ ಮೊತ್ತ | ಬಿಡುಗಡೆಯಾದ ಚಲನಚಿತ್ರಗಳು | ಬಿಡುಗಡೆಯಾಗದ ಚಲನಚಿತ್ರಗಳು | ಬಿಡುಗಡೆಯಾಗದ ಚಲನಚಿತ್ರಗಳಿಗೆ ನೀಡಿದ ಸಹಾಯಧನ |
|---|---|---|---|---|---|
| 2013 | 79 | 7.90 | 63 | 16 | 1.60 |
| 2014 | 89 | 8.90 | 58 | 31 | 3.10 |
| 2015 | 80 | 8.00 | 52 | 28 | 2.80 |
| 2016 | 101 | 10.10 | 46 | 55 | 5.50 |
| **ಒಟ್ಟು** | **349** | **34.90** | **219** | **130** | **13.00** |

ಆಧಾರ: ಇಲಾಖೆಯು ಸಲ್ಲಿಸಿದ ಮಾಹಿತಿ

ಸಾಮಾನ್ಯ ವರ್ಗದಡಿಯಲ್ಲಿ ಸಹಾಯಧನ ನೀಡಲಾದ ಚಲನಚಿತ್ರಗಳು 2013ರಲ್ಲಿನ 79ರಿಂದ 2016ರಲ್ಲಿ 101ಕ್ಕೆ ಏರಿಕೆಯಾಗಿದ್ದರೆ ಬಿಡುಗಡೆಯಾದ ಚಲನಚಿತ್ರಗಳು 63ರಿಂದ 46ಕ್ಕೆ ಇಳಿಕೆಯಾಗಿರುವುದನ್ನು ನಾವು ಗಮನಿಸಿದೆವು. ಹೀಗೆ, ಬಿಡುಗಡೆಯಾಗದ ಚಲನಚಿತ್ರಗಳ ಶೇಕಡಾವಾರು 20ರಿಂದ 54ಕ್ಕೆ ಏರಿತು. ಹೀಗೆ, ಚಲನಚಿತ್ರಗಳನ್ನು ಬಿಡುಗಡೆ ಮಾಡದಿರುವುದು ಒಳ್ಳೆಯ ಸಂದೇಶವನ್ನು ಮತ್ತು ಕ್ಷೇತ್ರೀಯ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರಚಾರ ಮಾಡುವ ಮೂಲ ಉದ್ದೇಶವನ್ನು ಸಾಧಿಸದಿರುವಲ್ಲಿ ಪರಿಣಮಿಸಿತು.

[35] ಬೆಂಗಳೂರು ಮತ್ತು ಮೈಸೂರು ವಿಭಾಗಗಳ ನಿರ್ದೇಶಕರು (ಪ್ರೌಢಶಿಕ್ಷಣ); ಕಲಬುರಗಿ ವಿಭಾಗದ ನಿರ್ದೇಶಕರು (ಸಾರ್ವಜನಿಕ ಶಿಕ್ಷಣ ಇಲಾಖೆ), ಕಲಬುರಗಿ ಮತ್ತು ಧಾರವಾಡ ವಿಭಾಗದ ನಿರ್ದೇಶಕರು (ಸಾರ್ವಜನಿಕ ಶಿಕ್ಷಣ ಇಲಾಖೆ), ಧಾರವಾಡ.

[36] 39 ಶಾಲೆಗಳು ಮಾಧ್ಯಮಿಕ ಶಿಕ್ಷಣದ ಕೇಂದ್ರೀಯ ಮಂಡಳಿ (ಸಿಬಿಎಸ್‌ಇ) ಮತ್ತು ಮಾಧ್ಯಮಿಕ ಶಿಕ್ಷಣದ ಭಾರತೀಯ ಪ್ರಮಾಣಪತ್ರ (ಐಸಿಎಸ್‌ಇ) ಶಾಲೆಗಳು ಮತ್ತು ಎಂಟು ಶಾಲೆಗಳು ರಾಜ್ಯ ಪಠ್ಯಕ್ರಮದ ಶಾಲೆಗಳು

[37] ಎಂಟು ರಾಜ್ಯ ಪಠ್ಯಕ್ರಮದ ಶಾಲೆಗಳು; 23 ಸಿಬಿಎಸ್‌ಇ/ಐಸಿಎಸ್‌ಇ ಶಾಲೆಗಳು.

ಚಲನಚಿತ್ರಗಳ ಬಿಡುಗಡೆಗೆ ಯಾವುದೇ ಮೇಲ್ವಿಚಾರಣಾ ವ್ಯವಸ್ಥೆ ಇಲ್ಲದಿರುವುದು, ಕನ್ನಡ ಮತ್ತು ಇತರ ಕ್ಷೇತ್ರೀಯ ಭಾಷೆಗಳ ಚಲನಚಿತ್ರಗಳ ಪ್ರದರ್ಶನಗಳ ಮೂಲ ಉದ್ದೇಶವನ್ನು ಸಾಧಿಸಿದಂತಾಗಲಿಲ್ಲ. ಹಾಗಾಗಿ ರಾಜ್ಯ ಸರ್ಕಾರವು ಸಹಾಯಧನವನ್ನು ಬಿಡುಗಡೆ ಮಾಡಿರುವ ಕನ್ನಡ ಚಲನಚಿತ್ರಗಳ ಪ್ರದರ್ಶನಕ್ಕೆ ಮೇಲ್ವಿಚಾರಣಾ ವ್ಯವಸ್ಥೆಯೊಂದನ್ನು ರಚಿಸುವುದನ್ನು ಪರಿಗಣಿಸಬೇಕಿದೆ.

### *3.1.3.3 ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಉತ್ತೇಜನ ಮತ್ತು ಪ್ರಸಾರಕ್ಕಾಗಿ ಯೋಜನೆಗಳು*

ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಯನ್ನು ಉತ್ತೇಜಿಸಲು ಇಲಾಖೆಯು ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತದೆ. 2013–14ರಿಂದ 2017–18ರ ಅವಧಿಯಲ್ಲಿಯ ಯೋಜನೆಗಳು ಮತ್ತು ಭರಿಸಿದ ವೆಚ್ಚವನ್ನು **ಅನುಬಂಧ–3.1ರಲ್ಲಿ** ನೀಡಲಾಗಿದೆ. ಈ ಕೆಳಗಿನ ಐದು ಯೋಜನೆಗಳ ಅನುಷ್ಠಾನದ ಸಂಬಂಧವಾಗಿ ಲೆಕ್ಕಪರಿಶೋಧನಾ ಅವಲೋಕನಗಳನ್ನು ನಂತರದ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

- ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಾಂಸ್ಕೃತಿಕ ಸಂಘಗಳಿಗೆ/ಸಂಸ್ಥೆಗಳಿಗೆ ಹಣಕಾಸಿನ ನೆರವು
- ಸಾಂಸ್ಕೃತಿಕ ಭವನಗಳ ನಿರ್ಮಾಣಕ್ಕೆ ಸಾಂಸ್ಕೃತಿಕ ಸಂಘಗಳಿಗೆ/ಸಂಸ್ಥೆಗಳಿಗೆ ಹಣಕಾಸಿನ ನೆರವು
- ಕಲಾವಿದರಿಗೆ/ಸಾಹಿತಿಗಳಿಗೆ ಪಿಂಚಣಿ ಯೋಜನೆ
- ಇಲಾಖೆಯು ಮುದ್ರಿಸಿದ ಕನ್ನಡ ಪುಸ್ತಕಗಳ ಮಾರಾಟ
- ಪುಸ್ತಕಗಳ ಅಂಕೀಕೃತಗೊಳಿಸುವಿಕೆ

#### *(ಎ) ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಾಂಸ್ಕೃತಿಕ ಸಂಘಗಳಿಗೆ/ಸಂಸ್ಥೆಗಳಿಗೆ ಹಣಕಾಸಿನ ನೆರವು*

ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಉದ್ದೇಶಕ್ಕಾಗಿ ಮಾತ್ರ ಸ್ಥಾಪಿಸಲ್ಪಟ್ಟ ಸಾಂಸ್ಕೃತಿಕ ಸಂಘಗಳು/ಸಂಸ್ಥೆಗಳು/ ಟ್ರಸ್ಟ್‌ಗಳಿಗೆ ಯೋಜನೆಯು ಹಣಕಾಸು ನೆರವನ್ನು ಒದಗಿಸುತ್ತದೆ. ಸಹಾಯಕ ನಿರ್ದೇಶಕರು ಮುಖ್ಯಸ್ಥರಾಗಿರುವ ಮತ್ತು ಜಿಲ್ಲೆಯ ವಿವಿಧ ಅಕ್ಯಾಡೆಮಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಥವಾ ವಿವಿಧ ಕ್ಷೇತ್ರಗಳ ವರಿಷ್ಠ ಕಲಾವಿದರ ಗರಿಷ್ಠ ಮೂರು ಸದಸ್ಯರನ್ನು ಒಳಗೊಂಡಿರುವ ಜಿಲ್ಲಾ ಮಟ್ಟದಲ್ಲಿನ ಪರಿಶೀಲನಾ ಸಮಿತಿಯು ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಶಿಫಾರಸುಗಳನ್ನು ಮಾಡುತ್ತದೆ. ಜಿಲ್ಲೆಗಳಿಂದ ಸ್ವೀಕರಿಸಿದ ಶಿಫಾರಸುಗೊಂಡ ಅರ್ಜಿಗಳನ್ನು ಅನುದಾನ ಮಂಜೂರು ಸಮಿತಿಯ ಮುಂದೆ ಅನುದಾನವನ್ನು ಮಂಜೂರು ಮಾಡುವುದಕ್ಕಾಗಿ ಮಂಡಿಸಲಾಗುತ್ತದೆ. ಆ ಸಮಿತಿಗೆ ಕರ್ನಾಟಕ ಸರ್ಕಾರದ ಕನ್ನಡ, ಸಂಸ್ಕೃತಿ ಮತ್ತು ಮಾಹಿತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮುಖ್ಯಸ್ಥರಾಗಿರುತ್ತಾರೆ ಹಾಗೂ ಸಮಿತಿಯು ಓರ್ವ ಸದಸ್ಯ ಕಾರ್ಯದರ್ಶಿ ಮತ್ತು ವಿವಿಧ ಇಲಾಖೆಗಳಿಂದ ಆರು ಇತರೆ ಸದಸ್ಯರುಗಳನ್ನು ಒಳಗೊಂಡಿರುತ್ತದೆ.

2013–14ರಿಂದ 2017–18ರ ಅವಧಿಯಲ್ಲಿ ಒಟ್ಟು 3,738 ಅನುದಾನಿತರಿಗೆ ₹65.54 ಕೋಟಿಗಳನ್ನು ಮಂಜೂರು ಮಾಡಲಾಗಿತ್ತು. ಪರೀಕ್ಷಾ–ತನಿಖೆ ನಡೆಸಿದ 10 ಜಿಲ್ಲೆಗಳಲ್ಲಿ ₹39.94 ಕೋಟಿಯನ್ನು ಒಳಗೊಂಡ 1,982 ಪ್ರಕರಣಗಳಲ್ಲಿ ನಾವು ಕೆಳಕಂಡಂತೆ ಗಮನಿಸಿದೆವು:

(i) ಯೋಜನಾ ಪ್ರಸ್ತಾವನೆಗಳನ್ನು ತಾಕ್ಷಣಿಕವಾಗಿ ಸಲ್ಲಿಸಬೇಕಿತ್ತು. ಆದರೆ, 40 ಪ್ರಕರಣಗಳಲ್ಲಿ ಅರ್ಜಿಗಳನ್ನು ತಾಕ್ಷಣಿಕವಾಗಿ ಸಲ್ಲಿಸದಿದ್ದರೂ ಸಹ ಸಾರ್ವಜನಿಕ ಪ್ರತಿನಿಧಿಗಳ ಶಿಫಾರಸುಗಳ ಆಧಾರದ ಮೇಲೆ ₹8.69 ಕೋಟಿಯಷ್ಟು ನೆರವನ್ನು ನೀಡಲಾಗಿತ್ತು. ಮೊದಲಿಗೆ ತಾಕ್ಷಣಿಕವಾಗಿ ಸ್ವೀಕೃತಗೊಂಡು, ಅವಶ್ಯಕ ದಾಖಲೆಗಳನ್ನು ಸಲ್ಲಿಸದಿದ್ದುದರಿಂದ ತಿರಸ್ಕೃತಗೊಂಡಿದ್ದ ಎಂಟು ಅರ್ಜಿಗಳಿಗೆ ನಂತರ ಸಾರ್ವಜನಿಕ ಪ್ರತಿನಿಧಿಗಳ ಶಿಫಾರಸಿನ ಆಧಾರದ ಮೇಲೆ ₹ಒಂದು ಕೋಟಿ ಹಣಕಾಸು ನೆರವನ್ನು ನೀಡಿರುವುದನ್ನು ನಾವು ಗಮನಿಸಿದೆವು. ಮಾರ್ಗದರ್ಶಿ ಸೂತ್ರಗಳಿಗೆ ವಿರುದ್ಧವಾಗಿ ಈ ಎಂಟು ಅರ್ಜಿಗಳನ್ನು ತಾಕ್ಷಣಿಕವಾಗಿ ಸಲ್ಲಿಸದಿದ್ದರೂ ಸಹ ನಂತರ ಪರಿಗಣಿಸಲಾಯಿತು ಎಂಬುದನ್ನು ಇದು ಸೂಚಿಸುತ್ತದೆ. ಮುಂದುವರೆದು, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನದ ಬಳಕೆಯ ಬಗ್ಗೆ ಸಂದೇಹ ಸೂಚಿಸುತ್ತದೆ.

(ii) ಈ ಯೋಜನೆಯಡಿಯಲ್ಲಿ ಸಂಸ್ಥೆಯೊಂದಕ್ಕೆ ನೀಡುವ ಹಣಕಾಸು ನೆರವಿನ ಮೊತ್ತವನ್ನು ವ್ಯಾಖ್ಯಾನಿಸಿಲ್ಲ. ತತ್ಪರಿಣಾಮವಾಗಿ, ಪರೀಕ್ಷಾ–ತನಿಖೆ ನಡೆಸಿದ ಪ್ರಕರಣಗಳಲ್ಲಿ ಅನುಮೋದಿತವಾದ ಹಣಕಾಸು ನೆರವಿನ ಮೊತ್ತಗಳಲ್ಲಿ ಸಾಮರಸ್ಯತೆ ಇರಲಿಲ್ಲ ಮತ್ತು ಅದು ₹10,000 ಮತ್ತು ₹65

ಲಕ್ಷಗಳ ವ್ಯಾಪ್ತಿಯಲ್ಲಿದ್ದಿತು. ಸಂಸ್ಥೆಗಳಿಗೆ ಹಣಕಾಸಿನ ನೆರವಿನ ಮೊತ್ತವನ್ನು ನಿರ್ಧರಿಸುವಾಗ ಅನುದಾನ ಮಂಜೂರಾತಿ ಸಮಿತಿಯು ಯಾವುದೇ ಸಮರ್ಥನೆಯನ್ನೂ ದಾಖಲಿಸಿರಲಿಲ್ಲ.

(iii) ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದು ಹಾಗೂ ಕಲೆ ಮತ್ತು ಸಾಹಿತ್ಯವನ್ನು ಉತ್ತೇಜಿಸುವ ಏಕೈಕ ಉದ್ದೇಶವನ್ನು ಹೊಂದಿದ್ದ ಸಂಸ್ಥೆಗಳಿಗೆ ಮಾತ್ರ ಹಣಕಾಸು ನೆರವನ್ನು ನೀಡಬೇಕು ಮತ್ತು ವಿವಿದೋದ್ದೇಶ ಚಟುವಟಿಕೆಗಳನ್ನು ಹೊಂದಿರುವ ಸಂಸ್ಥೆಗಳಿಗಲ್ಲ ಎಂದು ಸರ್ಕಾರೀ ಆದೇಶದ (ಸೆಪ್ಟಂಬರ್ 2015) ಅನುಬಂಧ–1 ತಿಳಿಸುತ್ತದೆ. 54 ಪ್ರಕರಣಗಳಲ್ಲಿ ಶಿಕ್ಷಣ ಸಂಸ್ಥೆಗಳು, ಗ್ರಾಮೀಣಾಭಿವೃದ್ಧಿ, ಮಾಧ್ಯಮ, ಸಾಮಾಜಿಕ ಭದ್ರತಾ ಪಿಂಚಣಿಯ ವಿತರಣೆ ಇವೇ ಮುಂತಾದ ವಿವಿಧೋದ್ದೇಶ ಚಟುವಟಿಕೆಗಳನ್ನು ಹೊಂದಿದ್ದ ಸಂಸ್ಥೆಗಳಿಗೆ ₹17.50 ಕೋಟಿಗಳ ನೆರವನ್ನು ನೀಡಲಾಗಿತ್ತು. ಮುಂದುವರೆದು ಮೂರು ಸಂಸ್ಥೆಗಳು ಸಲ್ಲಿಸಿದ ಪ್ರಮಾಣೀಕೃತ ಲೆಕ್ಕಪತ್ರಗಳ ಪರಿಶೀಲನೆಯು ಸಾಂಸ್ಕೃತಿಕ ಚಟುವಟಿಕೆಗಳಲ್ಲದೇ ಬೇರೆ ಉದ್ದೇಶಗಳಾದ ಸಿಬ್ಬಂದಿಯ ಸಂಬಳ, ಕ್ರೀಡಾ ಉತ್ಸವಗಳು, ಗಣತಂತ್ರ ದಿನದ ಉತ್ಸವಗಳು, ಕೃಷಿ ವೆಚ್ಚಗಳು, ಪೂಜಾ ಕಾರ್ಯಗಳಿಗೆ ಹಣಕಾಸಿನ ನೆರವನ್ನು ಬಳಸಿಕೊಳ್ಳಲಾಗಿತ್ತು ಎಂಬುದನ್ನು ತೋರಿಸುತ್ತಿತ್ತು.

(iv) ಹಣಕಾಸಿನ ನೆರವನ್ನು ಕೋರುವ ಸಂಸ್ಥೆಯಲ್ಲಿ ನಾಲ್ಕು ಕಲಾವಿದರ ಉಪಸ್ಥಿತಿಯು ಕಡ್ಡಾಯವಾಗಿತ್ತು. ಸಂಸ್ಥೆಗಳಲ್ಲಿನ ಕಲಾವಿದರ ಸಂಖ್ಯೆ ನಾಲ್ಕಕ್ಕಿಂತ ಕಡಿಮೆಯಿದ್ದರೂ ಸಹ 137 ಪ್ರಕರಣಗಳಲ್ಲಿ ₹16.74 ಕೋಟಿ ಹಣಕಾಸಿನ ನೆರವು ನೀಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

(v) ಹಣಕಾಸಿನ ನೆರವನ್ನು ಕೋರುವ ನೋಂದಾಯಿತ ಸಂಸ್ಥೆಗಳು, ನೋಂದಣಿ ಮತ್ತು ನೋಂದಣಿಯ ನವೀಕರಣದ ಪ್ರಮಾಣಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿತ್ತು. ಒಂದು ಪ್ರಕರಣದಲ್ಲಿ ಸಂಸ್ಥೆಯು ನೋಂದಾಯಿತವಾಗಿಲ್ಲದಿದ್ದರೂ ಸಹ 2015–16ರಿಂದ 2017–18ರ ಅವಧಿಯಲ್ಲಿ ಆ ಸಂಸ್ಥೆಗೆ ₹1.50 ಕೋಟಿಗಳ ಹಣಕಾಸಿನ ನೆರವನ್ನು ನೀಡಲಾಗಿತ್ತು. ಅದೇ ರೀತಿ ನಾಲ್ಕು ಸಂಸ್ಥೆಗಳು ನೋಂದಣಿಯನ್ನು ನವೀಕರಿಸದಿದ್ದರೂ ಸಹ (**ಅನುಬಂಧ–3.2**) ₹31 ಲಕ್ಷದಷ್ಟು ಹಣಕಾಸಿನ ನೆರವು ನೀಡಿರುವುದನ್ನು ನಾವು ಗಮನಿಸಿದೆವು. ಮುಂದುವರೆದು, ಹನ್ನೊಂದು ಜಿಲ್ಲೆಗಳಲ್ಲಿ 120 ಸಂಸ್ಥೆಗಳಿಗೆ (ಜನವರಿ 2018) ಕರಗ[38] ಉತ್ಸವವನ್ನು ನಡೆಸಲು ₹1.60 ಕೋಟಿ ಹಣಕಾಸಿನ ನೆರವನ್ನು ಜಿಲ್ಲಾಧಿಕಾರಿಗಳ ಮೂಲಕ ನೀಡಲಾಗಿತ್ತು. ಆದರೆ, ಮೊತ್ತವನ್ನು ಬಿಡುಗಡೆ ಮಾಡುವಾಗ ಹಣಕಾಸಿನ ನೆರವನ್ನು ಪಡೆಯುವ ಸಂಸ್ಥೆಯು ನೋಂದಾಯಿತವಾಗಿತ್ತೇ ಅಥವಾ ನೋಂದಣಿಯನ್ನು ನವೀಕರಿಸಲಾಗಿತ್ತೇ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ಯಾವುದೇ ಷರತ್ತನ್ನು ವಿಧಿಸಿರಲಿಲ್ಲ.

(vi) ಅರ್ಜಿಗಳ ಜೊತೆಗೆ ಲೆಕ್ಕಪರಿಶೋಧಿತ ಲೆಕ್ಕಪತ್ರಗಳನ್ನು ಸಲ್ಲಿಸುವುದು ಅವಶ್ಯಕವಾಗಿದೆ. 11 ಪ್ರಕರಣಗಳಲ್ಲಿ, ಸಂಸ್ಥೆಗಳು ಹಿಂದಿನ ವರ್ಷಗಳಿಗೆ ಬಿಡುಗಡೆಯಾದ ಮೊತ್ತಗಳಿಗೆ (₹3.38 ಕೋಟಿ) ತಮ್ಮ ಲೆಕ್ಕಪರಿಶೋಧಿತ ಲೆಕ್ಕಪತ್ರಗಳನ್ನು ಸಲ್ಲಿಸದಿದ್ದರೂ ಸಹ ಅವುಗಳಿಗೆ ₹1.44 ಕೋಟಿ ನೆರವನ್ನು ನೀಡಲಾಯಿತು (**ಅನುಬಂಧ–3.3**).

(vii) ಹಣಕಾಸು ವರ್ಷವೊಂದರಲ್ಲಿ ಸಂಸ್ಥೆಯೊಂದಕ್ಕೆ ಹಣಕಾಸಿನ ನೆರವನ್ನು ಕೇವಲ ಒಂದೇ ಸಾರಿ ನೀಡಬೇಕಿದ್ದರೂ ಸಹ 10 ಪ್ರಕರಣಗಳಲ್ಲಿ, ಹಣಕಾಸು ವರ್ಷವೊಂದರಲ್ಲಿ ಎರಡು ಸಾರಿ ನೆರವನ್ನು ತಾಕ್ಷಣಿಕ ಹಾಗೂ ಆಫ್‌ಲೈನ್ ಎರಡರಲ್ಲೂ ನೀಡಲಾಗಿತ್ತು. ತಾಕ್ಷಣಿಕ ನೆರವಿನಲ್ಲಿ ₹34 ಲಕ್ಷ ಹಾಗೂ ಆಫ್‌ಲೈನ್‌ನಲ್ಲಿ ₹132.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ತಾಕ್ಷಣಿಕ ಬಿಡುಗಡೆಯನ್ನು ಪರಿಶೀಲಿಸದೇ ಅನುದಾನ ಮಂಜೂರು ಸಮಿತಿಯು ಆಫ್‌ಲೈನ್‌ನಲ್ಲಿ ಹಣ ಬಿಡುಗಡೆ ಮಾಡಿರುವುದು ಕರ್ತವ್ಯದ ಗಂಭೀರ ಲೋಪವುಂಟಾಗುವುದನ್ನು ಸೂಚಿಸುತ್ತದೆ (**ಅನುಬಂಧ–3.4**).

(viii) ಯೋಜನಾ ಮಾರ್ಗದರ್ಶಿ ಸೂತ್ರಗಳು ಹಣಕಾಸು ವರ್ಷವು ಮುಗಿದ ನಂತರ ಅನುದಾನಿತರು ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಬೇಕೆಂದು ನಿಗದಿಪಡಿಸಿಲ್ಲ. ಆದುದರಿಂದ ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಎಲ್ಲ ಪ್ರಕರಣಗಳ ಸಂಬಂಧವಾಗಿ ಯಾವುದೇ ಬಳಕೆ ಪ್ರಮಾಣಪತ್ರಗಳು ಲಭ್ಯವಿರಲಿಲ್ಲ. ಹೀಗೆ, ಲೆಕ್ಕಪರಿಶೋಧನೆಯು ನೆರವಿನ ಬಳಕೆಯನ್ನು ಪರಿಶೀಲಿಸಲಾಗಲಿಲ್ಲ.

(xi) ಸಂಸ್ಥೆಯೊಂದು ಕೇವಲ ಒಂದು ಇಲಾಖೆ/ಪ್ರಾಧಿಕಾರದಿಂದ ಮಾತ್ರ ಹಣಕಾಸು ನೆರವನ್ನು ಪಡೆಯಬೇಕೆಂದು ಯೋಜನಾ ಮಾರ್ಗದರ್ಶಿಸೂತ್ರಗಳು ನಿಗದಿಪಡಿಸಿಲ್ಲ. 35 ಪ್ರಕರಣಗಳಲ್ಲಿ

[38] ದಕ್ಷಿಣ ಕರ್ನಾಟಕದ ತಿಗಳ ಸಮುದಾಯದವರಿಂದ ನಡೆಸಲ್ಪಡುವ ಕರಗ ಉತ್ಸವವು ಒಂದು ಹಳೆಯ ಉತ್ಸವವಾಗಿದೆ.

ಸಂಸ್ಥೆಗಳು ಇಲಾಖೆ (₹65.50 ಲಕ್ಷ) ಮತ್ತು ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ (₹134 ಲಕ್ಷ) ಎರಡರಿಂದಲೂ ಹಣಕಾಸು ನೆರವನ್ನು ಪಡೆದಿರುವುದನ್ನು ನಾವು ಗಮನಿಸಿದೆವು. ಈ ರೀತಿ ಕರ್ನಾಟಕ ಪ್ರಾಧಿಕಾರ ಹಾಗೂ ಇಲಾಖೆಯಲ್ಲಿ ಅನುದಾನ ಬಿಡುಗಡೆಗೆ ಯಾವುದೇ ಸಮನ್ವಯವಿಲ್ಲ.

(x) ಯೋಜನೆಯಡಿಯಲ್ಲಿ ಟ್ರಸ್ಟ್‌ಗಳಿಗೂ ಸಹ ಹಣಕಾಸಿನ ನೆರವನ್ನು ನೀಡಲಾಗುತ್ತದೆ. ಆದುದರಿಂದ ಯೋಜನಾ ಮಾರ್ಗದರ್ಶಿ ಸೂತ್ರಗಳು ಟ್ರಸ್ಟ್‌ಗಳಿಗೂ ಅನ್ವಯವಾಗುತ್ತವೆ. ಇಲಾಖೆಯು ಸಾಹಿತಿಗಳ ಕೊಡುಗೆಗಳ ಸಂರಕ್ಷಣೆ ಮತ್ತು ಪ್ರಚಾರಕ್ಕಾಗಿ 23 ಟ್ರಸ್ಟ್‌ಗಳಿಗೆ/ಪ್ರತಿಷ್ಠಾನಗಳಿಗೆ ಅನುದಾನಗಳನ್ನು ಬಿಡುಗಡೆ ಮಾಡುತ್ತಿದೆ. ಇಲಾಖೆಯು 2016–17ರವರೆಗೆ ಈ 23 ಟ್ರಸ್ಟ್‌ಗಳಿಗೆ ಪ್ರತಿಯೊಂದಕ್ಕೂ ₹12 ಲಕ್ಷ ಅನುದಾನಗಳನ್ನು ಮತ್ತು 2017–18ರಿಂದ ಪ್ರತಿಯೊಂದಕ್ಕೂ ₹15 ಲಕ್ಷಗಳನ್ನು ಅನುದಾನವನ್ನಾಗಿ ಬಿಡುಗಡೆ ಮಾಡುತ್ತಿತ್ತು. ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಯೋಜನಾ ಮಾರ್ಗದರ್ಶಿ ಸೂತ್ರಗಳು ನಿಗದಿಪಡಿಸಿರದಿದ್ದರೂ ಸಹ ಹಣವನ್ನು ಬಿಡುಗಡೆ ಮಾಡುವಾಗ ಈ ಟ್ರಸ್ಟ್‌ಗಳ ಸಂಬಂಧವಾಗಿ ಅವುಗಳು ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕೆಂದು ಇಲಾಖೆಯು ಷರತ್ತು ವಿಧಿಸಿತ್ತು. ಆದರೆ, ಮೂರು ಟ್ರಸ್ಟ್‌ಗಳ ಸಂಬಂಧವಾಗಿ ಅವುಗಳು ಹಿಂದಿನ ವರ್ಷಗಳಿಗೆ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಿರದಿದ್ದರೂ ಸಹ **(ಅನುಬಂಧ–3.5)** ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು. ಒಂದು ಟ್ರಸ್ಟ್[39] ಬಳಕೆಮಾಡದೇ ಉಳಿದಿದ್ದ ಅನುದಾನವಾದ ₹12 ಲಕ್ಷವನ್ನು ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವುದನ್ನು ಗಮನಿಸಲಾಯಿತು. ಹೀಗೆ, ನಂತರದ ವರ್ಷಗಳಿಗೆ ಅನುದಾನಗಳನ್ನು ಬಿಡುಗಡೆ ಮಾಡುವ ಮೊದಲು ಹಣದ ಬಳಕೆಯನ್ನು ಮೇಲ್ವಿಚಾರಣೆ ಮಾಡುವಲ್ಲಿ ಲೋಪದೋಷಗಳಿದ್ದವು.

ಮಾರ್ಗದರ್ಶಿ ಸೂತ್ರಗಳನ್ನು ರಚಿಸುವುದು ಹಾಗೂ ಇಲಾಖೆಯಿಂದ ಹಣದ ಬಳಕೆಯನ್ನು ಮೇಲ್ವಿಚಾರಣೆ ಮಾಡುವುದರಲ್ಲಿ ಲೋಪದೋಷಗಳಿದ್ದವು ಎಂಬುದನ್ನು ಮೇಲಿನ ಅವಲೋಕನಗಳಿಂದ ನಾವು ಗಮನಿಸಬಹುದು. ಇದು ಅನರ್ಹ ಸಂಸ್ಥೆಗಳಿಗೆ ಅನುದಾನಗಳ ಬಿಡುಗಡೆಯಲ್ಲಿ ಪರಿಣಮಿಸಿತು. ಅಲ್ಲದೆ, ಇಲಾಖೆಯು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉಪಯೋಗಿಸಲ್ಪಟ್ಟಿತೇ ಎಂಬುದನ್ನು ಖಚಿತ ಪಡಿಸಿಕೊಳ್ಳಲಿಲ್ಲ.

ಸರ್ಕಾರವು ಕೆಳಗಿನಂತೆ ಉತ್ತರಿಸಿತು (ಡಿಸೆಂಬರ್ 2018):

- ಮುಖ್ಯಮಂತ್ರಿಗಳು, ವಿವಿಧ ಮಂತ್ರಿಗಳು ಮತ್ತು ಸಾರ್ವಜನಿಕ ಪ್ರತಿನಿಧಿಗಳ ಶಿಫಾರಸುಗಳಿದ್ದ ಕೆಲವು ಸಾಂಸ್ಕೃತಿಕ ಸಂಘಗಳಿಗೆ ಇಲಾಖೆಯ ವಿವೇಚನಾ ಅಧಿಕಾರದಡಿಯಲ್ಲಿ ಹಣಕಾಸಿನ ನೆರವನ್ನು ನೀಡಲಾಯಿತು.
- ಲೆಕ್ಕಪರಿಶೋಧನಾ ಅವಲೋಕನಗಳ ಆಧಾರದ ಮೇಲೆ ಯೋಜನಾ ಮಾರ್ಗದರ್ಶಿ ಸೂತ್ರಗಳನ್ನು ಪರಿಷ್ಕರಿಸಲಾಗುವುದು.
- ಸಂಸ್ಥೆಗಳು/ಸಂಘಗಳು/ಟ್ರಸ್ಟ್‌ಗಳು ಸಂಬಂಧಿತ ವರ್ಷದಲ್ಲಿಯೇ ಹಣವನ್ನು ಬಳಕೆ ಮಾಡಿಕೊಳ್ಳುವಂತೆ ಸೂಚನೆಗಳನ್ನು ಜಾರಿ ಮಾಡಲಾಗುವುದು.
- ಲೆಕ್ಕಪರಿಶೋಧನೆಯಲ್ಲಿ ತೋರಿಸಿದ ಮೇಲ್ವಿಚಾರಣೆಯಲ್ಲಿನ ಲೋಪದೋಷಗಳನ್ನು ಭವಿಷ್ಯದಲ್ಲಿ ತಪ್ಪಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು.

### *(ಬಿ) ಸಾಂಸ್ಕೃತಿಕ ಭವನಗಳನ್ನು ನಿರ್ಮಿಸಲು ಸಾಂಸ್ಕೃತಿಕ ಸಂಘ/ಸಂಸ್ಥೆಗಳಿಗೆ ಹಣಕಾಸು ನೆರವು*

ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಉದ್ದೇಶಕ್ಕಾಗಿ ಸ್ಥಾಪಿಸುವ ಸಾಂಸ್ಕೃತಿಕ ಭವನಗಳ ನಿರ್ಮಾಣಕ್ಕೆ ಮಾತ್ರ ಸಾಂಸ್ಕೃತಿಕ ಸಂಘ/ಸಂಸ್ಥೆಗಳಿಗೆ ಹಣಕಾಸಿನ ನೆರವನ್ನು ಈ ಯೋಜನೆಯು ಒದಗಿಸುತ್ತದೆ. ನೆರವನ್ನು ಮಂಜೂರು ಮಾಡಲು ಸಮಿತಿಯೊಂದನ್ನು ರಚಿಸುವ ಬಗ್ಗೆ ಯೋಜನೆಯ ಮಾರ್ಗದರ್ಶಿ ಸೂತ್ರಗಳಲ್ಲಿ ವ್ಯಾಖ್ಯಾನಿಸಿಲ್ಲ. ಆದುದರಿಂದ ಇಲಾಖೆಯೇ ನೆರವನ್ನು ಮಂಜೂರು ಮಾಡುತ್ತಿತ್ತು. ಹಣಕಾಸಿನ ನೆರವನ್ನು ಮಂಜೂರು ಮಾಡುವಾಗ ಯೋಜನೆಯ ಬಹಳಷ್ಟು ನೀತಿಗಳನ್ನು ಉಲ್ಲಂಘಿಸಿರುವುದನ್ನು ನಾವು ಗಮನಿಸಿದೆವು.

[39] ಆಲೂರು ವೆಂಕಟರಾವ್ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ.

2011–12ರಿಂದ 2017–18ರ ಅವಧಿಯಲ್ಲಿ 1,094 ಅನುದಾನಿಗಳಿಗೆ ₹131.32 ಕೋಟಿಗಳನ್ನು ಮಂಜೂರು ಮಾಡಲಾಗಿತ್ತು. ಪರೀಕ್ಷಾ-ತನಿಖೆ ನಡೆಸಿದ 10 ಜಿಲ್ಲೆಗಳಲ್ಲಿ ₹67.64 ಕೋಟಿಗಳನ್ನು ಒಳಗೊಂಡ 532 ಪ್ರಕರಣಗಳಲ್ಲಿ ನಾವು ಕೆಳಕಂಡಂತೆ ಗಮನಿಸಿದೆವು:

(i) ಯೋಜನಾ ಮಾರ್ಗದರ್ಶಿ ಸೂತ್ರಗಳ ಅನ್ವಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಹೊರತುಪಡಿಸಿ ಬೇರೆ ಚಟುವಟಿಕೆಗಳನ್ನು ಅಂದರೆ, ಯೋಗ, ಧ್ಯಾನ, ಶಿಕ್ಷಣ ಮತ್ತು ಧಾರ್ಮಿಕ ವಿಷಯಗಳು ಮುಂತಾದವುಗಳನ್ನು ನಡೆಸುವ ಸಂಸ್ಥೆಗಳಿಗೆ ಆರ್ಥಿಕ ನೆರವನ್ನು ನೀಡಬಾರದು. ಆದರೆ, 53 ಪ್ರಕರಣಗಳಲ್ಲಿ ಯೋಗ, ಶಿಕ್ಷಣ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ₹13.33 ಕೋಟಿಗಳ ನಿಗದಿಪಡಿಸಿದ ತಲಾ ₹20 ಲಕ್ಷಕ್ಕಿಂತಲೂ ಅಧಿಕವಾಗಿ ನೆರವು ನೀಡಿರುವುದನ್ನು ನಾವು ಗಮನಿಸಿದೆವು.

(ii) ಹಣಕಾಸಿನ ನೆರವನ್ನು ಕೋರುವ ಸಂಸ್ಥೆಯು ನೋಂದಾಯಿಸಿದ ದಿನದಿಂದ ಮೂರು ವರ್ಷಗಳನ್ನು ಪೂರ್ಣಗೊಳಿಸಿರಬೇಕು. ಆದರೆ, ಒಂದು ಪ್ರಕರಣದಲ್ಲಿ, ತಾನು ನೋಂದಾಯಿಸಿದ ದಿನದಿಂದ (ಆಗಸ್ಟ್ 2015) ಮೂರು ವರ್ಷಗಳನ್ನು ಪೂರ್ಣಗೊಳಿಸಿರದ ಸಂಸ್ಥೆಯೊಂದಕ್ಕೆ ₹60 ಲಕ್ಷ ಹಣಕಾಸಿನ ನೆರವನ್ನು ಇಲಾಖೆಯು ಮಂಜೂರು ಮಾಡಿರುವುದನ್ನು (ಮಾರ್ಚ್ 2018) ನಾವು ಗಮನಿಸಿದೆವು.

(iii) ಅರ್ಜಿಗಳ ಜೊತೆಗೆ ನೋಂದಾವಣಿ ಪ್ರಮಾಣಪತ್ರ, ನವೀಕರಣ ಪ್ರಮಾಣಪತ್ರ, ಸಂಸ್ಥೆಯ ಉಪಕಾನೂನುಗಳು, ಹಿಂದಿನ ವರ್ಷಗಳಿಗೆ ಲೆಕ್ಕಪರಿಶೋಧನೆಯಾಗಿರುವ ಲೆಕ್ಕಪತ್ರಗಳ ತ:ಖ್ತೆಗಳು, ಸಂಸ್ಥೆಯು ಕೈಗೊಳ್ಳುತ್ತಿರುವ ಚಟುವಟಿಕೆಗಳ ವಿವರಗಳು, ಹಕ್ಕು ಮತ್ತು ವರ್ಗಾವಣೆ ಪತ್ರ, ಪಹಣಿ ಪತ್ರ, ಋಣಭಾರ ಪತ್ರ, ಮುಂತಾದ ಭೂಧಾಖಲೆಗಳು, ಅಂದಾಜುಗಳು, ಕಟ್ಟಡ ನಕ್ಷೆ, ಮುಂತಾದವುಗಳನ್ನು ಲಗತ್ತಿಸಿರಬೇಕು. ಮೇಲಿನವುಗಳಲ್ಲಿ ಹಲವಾರು ದಾಖಲೆಗಳನ್ನು ಸಲ್ಲಿಸದಿದ್ದರೂ ಸಹ 28 ಪ್ರಕರಣಗಳಲ್ಲಿ ₹9.97 ಕೋಟಿ (**ಅನುಬಂಧ–3.6**) ಹಣಕಾಸು ನೆರವನ್ನು ಬಿಡುಗಡೆ ಮಾಡಿರುವುದನ್ನು ನಾವು ಗಮನಿಸಿದೆವು.

(iv) ಸಾರ್ವಜನಿಕರಿಗೆ ಅನುಕೂಲಕರವಾಗಿ ಪ್ರವೇಶವಿರುವ ಸ್ಥಳಗಳಲ್ಲಿ ಸಾಂಸ್ಕೃತಿಕ ಭವನಗಳನ್ನು ನಿರ್ಮಾಣ ಮಾಡಬೇಕೆಂದು ಮಾರ್ಗದರ್ಶಿ ಸೂತ್ರಗಳು ನಿಗದಿಪಡಿಸುತ್ತವೆ. ಹಾವೇರಿ ಪಟ್ಟಣದಿಂದ ಸುಮಾರು ನಾಲ್ಕು ಕಿಲೋಮೀಟರ್ ದೂರದಲ್ಲಿ ಅಸ್ತಿತ್ವದಲ್ಲಿರುವ ಸ್ಮಶಾನದ ಬಳಿ ಮೈಲಾರ ಮಹದೇವಪ್ಪ ಸಾಂಸ್ಕೃತಿಕ ಭವನವನ್ನು ನಿರ್ಮಿಸಲು ₹1.25 ಕೋಟಿ ಹಣಕಾಸಿನ ನೆರವನ್ನು ಬಿಡುಗಡೆ ಮಾಡಿರುವುದನ್ನು ನಾವು ಗಮನಿಸಿದೆವು. ತತ್ಪರಿಣಾಮವಾಗಿ, ಮೈಲಾರ ಮಹದೇವಪ್ಪನವರ ವಾರ್ಷಿಕೋತ್ಸವವನ್ನು ಆಚರಿಸುವುದರ ಹೊರತಾಗಿ ಸಾಂಸ್ಕೃತಿಕ ಭವನವು ಬಳಸದೇ ಉಳಿದಿತ್ತು.

(v) ಮಾರ್ಗದರ್ಶಿ ಸೂತ್ರಗಳಲ್ಲಿ ನಿಗದಿಪಡಿಸಿರುವಂತೆ ಸಾಂಸ್ಕೃತಿಕ ಭವನದ ನಿರ್ಮಾಣಕ್ಕೆ ಸಂಸ್ಥೆಯೊಂದಕ್ಕೆ ಒದಗಿಸುವ ಗರಿಷ್ಠ ಹಣಕಾಸು ನೆರವು ₹20 ಲಕ್ಷಗಳಾಗಿತ್ತು. ಆದರೆ, **ಅನುಬಂಧ–3.7ರಲ್ಲಿ** ವಿವರಿಸಿರುವಂತೆ, 20 ಪ್ರಕರಣಗಳಲ್ಲಿ ಇಲಾಖೆಯು ಗರಿಷ್ಠ ಮಿತಿಗಿಂತಲೂ ಅಧಿಕವಾಗಿ ಹಣಕಾಸು ನೆರವನ್ನು ನೀಡಿರುವುದನ್ನು ನಾವು ಗಮನಿಸಿದೆವು. ಇದು ಆರ್ಥಿಕ ನಿರ್ವಹಣೆಯಲ್ಲಿ ವಿವೇಚನಾ ರಹಿತವಾಗಿರುವುದನ್ನು ಸೂಚಿಸುತ್ತದೆ.

(vi) ಕೇವಲ ಸಾಂಸ್ಕೃತಿಕ ಭವನದ ನಿರ್ಮಾಣಕ್ಕೆ ಮಾತ್ರ ಹಣಕಾಸು ನೆರವನ್ನು ನೀಡಬೇಕು ಹಾಗೂ ಬೇರೆ ಯಾವುದೇ ಉದ್ದೇಶಗಳಿಗೆ ನೀಡಬಾರದು ಎಂದು ಮಾರ್ಗದರ್ಶಿ ಸೂತ್ರಗಳು ನಿಗದಿಪಡಿಸುತ್ತವೆ. ಆದರೆ, ಎಂಟು ಪ್ರಕರಣಗಳಲ್ಲಿ ಇಲಾಖೆಯು ಮದುವೆ ಮಂಟಪಗಳಿಗೆ ಹಾಗೂ ಸಭಾಂಗಣಗಳಿಗೆ ನೆರವನ್ನು ನೀಡಿತು. ಇದಲ್ಲದೇ, ಶೌಚಾಲಯಗಳ ನಿರ್ಮಾಣ, ದೇವಸ್ಥಾನಗಳ ಜೀರ್ಣೋದ್ಧಾರ, ಕುಡಿಯುವ ನೀರು ಒದಗಿಸುವುದು, ಕೊಳವೆಬಾವಿಗಳನ್ನು ತೋಡಿಸುವುದು, ನಿವೇಶನಗಳ ಖರೀದಿ, ಮುಂತಾದ ಉದ್ದೇಶಗಳಿಗೆ ಇಲಾಖೆಯು ಹಣಕಾಸು ನೆರವನ್ನು ನೀಡಿದೆ. ಈ ಪ್ರಕರಣಗಳಲ್ಲಿ ಇಲಾಖೆಯು ನೀಡಿದ ಒಟ್ಟು ಹಣಕಾಸು ನೆರವು ₹6.92 ಕೋಟಿಗಳಾಗಿತ್ತು (**ಅನುಬಂಧ–3.8**).

(vii) ಸಂಸ್ಥೆಯೊಂದು ಒಂದು ಇಲಾಖೆ/ಪ್ರಾಧಿಕಾರದಿಂದ ಮಾತ್ರ ಹಣಕಾಸಿನ ನೆರವನ್ನು ಪಡೆಯಬೇಕೆಂದು ಮಾರ್ಗದರ್ಶಿ ಸೂತ್ರಗಳು ನಿಗದಿಪಡಿಸುವುದಿಲ್ಲ. ತತ್ಪರಿಣಾಮವಾಗಿ, 10

ಪ್ರಕರಣಗಳಲ್ಲಿ ಸಂಸ್ಥೆಗಳು ಇಲಾಖೆಯಿಂದ (₹3.33 ಕೋಟಿ) ಹಾಗೂ ಇತರೆ ಇಲಾಖೆಗಳಿಂದ (₹5.75 ಕೋಟಿ) ಹಣಕಾಸಿನ ನೆರವನ್ನು ಪಡೆದಿದ್ದವೆಂದು ನಾವು ಗಮನಿಸಿದೆವು (**ಅನುಬಂಧ–3.9**). ಹೀಗೆ ಹಣಕಾಸಿನ ನೆರವನ್ನು ವಿಸ್ತರಿಸಿರುವುದು ಇಲಾಖೆಯ ಧ್ಯೇಯಗಳಿಗೆ ಸಂಘರ್ಷ ಉಂಟಾಗಬಹುದು.

(viii) ಅನುದಾನಗಳು ಬಿಡುಗಡೆಯಾದ 90 ದಿನಗಳೊಳಗೆ ಸಾಂಸ್ಕೃತಿಕ ಭವನಗಳ ನಿರ್ಮಾಣವನ್ನು ಪ್ರಾರಂಭಿಸಬೇಕು ಮತ್ತು ಒಂದು ವರ್ಷದೊಳಗೆ ಪೂರ್ಣಗೊಳಿಸಬೇಕು. ನಿರ್ಮಾಣವು ವಿಳಂಬವಾದರೆ ಇಲಾಖೆಯು ಮಂಜೂರಾದ ನೆರವನ್ನು ಹಿಂಪಡೆಯಬೇಕು. ಆದರೆ, ಏಳು ಪ್ರಕರಣಗಳಲ್ಲಿ (**ಅನುಬಂಧ–3.10**) ಹಣ ಬಿಡುಗಡೆ ಮಾಡಿದ ಒಂದು ವರ್ಷದ ನಂತರ 74ರಿಂದ 340 ತಿಂಗಳುಗಳು ಕಳೆದಿದ್ದರೂ ಸಹ ನಿರ್ಮಾಣವು ಇನ್ನೂ ಪೂರ್ಣಗೊಂಡಿಲ್ಲದಿರುವುದನ್ನು ನಾವು ಗಮನಿಸಿದೆವು. ತತ್ಪರಿಣಾಮವಾಗಿ ಸಾಂಸ್ಕೃತಿಕ ಭವನಗಳ ನಿರ್ಮಾಣದ ವೆಚ್ಚದಲ್ಲಿ ಏರಿಕೆಯಾಗಿತ್ತು. ಆದರೂ ಸಹ ಇಲಾಖೆಯು ಮಂಜೂರಾದ ಹಣಕಾಸಿನ ನೆರವನ್ನು ಹಿಂಪಡೆಯಲು ಯಾವುದೇ ಕ್ರಮಗಳನ್ನು ಕೈಗೊಂಡಿರಲಿಲ್ಲ.

(ix) ಪ್ರತಿ ವರ್ಷವೂ ಮಾರ್ಚ್ ಕೊನೆಯ ವೇಳೆಗೆ ಪ್ರತಿಯೊಂದು ಸಾಂಸ್ಕೃತಿಕ ಭವನದಲ್ಲಿಯೂ ನಡೆದ ಚಟುವಟಿಕೆಗಳ ಮೇಲೆ ವರದಿಯೊಂದನ್ನು ಜಿಲ್ಲೆಯ ಸಹಾಯಕ ನಿರ್ದೇಶಕರಿಗೆ ಸಲ್ಲಿಸಬೇಕೆಂದು ಮಾರ್ಗದರ್ಶಿ ಸೂತ್ರಗಳು ನಿಗದಿಪಡಿಸುತ್ತವೆ. ಆದರೆ, ಜಿಲ್ಲಾ ಮಟ್ಟದಲ್ಲಿ ಮತ್ತು ಲೆಕ್ಕಪರಿಶೋಧನೆಯು ಭೇಟಿ ನೀಡಿದ ಸಾಂಸ್ಕೃತಿಕ ಭವನಗಳಲ್ಲಿ ಅಂತಹ ಯಾವುದೇ ದಾಖಲೆಗಳನ್ನು ನಿರ್ವಹಿಸದಿರುವುದನ್ನು ನಾವು ಗಮನಿಸಿದೆವು. ಹೀಗೆ, ಸಾಂಸ್ಕೃತಿಕ ಭವನಗಳನ್ನು ಅವುಗಳನ್ನು ನಿರ್ಮಿಸಿದ ಉದ್ದೇಶಕ್ಕಾಗಿಯೇ ಬಳಸಿಕೊಳ್ಳಲಾಯಿತು ಎಂಬುದನ್ನು ಲೆಕ್ಕಪರಿಶೋಧನೆಯು ಖಚಿತಪಡಿಸಿಕೊಳ್ಳಲಾಗಲಿಲ್ಲ.

(x) ಪರೀಕ್ಷಾ–ತನಿಖೆ ನಡೆಸಿದ 10 ಜಿಲ್ಲೆಗಳ 174 ಸಾಂಸ್ಕೃತಿಕ ಭವನಗಳನ್ನು ಇಲಾಖೆಯ ಸಿಬ್ಬಂದಿಯೊಂದಿಗೆ ಲೆಕ್ಕಪರಿಶೋಧನೆಯು ಜಂಟಿ ಭೌತಿಕ ಪರಿಶೀಲನೆ ನಡೆಸಿತು. ಇಲಾಖೆಯು ಅವುಗಳ ನಿರ್ಮಾಣಕ್ಕೆ ₹26.44 ಕೋಟಿ ಹಣವನ್ನು ಬಿಡುಗಡೆ ಮಾಡಿತ್ತು. ಜಂಟಿ ಭೌತಿಕ ಪರಿಶೀಲನೆಯ ವೇಳೆಯಲ್ಲಿ 174ರಲ್ಲಿ 22 ಸಾಂಸ್ಕೃತಿಕ ಭವನಗಳು ನಿರ್ಮಾಣದ ಹಂತದಲ್ಲಿದ್ದವು ಮತ್ತು ಬೇರೆ 22 ಭವನಗಳನ್ನು ಮಾತ್ರ ನಿರ್ಮಿಸಲಾಗಿತ್ತು ಮತ್ತು ಮಾರ್ಗದರ್ಶಿ ಸೂತ್ರಗಳಲ್ಲಿ ನಿಗದಿಪಡಿಸಿರುವಂತೆ ಬಳಸಿಕೊಳ್ಳಲಾಗುತ್ತಿತ್ತು. ಉಳಿದ 130 ಸಾಂಸ್ಕೃತಿಕ ಭವನಗಳ ಸಂಬಂಧವಾಗಿ ಲೆಕ್ಕಪರಿಶೋಧನೆಯ ಅವಲೋಕನಗಳು ಕೆಳಕಂಡಂತಿವೆ:

- 32 ಸಾಂಸ್ಕೃತಿಕ ಭವನಗಳ ನಿರ್ಮಾಣಕ್ಕೆ ₹3.49 ಕೋಟಿಗಳನ್ನು ಬಿಡುಗಡೆ ಮಾಡಿದ್ದರೂ ಸಹ ₹60.33 ಲಕ್ಷವನ್ನು ಎಂಟು ವಸತಿಗೃಹಗಳ ನಿರ್ಮಾಣಕ್ಕೆ, ₹60 ಲಕ್ಷವನ್ನು ಮೂರು ಮದುವೆ ಛತ್ರಗಳ ನಿರ್ಮಾಣ, ₹74 ಲಕ್ಷವನ್ನು ನಾಲ್ಕು ಒಳಾಂಗಣ ಕ್ರೀಡಾಂಗಣಗಳ ನಿರ್ಮಾಣಕ್ಕೆ ಹಾಗೂ ವಾಣಿಜ್ಯ ಉದ್ದೇಶಗಳಿಗೆ ಹಾಗೂ ₹1.55 ಕೋಟಿಯನ್ನು ಉಗ್ರಾಣ ಕೊಠಡಿಗಳು, ಕಛೇರಿ ಕೊಠಡಿಗಳು, ಮುಂತಾದ ಇತರೆ ಉದ್ದೇಶಗಳಿಗೆ ಬಳಸಲಾಗಿತ್ತು.


ಮರಾಠ ಸಾಂಸ್ಕೃತಿಕ ಭವನ, ಮಲ್ಲಿಕವಾಡ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ


ಶ್ರೀ ಚನ್ನಬಸವೇಶ್ವರ ಪಟ್ಟದೇವ ಸ್ಮಾರಕ ಟ್ರಸ್ಟ್, ಭಾಲ್ಕಿ, ಬೀದರ್ ಜಿಲ್ಲೆ


ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಕಿತ್ತೂರು, ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ

- ಸ್ಥಳಕ್ಕೆ ಸಂಬಂಧಿಸಿದಂತೆ, 48 ಸಾಂಸ್ಕೃತಿಕ ಭವನಗಳನ್ನು ₹4.68 ಕೋಟಿ ವೆಚ್ಚದಲ್ಲಿ ಧಾರ್ಮಿಕ ಆವರಣದಲ್ಲಿಯೇ ನಿರ್ಮಿಸಲಾಗಿದ್ದರೆ, ₹60 ಲಕ್ಷ ವೆಚ್ಚದಲ್ಲಿ ಎರಡು ಸಾಂಸ್ಕೃತಿಕ ಭವನಗಳು

ಪ್ರವೇಶಿಸಲಾಗದ ಸ್ಥಳಗಳಲ್ಲಿದ್ದವು. ಅಲ್ಲದೆ, ₹55.64 ಲಕ್ಷ ಹಣಕಾಸಿನ ನೆರವನ್ನು ನೀಡಿದ್ದ ಎಂಟು ಸಾಂಸ್ಕೃತಿಕ ಭವನಗಳು ಅರ್ಜಿಗಳಲ್ಲಿ ಸೂಚಿಸಿದ ಸ್ಥಳಗಳಲ್ಲಿ ಇರಲಿಲ್ಲ.

- ಮಾರ್ಗದರ್ಶಿ ಸೂತ್ರಗಳಲ್ಲಿ ನಿಗದಿಪಡಿಸಿರುವಂತೆ 26 ಸಾಂಸ್ಕೃತಿಕ ಭವನಗಳನ್ನು ನೆಲಮಹಡಿಯಲ್ಲಿ ನಿರ್ಮಿಸದೇ ಮೊದಲನೇ ಮಹಡಿಯಲ್ಲಿ ನಿರ್ಮಿಸಲಾಗಿತ್ತು.
- ₹75 ಲಕ್ಷ ವೆಚ್ಚದಲ್ಲಿ ನಿರ್ಮಿಸಿದ ಆರು ಸಾಂಸ್ಕೃತಿಕ ಭವನಗಳನ್ನು ನಿರ್ವಹಣೆ ಮಾಡಿರದಿದ್ದರೆ, ₹2.34 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ಎಂಟು ಸಾಂಸ್ಕೃತಿಕ ಭವನಗಳು ನಿರುಪಯುಕ್ತವಾಗಿದ್ದವು ಹಾಗು ಇದರಿಂದ ಅತಿಕ್ರಮಣ ಮತ್ತು ದುಷ್ಟ ಚಟುವಟಿಕೆಗಳಿಗೆ ತುತ್ತಾಗುವುದನ್ನು ಅಲ್ಲಗಳೆಯುವಂತಿಲ್ಲ.

ಹೀಗೆ, ಮಾರ್ಗದರ್ಶಿ ಸೂತ್ರಗಳನ್ನು ರಚಿಸುವಲ್ಲಿ ಮತ್ತು ಹಣದ ಬಳಕೆಯನ್ನು ಮೇಲ್ವಿಚಾರಣೆ ಮಾಡುವಲ್ಲಿ ಲೋಪದೋಷಗಳಿದ್ದವು ಎಂಬುದನ್ನು ಮೇಲಿನ ಅವಲೋಕನಗಳು ಸ್ಪಷ್ಟವಾಗಿ ಸೂಚಿಸುತ್ತವೆ. ಇದು ಕಲೆ ಮತ್ತು ಸಂಸ್ಕೃತಿಯ ಉತ್ತೇಜನವಲ್ಲದ ಚಟುವಟಿಕೆಗಳಿಗೆ ಹಣದ ನೆರವನ್ನು ಉಪಯುಕ್ತತೆಯಲ್ಲಿ ಪರಿಣಮಿಸಿತು. ಇದಲ್ಲದೇ, ಸಾಂಸ್ಕೃತಿಕ ಚಟುವಟಿಕೆಗಳನ್ನು ಸಾಂಸ್ಕೃತಿಕ ಭವನಗಳಲ್ಲಿ ಉತ್ತೇಜಿಸುವ ಧ್ಯೇಯವೇ ಇಲ್ಲದಂತಾಗಿ ಸಾಂಸ್ಕೃತಿಕ ಭವನಗಳು ಉದ್ದೇಶಿತವಲ್ಲದವುಗಳಿಗಾಗಿ ಬಳಸಿದಂತಾಗಿದೆ.

ನೆರವಿನ ದುರುಪಯೋಗದ ಬಗ್ಗೆ ಮಾಹಿತಿಯನ್ನು ನೀಡಬೇಕೆಂದು ಜಿಲ್ಲೆಗಳ ಎಲ್ಲಾ ಸಹಾಯಕ ನಿರ್ದೇಶಕರುಗಳಿಗೆ ತಿಳಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಡಿಸೆಂಬರ್ 2018). ಮುಂದುವರೆದು, ರಂಗಮಂದಿರಗಳು ಮತ್ತು ಸಾಂಸ್ಕೃತಿಕ ಭವನಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆಯ ಸಂಬಂಧವಾಗಿ ಪರಿಪತ್ರವೊಂದನ್ನು ಹೊರಡಿಸಲಾಗುವುದು ಎಂದೂ ಸಹ ತಿಳಿಸಲಾಯಿತು. ಜೊತೆಗೆ, ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ತಪ್ಪುಗಳನ್ನು ಭವಿಷ್ಯದಲ್ಲಿ ತಪ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದೂ ಸಹ ತಿಳಿಸಲಾಯಿತು.

### (ಸಿ) ಕಲಾವಿದರಿಗೆ/ಸಾಹಿತಿಗಳಿಗೆ ಪಿಂಚಣಿ ಯೋಜನೆ

ನಾಟಕ, ಸಂಗೀತ, ಜಾನಪದ ಕಲೆ, ಯಕ್ಷಗಾನ ಲಲಿತಕಲೆಗಳು, ಸಾಹಿತ್ಯ, ಮುಂತಾದ ಕ್ಷೇತ್ರಗಳಲ್ಲಿ 25 ವರ್ಷ ಸೇವೆ ಸಲ್ಲಿಸಿರುವ ಮತ್ತು 58 ವರ್ಷಗಳನ್ನು ಪೂರೈಸಿರುವ ಕಲಾವಿದರು/ಸಾಹಿತಿಗಳು ₹1,500 ಮಾಸಿಕ ಪಿಂಚಣಿ ಪಡೆಯಲು ಸರ್ಕಾರದ ಆದೇಶದ (ಸೆಪ್ಟಂಬರ್ 2015) ಅನುಬಂಧ-10ರ ಅನ್ವಯ ಅರ್ಹರಾಗಿರುತ್ತಾರೆ. ಪಿಂಚಣಿದಾರರ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶಗಳಲ್ಲಿ ₹40,000 ಮತ್ತು ನಗರ ಪ್ರದೇಶಗಳಲ್ಲಿ ₹50,000 ಕ್ಕೂ ಅಧಿಕವಾಗಿರಬಾರದು. ಇತರ ಇಲಾಖೆಗಳು ಅನುಷ್ಠಾನಗೊಳಿಸಿರುವ ಇತರ ಯಾವುದೇ ಯೋಜನೆಗಳಡಿಯಲ್ಲಿ ಪಿಂಚಣಿ ಪಡೆಯುತ್ತಿರುವ ಕಲಾವಿದರು ಈ ಯೋಜನೆಯಡಿಯಲ್ಲಿ ಪಿಂಚಣಿ ಪಡೆಯಲು ಅರ್ಹರಾಗಿರುವುದಿಲ್ಲ. ಅಲ್ಲದೆ, ಮಾರ್ಗದರ್ಶಿ ಸೂತ್ರಗಳ ಅನ್ವಯ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿದ ನಂತರ ಸಹಾಯಕ ನಿರ್ದೇಶಕರು ಅರ್ಜಿಗಳನ್ನು ತಮ್ಮ ಶಿಫಾರಸಿನೊಂದಿಗೆ ಸಂಬಂಧಪಟ್ಟ ಅಕ್ಯಾಡೆಮಿಗಳಿಗೆ[40] ಕಳುಹಿಸುತ್ತಾರೆ. ಅಕ್ಯಾಡೆಮಿಗಳಿಗೆ ಕಳುಹಿಸಿದ ಅಂತಹ ಎಲ್ಲ ಅರ್ಜಿಗಳ ಪ್ರತಿಗಳನ್ನು ಸಹಾಯಕ ನಿರ್ದೇಶಕರು ನಿರ್ವಹಿಸಿರಬೇಕು ಮತ್ತು ಅರ್ಜಿದಾರರಿಗೆ ದೃಢೀಕರಣವನ್ನು ನೀಡಬೇಕು. ಅಕ್ಯಾಡೆಮಿಗಳು ಅರ್ಜಿಗಳನ್ನು ಪರಿಶೀಲಿಸಿದ ನಂತರ, ಅವಶ್ಯವಿದ್ದರೆ ಅರ್ಜಿದಾರರನ್ನು ಸಂದರ್ಶನ ಮಾಡಿ, ತಮ್ಮ ಶಿಫಾರಸುಗಳೊಂದಿಗೆ ಇಲಾಖೆಗೆ ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾರೆ.

ಪಿಂಚಣಿಗೆ ಅರ್ಹವಾಗಿದ್ದ ಕಲಾವಿದರ ಮತ್ತು ಸಾಹಿತಿಗಳ ದತ್ತಸಂಚಯವಿಲ್ಲದಿರುವುದನ್ನು ನಾವು ಗಮನಿಸಿದೆವು. ಸಹಾಯಕ ನಿರ್ದೇಶಕರು ಸ್ವೀಕರಿಸಿದ್ದ ಪಿಂಚಣಿ ಅರ್ಜಿಗಳ ಅಥವಾ ಸಂಬಂಧಪಟ್ಟ ಅಕ್ಯಾಡೆಮಿಗಳಿಗೆ ಕಳುಹಿಸಿದ್ದ ಅರ್ಜಿಗಳ ವಿವರಗಳೂ ಸಹ ಲಭ್ಯವಿರಲಿಲ್ಲ ಹಾಗೂ ಇದು ಮಾರ್ಗದರ್ಶಿ ಸೂತ್ರಗಳಿಗೆ ವಿರುದ್ಧವಾಗಿತ್ತು. ಅಲ್ಲದೆ, ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಪಿಂಚಣಿ ತೆಗೆದುಕೊಳ್ಳುತ್ತಿದ್ದ ಪಿಂಚಣಿದಾರರ ವಿವರಗಳನ್ನೂ ಸಹ ಜಿಲ್ಲಾ ಕಛೇರಿಗಳಲ್ಲಿ ನಿರ್ವಹಿಸಿರಲಿಲ್ಲ. ಅಕ್ಯಾಡೆಮಿಗಳು (ಸಾಹಿತ್ಯ ಅಕ್ಯಾಡೆಮಿಯನ್ನು ಹೊರತುಪಡಿಸಿ) ಸಹ ಸ್ವೀಕರಿಸಿದ ಅರ್ಜಿಗಳು, ಶಿಫಾರಸುಗಳೊಂದಿಗೆ ಸ್ಥಾಯಿ ಸಮಿತಿಗೆ

[40] ಕಲಾವಿದರಿಗೆ ಸಂಬಂಧಪಟ್ಟ ಲಲಿತಕಲಾ ಅಕ್ಯಾಡೆಮಿ, ಯಕ್ಷಗಾನ ಅಕ್ಯಾಡೆಮಿ, ಸಾಹಿತ್ಯ ಅಕ್ಯಾಡೆಮಿ ಮುಂತಾದ ಅಕ್ಯಾಡೆಮಿಗಳು.

ಕಳುಹಿಸಿದ ಅರ್ಜಿಗಳು, ಅರ್ಜಿಗಳನ್ನು ಕಳುಹಿಸಿದ ದಿನಾಂಕ, ತಿರಸ್ಕರಿಸಿದ ಅರ್ಜಿಗಳು ಮುಂತಾದವುಗಳ ಯಾವುದೇ ದತ್ತಸಂಚಯವನ್ನು ನಿರ್ವಹಿಸಿರಲಿಲ್ಲ. ಅಂತಹ ಮಾಹಿತಿಯ ಇಲ್ಲದಿರುವಿಕೆ ಯೋಜನೆಯ ಫಲಪ್ರದತೆಯ ಬಗ್ಗೆ ಲೆಕ್ಕಪರಿಶೋಧನೆಯು ಪ್ರತಿಕ್ರಿಯೆ ನೀಡಲು ಸಾಧ್ಯವಾಗಲಿಲ್ಲ. 2013–14ರಿಂದ 2017–18ರ ಅವಧಿಯಲ್ಲಿ 5,527 ಕಲಾವಿದರು/ಸಾಹಿತಿಗಳಿಗೆ ಪಿಂಚಣಿ ಮಂಜೂರು ಮಾಡಲಾಗಿತ್ತು. ಪಿಂಚಣಿ ಕಡೆಗೆ ಈ ಅವಧಿಯಲ್ಲಿ ವೆಚ್ಚವು ₹79.36 ಕೋಟಿಗಳಾಗಿತ್ತು. ಈ ರೀತಿ, ಪಿಂಚಣಿದಾರರ ದತ್ತಸಂಚಯ ಇಲ್ಲದಿರುವಿಕೆಯು ಪಿಂಚಣಿ ಯೋಜನೆಯಲ್ಲಿ ವೆಚ್ಚವಾಗಿರುವುದರ ಪ್ರಾಮಾಣಿಕತೆಯನ್ನು ಖಚಿತಪಡಿಸಿಕೊಳ್ಳಲಿಲ್ಲ.

ಈ ಐದು ವರ್ಷಗಳಲ್ಲಿ ನಿಯತಕಾಲಿಕವಾಗಿ ಕಲಾವಿದರು ಯಾವುದೇ ವಿಳಂಬವಿಲ್ಲದೇ ಅರ್ಜಿಗಳನ್ನು ಸಲ್ಲಿಸಿದ್ದರೂ ಸಹ ಕಲಾವಿದರಿಗೆ ಪಿಂಚಣಿಯನ್ನು ಕೇವಲ ಮೂರು[41] ಬಾರಿ ಮಾತ್ರ ಮಂಜೂರು ಮಾಡಲಾಗಿತ್ತು ಎಂಬುದನ್ನು ಲಭ್ಯವಿದ್ದ ದಾಖಲೆಗಳಿಂದ ನಾವು ಗಮನಿಸಿದೆವು. ನಿಯತಕಾಲಿಕವಾಗಿ ಪಿಂಚಣಿಯನ್ನು ಮಂಜೂರು ಮಾಡಲು ಇಲಾಖೆಯಲ್ಲಿ ಯಾವುದೇ ವ್ಯವಸ್ಥೆ ಅಸ್ತಿತ್ವದಲ್ಲಿರಲಿಲ್ಲ ಎಂಬುದನ್ನು ಇದು ಸೂಚಿಸಿತು ಮತ್ತು ಕಲಾವಿದರು ತಮಗೆ ಬರಬೇಕಿದ್ದ ಹಣಕಾಸಿನ ನೆರವಿನಿಂದ ವಂಚಿತರಾದರು. ಕಲಾವಿದರ/ಸಾಹಿತಿಗಳ ವರಮಾನವು ಕನಿಷ್ಠವಾಗಿರುವುದರಿಂದ ಕಲೆ ಮತ್ತು ಸಾಹಿತ್ಯ ಸೇವೆಗೆ ಇವರನ್ನು ನಿರುತ್ಸಾಹಗೊಳಿಸುತ್ತದೆ. 2013–14ರಿಂದ 2017–18ರ ಅವಧಿಯಲ್ಲಿ ₹86.73 ಕೋಟಿ ಮಂಜೂರಾದ ಪೈಕಿ ₹79.36 ಕೋಟಿ ವೆಚ್ಚ ಮಾಡಲಾಗಿ ₹7.37 ಕೋಟಿ ಬಾಕಿ ಉಳಿಸಿಕೊಂಡಿದೆ.

ಕಲಾವಿದರಿಗೆ/ಸಾಹಿತಿಗಳಿಗೆ ಸಮಯಕ್ಕೆ ಸರಿಯಾಗಿ ಪಿಂಚಣಿಯನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳುವುದಾಗಿ ಸರ್ಕಾರವು ತಿಳಿಸಿತು (ಡಿಸೆಂಬರ್ 2018).

### *(ಡಿ) ಇಲಾಖೆಯು ಮುದ್ರಿಸಿದ ಕನ್ನಡ ಪುಸ್ತಕಗಳ ಮಾರಾಟ*

ಕನ್ನಡ ಪುಸ್ತಕ ಪ್ರಾಧಿಕಾರದ ನಿರ್ದೇಶಕರ ಕಛೇರಿಯಲ್ಲಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇವುಗಳಲ್ಲಿ ಮುದ್ರಿತವಾದ ಪುಸ್ತಕಗಳನ್ನು, ಅವುಗಳ ಮಾರಾಟಕ್ಕಾಗಿ ಸಹಾಯಕ ನಿರ್ದೇಶಕರ ಕಛೇರಿಗಳಿಗೆ ಸರಬರಾಜು ಮಾಡಲಾಗುತ್ತದೆ. ಪರೀಕ್ಷಾ–ತನಿಖೆ ನಡೆಸಿದ 10 ಜಿಲ್ಲೆಗಳಲ್ಲಿ ಸ್ವೀಕರಿಸಿದ ಪುಸ್ತಕಗಳ ಸಂಖ್ಯೆ, ಮಾರಾಟ ಮಾಡಿದ ಪುಸ್ತಕಗಳು, ಅಂತಿಮ ದಾಸ್ತಾನು, ಅಂತಿಮ ದಾಸ್ತಾನಿನ ಮೌಲ್ಯ, ಮುಂತಾದವುಗಳನ್ನು ಸೂಚಿಸುವ ಯಾವುದೇ ವಹಿಗಳನ್ನು ನಿರ್ವಹಿಸದಿರುವುದನ್ನು ನಾವು ಗಮನಿಸಿದೆವು. ಇದಲ್ಲದೇ, ಪರೀಕ್ಷಾ–ತನಿಖೆ ನಡೆಸಿದ 10ರಲ್ಲಿ 9 ಜಿಲ್ಲೆಗಳಲ್ಲಿ ದಾಸ್ತಾನಿನ ಭೌತಿಕ ಪರಿಶೀಲನೆಯನ್ನು ನಡೆಸಿರಲಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಪುಸ್ತಕಗಳನ್ನು ಬಾಡಿಗೆ ಮನೆಯೊಂದರಲ್ಲಿ ರಾಶಿ ಹಾಕಲಾಗಿತ್ತು. ₹12.91 ಲಕ್ಷ ಮೌಲ್ಯದ 5,108 ಋಗ್ವೇದ ಪುಸ್ತಕಗಳು, ₹5.76 ಲಕ್ಷ ಮೌಲ್ಯದ ಕುಮಾರವ್ಯಾಸ ಭಾರತದ 320 ಪ್ರತಿಗಳು ಮತ್ತು ₹7.50 ಲಕ್ಷ ಮೌಲ್ಯದ 2,500 ಪುನರಾವಲೋಕನ ಪ್ರತಿಗಳು ಮಾರಾಟವಾಗದೇ ಉಳಿದಿರುವುದನ್ನು ಮತ್ತು ಅವುಗಳನ್ನು ದಾಸ್ತಾನಿನಲ್ಲಿ ರಾಶಿ ಹಾಕಿರುವುದನ್ನು ಜಂಟಿ ಭೌತಿಕ ಪರಿಶೀಲನೆಯಲ್ಲಿ ನಾವು ಗಮನಿಸಿದೆವು. ಮಾರಾಟ ಮಾಡಲು ಅಥವಾ ಪುಸ್ತಕಗಳನ್ನು ಚೆನ್ನಾಗಿ ಕಾಳಜಿ ವಹಿಸಿ ನಿರ್ವಹಿಸುವ ಗ್ರಂಥಾಲಯಗಳಿಗೆ, ವಿಶ್ವವಿದ್ಯಾಲಯಗಳಿಗೆ ಅಥವಾ ಕಾಲೇಜುಗಳಿಗೆ ವಿತರಣೆ ಮಾಡಲು ಇಲಾಖೆಯು ಯಾವುದೇ ಕ್ರಮಗಳನ್ನು ಕೈಗೊಂಡಿರಲಿಲ್ಲ. ಹೀಗಾಗಿ ಮುದ್ರಿತ ಪುಸ್ತಕಗಳು ಓದುಗರನ್ನು ತಲುಪಲಿಲ್ಲ.



ಪುಸ್ತಕಗಳನ್ನು ಬಾಡಿಗೆ ಮನೆಯೊಂದರಲ್ಲಿ ರಾಶಿ ಹಾಕಿರುವುದು–ಮಂಡ್ಯ

ಸಿಬ್ಬಂದಿಯ ಕೊರತೆಯಿದ್ದಿತು ಮತ್ತು ಲೆಕ್ಕಪರಿಶೋಧನೆಯಲ್ಲಿ ತೋರಿಸಿದ ಲೋಪಗಳನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸರ್ಕಾರವು ಉತ್ತರಿಸಿತು (ಡಿಸೆಂಬರ್ 2018).

---

[41] 1 ಜನವರಿ 2013 (1,600 ಪ್ರಕರಣಗಳು); 1 ಸೆಪ್ಟಂಬರ್ 2015 (3,527 ಪ್ರಕರಣಗಳು ಮತ್ತು 1 ಜನವರಿ 2018 (2,000 ಪ್ರಕರಣಗಳು)

### (ಇ) ಪುಸ್ತಕಗಳ ಅಂಕೀಕರಣ

ಅಂಕೀಕರಣವೆಂದರೆ ಪುಸ್ತಕಗಳ ಅಂಕೀಕೃತ ಪ್ರತಿನಿಧಿಗಳನ್ನು ರಚಿಸುವುದು. ಇದು, ಪ್ರವೇಶವನ್ನು ಹೆಚ್ಚಿಸುವುದು-ವಿಶೇಷವಾಗಿ ದೂರ ಪ್ರದೇಶಗಳಲಿರುವ ಪೋಷಕರಿಗೆ, ಸಹಕಾರ ಉಪಕ್ರಮಗಳ ಮೂಲಕ ಸಂಗ್ರಹ ಅಭಿವೃದ್ಧಿಗೆ ಕೊಡುಗೆ, ಸಂಶೋಧನೆ ಮತ್ತು ಶಿಕ್ಷಣದ ಸಾಮರ್ಥ್ಯವನ್ನು ಹೆಚ್ಚಿಸುವುದು; ಮತ್ತು ಸಂರಕ್ಷಣಾ ಚಟುವಟಿಕೆಗಳನ್ನು ಬೆಂಬಲಿಸುವುದು, ಇವುಗಳನ್ನೊಳಗೊಂಡಂತೆ ಹೆಚ್ಚಿನ ಪ್ರಯೋಜನಗಳನ್ನು ಒದಗಿಸುತ್ತದೆ. ಅಂಕೀಕೃತಗೊಳಿಸುವುದರ ಇನ್ನೊಂದು ಪ್ರಮುಖ ಪ್ರಯೋಜನವೆಂದರೆ ಅದರ ಸಂಗ್ರಹ ಸಾಮರ್ಥ್ಯಕ್ಕೆ ಯಾವುದೇ ಭೌತಿಕ ಮಿತಿಯಿರುವುದಿಲ್ಲ.

ಇಲಾಖೆಯು ಅಂಕೀಕೃತಗೊಳಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿತು ಮತ್ತು ಡಿಸೆಂಬರ್ 2016ರಲ್ಲಿ ₹2.50 ಕೋಟಿಗಳನ್ನು ಹಂಚಿಕೆ ಮಾಡಿತು. ಆದರೆ ಯಾವುದೇ ಗುರಿಗಳನ್ನು ನಿಗದಿಪಡಿಸಲಿಲ್ಲ ಅಥವಾ ಮೇಲ್ವಿಚಾರಣಾ ವ್ಯವಸ್ಥೆಯೂ ಸಹ ಅಸ್ತಿತ್ವದಲ್ಲಿರಲಿಲ್ಲ. ಹಂಚಿಕೆ ಮಾಡಿದ್ದ ₹2.50 ಕೋಟಿಗಳನ್ನು ಇಲಾಖೆಯು ಬಳಸಿಕೊಳ್ಳಲಿಲ್ಲ. ಜುಲೈ 2018ರಲ್ಲಿದ್ದಂತೆ ಕೇವಲ 808 ಪುಸ್ತಕಗಳನ್ನು (2.01 ಲಕ್ಷ ಪುಟಗಳು) ಮಾತ್ರ ಅಂಕೀಕೃತಗೊಳಿಸಿ ಅಪ್‌ಲೋಡ್ ಮಾಡಲಾಗಿತ್ತು.

ಹೀಗೆ, ಹಣದ ಲಭ್ಯತೆಯಿದ್ದಾಗ್ಯೂ ಸಹ ಅಂಕೀಕೃತಗೊಳಿಸುವ ಪ್ರಕ್ರಿಯೆಯು ಬಹಳ ಮಂದಗತಿಯಲ್ಲಿತ್ತು ಎಂಬುದು ಸ್ಪಷ್ಟವಾಗಿತ್ತು ಮತ್ತು ಅಂಕೀಕರಣದ ಪರಿಕಲ್ಪನೆಗೆ ಕೊನೆಯ ಆದ್ಯತೆಯನ್ನು ನೀಡಲಾಗಿತ್ತು ಎಂಬುದನ್ನು ಇದು ಸೂಚಿಸುತ್ತಿತ್ತು. ತತ್ಪರಿಣಾಮವಾಗಿ ಜಗತ್ತಿನಾದ್ಯಂತದ ಆಸಕ್ತಿಯುಳ್ಳ ಓದುಗರಿಗೆ ಕನ್ನಡ ಪುಸ್ತಕಗಳ ಅಂಕೀಕರಣಗೊಳಿಸುವ ಲಾಭಗಳು ತಲುಪಲಿಲ್ಲ ಹಾಗೂ ಮುಂದಿನ ಪೀಳಿಗೆಗೆ ಸಂರಕ್ಷಿಸುತ್ತಿಲ್ಲ.

ಈ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸರ್ಕಾರವು ತಿಳಿಸಿತು (ಡಿಸೆಂಬರ್ 2018).

### 3.1.3.4 ಇಲಾಖೆಯಡಿಯಲ್ಲಿನ ಪ್ರಾಧಿಕಾರಗಳು, ಅಕ್ಯಾಡೆಮಿಗಳು, ಪರಿಷತ್‌ಗಳು, ಮುಂತಾದವುಗಳ ಕಾರ್ಯವೈಖರಿ

ಪುಸ್ತಕಗಳನ್ನು ಪ್ರಕಟಿಸುವ, ಸಾಹಿತ್ಯ ಸಮ್ಮೇಳನಗಳನ್ನು ನಡೆಸುವ ಮೂಲಕ ಕನ್ನಡ ಭಾಷೆಯನ್ನು ಹಾಗೂ ಸಂಶೋಧನಾ ಯೋಜನೆಗಳನ್ನು ಉತ್ತೇಜಿಸಲು ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಲಾಯಿತು (1915). ಅದೇ ರೀತಿ ರಾಜ್ಯದಾದ್ಯಂತ ಕರ್ನಾಟಕ ಜಾನಪದ ಪರಂಪರೆಯನ್ನು ರಕ್ಷಿಸಿ ಪ್ರಸ್ತುತಪಡಿಸಲು ಕರ್ನಾಟಕ ಜಾನಪದ ಪರಿಷತ್ತನ್ನು 1979ರಲ್ಲಿ ಸ್ಥಾಪಿಸಲಾಯಿತು. ರಾಜ್ಯಾದಾದ್ಯಂತ ಓದುಗರಿಗೆ ಒಳ್ಳೆಯ ಪುಸ್ತಕಗಳನ್ನು ಲಭ್ಯಗೊಳಿಸುವ ದೃಷ್ಟಿಯಿಂದ 1993ರಲ್ಲಿ ಕರ್ನಾಟಕ ಪುಸ್ತಕ ಅಕ್ಯಾಡೆಮಿಯನ್ನು ಸ್ಥಾಪಿಸಲಾಯಿತು. ಕರ್ನಾಟಕ ಗಡಿ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಹಾಗೂ ಕರ್ನಾಟಕ ಗಡಿ ಪ್ರದೇಶಗಳ (ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ, ತಮಿಳುನಾಡು ಮತ್ತು ತೆಲಂಗಾಣ) ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನೆಗಳ ಮತ್ತು ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವನ್ನು ನಡೆಸಲು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಯಿತು (ಏಪ್ರಿಲ್ 2010).

2013-14ರಿಂದ 2017-18ರ ಅವಧಿಯಲ್ಲಿ ಮೇಲಿನ ಪ್ರಾಧಿಕಾರಗಳು ಮತ್ತು ಪರಿಷತ್‌ಗಳಿಗೆ ಬಿಡುಗಡೆ ಮಾಡಿದ ಅನುದಾನಗಳ ಮತ್ತು ಅದಕ್ಕೆ ಪ್ರತಿಯಾಗಿ ಭರಿಸಿದ ವೆಚ್ಚದ ವಿವರಗಳನ್ನು **ಕೋಷ್ಟಕ-3.3**ರಲ್ಲಿ ನೀಡಲಾಗಿದೆ.

**ಕೋಷ್ಟಕ-3.3: 2013-18ರ ಅವಧಿಯಲ್ಲಿ ಬಿಡುಗಡೆ ಮಾಡಿದ ಅನುದಾನ ಮತ್ತು ಅದಕ್ಕೆ ಪ್ರತಿಯಾಗಿ ವೆಚ್ಚ**

(₹ ಕೋಟಿಗಳಲ್ಲಿ)

| ವಿವರಗಳು | ಪ್ರಾರಂಭಿಕ ಶಿಲ್ಕು | ಬಿಡುಗಡೆ ಮಾಡಿದ ಒಟ್ಟು ಅನುದಾನ | ಒಟ್ಟು | ಭರಿಸಿದ ಒಟ್ಟು ವೆಚ್ಚ | ಅಂತಿಮ ಶಿಲ್ಕು | ಷರಾ |
|---|---|---|---|---|---|---|
| ಕನ್ನಡ ಸಾಹಿತ್ಯ ಪರಿಷತ್ | 3.34 | 35.37 | 38.71 | 31.72 | 6.99 | 1997ರಿಂದ 2016ರ ಅವಧಿಯಲ್ಲಿ ಆಯೋಜಿಸಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಬಳಕೆಯಾಗದೇ ಉಳಿದ ₹4.19 ಕೋಟಿಗಳನ್ನು, ಉಪಕಾನೂನುಗಳ ಅನ್ವಯ ನಿಶ್ಚಿತ ಆಸ್ತಿಗಳ ರಚನೆಗೆ ಬಳಸದೇ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗಿತ್ತು. |

| ವಿವರಗಳು | ಪ್ರಾರಂಭಿಕ ಶಿಲ್ಕು | ಬಿಡುಗಡೆ ಮಾಡಿದ ಒಟ್ಟು ಅನುದಾನ | ಒಟ್ಟು | ಭರಿಸಿದ ಒಟ್ಟು ವೆಚ್ಚ | ಅಂತಿಮ ಶಿಲ್ಕು | ಷರಾ |
|---|---|---|---|---|---|---|
| ಅಕಾಡೆಮಿಗಳು | 6.09 | 80.62 | 86.71 | 70.15 | 16.56 | ಅಕ್ಯಾಡೆಮಿಗಳ ಲೆಕ್ಕಪತ್ರಗಳ ವಾರ್ಷಿಕ ಲೆಕ್ಕಪರಿಶೋಧನೆಯನ್ನು ನಿಯಮಿತವಾಗಿ ನಡೆಸುತ್ತಿರಲಿಲ್ಲ ಮತ್ತು ಉಪಕಾನೂನುಗಳ ಅನ್ವಯ ರಚಿಸಿದ ನೀತಿಗಳನ್ನು ಪಾಲಿಸದಿದ್ದರೂ ಸಹ ಈ ಅಕ್ಯಾಡೆಮಿಗಳಿಗೆ ಹಣವನ್ನು ಬಿಡುಗಡೆ ಮಾಡಲಾಗುತ್ತಿತ್ತು ಹಾಗೂ ಖರೀದಿಗಳನ್ನು ಮಾಡುವಾಗ ಮತ್ತು ಪುಸ್ತಕಗಳನ್ನು ಮುದ್ರಿಸುವಾಗ ಅಕ್ಯಾಡೆಮಿಗಳೂ ಸಹ ಕೆಟಿಪಿಪಿ ನಿಯಮಗಳನ್ನು ಅನುಸರಿಸುತ್ತಿರಲಿಲ್ಲ. |
| ಕನ್ನಡ ಪುಸ್ತಕ ಪ್ರಾಧಿಕಾರ | 1.20 | 8.66 | 9.86 | 6.60 | 3.26 | ₹24.62 ಕೋಟಿಗಳನ್ನು ಖರ್ಚು ಮಾಡಿದ್ದರೂ ಸಹ ಕರ್ನಾಟಕ ಪುಸ್ತಕ ಪ್ರಾಧಿಕಾರವು 1993ರಲ್ಲಿ ತನ್ನ ಸ್ಥಾಪನೆಯಾದಾಗಿನಿಂದ ಬಳಕೆ ಪ್ರಮಾಣಪತ್ರ ಹಾಗೂ ಪ್ರಮಾಣೀಕೃತ ಲೆಕ್ಕಪತ್ರಗಳನ್ನು ಸಲ್ಲಿಸಿಲ್ಲ. |
| ರಂಗಾಯಣ | 1.97 | 41.56 | 43.53 | 32.47 | 11.06 | ಪ್ರತಿಭಾ ಅನ್ವೇಷಣೆ–ಮಕ್ಕಳು (₹3.00 ಕೋಟಿ), ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ ಹಣ (₹3.50 ಕೋಟಿ) ಮತ್ತು ಜನಪದ ಜಾತ್ರೆಯನ್ನು ನಡೆಸುವುದಕ್ಕಾಗಿನ ₹3.24 ಕೋಟಿಯಲ್ಲಿ ₹92.21 ಲಕ್ಷವನ್ನು, ಆ ಉದ್ದೇಶಕ್ಕಾಗಿ ಬಳಸದೇ ಬ್ಯಾಂಕ್ ಖಾತೆಯಲ್ಲಿ ಇಡಲಾಗಿತ್ತು. |
| ಕೆಬಿಎಡಿಎ | 0.56 | 105.07 | 105.63 | 103.74 | 1.89 | ಉಪಕಾನೂನುಗಳ ಅನ್ವಯ ಕೊನೆಯಪಕ್ಷ ಎರಡು ತಿಂಗಳುಗಳಲ್ಲಿ ಒಂದು ಸಭೆಯನ್ನು, ಅಂದರೆ ವರ್ಷದಲ್ಲಿ ಆರು ಸಭೆಗಳನ್ನು ನಡೆಸಬೇಕಿತ್ತು. ಆದರೆ, 2013–14ರಿಂದ 2017–18ರ ಅವಧಿಯಲ್ಲಿ ನಿಗದಿಪಡಿಸಿದ 30 ಸಭೆಗಳಿಗೆ ಪ್ರತಿಯಾಗಿ ಕೇವಲ 12 ಸಭೆಗಳನ್ನು ನಡೆಸಲಾಗಿತ್ತು. ಚರ್ಚಿಸಲು ಸಾಕಷ್ಟು ವಿಷಯಗಳು ಇರಲಿಲ್ಲವಾದ್ದರಿಂದ ಸಭೆಗಳನ್ನು ನಡೆಸಲಿಲ್ಲ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ತಿಳಿಸಿತು. |
| ಕಲಾ ಏಕೀಕರಣ ಕಾಲೇಜು, ಕಲಬುರಗಿ | | 5.24 | | | | ಕಲೆ ಮತ್ತು ಸಾಹಿತ್ಯವನ್ನು ಉತ್ತೇಜಿಸುವುದಕ್ಕಾಗಿ ಹಣದ ನೆರವನ್ನು ನೀಡುವುದು ಇಲಾಖೆಯ ಪಾತ್ರವಾಗಿದ್ದರೂ ಸಹ ವೇತನಕ್ಕಾಗಿ ಅನುದಾನಗಳನ್ನು ಬಿಡುಗಡೆ ಮಾಡಲಾಯಿತು. |

ಆಧಾರ: ಇಲಾಖೆಯು ಸಲ್ಲಿಸಿದ ಮಾಹಿತಿ

ಮೇಲಿನ ಪರಿಷತ್‌ಗಳ ಮತ್ತು ಪ್ರಾಧಿಕಾರಗಳ ಕಾರ್ಯವೈಖರಿಯ ಮೇಲಿನ ಅವಲೋಕನಗಳು ಕೆಳಕಂಡಂತಿವೆ:

### *ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ*

- ಇಲಾಖೆಯು ಹೊರಡಿಸಿದ ಮಂಜೂರಾತಿ ಆದೇಶಗಳ ಅನ್ವಯ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ತನಗೆ ಮಂಜೂರಾಗಿ ಬಿಡುಗಡೆಯಾದ ಅನುದಾನಗಳಿಗೆ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಬೇಕು. ಆದರೆ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ಹಿಂದಿನ ವರ್ಷಗಳಿಗೆ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದಿದ್ದರೂ ಸಹ ಇಲಾಖೆಯು ನಂತರದ ವರ್ಷಗಳಿಗೆ ಅನುದಾನಗಳನ್ನು ಮಂಜೂರು ಮಾಡಿರುವುದನ್ನು ನಾವು ಗಮನಿಸಿದೆವು ಮತ್ತು ಇದು ಬಿಡುಗಡೆಯಾದ ಅನುದಾನಗಳ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ಮೇಲ್ವಿಚಾರಣಾ ವ್ಯವಸ್ಥೆ ಅಸ್ತಿತ್ವದಲ್ಲಿರಲಿಲ್ಲವೆಂದು ಸೂಚಿಸುತ್ತಿತ್ತು.

- ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು 558 ಸಂಸ್ಥೆಗಳಿಗೆ ಸಾಂಸ್ಕೃತಿಕ ಭವನಗಳು, ಶಾಲಾಕೊಠಡಿಗಳು, ಗ್ರಂಥಾಲಯಗಳು ಮುಂತಾದವುಗಳ ನಿರ್ಮಾಣಕ್ಕಾಗಿ ₹53.28 ಕೋಟಿಗಳನ್ನು ಬಿಡುಗಡೆ ಮಾಡಿತ್ತು. 130 ನಿರ್ಮಾಣಗಳ (₹13.67 ಕೋಟಿ) ಇಲಾಖಾ ಸಿಬ್ಬಂದಿಯೊಂದಿಗೆ ಲೆಕ್ಕಪರಿಶೋಧನಾ ತಂಡವು ನಡೆಸಿದ ಜಂಟಿ ಭೌತಿಕ ಪರಿಶೀಲನೆಯಲ್ಲಿ 59 ಪ್ರಕರಣಗಳಲ್ಲಿ

ಸಾಂಸ್ಕೃತಿಕ ಭವನಗಳು, ಶಾಲಾಕೊಠಡಿಗಳು, ಕಂಪ್ಯೂಟರ್ ಕೊಠಡಿಗಳು, ಶೌಚಾಲಯಗಳು, ಮುಂತಾದವುಗಳ ನಿರ್ಮಾಣ ಹಾಗೂ ಕಂಪ್ಯೂಟರ್‌ಗಳ ಖರೀದಿಗಾಗಿ ಬಿಡುಗಡೆ ಮಾಡಿದ ಅನುದಾನಗಳನ್ನು ಇತರೆ ಉದ್ದೇಶಗಳಿಗೆ ಅಂದರೆ, ವಸತಿಮನೆಗಳು, ವಿದ್ಯಾರ್ಥಿ ನಿಲಯಗಳು, ಮುಂತಾದವುಗಳ ನಿರ್ಮಾಣಕ್ಕಾಗಿ ಬಳಸಿರುವುದನ್ನು ಗಮನಿಸಲಾಯಿತು.

- ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2010 ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಗಡಿ ಪ್ರದೇಶಗಳ ಗ್ರಾಮಗಳಲ್ಲಿ ಸಂಬಂಧಪಟ್ಟ ಇಲಾಖೆಗಳ ಮೂಲಕ ಒದಗಿಸುವ ಕುಡಿಯುವ ನೀರು, ಆರೋಗ್ಯ, ಕೃಷಿ, ನೀರಾವರಿ, ರಸ್ತೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಅಗತ್ಯವಿರುವ ಸೌಕರ್ಯಗಳನ್ನು ಮೇಲ್ವಿಚಾರಣೆ ಮಾಡುವ ಅಧಿಕಾರ ನೀಡಿದೆ. ಆದರೆ, ಮೇಲಿನ ನಿಬಂಧನೆಗಳಿಗೆ ಪ್ರತಿಯಾಗಿ ₹80.74 ಕೋಟಿ ವೆಚ್ಚದಲ್ಲಿ ₹20.97 ಕೋಟಿಗಳನ್ನು ರಸ್ತೆ ಕಾಮಗಾರಿಗಳು ಮತ್ತು ಕುಡಿಯುವ ನೀರಿಗಾಗಿ ಭರಿಸಿರುವುದನ್ನು ನಾವು ಗಮನಿಸಿದೆವು. ಹೀಗೆ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ಇಲಾಖೆಯಲ್ಲಿನ ಕಾಮಗಾರಿಗಳನ್ನು ಮೇಲ್ವಿಚಾರಣೆ ನಡೆಸುವ ಬದಲು ಕರ್ನಾಟಕ ಪ್ರದೇಶದ ಗಡಿಯಲ್ಲಿ ತನ್ನ ಹಣವನ್ನೇ ಉಪಯೋಗಿಸಿತು.

  ಈ ಮೇಲಿನ ಅಂಶಗಳಿಂದ ಅಂದರೆ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2010ರಡಿಯಲ್ಲಿ ತನ್ನ ಹಣವನ್ನು ಉದ್ದೇಶವಲ್ಲದವುಗಳಿಗೆ ಉಪಯೋಗಿಸುವುದು, ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸುವಲ್ಲಿ ವಿಫಲತೆ, ಮುಂತಾದವುಗಳಿಂದ ಗಡಿ ಪ್ರದೇಶದ ಜನತೆಗೆ ಎಲ್ಲ ರೀತಿಯ ಅಭಿವೃದ್ಧಿಗೆ ಸಹಾಯವಾಗುವ ಯಾವುದೇ ರೀತಿಯಲ್ಲಿಲ್ಲವೆಂದು ನಾವು ನಿರ್ಧರಿಸಬಹುದು.

### ಕನ್ನಡ ಸಾಹಿತ್ಯ ಪರಿಷತ್

- ಸಾಹಿತ್ಯ ಚಟುವಟಿಕೆಗಳನ್ನು ನಡೆಸುವ ಸಲುವಾಗಿ ಸರ್ಕಾರವು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಸಾಹಿತ್ಯ ಭವನ ನಿರ್ಮಿಸುವುದನ್ನು (ಡಿಸೆಂಬರ್ 2009) ಆಲೋಚಿಸಿತು. ಸರ್ಕಾರವು ಬೆಳಗಾವಿ ನಗರದಲ್ಲಿ ಸಾಹಿತ್ಯ ಭವನದ ನಿರ್ಮಾಣಕ್ಕಾಗಿ ಭೂಮಿಯನ್ನು ಹಂಚಿಕೆ ಮಾಡಿತು ಹಾಗೂ ₹33.14 ಲಕ್ಷ ವೆಚ್ಚದಲ್ಲಿ ನಿರ್ಮಿಸಿತು. ಇದರೊಂದಿಗೆ, ಇಲಾಖೆಯು ಬೆಳಗಾವಿಯಲ್ಲಿ ಇನ್ನೊಂದು ಸಾಹಿತ್ಯ ಭವನ ನಿರ್ಮಾಣಕ್ಕಾಗಿ ₹ಮೂರು ಕೋಟಿ ಹಣವನ್ನು ಬಿಡುಗಡೆ ಮಾಡಿತು. ಈ ಭವನವು ಭಾಗಶ: ಪೂರ್ಣಗೊಂಡಿತು ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ಬಾಡಿಗೆಗಾಗಿ ಜಾಹೀರಾತನ್ನು ಹೊರಡಿಸಿತು (ಮೇ 2018). ಹೀಗೆ ಸಾಹಿತ್ಯ ಭವನದ ನಿರ್ಮಾಣದ ಧ್ಯೇಯವಾದ ಸಾಹಿತ್ಯ ಸಮಾವೇಶಗಳ ಆಯೋಜಿಸುವುದನ್ನೇ ಸೋಲಿಸಿದಂತಾಯಿತು. ಮುಂದುವರೆದು, ಹೆಚ್ಚುವರಿ ಸಾಹಿತ್ಯ ಭವನ ನಿರ್ಮಾಣದ ಅವಶ್ಯಕತೆಯಿರಲೇ ಇಲ್ಲ ಎಂಬುದನ್ನು ಇದು ಸೂಚಿಸುತ್ತದೆ ಮತ್ತು ಇದು ₹ಮೂರು ಕೋಟಿ ನಿಷ್ಫಲ ವೆಚ್ಚದಲ್ಲಿ ಪರಿಣಮಿಸಿತು.

### ಕನ್ನಡ ಪುಸ್ತಕ ಪ್ರಾಧಿಕಾರ

- ಕನ್ನಡ ಪುಸ್ತಕ ಪ್ರಕಾಶನ ಉದ್ಯಮಕ್ಕೆ ನೆರವು ನೀಡಲು ಆಯ್ದ ಪುಸ್ತಕಗಳನ್ನು ಪ್ರಕಟಿಸುವುದು ಮತ್ತು ರಾಜ್ಯದಲ್ಲಿನ ಎಲ್ಲ ಸರ್ಕಾರೀ ಮತ್ತು ಖಾಸಗಿ ಶಾಲೆ ಹಾಗೂ ಕಾಲೇಜುಗಳಿಗೆ ಪುಸ್ತಕಗಳನ್ನು ವಿತರಿಸುವುದು ಕರ್ನಾಟಕ ಪುಸ್ತಕ ಪ್ರಾಧಿಕಾರದ ಉದ್ದೇಶಗಳಲ್ಲೊಂದಾಗಿತ್ತು. ಹಣದ ಲಭ್ಯತೆಯಿದ್ದಾಗ್ಯೂ ಸಹ (₹2.66 ಕೋಟಿ) ಯೋಜನೆಯನ್ನು 2014–15 ಮತ್ತು 2015–16ರ ಅವಧಿಯಲ್ಲಿ ಅನುಷ್ಠಾನಗೊಳಿಸಲಿಲ್ಲ. 2016–17 ಮತ್ತು 2017–18ರ ಅವಧಿಯಲ್ಲಿ ಅದನ್ನು ಕಾರ್ಯಯೋಜನೆಯಲ್ಲಿ ಸೇರಿಸಿದ್ದರೂ ಸಹ ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ.

- ಕರ್ನಾಟಕ ಮತ್ತು ರಾಜ್ಯದ ಹೊರಭಾಗಗಳಲ್ಲಿ ಓದುಗರಿಗೆ ಒಳ್ಳೆಯ ಪುಸ್ತಕಗಳು ಲಭ್ಯವಾಗುವಂತೆ ಮಾಡಲು ಕರ್ನಾಟಕ ಪುಸ್ತಕ ಪ್ರಾಧಿಕಾರವು ರಾಜ್ಯದ 18 ಜಿಲ್ಲೆಗಳಲ್ಲಿ ಮತ್ತು ರಾಜ್ಯದ ಹೊರಗಿನ ಎರಡು ಸ್ಥಳಗಳಲ್ಲಿ 'ಸಿರಿಗಂಧ ಪುಸ್ತಕ ಮಳಿಗೆ' ಯನ್ನು ಸ್ಥಾಪಿಸಿತು (ಸೆಪ್ಟೆಂಬರ್ 2015). ಈ ಮಳಿಗೆಗಳಲ್ಲಿ ₹11.92 ಲಕ್ಷ ಮೌಲ್ಯದ ಪುಸ್ತಕಗಳ ದಾಸ್ತಾನಿಗೆ ಪ್ರತಿಯಾಗಿ ಕೇವಲ ₹2.42 ಲಕ್ಷ ಮೌಲ್ಯದ ಪುಸ್ತಕಗಳನ್ನು ಮಾರಾಟ ಮಾಡಲಾಗಿತ್ತು. ಆದರೆ, ಕಡಿಮೆ ಮಾರಾಟಕ್ಕೆ ಕಾರಣಗಳು ಹಾಗೂ ಓದುಗರ ನಿರೀಕ್ಷೆಗಳನ್ನು ಅಳೆಯಲು ಅಥವಾ ಓದುವಿಕೆ/ಮಾರಾಟವನ್ನು ವೃದ್ಧಿಸಲು ಅಗತ್ಯವಿದ್ದ ಯಾವುದೇ ಕ್ರಮವನ್ನು ಕರ್ನಾಟಕ ಪುಸ್ತಕ ಪ್ರಾಧಿಕಾರವು ತೆಗೆದುಕೊಂಡಿರಲಿಲ್ಲ.

ಹೀಗೆ ಕನ್ನಡ ಪುಸ್ತಕ ಪ್ರಾಧಿಕಾರವು ತನ್ನ ಮುಖ್ಯ ಧ್ಯೇಯವಾದ ಓದುಗರ ಹೆಚ್ಚಿಸುವಿಕೆ ಹಾಗೂ ಒಳ್ಳೆಯ ಪುಸ್ತಕಗಳನ್ನು ಕೈಗೆಟುಕುವ ಬೆಲೆಯನ್ನು ಒದಗಿಸುವುದನ್ನು ಸಾಧಿಸಲಿಲ್ಲ.

***ರಂಗಾಯಣ***

- ಮಕ್ಕಳಲ್ಲಿ ಪ್ರತಿಭೆಯನ್ನು ಅನ್ವೇಷಿಸುವುದರಲ್ಲಿ ಮತ್ತು ಜನಪದ ಜಾತ್ರೆಯನ್ನು ನಡೆಸುವಲ್ಲಿ 2013–18ರಲ್ಲಿ ಹಣವನ್ನು (₹7.42 ಕೋಟಿ) ಬಿಡುಗಡೆ ಮಾಡಿದ್ದರೂ ಸಹ ಅದನ್ನು ಬಳಸದಿದ್ದುದರಿಂದ ಮಕ್ಕಳಲ್ಲಿ ವಿವಿಧ ಪ್ರತಿಭೆಗಳನ್ನು ಗುರುತಿಸುವ ಮತ್ತು ಗ್ರಾಮಗಳ ಜಾನಪದತನವನ್ನು ಪುನಶ್ಚೇತನಗೊಳಿಸುವ ಉದ್ದೇಶವನ್ನೇ ಸೋಲಿಸಿದಂತಾಯಿತು.

ಹೀಗೆ, ಪ್ರಾಧಿಕಾರಗಳು/ಪರಿಷತ್‌ಗಳ ಮೇಲಿನ ಅವಲೋಕನಗಳಿಂದ ಇಲಾಖೆಯಿಂದ ಈ ಪ್ರಾಧಿಕಾರಗಳಿಗೆ/ಪರಿಷತ್‌ಗಳಿಗೆ ಅನುದಾನಗಳನ್ನು ಬಿಡುಗಡೆ ಮಾಡಿದರೂ ಸಹ ಅದರ ಬಳಕೆಯ ಬಗ್ಗೆ ಯಾವುದೇ ಮೇಲ್ವಿಚಾರಣೆ ಇರಲಿಲ್ಲ ಎಂದು ನಾವು ನಿರ್ಣಯಿಸಬಹುದು. ಜೊತೆಗೆ ಈ ಪ್ರಾಧಿಕಾರಗಳು/ ಪರಿಷತ್‌ಗಳನ್ನು ಸ್ಥಾಪಿಸುವ ಉದ್ದೇಶವನ್ನೂ ಸಾಧಿಸಲಾಗಲಿಲ್ಲ.

ಲೆಕ್ಕಪರಿಶೋಧನಾ ಆಕ್ಷೇಪಣೆಗಳನ್ನು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ತರಲಾಗುವುದು ಎಂದು ಸರ್ಕಾರವು ತಿಳಿಸಿತು (ಡಿಸೆಂಬರ್ 2018). ಸಿರಿಗಂಧ ಪುಸ್ತಕ ಮಳಿಗೆಗಳಲ್ಲಿ ಮಾರಾಟವನ್ನು ವೃದ್ಧಿಸಲು ಕ್ರಮ ಕೈಗೊಳ್ಳಲಾಗುವುದು ಎಂದೂ ಸಹ ಸರ್ಕಾರವು ತಿಳಿಸಿತು.

### 3.1.4 ನಿರ್ಣಯ

ಕನ್ನಡ ಅಭಿವೃದ್ಧಿ ಹಾಗೂ ಸಂಸ್ಕೃತಿಯ ಉತ್ತೇಜನವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖ್ಯ ಉದ್ದೇಶವಾಗಿತ್ತು. 42 ವರ್ಷಗಳಿಂದ ಅಸ್ತಿತ್ವದಲ್ಲಿರುವ ಇಲಾಖೆಯು ಸಾಂಸ್ಕೃತಿಕ ನೀತಿಯೊಂದನ್ನು ಹೊರತಂದಿದ್ದರೂ ಸಹ ನೀತಿಯಲ್ಲಿರುವ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಕಾರ್ಯಯೋಜನೆಯನ್ನು ರೂಪಿಸಬೇಕಾದ ಅವಶ್ಯಕತೆಯಿದೆ. ಅಗತ್ಯವಿದ್ದ ಮೂಲಸೌಕರ್ಯಗಳನ್ನು ಪಡೆದುಕೊಳ್ಳುವಲ್ಲಿ ರಾಜ್ಯದ ಪರಿಣಾಮಕಾರಿಯಲ್ಲದ ಕ್ರಮವು ಬೆಂಗಳೂರಿನಲ್ಲಿ ಶಾಸ್ತ್ರೀಯ ಕನ್ನಡದ ಅಧ್ಯಯನಕ್ಕಾಗಿ ಮೀಸಲಿಟ್ಟ ಕೇಂದ್ರದ ಸ್ಥಾಪನೆಯಾಗದಿರುವಲ್ಲಿ ಪರಿಣಮಿಸಿತು. ತತ್ಪರಿಣಾಮವಾಗಿ ಭಾರತ ಸರ್ಕಾರದ ಅನುದಾನಗಳ ಬಳಕೆಯು ನಿಧಾನ ಗತಿಯಲ್ಲಿತ್ತು. ಮಾರ್ಗದರ್ಶಿ ಸೂತ್ರಗಳನ್ನು ತಯಾರಿಸುವ ನಿಟ್ಟಿನಲ್ಲಿ ಲೋಪದೋಷಗಳಿಂದ ಮತ್ತು ಅನುಪಾಲಿಸದಿರುವುದರಿಂದ ಸಾಹಿತ್ಯವನ್ನು ಪ್ರಚಾರ ಮಾಡುವ ಉದ್ದೇಶವನ್ನು ಸಾಧಿಸಲಾಗಲಿಲ್ಲವಾಗಿ ಅದು ಹಣಕಾಸಿನ ನೆರವನ್ನು ಅರ್ಹವಲ್ಲದ ಸಂಸ್ಥೆಗಳಿಗೆ/ಟ್ರಸ್ಟ್‌ಗಳಿಗೆ ನೆರವನ್ನು ಬಿಡುಗಡೆ ಮಾಡುವಲ್ಲಿ ಮತ್ತು ನೆರವನ್ನು ಬಿಡುಗಡೆ ಮಾಡಿದ ಉದ್ದೇಶಕ್ಕೆ ಅದನ್ನು ಬಳಸಿಕೊಳ್ಳದಿರುವಲ್ಲಿ ಪರಿಣಮಿಸಿತು. 2013–14ರೊಂದ 2017–18ರ ಅವಧಿಯಲ್ಲಿ ವಿವಿಧ ಪ್ರಾಧಿಕಾರಗಳಿಗೆ, ಅಕ್ಯಾಡೆಮಿಗಳಿಗೆ, ಪರಿಷತ್‌ಗಳಿಗೆ ಮತ್ತು ರಂಗಾಯಣಗಳಿಗೆ ಬಿಡುಗಡೆ ಮಾಡಿದ ಅನುದಾನಗಳಲ್ಲಿ ಕೆಲವು ಭಾಗ ಬಳಕೆಯಾಗದೇ ಸರ್ಕಾರೀ ಲೆಕ್ಕದಿಂದ ಆಚೆ ಉಳಿಯಿತು. ಇದು ಅನುದಾನಗಳ ಬಳಕೆಯನ್ನು ಮೇಲ್ವಿಚಾರಣೆ ಮಾಡುವಲ್ಲಿನ ಲೋಪವನ್ನು ಸೂಚಿಸುತ್ತಿತ್ತು. ಹೀಗೆ, ಕನ್ನಡ ಮತ್ತು ಸಂಸ್ಕೃತಿಯ ಉತ್ತೇಜನ ಮತ್ತು ಪ್ರಚಾರದ ಮೇಲೆ ಸರ್ಕಾರವು ಬೃಹತ್ ಮೊತ್ತಗಳನ್ನು ಬಿಡುಗಡೆ ಮಾಡಿದರೂ ಸಹ ಇಲಾಖೆಯು ಗುರಿಯನ್ನು ಬಹಳಮಟ್ಟಿಗೆ ಸಾಧಿಸಲಾಗಲಿಲ್ಲ.

ಸರ್ಕಾರವು ಕೆಳಗಿನಂತೆ ಉತ್ತರಿಸಿತು (ಡಿಸೆಂಬರ್ 2018):

- ಲೆಕ್ಕಪರಿಶೋಧನೆಯಲ್ಲಿ ತೋರಿಸಿರುವಂತೆ ಅನುದಾನ ಗತಿಸಿಹೋಗುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುವುದು.
- ಮಾರ್ಗದರ್ಶಿ ಸೂತ್ರಗಳನ್ನು ಅನುಪಾಲಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು.
- ಇಲಾಖೆಯ ಗುರಿಯನ್ನು ಸಾಧಿಸಲು ಕ್ರಮ ಕೈಗೊಳ್ಳಲಾಗುವುದು.

## ಸಮಾಜ ಕಲ್ಯಾಣ ಇಲಾಖೆ

## 3.2 ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯಗಳ ನಿರ್ಮಾಣ ಮತ್ತು ನಿರ್ವಹಣೆಯ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆ

### 3.2.1 ಪರಿಚಯ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮತ್ತು ಇತರ ದುರ್ಬಲ ವರ್ಗದವರ ಕಲ್ಯಾಣಕ್ಕಾಗಿ ಭಾರತದ ಸಂವಿಧಾನವು ಕೆಲವು ವಿಶೇಷ ಸಂವಿಧಾನಿಕ ಸುರಕ್ಷತೆಗಳನ್ನು ಒದಗಿಸುತ್ತದೆ. ಇದರಿಂದ ಅವರುಗಳು ಸಮುದಾಯದಲ್ಲಿ ತಮ್ಮ ಯುಕ್ತ ಸ್ಥಾನವನ್ನು ಪಡೆಯಬಹುದು.

ವಿದ್ಯಾರ್ಥಿಗಳಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಲು ಮತ್ತು ಶಾಲೆ ಬಿಡುವವರನ್ನು ನಿರುತ್ಸಾಹಗೊಳಿಸಲು ಹಾಗೂ ಪರಿಶಿಷ್ಟ ಜಾತಿಯ ಬಾಲಕರು ಮತ್ತು ಬಾಲಕಿಯರಿಗೆ ಶಿಕ್ಷಣ ನೀಡಿ ಸಬಲರನ್ನಾಗಿ ಮಾಡಲು ಕರ್ನಾಟಕ ಸರ್ಕಾರದ ಸಮಾಜಕಲ್ಯಾಣ ಇಲಾಖೆಯು ರಾಜ್ಯದೆಲ್ಲೆಡೆ 1,56,130 ವಿದ್ಯಾರ್ಥಿಗಳಿಗೆ ಸ್ಥಳಾವಕಾಶವಿರುವ 1,231 ಮೆಟ್ರಿಕ್‌ಪೂರ್ವ ಮತ್ತು 636 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. 2018-19ರ ವರ್ಷದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆಯು 1,59,054 ಆಗಿತ್ತು. ವಿದ್ಯಾರ್ಥಿನಿಲಯಗಳ ನಿರ್ಮಾಣ/ದುರಸ್ತಿಗಳನ್ನು ನಿರ್ಮಿತಿ ಕೇಂದ್ರಗಳು[42] (ಎನ್‌ಕೆ), ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ[43] (ಕೆಆರ್‌ಐಡಿಎಲ್) ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ[44] (ಕೆಆರ್‌ಇಐಎಸ್), ಇವುಗಳಿಗೆ ವಹಿಸಲಾಗಿತ್ತು.

### 3.2.2 ಸಂಘಟನಾ ವ್ಯವಸ್ಥೆ

ಸಮಾಜಕಲ್ಯಾಣ ಇಲಾಖೆಯ ಆಡಳಿತ ವ್ಯವಸ್ಥೆಯು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಎಂಬ ಮೂರು ಮಟ್ಟಗಳನ್ನು ಒಳಗೊಂಡಿದೆ.

| **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಎಸಿಎಸ್)**<br>*(ರಾಜ್ಯದಲ್ಲಿ ಸಮಾಜಕಲ್ಯಾಣ ಇಲಾಖೆಯ ಎಲ್ಲ ಯೋಜನೆಗಳ ಅನುಷ್ಠಾನದ ಒಟ್ಟಾರೆ ಪ್ರಭಾರ)* | | |
|---|---|---|
| **ರಾಜ್ಯ ಮಟ್ಟ** | **ಜಿಲ್ಲಾ ಮಟ್ಟ** | **ತಾಲ್ಲೂಕು ಮಟ್ಟ** |
| **ಸಮಾಜಕಲ್ಯಾಣ ಆಯುಕ್ತರು** | **ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು** | **ಸಹಾಯಕ ನಿರ್ದೇಶಕರು** |
| **ರಾಜ್ಯಮಟ್ಟದಲ್ಲಿ ಎಲ್ಲ ಯೋಜನೆಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆ** | **ಜಿಲ್ಲಾ ಮಟ್ಟದಲ್ಲಿ ಒಟ್ಟಾರೆ ಮೇಲ್ವಿಚಾರಣೆಯ ಹೊಣೆಗಾರಿಕೆ** | **ತಾಲ್ಲೂಕು ಮಟ್ಟದಲ್ಲಿ ಒಟ್ಟಾರೆ ಮೇಲ್ವಿಚಾರಣೆಯ ಹೊಣೆಗಾರಿಕೆ** |

### 3.2.3 ಲೆಕ್ಕಪರಿಶೋಧನಾ ಉದ್ದೇಶಗಳು

ಅನುಪಾಲನಾ ಲೆಕ್ಕಪರಿಶೋಧನೆಯನ್ನು ಈ ಕೆಳಗಿನವುಗಳನ್ನು ನಿರ್ಧರಿಸಲು ನಡೆಸಲಾಯಿತು

- ವಿದ್ಯಾರ್ಥಿನಿಲಯಗಳ ನಿರ್ಮಾಣ ಮತ್ತು ನಿರ್ವಹಣೆಯ ಯೋಜನೆ ಮತ್ತು ಅನುಷ್ಠಾನವು ಅನ್ವಯವಾಗುತ್ತಿದ್ದ ನಿಯಮಗಳು/ಆದೇಶಗಳು/ಸುತ್ತೋಲೆಗಳಿಗೆ ಅನುಗುಣವಾಗಿತ್ತೆ;

---

[42] ನಿರ್ಮಿತಿ ಕೇಂದ್ರಗಳು ಮೇಸ್ತ್ರಿಗಳು, ಬಡಗಿಗಳು ಮತ್ತು ಕುಶಲಕರ್ಮಿಗಳ ತರಬೇತಿಗಾಗಿ ಮತ್ತು ಕಡಿಮೆ ವೆಚ್ಚದ ತಂತ್ರಜ್ಞಾನ ಪರ್ಯಾಯಗಳನ್ನು ಅಭಿವೃದ್ಧಿಪಡಿಸುವ ರಾಜ್ಯಸರ್ಕಾರವು ಸ್ಥಾಪಿಸಿದ (ನವೆಂಬರ್ 1988) ತಂತ್ರಜ್ಞಾನ ವರ್ಗಾವಣೆಯ ಕೇಂದ್ರಗಳಾಗಿವೆ. ಅವುಗಳು ಕಡಿಮೆ ವೆಚ್ಚದ ವಸತಿಗಳನ್ನೂ ಸಹ ನಿರ್ವಹಿಸುತ್ತವೆ.

[43] ಸಿವಿಲ್ ಇಂಜಿನಿಯರಿಂಗ್ ನಿರ್ಮಾಣದಲ್ಲಿ ಒಳಗೊಂಡಿರುವ ಮತ್ತು ರಾಜ್ಯದಲ್ಲಿ ಆಸ್ತಿಗಳನ್ನು ಸೃಜಿಸುವ ಕರ್ನಾಟಕ ಸರ್ಕಾರದ ಉದ್ಯಮ. ಅದನ್ನು 1971ರಲ್ಲಿ ಸ್ಥಾಪಿಸಲಾಯಿತು ಮತ್ತು ಕರ್ನಾಟಕ ಭೂಸೇನಾ ನಿಗಮ ಎಂದು ಕರೆಯಲಾಗುತ್ತಿತ್ತು.

[44] ಕೆಆರ್‌ಇಐಎಸ್ ಅನ್ನು ರಾಜ್ಯದಲ್ಲಿ ವಸತಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ನಿರ್ವಹಿಸಿ, ನಿಯಂತ್ರಿಸಲು ಸ್ಥಾಪಿಸಲಾಯಿತು (ಅಕ್ಟೋಬರ್ 1999).

- ಉತ್ತಮ ಹಣಕಾಸು ನಿರ್ವಹಣೆಯನ್ನು ನಿಯಂತ್ರಿಸುವ ಸಾಮಾನ್ಯ ತತ್ವಗಳನ್ನು ಅನುಷ್ಠಾನದ ವಿವಿಧ ಘಟ್ಟಗಳಲ್ಲಿ ಅನುಸರಿಸಲಾಯಿತೆ;
- ಅನುಷ್ಠಾನದ ಅವಧಿಯಲ್ಲಿ ಸಂಬಂಧಪಟ್ಟ ನಿಯಮಗಳನ್ನು ಪಾಲಿಸುವುದನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ಮೇಲ್ವಿಚಾರಣಾ ವ್ಯವಸ್ಥೆಯನ್ನು ಸ್ಥಾಪಿಸಿತ್ತೇ ಮತ್ತು ನಿಯಮಗಳ ಉಲ್ಲಂಘನೆಯಾದ ಪ್ರಕರಣಗಳಲ್ಲಿ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಲಾಯಿತೆ.

### 3.2.4 ಲೆಕ್ಕಪರಿಶೋಧನಾ ಮಾನದಂಡಗಳು

ಅನುಪಾಲನಾ ಲೆಕ್ಕಪರಿಶೋಧನೆಗೆ ಕೆಳಗಿನ ಮೂಲಗಳು ಲೆಕ್ಕಪರಿಶೋಧನಾ ಮಾನದಂಡಗಳಾಗಿದ್ದವು:

- ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಅಧಿನಿಯಮ ಮತ್ತು ನಿಯಮಗಳು;
- ಬಾಬು ಜಗಜೀವನ್‌ರಾಂ ಛಾತ್ರವಾಸ್ ಯೋಜನೆಯ ಮಾರ್ಗದರ್ಶಿಸೂತ್ರಗಳು;
- ಕೇಂದ್ರ ಜಾಗೃತಾ ಆಯೋಗದ ಮಾರ್ಗದರ್ಶಿಸೂತ್ರಗಳು (ಜುಲೈ 2007);
- ಕಾಲಕಾಲಕ್ಕೆ ಜಾರಿ ಮಾಡಿದ ಸರ್ಕಾರೀ ಆದೇಶಗಳು/ಸುತ್ತೋಲೆಗಳು;
- ಇಲಾಖಾ ಸೂಚನೆಗಳು, ಸುತ್ತೋಲೆಗಳು ಮತ್ತು ಕೈಪಿಡಿಗಳು ಯಾವುದಾದರೂ ಇದ್ದಲ್ಲಿ;
- ಕರ್ನಾಟಕ ಹಣಕಾಸು ಸಂಹಿತೆ;
- ವಿದ್ಯಾರ್ಥಿನಿಲಯಗಳ ಕಟ್ಟಡಕ್ಕೆ ಅನುಮೋದಿತ ಮಾದರಿ ನಕ್ಷೆ; ಮತ್ತು
- ಅನುಷ್ಠಾನ ಏಜೆನ್ಸಿಗಳ ಬೈಲಾಗಳು, ನಿಯಮಗಳು ಮತ್ತು ನಿಬಂಧನೆಗಳು

### 3.2.5 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

2013–14ರಿಂದ 2017–18ರ ಅವಧಿಯನ್ನು ವ್ಯಾಪಿಸುವ ಅನುಪಾಲನಾ ಲೆಕ್ಕಪರಿಶೋಧನೆಯನ್ನು ಮೇ 2018ರಿಂದ ಆಗಸ್ಟ್ 2018ರವರೆಗೆ ನಡೆಸಲಾಯಿತು. 'ಬದಲಿ ಇಲ್ಲದೆ ಗಾತ್ರಕ್ಕೆ ಅನುಗುಣವಾದ ಸಂಭವನೀಯತೆ' ಸಂಖ್ಯಾಶಾಸ್ತ್ರ ಮಾದರಿ ವಿಧಾನದ ಮೂಲಕ ಆಯ್ಕೆ ಮಾಡಿದ ಆಯುಕ್ತರ ಕಛೇರಿ, ಕೆಆರ್‌ಇಐಎಸ್, ಎಂಟು ಜಿಲ್ಲಾ ಕಛೇರಿಗಳು ಮತ್ತು 16 ತಾಲ್ಲೂಕು ಕಛೇರಿಗಳ ದಾಖಲೆಗಳನ್ನು 2013–14ರಿಂದ 2017–18ರ ಅವಧಿಯ ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣದ ಮೇಲಿನ ವೆಚ್ಚದೊಂದಿಗೆ ಲೆಕ್ಕಪರಿಶೋಧನೆ ಮಾಡಲಾಯಿತು. ಆಯ್ಕೆ ಮಾಡಿದ ಕಛೇರಿಗಳ ಪಟ್ಟಿಯನ್ನು **ಅನುಬಂಧ–3.11ರಲ್ಲಿ** ನೀಡಲಾಗಿದೆ.

ಆಯ್ಕೆ ಮಾಡಿದ ಎಂಟು ಜಿಲ್ಲೆಗಳ 42 ತಾಲ್ಲೂಕುಗಳಲ್ಲಿ 673 ವಿದ್ಯಾರ್ಥಿನಿಲಯಗಳಿವೆ. ಪರೀಕ್ಷಾ–ತನಿಖೆಗೆ ಆಯ್ಕೆ ಮಾಡಿದ 16 ತಾಲ್ಲೂಕುಗಳಲ್ಲಿರುವ 190 ವಿದ್ಯಾರ್ಥಿನಿಲಯಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಲೆಕ್ಕಪರಿಶೋಧನೆಯು ಪರೀಕ್ಷಾ–ತನಿಖೆ ನಡೆಸಿತು ಮತ್ತು ಈ 190ರಲ್ಲಿ 72 ವಿದ್ಯಾರ್ಥಿನಿಲಯಗಳಲ್ಲಿ ಸಮಾಜಕಲ್ಯಾಣ ಇಲಾಖೆಯ ಅಧಿಕಾರಿಗಳೊಂದಿಗೆ ಜಂಟಿ ಭೌತಿಕ ಪರಿಶೀಲನೆಯನ್ನು ನಡೆಸಲಾಯಿತು ಹಾಗೂ ಅವುಗಳಲ್ಲಿ ಕಂಡುಬಂದ ಅಂಶಗಳನ್ನು ಈ ವರದಿಯಲ್ಲಿ ಹೊರತರಲಾಗಿದೆ.

ಲೆಕ್ಕಪರಿಶೋಧನಾ ಉದ್ದೇಶಗಳು, ವ್ಯಾಪ್ತಿ ಮತ್ತು ವಿಧಾನವನ್ನು ಚರ್ಚಿಸಲು ಅಪರ ಮುಖ್ಯ ಕಾರ್ಯದರ್ಶಿಗಳೊಡನೆ ಪ್ರವೇಶ ಸಭೆಯೊಂದನ್ನು ನಡೆಸಲಾಯಿತು (6 ಏಪ್ರಿಲ್ 2018). ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಸಮಾಜಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೊಂದಿಗೆ 27 ಡಿಸೆಂಬರ್ 2018ರಂದು ಚರ್ಚಿಸಲಾಯಿತು. ರಾಜ್ಯ ಸರ್ಕಾರವು ನೀಡಿದ ಉತ್ತರಗಳನ್ನು (ಜನವರಿ 2019) ಸೂಕ್ತವಾದ ಸ್ಥಳಗಳಲ್ಲಿ ಸೇರಿಸಲಾಗಿದೆ.

### 3.2.6 ಹಿಂದಿನ ಲೆಕ್ಕಪರಿಶೋಧನೆ ಮತ್ತು ಸಾರ್ವಜನಿಕ ಲೆಕ್ಕಪರಿಶೊಧನಾ ಸಮಿತಿಯ ಶಿಫಾರಸುಗಳು

ಕೆಆರ್‌ಇಐಎಸ್‌ನ ಕಾರ್ಯವೈಖರಿಯ ಮೇಲಿನ 2008–09ರಿಂದ 2012–13ರ ಅವಧಿಯನ್ನು ವ್ಯಾಪಿಸುವ ಫೆಬ್ರವರಿ 2013ರಿಂದ ಆಗಸ್ಟ್ 2013ರವರೆಗೆ ನಡೆಸಿದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯೊಂದನ್ನು ಕರ್ನಾಟಕ ಸರ್ಕಾರದ ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ ಮೇಲಿನ ಭಾರತದ

ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೊಧಕರ ವರದಿಯಲ್ಲಿ ಸೇರಿಸಲಾಗಿತ್ತು (2014ರ ವರದಿ ಸಂಖ್ಯೆ.3ರ ಕಂಡಿಕೆ 2.1). ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಸಾರ್ವಜನಿಕ ಲೆಕ್ಕಪರಿಶೋಧನಾ ಸಮಿತಿಯು ಚರ್ಚಿಸಿತು ಮತ್ತು ಶಿಫಾರಸುಗಳನ್ನು ಒಳಗೊಂಡ ವರದಿಯನ್ನು 27 ಮಾರ್ಚ್ 2017ರಂದು ವಿಧಾನಮಂಡಲದಲ್ಲಿ ಮಂಡಿಸಲಾಯಿತು. ಕೆಆರ್‌ಇಐಎಸ್‌ಗೆ ಸಂಬಂಧಿಸಿದ ಶಿಫಾರಸುಗಳ ಅನುಪಾಲನೆಯನ್ನು ಪರಿಶೀಲಿಸಲಾಯಿತು ಮತ್ತು ಸೂಕ್ತ ಸ್ಥಳಗಳಲ್ಲಿ ಅದರ ಮೇಲಿನ ಅವಲೋಕನಗಳನ್ನು ಸೇರಿಸಲಾಗಿದೆ.

### 3.2.7 ಕೃತಜ್ಞತೆ

ಸಮಾಜಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಅನುಪಾಲನಾ ಲೆಕ್ಕಪರಿಶೋಧನೆ ನಡೆಸುವಲ್ಲಿ ನೀಡಿದ ಸಹಕಾರಕ್ಕೆ ಲೆಕ್ಕಪರಿಶೋಧನೆಯು ಕೃತಜ್ಞವಾಗಿರುತ್ತದೆ.

### ಲೆಕ್ಕಪರಿಶೊಧನೆಯಲ್ಲಿ ಕಂಡುಬಂದ ಅಂಶಗಳು

ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮಂಚಗಳು, ಹಾಸಿಗೆಗಳು, ಶೌಚಾಲಯಗಳು/ಸ್ನಾನಗೃಹಗಳು ಮುಂತಾದ ಸೌಲಭ್ಯಗಳನ್ನು ಒದಗಿಸುವಲ್ಲಿನ ಅಸಮರ್ಥತೆಯನ್ನು, ಮುಂದಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ಯೋಜನೆ/ವಿದ್ಯಾರ್ಥಿನಿಲಯಗಳನ್ನು ಒದಗಿಸುವಲ್ಲಿನ ಆದ್ಯತೀಕರಣ, ಕಾಮಗಾರಿಗಳನ್ನು ಕಾರ್ಯಗತಗೊಳಿಸದಿರುವುದು, ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬಗಳು, ಮುಂತಾದವುಗಳಿಗೆ ಅಧ್ಯಾರೋಪಿಸಬಹುದು.

### 3.2.8 ಯೋಜನೆ

ವ್ಯಾಖ್ಯಾನಿಸಿದ ಉದ್ದೇಶಗಳನ್ನು ಸಾಧಿಸಲು ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನು ಗರಿಷ್ಠವಾಗಿ ಬಳಸಿಕೊಳ್ಳಲು ಯೋಜನೆಯು ಒಂದು ಪ್ರಮುಖ ಹಂತವಾಗಿದೆ. ಯೋಜನಾ ಪ್ರಕ್ರಿಯೆಯು (1) ಸಾಧಿಸಬೇಕಿರುವ ಗುರಿ ಮತ್ತು ಉದ್ದೇಶಗಳನ್ನು ಗುರುತಿಸುತ್ತದೆ, (2) ಅವುಗಳನ್ನು ಸಾಧಿಸಲು ತಂತ್ರಗಳನ್ನು ರಚಿಸುತ್ತದೆ, (3) ಅಗತ್ಯವಿರುವ ಸಾಧನಗಳನ್ನು ಒದಗಿಸುತ್ತದೆ, ಮತ್ತು (4) ಸೂಕ್ತವಾದ ಕ್ರಮಗತಿಯಲ್ಲಿ ಎಲ್ಲ ಹಂತಗಳನ್ನೂ ಅನುಷ್ಠಾನಗೊಳಿಸುತ್ತದೆ, ನಿರ್ದೇಶಿಸುತ್ತದೆ ಮತ್ತು ಮೇಲ್ವಿಚಾರಣೆ ಮಾಡುತ್ತದೆ.

#### *3.2.8.1 ಸರ್ಕಾರಿ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಮಾರ್ಗದರ್ಶಿ ಸೂತ್ರಗಳನ್ನು ರಚಿಸದಿರುವುದು*

ವಿದ್ಯಾರ್ಥಿನಿಲಯವೊಂದನ್ನು ಸ್ಥಾಪಿಸುವುದಕ್ಕೆ ಮುಂದಿನ ಮಾನದಂಡಗಳನ್ನು[45] ಪಾಲಿಸುವುದು ಅಗತ್ಯವಾಗಿದೆ (1) ಪರಿಶಿಷ್ಟ ಜಾತಿ ಜನಸಂಖ್ಯೆ ಹೆಚ್ಚಿರುವುದು ಮತ್ತು ಆ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯಲ್ಲಿ ಸಾಕ್ಷರಸ್ಥರ ಸಂಖ್ಯೆ ಕಡಿಕೆಯಿರುವುದು, (2) ಆ ಪ್ರದೇಶದಲ್ಲಿ ಅಸಮರ್ಪಕ ವಿದ್ಯಾರ್ಥಿನಿಲಯ ಸೌಕರ್ಯಗಳು, (3) ಶಾಲೆಗೆ ಹೋಗುತ್ತಿರುವ ಸಾಕಷ್ಟು ಸಂಖ್ಯೆಯ ಪರಿಶಿಷ್ಟ ಜಾತಿ ಮಕ್ಕಳು, (4) ಸಾಕಷ್ಟು ಸಂಖ್ಯೆಯ ಶಿಕ್ಷಣ ಸಂಸ್ಥೆಗಳು, ಮತ್ತು (5) ಉತ್ತಮ ಪ್ರವೇಶಾವಕಾಶ ಮತ್ತು ಮಹಿಳಾ ವಿದ್ಯಾರ್ಥಿಗಳ ಸುರಕ್ಷತೆ.

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯ ನಿರ್ವಹಣೆ ಮೇಲಿನ ಕೈಪಿಡಿಯು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಪ್ರಸ್ತಾವನೆಗಳನ್ನು ಸಲ್ಲಿಸುವ ನಮೂನೆಗಳನ್ನು ನಿಗದಿಪಡಿಸುತ್ತದೆ. ಅದರಲ್ಲಿ, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವ ಶಿಕ್ಷಣ ಸಂಸ್ಥೆಗಳ ಸಂಖ್ಯೆ, ಆ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಸಂಖ್ಯೆ, ಪ್ರಸ್ತಾವಿತ ಸ್ಥಳದಿಂದ ಶಿಕ್ಷಣ ಸಂಸ್ಥೆಗಳಿಗಿರುವ ದೂರ, ಮುಂತಾದ ಅಂಶಗಳನ್ನು ಪರಿಗಣಿಸಲಾಗುತ್ತದೆ.

ಪ್ರಸ್ತಾವನೆಗಳನ್ನು ಸಲ್ಲಿಸಿರುವುದನ್ನು ಪರೀಕ್ಷಾ-ತನಿಖೆ ನಡೆಸಿದ ಜಿಲ್ಲೆಗಳು/ತಾಲ್ಲೂಕುಗಳು ಸಲ್ಲಿಸಿದ ದಾಖಲೆಗಳಿಂದ ಲೆಕ್ಕಪರಿಶೋಧನೆಯು ಗಮನಿಸಲಿಲ್ಲ. ಪರೀಕ್ಷಾ-ತನಿಖೆ ನಡೆಸಿದ ವಿದ್ಯಾರ್ಥಿನಿಲಯಗಳ ಸಂಬಂಧವಾಗಿ ಜಿಲ್ಲೆಗಳು/ತಾಲ್ಲೂಕುಗಳಿಂದ ಸ್ವೀಕರಿಸಿದ ಪ್ರಸ್ತಾವನೆಗಳನ್ನು ಸಹ ಆಯುಕ್ತರು ಲೆಕ್ಕಪರಿಶೊಧನೆಗೆ ಲಭ್ಯಗೊಳಿಸಲಿಲ್ಲ. ದಾಖಲೆಗಳ ಅನುಪಸ್ಥಿತಿಯಲ್ಲಿ ಪರೀಕ್ಷಾ-ತನಿಖೆ ನಡೆಸಿದ

[45] ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಅಧಿಕಾರ ಮಂತ್ರಾಲಯದ ಸಾಮಾನ್ಯ ಮಾರ್ಗದರ್ಶಿ ಸೂತ್ರಗಳು.

ತಾಲ್ಲೂಕುಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಇರುವ ಅಗತ್ಯತೆಗಳ ಪರ್ಯಾಪ್ತತೆಗಳನ್ನು ಮತ್ತು ಸ್ಥಾಪಿಸಿದ ವಿದ್ಯಾರ್ಥಿನಿಲಯಗಳು ವಾಸ್ತವವಾಗಿ ಅಗತ್ಯವಾಗಿದ್ದವೇ ಎಂಬುದನ್ನು ಲೆಕ್ಕಪರಿಶೋಧನೆಯು ನಿರ್ಧರಿಸಲಾಗಲಿಲ್ಲ.

ದಾಖಲೆಗಳ ಪರಿಶೀಲನೆ ಮತ್ತು ಜಂಟಿ ಭೌತಿಕ ಪರಿಶೀಲನೆಯು ವಿದ್ಯಾರ್ಥಿನಿಲಯಗಳ ಸ್ಥಾಪನೆಯಲ್ಲಿ ಕೆಳಕಂಡ ಅಸಮರ್ಪಕ ಯೋಜನೆ/ಆದ್ಯತೀಕರಣಗಳ ಪ್ರಕರಣಗಳನ್ನು ತಿಳಿಯಪಡಿಸಿದವು:

### *(i) ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನಲ್ಲಿ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯದ ನಿರ್ಮಾಣವಾಗದಿರುವುದು*

1962–63ರಲ್ಲಿ ಸ್ಥಾಪಿಸಲಾದ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯವು ತನ್ನದೇ ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಲೋಕೋಪಯೋಗಿ ಇಲಾಖೆಯು ಕಟ್ಟಡವನ್ನು ವಾಸಿಸಲು ಅನರ್ಹವೆಂದು ಘೋಷಿಸಿದ್ದರಿಂದ (ಜೂನ್ 2017), 108 ವಿದ್ಯಾರ್ಥಿಗಳಿದ್ದ ವಿದ್ಯಾರ್ಥಿನಿಲಯವನ್ನು 2017–18ರಲ್ಲಿ ಪೋಸ್ಟ್‌ಮೆಟ್ರಿಕ್ ವಿದ್ಯಾರ್ಥಿನಿಲಯ ಮೊದಲನೇ ಮಹಡಿಗೆ ಸ್ಥಳಾಂತರಿಸಲಾಯಿತು. ಹೆಚ್ಚಿನ ಮೆಟ್ರಿಕ್‌ನಂತರದ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರಿಂದ ಮೆಟ್ರಿಕ್‌ನಂತರ್ ವಿದ್ಯಾರ್ಥಿನಿಲಯದಲ್ಲಿ ಸ್ಥಳಾವಕಾಶವಾಗದಿದ್ದುದರಿಂದ ನಂತರ 2018–19ರಲ್ಲಿ ಹಳೆಯ ಕರ್ನಾಟಕ ಮಾಡೆಲ್ ಪ್ರೈಮರಿ ಶಾಲೆ, ಬ್ಯಾಡಗಿ ಪಟ್ಟಣಕ್ಕೆ ಸ್ಥಳಾಂತರಿಸಲಾಯಿತು.

ಬ್ಯಾಡಗಿಯ ಸಹಾಯಕ ನಿರ್ದೇಶಕರು ಉಪನಿರ್ದೇಶಕರು, ಸಮಾಜಕಲ್ಯಾಣ, ಬ್ಯಾಡಗಿ, ಇವರನ್ನು ಹಳೆಯ ವಿದ್ಯಾರ್ಥಿನಿಲಯದ ಕಟ್ಟಡವನ್ನು ನೆಲಸಮಗೊಳಿಸಿ ಅದೇ ಸ್ಥಳದಲ್ಲಿ ಹೊಸದನ್ನು ನಿರ್ಮಿಸುವಂತೆ ಕೋರಿದರು (ಜೂನ್ 2017). ಆದರೆ ಉಪನಿರ್ದೇಶಕರು ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಇಲಾಖಾ ಸಿಬ್ಬಂದಿಯೊಂದಿಗೆ ನಡೆಸಿದ ಜಂಟಿ ಭೌತಿಕ ಪರಿಶೀಲನೆಯು (ಜುಲೈ 2018) ಪ್ರಸಕ್ತ ಸ್ಥಳವು ವಿದ್ಯಾರ್ಥಿನಿಲಯದ ನಿರ್ಮಾಣಕ್ಕೆ ಸೂಕ್ತವಾಗಿಲ್ಲ ಮತ್ತು ಎಲ್ಲ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ನೀಡಲು ಅಸಮರ್ಥವಾಗಿದೆ ಎಂದು ತೋರಿಸಿತು (**ಪ್ರದರ್ಶಿಕೆ–3.1**). ಹಳೆಯ ವಿದ್ಯಾರ್ಥಿನಿಲಯದ ಕಟ್ಟಡದಲ್ಲಿದ್ದ 7.5 ಕೆವಿಎ ಸಾಮರ್ಥ್ಯದ ಡೀಸೆಲ್ ಜನರೇಟರ್ ಜೂನ್ 2017ರಿಂದ ನಿಷ್ಕ್ರಿಯವಾಗಿದೆ. ಅಗತ್ಯವಿರುವ ವಿದ್ಯಾರ್ಥಿನಿಲಯಗಳಿಗೆ ಜನರೇಟರನ್ನು ಸ್ಥಳಾಂತರಗೊಳಿಸಲು ಯಾವುದೇ ಕ್ರಮ ಕೈಗೊಂಡಿರಲಿಲ್ಲ.

**ಪ್ರದರ್ಶಿಕೆ–3.1: ಪ್ರಸ್ತುತ ವಿದ್ಯಾರ್ಥಿನಿಲಯುವು ಹಳೆಯ ಕೆಎಮ್‌ಪಿಎಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವುದು, ಬ್ಯಾಡಗಿ ಪಟ್ಟಣ (26.07.2018)**



ವಿದ್ಯಾರ್ಥಿನಿಲಯಕ್ಕೆ ನೀರು ಸರಬರಾಜು



ನಿಷ್ಕ್ರಿಯ ಡೀಸಲ್ ಜನರೇಟರ್





ಹಳೆಯ ವಿದ್ಯಾರ್ಥಿನಿಲಯದ ಆವರಣದಲ್ಲಿ ಹೊಸ ಗ್ರಂಥಾಲಯ ಮತ್ತು ಕಂಪ್ಯೂಟರ್ ಪ್ರಯೋಗಶಾಲೆಯ ನಿರ್ಮಾಣವು ಪ್ರಗತಿಯಲ್ಲಿರುವುದನ್ನು ನಾವು ಗಮನಿಸಿದೆವು. ಸಮಾಜಕಲ್ಯಾಣ ಇಲಾಖೆಯ ಆಯುಕ್ತರು ನಿರ್ಮಾಣದ ಕಾಮಗಾರಿಯನ್ನು ಅನುಮೋದಿಸಿ, ಎನ್‌ಕೆಗೆ ವಹಿಸಿದರು (ಜೂನ್ 2017) ಮತ್ತು ₹80.01 ಲಕ್ಷವನ್ನು ಬಿಡುಗಡೆ ಮಾಡಿದ್ದರು. ಹಳೆಯ ವಿದ್ಯಾರ್ಥಿನಿಲಯ ಕಟ್ಟಡವನ್ನು ನೆಲಸಮ ಮಾಡಬೇಕಿದ್ದರಿಂದ ಹಾಗೂ ನೆಲಸಮ ಮಾಡುವುದು ಹಾಗೂ ನಿರ್ಮಾಣ ಮಾಡುವುದು ಹೆಚ್ಚಿನ ಅವಧಿಯನ್ನು ತೆಗೆದುಕೊಳ್ಳುವುದರಿಂದ ಪೂರ್ಣಗೊಂಡ ನಂತರ ಹೊಸ ಗ್ರಂಥಾಲಯ ಮತ್ತು ಕಂಪ್ಯೂಟರ್ ಪ್ರಯೋಗಶಾಲೆಯ ಬಳಕೆಯ ಸಾಧ್ಯತೆಯು ಕ್ಷೀಣವಾಗಿದೆ. ಮೇಲಿನ ದೃಷ್ಟಾಂತವು ಇಲಾಖೆಯಿಂದ ಸರಿಯಾದ ಯೋಜನೆಯನ್ನು ರೂಪಿಸುವಲ್ಲಿನ ಅಭಾವವನ್ನು ತೋರಿಸುತ್ತದೆ.

ಅಸ್ತಿತ್ವದಲ್ಲಿರುವ ಕಟ್ಟಡವನ್ನು ನೆಲಸಮ ಮಾಡುವ ಮತ್ತು ಹೊಸ ಕಟ್ಟಡದ ನಿರ್ಮಾಣ ಪ್ರಸ್ತಾವನೆಯನ್ನು ಜಿಲ್ಲೆಯಿಂದ ಕೇವಲ ಆಗಸ್ಟ್ 2018ರಲ್ಲಿ ಸ್ವೀಕರಿಸಲಾಯಿತು ಮತ್ತು ವಿಳಂಬಿತ ವರ್ತನೆಗೆ ಅಗತ್ಯ ವಿವರಣೆಯನ್ನು ಕೇಳಿದ ಬಳಿಕೆ ಜಿಲ್ಲಾ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಜನವರಿ 2019). ಕಟ್ಟಡವನ್ನು ನಿರ್ಮಾಣ ಮಾಡುವವರೆಗೆ ಮತ್ತು ವಿದ್ಯಾರ್ಥಿಗಳನ್ನು ಹೊಸಕಟ್ಟಡಕ್ಕೆ ಸ್ಥಳಾಂತರಿಸುವವರೆಗೆ ಗ್ರಂಥಾಲಯ ಮತ್ತು ಪ್ರಯೋಗಶಾಲೆಯನ್ನು ಬಳಸಲು ಬ್ಯಾಡಗಿ ಪಟ್ಟಣದ ಮೆಟ್ರಿಕ್‌ನಂತರದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಡಲಾಗುವುದೆಂದೂ ತಿಳಿಸಲಾಯಿತು.

ಉತ್ತರವು ತೃಪ್ತಿದಾಯಕವಾಗಿಲ್ಲ. ಮೆಟ್ರಿಕ್‌ನಂತರದ ವಿದ್ಯಾರ್ಥಿಗಳಿಗೆ ಗ್ರಂಥಾಲಯ ಮತ್ತು ಪ್ರಯೋಗಶಾಲೆಯನ್ನು ನಿರ್ಮಿಸಲಾಗುತ್ತಿದ್ದು ಹಾಗು ಮೆಟ್ರಿಕ್‌ನಂತರ ವಿದ್ಯಾರ್ಥಿನಿಲಯ ಮತ್ತು ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯದ ನಡುವಿನ ಅಂತರವು 2 ಕಿಲೋಮೀಟರ್‌ಗೂ ಅಧಿಕವಾಗಿದೆ. ಹೀಗೆ ಮೆಟ್ರಿಕ್‌ಪೂರ್ವ ವಿದ್ಯಾರ್ಥಿಗಳಿಗೆ ಸೂಕ್ತ ವಿದ್ಯಾರ್ಥಿನಿಲಯದ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಾಕಷ್ಟು ಆದ್ಯತೆಯನ್ನು ನೀಡಲಾಗಿಲ್ಲ.

### *(ii) ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬೆಟಗೇರ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ – ಅಪೂರ್ಣ ಕಾಮಗಾರಿ*

ಬೆಟಗೇರದ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯದ ₹92 ಲಕ್ಷ ಅಂದಾಜು ವೆಚ್ಚದ ನಿರ್ಮಾಣ ಕಾಮಗಾರಿಯನ್ನು (50 ಸಂಖ್ಯಾಬಲ) ಸಮಾಜಕಲ್ಯಾಣ ಇಲಾಖೆಯು ಕೆಆರ್‌ಐಡಿಎಲ್, ಹುಮ್ನಾಬಾದ್‌ಗೆ ವಹಿಸಿತು ಮತ್ತು 2010–11 ಮತ್ತು 2011–12ರ ಅವಧಿಯಲ್ಲಿ ₹20.00 ಲಕ್ಷವನ್ನು ಬಿಡುಗಡೆ ಮಾಡಿತು. ನಿರ್ಮಾಣಕ್ಕೆ ನಿಗದಿಪಡಿಸಿದ್ದ ಅವಧಿಯು ಮಳೆಗಾಲವನ್ನು ಒಳಗೊಂಡಂತೆ 11 ತಿಂಗಳುಗಳಾಗಿದ್ದಿತು. ಕೆಆರ್‌ಐಡಿಎಲ್ ಜುಲೈ 2012ರಲ್ಲಿದ್ದಂತೆ ₹25.00 ಲಕ್ಷ ವೆಚ್ಚವನ್ನು ಭರಿಸಿತ್ತು ಮತ್ತು ನಂತರ ಸಮಾಜಕಲ್ಯಾಣ ಇಲಾಖೆಯು ಮತ್ತಷ್ಟು ಕಂತುಗಳನ್ನು ಬಿಡುಗಡೆ ಮಾಡದಿದ್ದುದರಿಂದ ಕಾಮಗಾರಿಯನ್ನು ನಿಲ್ಲಿಸಿತು.

ಏಜೆನ್ಸಿಯು ಅಡಿಪಾಯದವರೆಗೆ ಕಾಮಗಾರಿಯನ್ನು ಪೂರ್ಣಗೊಳಿಸಿದೆ ಮತ್ತು ಕಾಲಮ್‌ಗಳಿಗೆ ಉಕ್ಕಿನ ರಾಡುಗಳನ್ನು ಹಾಕಿರುವುದನ್ನು ಕಾಮಗಾರಿಯ ನಿವೇಶನದ ಜಂಟಿ ಭೌತಿಕ ಪರಿಶೀಲನೆಯಿಂದ ನಾವು ಗಮನಿಸಿದೆವು. ಅಡಿಪಾಯದ ಒಂದು ಭಾಗದಲ್ಲಿ ಬಿರುಕುಗಳಾಗಿದ್ದು ಉಕ್ಕಿನ ರಾಡುಗಳು ತುಕ್ಕು ಹಿಡಿದು ರಚನೆಯು ದುರ್ಬಲವಾಗಿತ್ತು (**ಪ್ರದರ್ಶಿಕೆ–3.2**). ಹೀಗೆ, ಆರು ವರ್ಷಗಳ ನಂತರವೂ ಸಹ ವಿದ್ಯಾಥಿನಿಲಯದ ಕಟ್ಟಡವು ಅಪೂರ್ಣವಾಗಿದ್ದು ವೆಚ್ಚವನ್ನು ನಿಷ್ಫಲವಾಗಿಸಿತು.

**ಪ್ರದರ್ಶಿಕೆ–3.2: ಬೆಟಗೇರದ ಅಪೂರ್ಣ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಕಟ್ಟಡ (04.07.2018)**





ಹಣದ ಕೊರತೆಯಿಂದ ಕಾಮಗಾರಿಯನ್ನು ನಿಲ್ಲಿಸಲಾಯಿತು ಎಂದು ಬಸವಕಲ್ಯಾಣದ ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದರು (ಜುಲೈ 2018). ಬೀದರ್‌ನ ಸಮಾಜಕಲ್ಯಾಣ ಇಲಾಖೆಯ ಉಪನಿರ್ದೇಶಕರೊಡನೆ ವಿಷಯವನ್ನು ಚರ್ಚಿಸಲಾಗಿದೆ ಮತ್ತು ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದೂ ಸಹ ಅವರು ತಿಳಿಸಿದರು.

ಜಿಲ್ಲಾ ಪಂಚಾಯತಿಯಲ್ಲಿ ಹಣದ ಕೊರತೆಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಲಾಗಲಿಲ್ಲ ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019). ₹124.42 ಲಕ್ಷದ ಪರಿಷ್ಕೃತ ಅಂದಾಜನ್ನು ಅನುಮೋದನೆಗಾಗಿ ಜಿಲ್ಲೆಯಿಂದ ಸ್ವೀಕರಿಸಲಾಗಿದೆ ಮತ್ತು ಅದು ಪ್ರಗತಿಯಲ್ಲಿದೆ. ಇದು ಹಣಕಾಸಿನ ಬದ್ಧತೆಯ ಕೊರತೆಯನ್ನು ಸೂಚಿಸುತ್ತದೆ. ಅಲ್ಲದೆ, ಹಣದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ನಿರ್ಮಾಣವನ್ನು ಕೈಗೆತ್ತಿಕೊಂಡ ಸಂದರ್ಭಗಳು ಮತ್ತು ಆರು ವರ್ಷಗಳು ವಿದ್ಯಾರ್ಥಿನಿಲಯದ ಸೌಲಭ್ಯದ ಅಲಭ್ಯತೆಯ ಪರಿಣಾಮವನ್ನು ಪರಿಶೀಲಿಸಬೇಕಾದ ಅಗತ್ಯವಿದೆ.

ಇವು ಕೇವಲ ದೃಷ್ಟಾಂತ ಪ್ರಕರಣಗಳಾದ್ದರಿಂದ ರಾಜ್ಯ ಸರ್ಕಾರವು ಇತರೆ ಜಿಲ್ಲೆಗಳಲ್ಲಿಯೂ ಸಹ ಇಂತಹ ಪ್ರಕರಣಗಳನ್ನು ಪರಿಶೀಲಿಸಬೇಕು ಮತ್ತು ವಿದ್ಯಾರ್ಥಿನಿಲಯಗಳ ಸ್ಥಾಪನೆಗೆ ಆದ್ಯತೆಯನ್ನು ನೀಡಬೇಕು.

ರಾಜ್ಯ ಸರ್ಕಾರವು ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಯಾವುದೇ ಮಾರ್ಗದರ್ಶಿ ಸೂತ್ರಗಳನ್ನು ಹೊರತಂದಿಲ್ಲ. ಆಗಸ್ಟ್ 2018ರಲ್ಲಿದ್ದಂತೆ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳ ಸ್ಥಿತಿಯನ್ನು **ಕೋಷ್ಟಕ–3.4ರಲ್ಲಿ** ನೀಡಲಾಗಿದೆ.

**ಕೋಷ್ಟಕ–3.4: ಆಗಸ್ಟ್ 2018ರಲ್ಲಿದ್ದಂತೆ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳ ಸ್ಥಿತಿ**

| ಕ್ರಮ ಸಂಖ್ಯೆ | ವರ್ಗ | ರಾಜ್ಯ | | | | ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳು | | | |
|---|---|---|---|---|---|---|---|---|---|
| | | ಒಟ್ಟು | ಸ್ವಂತ ಕಟ್ಟಡ | ಬಾಡಿಗೆ ರಹಿತ | ಬಾಡಿಗೆ | ಒಟ್ಟು | ಸ್ವಂತ ಕಟ್ಟಡ | ಬಾಡಿಗೆ ರಹಿತ | ಬಾಡಿಗೆ |
| 1 | ಮೆಟ್ರಿಕ್–ಪೂರ್ವ | 1,231 | 1,138 | 07 | 86 | 448 | 408 | 0 | 40 |
| 2 | ಮೆಟ್ರಿಕ್–ನಂತರದ | 636 | 324 | 53 | 259 | 225 | 112 | 10 | 103 |
| | **ಒಟ್ಟು** | **1,867** | **1,462** | **60** | **345** | **673** | **520** | **10** | **143** |

ಆಧಾರ: ಸಮಾಜಕಲ್ಯಾಣ ಇಲಾಖೆಯ ಆಯುಕ್ತರು ಸಲ್ಲಿಸಿದ ಮಾಹಿತಿ

ಮೇಲಿನ ಕೋಷ್ಟಕದಿಂದ ಗಮನಿಸಿದಂತೆ, ರಾಜ್ಯದಲ್ಲಿನ ಶೇಕಡಾ 18ರಷ್ಟು ವಿದ್ಯಾರ್ಥಿನಿಲಯಗಳು ಮತ್ತು ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳ ಶೇಕಡಾ 21ರಷ್ಟು ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳಿಗೆ ಹೋಲಿಸಿದರೆ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು ಹೆಚ್ಚಿನದಾಗಿದ್ದವು. ಅಲ್ಲದೆ, ಪರೀಕ್ಷಾ–ತನಿಖೆ ನಡೆಸಿದ ತಾಲ್ಲೂಕುಗಳ 190 ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳಲ್ಲಿ 45 ವಿದ್ಯಾರ್ಥಿನಿಲಯಗಳು (ಶೇಕಡಾ 24) ಬಾಡಿಗೆಯ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಈ ಬಾಡಿಗೆಯ ಕಟ್ಟಡಗಳು ವಿದ್ಯಾರ್ಥಿನಿಲಯಗಳನ್ನು ನಡೆಸಲು ನಿರ್ಮಿಸಿಲ್ಲವಾದ್ದರಿಂದ, ಜಂಟಿ ಭೌತಿಕ ಪರಿಶೀಲನೆಯಲ್ಲಿ ಗಮನಿಸಿದಂತೆ ಶೌಚಾಲಯಗಳ/ಸ್ನಾನಗೃಹಗಳ ಸಾಕಷ್ಟು ಸಂಖ್ಯೆ, ಊಟದ ಕೊಠಡಿ, ಮುಂತಾದ ಕೆಲವು ಮೂಲ ಸೌಕರ್ಯಗಳ ಕೊರತೆಯಿದ್ದಿತು.

ಸರ್ಕಾರಿ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಯಾವುದೇ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿಲ್ಲ ಮತ್ತು ವಿದ್ಯಾರ್ಥಿನಿಲಯಗಳ ನಿರ್ಮಾಣವನ್ನು ಮಾದರಿ ಯೋಜನೆಯ ಅನ್ವಯ ಮಾಡಲಾಗುತ್ತಿತ್ತು ಎಂದು ಸಮಾಜಕಲ್ಯಾಣ ಇಲಾಖೆಯ ಆಯುಕ್ತರು ಒಪ್ಪಿಕೊಂಡರು (ಅಕ್ಟೋಬರ್ 2018). ಹಿಂದಿನ ಐದು ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯ ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಯಿತು ಮತ್ತು ಅವುಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ ಎಂದೂ ಸಹ ತಿಳಿಸಿದರು.

### *3.2.8.2 ವಿದ್ಯಾರ್ಥಿನಿಲಯಗಳ ಬಳಕೆ*

ಪರಿಚಯಾತ್ಮಕ ಕಂಡಿಕೆಯಲ್ಲಿ ತಿಳಿಸಿರುವಂತೆ, ರಾಜ್ಯದಲ್ಲಿನ ವಿದ್ಯಾರ್ಥಿನಿಲಯಗಳಲ್ಲಿ ಸ್ಥಳಾವಕಾಶ ಒದಗಿಸಿರುವ ವಿದ್ಯಾರ್ಥಿಗಳ ಸಂಖ್ಯೆಯು ಅವುಗಳ ನಿಗದಿತ ಸಾಮರ್ಥ್ಯಕ್ಕಿಂತ ಅಧಿಕವಾಗಿದ್ದಿತು.

ವಿದ್ಯಾರ್ಥಿನಿಲಯಗಳ ಮಂಜೂರಾದ ಬಲವನ್ನು ಲೆಕ್ಕಿಸದೇ ಪ್ರವೇಶಾವಕಾಶ ಬಯಸುವ ಎಲ್ಲ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ನೀಡುವಂತೆ ರಾಜ್ಯ ಸರ್ಕಾರವು ಸೂಚಿಸಿದ್ದರಿಂದ (ಜುಲೈ 2013) ಈ ಪರಿಸ್ಥಿತಿಯುಂಟಾಗಿದ್ದಿತು.

2017–18ರಲ್ಲಿ ಮಂಜೂರಾದ ಬಲಕ್ಕೆ ಪ್ರತಿಯಾಗಿ ಪರೀಕ್ಷಾ-ತನಿಖೆ ನಡೆಸಿದ 190 ವಿದ್ಯಾರ್ಥಿನಿಲಯಗಳಲ್ಲಿ (139 ಬಾಲಕರ ಮತ್ತು 51 ಬಾಲಕಿಯರ) ಸ್ಥಳಾವಕಾಶದ ಸ್ಥಿತಿಯನ್ನು **ಅನುಬಂಧ-3.12ರಲ್ಲಿ** ನೀಡಲಾಗಿದೆ.

16 ತಾಲ್ಲೂಕುಗಳಲ್ಲಿ ಪರೀಕ್ಷಾ-ತನಿಖೆ ನಡೆಸಿದ 190 ವಿದ್ಯಾರ್ಥಿನಿಲಯಗಳ ಪೈಕಿ 74 ವಿದ್ಯಾರ್ಥಿನಿಲಯಗಳು (ಶೇಕಡಾ 39ರಷ್ಟು) ತಮ್ಮ ಸಾಮರ್ಥ್ಯಕ್ಕಿಂತ ಅಧಿಕ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ನೀಡಿದ್ದರೆಂದು ಪರಿಶೀಲನೆಯು ತೋರಿಸಿತು. 10 ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಶೇಕಡಾ 100ಕ್ಕಿಂತ ಅಧಿಕವಾಗಿತ್ತು. ಇನ್ನೊಂದು ಕಡೆ 85 ವಿದ್ಯಾರ್ಥಿನಿಲಯಗಳನ್ನು (ಶೇಕಡಾ 45ರಷ್ಟು) ಕಡಿಮೆ ಬಳಕೆ ಮಾಡಲಾಗಿತ್ತು. 18 ವಿದ್ಯಾರ್ಥಿನಿಲಯಗಳಲ್ಲಿ ಕಡಿಮೆ-ಬಳಕೆಯ ಪ್ರಮಾಣ ಶೇಕಡಾ 10ಕ್ಕಿಂತ ಕಡಿಮೆಯಿದ್ದಿತು ಮತ್ತು 30 ವಿದ್ಯಾರ್ಥಿನಿಲಯಗಳಲ್ಲಿ ಅದು ಶೇಕಡಾ 12 ರಿಂದ 25ರ ವ್ಯಾಪ್ತಿಯಲ್ಲಿದ್ದಿತು. 26 ವಿದ್ಯಾರ್ಥಿನಿಲಯಗಳಲ್ಲಿನ ಕಡಿಮೆ-ಬಳಕೆಯು ಶೇಕಡಾ 26ರಿಂದ 50ರ ವ್ಯಾಪ್ತಿಯಲ್ಲಿದ್ದರೆ ಉಳಿದ 11 ವಿದ್ಯಾರ್ಥಿನಿಲಯಗಳಲ್ಲಿ ಅದು ಶೇಕಡಾ 53ರಿಂದ 83ರ ವ್ಯಾಪ್ತಿಯಲ್ಲಿದ್ದಿತು.

**ನಕ್ಷೆ-3.2ರಲ್ಲಿ** ತೋರಿಸಿರುವಂತೆ ವಿದ್ಯಾರ್ಥಿಗಳ ಸಂಖ್ಯೆಯು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಅಧಿಕವಾಗಿತ್ತೆಂದು ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಹೋಲಿಕೆಯು ತೋರಿಸಿತು. ವಿದ್ಯಾರ್ಥಿನಿಲಯವಾರು ವಿವರಗಳನ್ನು **ಅನುಬಂಧ-3.13ರಲ್ಲಿ** ನೀಡಲಾಗಿದೆ.

**ನಕ್ಷೆ-3.2: ಪರೀಕ್ಷಾ-ತನಿಖೆ ನಡೆಸಿದ ವಿದ್ಯಾರ್ಥಿನಿಲಯಗಳಲ್ಲಿ ಅನುಭೋಗದ ಸ್ಥಿತಿ (2017-18)**




ಅಧಿಕ ಬಳಕೆಯಾಗುತ್ತಿರುವ ವಿದ್ಯಾರ್ಥಿನಿಲಯಗಳಿಂದ ಅದೇ ಪಟ್ಟಣದಲ್ಲಿರುವ ಕಡಿಮೆ ಬಳಕೆಯಾಗುತ್ತಿರುವ ವಿದ್ಯಾರ್ಥಿನಿಲಯಗಳಿಗೆ ವಿದ್ಯಾರ್ಥಿಗಳನ್ನು ಸ್ಥಳಾಂತರಿಸಲು ಇಲಾಖೆಯು ಯಾವುದೇ ಕ್ರಮ ಕೈಗೊಂಡಿರಲಿಲ್ಲವೆಂದೂ ಸಹ ನಾವು ಗಮನಿಸಿದೆವು. ಕೆಲವು ದೃಷ್ಟಾಂತ ಪ್ರಕರಣಗಳನ್ನು ಕೆಳಗೆ ನೀಡಲಾಗಿದೆ.

(1) ಮಧುಗಿರಿಯ ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ 2013–14ರಿಂದ 2017–18ರ ಅವಧಿಯಲ್ಲಿ ಮಂಜೂರಾದ 87 ಸಂಖ್ಯಾಬಲಕ್ಕೆ ಪ್ರತಿಯಾಗಿ 135ರಿಂದ 215 ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಲಾಗಿತ್ತು. ಅದೇ ಪಟ್ಟಣದಲ್ಲಿ ಹೊಸದಾಗಿ ನಿರ್ಮಾಣವಾದ (2017–18) ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಮಂಜೂರಾದ 100 ಸಂಖ್ಯಾಬಲಕ್ಕೆ ಪ್ರತಿಯಾಗಿ ಕೇವಲ 27 ವಿದ್ಯಾರ್ಥಿಗಳಿದ್ದರು.

(2) ಮಧುಗಿರಿ ಪಟ್ಟಣದ ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯ–1ರಲ್ಲಿ ಲೆಕ್ಕಪರಿಶೋಧನಾ ಅವಧಿಯಲ್ಲಿ ಮಂಜೂರಾದ ಬಲಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದರೆ ಅದೇ ಪಟ್ಟಣದ ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯ–2ರಲ್ಲಿ ಅದೇ ಅವಧಿಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿದ್ದರು.

(3) ಹೊಳಲ್ಕೆರೆ ಪಟ್ಟಣದ ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಮಂಜೂರಾದ 100 ಸಂಖ್ಯಾಬಲಕ್ಕೆ ಪ್ರತಿಯಾಗಿ 123ರಿಂದ 225 ವಿದ್ಯಾರ್ಥಿಗಳಿದ್ದರು. ಅದೇ ಪಟ್ಟಣದಲ್ಲಿ 2017–18ರಲ್ಲಿ ಪ್ರಾರಂಭವಾದ ಹೊಸ ವಿದ್ಯಾರ್ಥಿನಿಲಯದಲ್ಲಿ ಮಂಜೂರಾದ 90 ಸಂಖ್ಯಾಬಲಕ್ಕೆ ಪ್ರತಿಯಾಗಿ ಕೇವಲ 56 ವಿದ್ಯಾರ್ಥಿಗಳಿದ್ದರು.

ಕಂಡಿಕೆ 3.2.11ರಲ್ಲಿ ವಿವರಿಸಿರುವಂತೆ, ಹೆಚ್ಚಿನ ಬಳಕೆಯು ವಿದ್ಯಾರ್ಥಿಗಳಿಗೆ ಒದಗಿಸುತ್ತಿದ್ದ ಸೌಲಭ್ಯಗಳ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಕಡಿಮೆ ಬಳಕೆಯು ಸಂಪನ್ಮೂಲಗಳನ್ನು ವ್ಯರ್ಥ ಮಾಡುವಲ್ಲಿ ಪರಿಣಮಿಸುತ್ತದೆ.

ಜುಲೈ 2013ರ ಆದೇಶವನ್ನು ಪರಿಷ್ಕರಿಸಲಾಗಿದೆ ಮತ್ತು ಮಂಜೂರಾದ ಸಂಖ್ಯಾ ಬಲದ ಅನ್ವಯ ವಿದ್ಯಾರ್ಥಿಗಳನ್ನು ಮರುಹಂಚಿಕೆ ಮಾಡುವಂತೆ ಸೂಚಿಸಲಾಗಿದೆ (ಆಗಸ್ಟ್ 2018) ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019).

## 3.2.9 ನಾಮನಿರ್ದೇಶನದ ಆಧಾರದ ಮೇಲೆ ವಹಿಸುವಿಕೆ/ಖರೀದಿ

ಸಮಾಜಕಲ್ಯಾಣ ಇಲಾಖೆಯು 2013–14ರಿಂದ 2017–18ರ ಅವಧಿಯಲ್ಲಿ ಹೊಸ ವಿದ್ಯಾರ್ಥಿನಿಲಯಗಳ ನಿರ್ಮಾಣದ ಕಾಮಗಾರಿ ಮತ್ತು ದುರಸ್ತಿ/ನವೀಕರಣಗಳ ಕಾಮಗಾರಿಗಳನ್ನು ಎನ್‌ಕೆ, ಕೆಆರ್‌ಐಡಿಲ್ ಮತ್ತು ಕೆಆರ್‌ಇಐಎಸ್‌ಗಳಿಗೆ ವಹಿಸಿತು. ತಾನು ಕೈಗೆತ್ತಿಕೊಂಡ ನಿರ್ಮಾಣ ಕಾಮಗಾರಿಗಳ ಟೆಂಡರ್‌ಗಳನ್ನು ಆಹ್ವಾನಿಸುವ ಪ್ರಕ್ರಿಯೆಯನ್ನು ಅದು ಅನುಸರಿಸುತ್ತಿದ್ದುದರಿಂದ ಕೆಆರ್‌ಇಐಎಸ್‌ಗೆ ಹೊಸ ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣವನ್ನು ವಹಿಸಲಾಯಿತು. ಎನ್‌ಕೆ ಮತ್ತು ಕೆಆರ್‌ಐಡಿಎಲ್‌ಗಳಿಗೆ ನಿರ್ಮಾಣ ಮತ್ತು ದುರಸ್ತಿಗಳು/ನವೀಕರಣ ಕಾಮಗಾರಿಗಳನ್ನು ವಹಿಸಲಾಯಿತು.

### *3.2.9.1 ಕೆಟಿಪಿಪಿ ಅಧಿನಿಯಮದ ಕಲಮು 4(ಜಿ) ಅಡಿಯಲ್ಲಿ ವಹಿಸುವಿಕೆ*

(ಎ) ಕೇಂದ್ರ ಜಾಗೃತ ಆಯೋಗದ (ಸಿವಿಸಿ) ಮಾರ್ಗದರ್ಶಿ ಸೂತ್ರಗಳು (ಜುಲೈ 2007) ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು[46] ಉಲ್ಲೇಖಿಸುವಾಗ, ಟೆಂಡರಿಂಗ್ ಪ್ರಕ್ರಿಯೆ ಅಥವಾ ಸಾರ್ವಜನಿಕ ಖರೀದಿಯು ಯಾವುದೇ ಸರ್ಕಾರದ ಏಜೆನ್ಸಿಗೆ ಗುತ್ತಿಗೆಯನ್ನು ವಹಿಸಲು ಇರುವ ಮೂಲ ಅಗತ್ಯತೆಯಾಗಿದ್ದು, ವಿಶೇಷವಾಗಿ ನಾಮನಿರ್ದೇಶನದ ಆಧಾರದ ಮೇಲೆ ಗುತ್ತಿಗೆಯನ್ನು ವಹಿಸುವುದು ಸಮಾನತೆಯ ಹಕ್ಕನ್ನು ಖಾತರಿಪಡಿಸುವ ಅಂದರೆ ಎಲ್ಲ ಆಸಕ್ತ ವ್ಯಕ್ತಿಗಳಿಗೆ ಸಮಾನತೆಯ ಹಕ್ಕನ್ನು ಪ್ರತಿಪಾದಿಸುವ ಸಂವಿಧಾನದ 14ನೇ ಪರಿಚ್ಛೇದದ ಉಲ್ಲಂಘನೆ ಮಾಡಿದಂತಾಗುವುದು. ಕೇವಲ ಅಸಾಧಾರಣ ಸಂದರ್ಭಗಳಲ್ಲಿ[47] ಮಾತ್ರ ಮೇಲೆ ತಿಳಿಸಿದ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸದೇ ನಾಮನಿರ್ದೇಶನದ ಆಧಾರದ ಮೇಲೆ ಸರ್ಕಾರಿ ಗುತ್ತಿಗೆಯನ್ನು ವಹಿಸಬಹುದೆಂದು ಸಹ ಮೇಲಿನ ಮಾರ್ಗದರ್ಶಿ ಸೂತ್ರಗಳು ನಿಗದಿಪಡಿಸಿದ್ದವು.

ಸಮಾಜ ಕಲ್ಯಾಣ ಇಲಾಖೆಯು, ಮೇಲೆ ತಿಳಿಸಿದ ಕೇಂದ್ರ ಜಾಗೃತ ಆಯೋಗದ ಮಾರ್ಗದರ್ಶಿ ಸೂತ್ರಗಳನ್ನು ಉಲ್ಲಂಘಿಸಿ ಮುಕ್ತ ಟೆಂಡರ್ ಪ್ರಕ್ರಿಯೆಯನ್ನು ಅನುಸರಿಸದೇ ನಾಮನಿರ್ದೇಶನದ ಆಧಾರದ ಮೇಲೆ ಎನ್‌ಕೆ ಮತ್ತು ಕೆಆರ್‌ಐಡಿಎಲ್ ಗಳಿಗೆ ಕಾಮಗಾರಿಗಳನ್ನು ವಹಿಸಿತ್ತು. ಕೇಂದ್ರ ಜಾಗೃತ ಆಯೋಗದ ಮಾರ್ಗದರ್ಶಿ ಸೂತ್ರಗಳ ಅನ್ವಯ ಇವುಗಳಲ್ಲಿ ಯಾವುದೊಂದು ಪ್ರಕರಣ ಸಹ ಅಸಾಧಾರಣ ಸಂದರ್ಭವಿರಲಿಲ್ಲ.

[46] ಮೀರಟ್ ನಗರ ನಿಗಮ ಮತ್ತು ಎ.ಐ.ಫಹೀಮ್ ಮೀಟ್ ಎಕ್ಸ್‌ಪೋರ್ಟ್ ಲಿಮಿಟೆಡ್ (ಎಸ್‌ಎಲ್‌ಪಿ (ಸಿವಿಲ್) 2006ರ ನಂ.10174ರಲ್ಲಿ ಬಂದಿರುವ).

[47] ಸರ್ಕಾರವು ಘೋಷಿಸಿದ ನೈಸರ್ಗಿಕ ವಿಪತ್ತುಗಳು ಮತ್ತು ತುರ್ತು ಸಂದರ್ಭಗಳಲ್ಲಿ; ಖರೀದಿಯು ಕೇವಲ ಒಂದೇ ಮೂಲದಿಂದ ಸಾಧ್ಯವಿರುವಲ್ಲಿ; ಸರಬರಾಜುದಾರರು ಅಥವಾ ಗುತ್ತಿಗೆದಾರರೊಬ್ಬರು ನಿರ್ದಿಷ್ಟ ಸರಕು ಮತ್ತು ಸೇವೆಗಳ ಸಂಬಂಧವಾಗಿ ತಾವೊಬ್ಬರೇ ವಿಶೇಷ ಹಕ್ಕುಗಳನ್ನು ಹೊಂದಿದ್ದು ಬೇರೆ ಸಮಂಜಸವಾದ ಪರ್ಯಾಯ ಇಲ್ಲದಿದ್ದಲ್ಲಿ; ಹರಾಜನ್ನು ಹಲವಾರು ಬಾರಿ ನಡೆಸಿ ಯಾವುದೇ ಬಿಡ್ಡರ್ ಇರದಿದ್ದಲ್ಲಿ ಅಥವಾ ನೀಡಿದ್ದ ಬಿಡ್ ತುಂಬಾ ಕಡಿಮೆಯಿದ್ದಲ್ಲಿ, ಮುಂತಾದ.

ಎನ್‌ಕೆ ಮತ್ತು ಕೆಆರ್‌ಐಡಿಎಲ್‌ಗಳಿಗೆ ವಹಿಸಿದ್ದ ಕಾಮಗಾರಿಗಳು ಕೆಟಿಪಿಪಿ ಅಧಿನಿಯಮದ ಕಲಮು 4(ಜಿ)[48] ಅಡಿಯಲ್ಲಿ ಕೆಆರ್‌ಐಡಿಎಲ್‌ಗೆ ₹2 ಕೋಟಿಗೆ ಮೀರದ ನಿರ್ಮಾಣ ಕಾಮಗಾರಿಗಳನ್ನು ನೇರವಾಗಿ ವಹಿಸಬಹುದು ಎಂಬ ರಾಜ್ಯ ಸರ್ಕಾರವು ನೀಡಿದ್ದ ವಿನಾಯಿತಿಯ ಕಾರಣದಿಂದಾಗಿತ್ತು ಮತ್ತು ಪರಿಸರಸ್ನೇಹಿ ಅಥವಾ ಕಡಿಮೆ ವೆಚ್ಚದ ನಿರ್ಮಾಣ ತಂತ್ರಜ್ಞಾನ ಅಥವಾ ನವೀನ ಕಟ್ಟಡ ಸಾಮಗ್ರಿಗಳು ಅಥವಾ ಪೂರ್ವ-ಎರಕಹುಯ್ಯುವ ತಂತ್ರಜ್ಞಾನ ಇವುಗಳನ್ನು ಒಳಗೊಳ್ಳುವ ಇಲಾಖಾ ಕಾಮಗಾರಿಗಳನ್ನು ಎನ್‌ಕೆಗೆ ವಹಿಸಬಹುದಿತ್ತು. ವಹಿಸಬಹುದಿದ್ದ ಕಾಮಗಾರಿಗಳ ವೆಚ್ಚವು ₹2.00 ಕೋಟಿಯನ್ನು ಮೀರುವಂತಿರಲಿಲ್ಲ.

ಮೇಲಿನ ಅಧಿಸೂಚನೆಯನ್ನು ಉಲ್ಲಂಘಿಸಿ ಸಮಾಜಕಲ್ಯಾಣ ಇಲಾಖೆಯ ಆಯುಕ್ತರು 2014-15ರಲ್ಲಿ ಮೂರು ಕಾಮಗಾರಿಗಳನ್ನು ಎನ್‌ಕೆಗೆ ವಹಿಸಿದ್ದರು, ಅವುಗಳ ಅಂದಾಜು ವೆಚ್ಚವು ₹2 ಕೋಟಿಗಳಿಗಿಂತ ಅಧಿಕವಾಗಿದ್ದಿತು.

ಈ ಏಜೆನ್ಸಿಗಳು ಅಂದಾಜುಗಳನ್ನು ತಾವೇ ತಯಾರಿಸಿ ತಾಂತ್ರಿಕ ಅನುಮೋದನೆಯನ್ನು ತಾವೇ ನೀಡಿಕೊಳ್ಳುತ್ತಿದ್ದವು ಎಂಬುದನ್ನು ನಾವು ಗಮನಿಸಿದೆವು. ಸರ್ಕಾರ/ಸಮಾಜಕಲ್ಯಾಣ ಇಲಾಖೆ ಈ ತಾಂತ್ರಿಕ ಪರಿಶೀಲನೆಯಲ್ಲಿ ಯಾವುದೇ ಪಾತ್ರ ವಹಿಸುತ್ತಿರಲಿಲ್ಲ. ಈ ವಿಧಾನವು ಆಸಕ್ತಿಯ ಸಂಘರ್ಷಕ್ಕೆ ಕಾರಣವಾಗುತ್ತದೆ ಮತ್ತು ಇದನ್ನು ಪರಿಶೀಲಿಸಬೇಕಾದ ಅವಶ್ಯಕತೆಯಿದೆ.

2015-16 ಮತ್ತು 2016-17ರ ಅವಧಿಯಲ್ಲಿ ಎನ್‌ಕೆ ಮತ್ತು ಕೆಆರ್‌ಐಡಿಎಲ್‌ಗಳಿಗೆ ವಹಿಸಿದ 40 ಕಾಮಗಾರಿಗಳ ಸಂಬಂಧವಾಗಿ ನಿರ್ಮಾಣದ ಅಂದಾಜು ವೆಚ್ಚವು ₹199.01 ಲಕ್ಷಗಳಿಂದ ₹199.99 ಲಕ್ಷಗಳ ವ್ಯಾಪ್ತಿಯಲ್ಲಿದ್ದಿತು. ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆಯಬಹುದಿದ್ದ ವಿದ್ಯಾರ್ಥಿಗಳ ಸಂಖ್ಯೆಯು 50ರಿಂದ 150ರ ವ್ಯಾಪ್ತಿಯಲ್ಲಿದ್ದಿತು ಮತ್ತು ಈ ವಿದ್ಯಾರ್ಥಿನಿಲಯಗಳನ್ನು ಒಂದು ತಾಲ್ಲೂಕಿನ ಒಂದೇ ಸ್ಥಳದ ಆಸುಪಾಸಿನಲ್ಲಿ ಪ್ರಸ್ತಾವಿಸಲಾಗಿತ್ತು. ಸಮಾಜಕಲ್ಯಾಣ ಇಲಾಖೆಯ ಆಯುಕ್ತರ ಸೂಚನೆಗಳ (ಸೆಪ್ಟೆಂಬರ್ 2012) ಅನ್ವಯ ವಿವಿಧ ವೃತ್ತಗಳಲ್ಲಿ 30 ವಿದ್ಯಾರ್ಥಿಗಳಿಗಾಗಿನ ವಿದ್ಯಾರ್ಥಿನಿಲಯದ ನಿರ್ಮಾಣದ ಅಂದಾಜು ವೆಚ್ಚವು ₹161.89 ಲಕ್ಷಗಳಿಂದ ₹171.90 ಲಕ್ಷದ ವ್ಯಾಪ್ತಿಯಲ್ಲಿದ್ದಿತು. 93 ವಿದ್ಯಾರ್ಥಿಗಳ ಸಂಖ್ಯೆಗೆ ಅದು ₹245.81 ಲಕ್ಷದಿಂದ ₹264.65 ಲಕ್ಷಗಳ ವ್ಯಾಪ್ತಿಯಲ್ಲಿದ್ದಿತು ಮತ್ತು 156 ವಿದ್ಯಾರ್ಥಿಗಳಿಗೆ ಅದು ₹331.62 ಲಕ್ಷದಿಂದ ₹358.55 ಲಕ್ಷಗಳ ವ್ಯಾಪ್ತಿಯಲ್ಲಿದ್ದಿತು. ಹೀಗಾಗಿ ವೈವಿಧ್ಯಮಯ ಸಾಮರ್ಥ್ಯದ ಹೊರತಾಗಿಯೂ ಅಂದಾಜು ವೆಚ್ಚವು ಹೇಗೆ ಹೆಚ್ಚುಕಡಿಮೆ ಒಂದೇ ಆಗಿತ್ತೆಂಬುದನ್ನು ಲೆಕ್ಕಪರಿಶೋಧನೆಗೆ ಸ್ಪಷ್ಟವಾಗಲಿಲ್ಲ. 4(ಜಿ) ಅಡಿಯಲ್ಲಿನ ವಿನಾಯಿತಿಯ ನೆಪದಲ್ಲಿ ಅಂದಾಜುಗಳನ್ನು ₹2.00 ಕೋಟಿಗಿಂತ ಕಡಿಮೆಗೆ ಸೀಮಿತಗೊಳಿಸಿ ನೇರವಾಗಿ ವಹಿಸಲು ಇಲಾಖೆಯು ಪ್ರಯತ್ನಿಸಿರುವುದು ಸ್ಪಷ್ಟವಾಗಿದೆ.

ಅಲ್ಲದೆ, ನಾಮನಿರ್ದೇಶನದ ಆಧಾರದ ಮೇಲೆ ವಹಿಸಿದ ಎಲ್ಲ ಪ್ರಕರಣಗಳಲ್ಲೂ ಇಲಾಖೆಯು ನಿರ್ಮಾಣ ಏಜೆನ್ಸಿಗಳೊಂದಿಗೆ ಯಾವುದೇ ಒಪ್ಪಂದಗಳನ್ನು ಮಾಡಿಕೊಂಡಿರಲಿಲ್ಲ. ಒಪ್ಪಂದಗಳ ಅನುಪಸ್ಥಿತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬಗಳಿಗೆ ನಿರ್ಮಾಣ ಏಜೆನ್ಸಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆಯು ಇಲಾಖೆಯಲ್ಲಿರಲಿಲ್ಲ.

**(ಬಿ)** ಅದೇ ರೀತಿ, ಚಿತ್ರದುರ್ಗ ಸಮಾಜಕಲ್ಯಾಣ ಇಲಾಖೆಯ ಉಪನಿರ್ದೇಶಕರು 72 ಸೋಲಾರ್ ಗೃಹದೀಪಗಳ ವ್ಯವಸ್ಥೆಗಳ ಸರಬರಾಜು ಮತ್ತು ಅಳವಡಿಸುವುದನ್ನು ಕೆಟಿಪಿಪಿ ಅಧಿನಿಯಮ, 1999 ರ ಕಲಮು 4(ಜಿ) ಅಡಿಯಲ್ಲಿ ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಇಂಜಿನಿಯರ್‌ರವರ (ನವೆಂಬರ್ 2017) ಮತ್ತು ಜಿಲ್ಲಾ ಮಟ್ಟದ ಖರೀದಿ ಸಮಿತಿಯ ಅನುಮೋದನೆಯ (ಡಿಸೆಂಬರ್ 2017) ನಂತರ ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ಸಂಸ್ಥೆ ನಿಯಮಿತಕ್ಕೆ (ಕಿಯೋನಿಕ್ಸ್) ವಹಿಸಿದರು (ಜನವರಿ 2018). ಸಮಾಜಕಲ್ಯಾಣ ಇಲಾಖೆಯ ಉಪನಿರ್ದೇಶಕರು ₹99.47 ಲಕ್ಷಗಳನ್ನು ಖಜಾನೆಯಿಂದ ಸೆಳೆದರು ಮತ್ತು ಕಿಯೋನಿಕ್ಸ್‌ಗೆ ಅದನ್ನು ಪಾವತಿ ಮಾಡಿದರು (ಮೇ 2018).

[48] ಅಧ್ಯಾಯ-2ರ ನಿಬಂಧನೆಗಳು: ಕಾಲಕಾಲಕ್ಕೆ ಸರ್ಕಾರವು ಸೂಚಿಸಬಹುದಾದ ನಿರ್ದಿಷ್ಟ ಖರೀದಿಗಳಿಗೆ ಸಂಬಂಧಿಸಿದಂತೆ ಸರಕು ಮತ್ತು ಸೇವೆಗಳ ಖರೀದಿಗೆ ಖರೀದಿ ನಿಬಂಧನೆಗಳು ಅನ್ವಯಿಸುವುದಿಲ್ಲ.

ಕಂಪನಿಯು ಕಲಮು 4(ಜಿ) ಅಡಿಯಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ) ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಮಾತ್ರ ವಿನಾಯಿತಿಯಿದ್ದಿತು ಎಂದು ದಾಖಲೆಗಳ ಪರಿಶೀಲನೆಯು ತೋರಿಸಿತು. ಸೋಲಾರ್ ಗೃಹ ದೀಪಗಳ ವ್ಯವಸ್ಥೆಯ ಸರಬರಾಜು ಮತ್ತು ಅಳವಡಿಸುವಿಕೆಯು ಐಟಿ ವರ್ಗದಡಿ ಬರುವುದಿಲ್ಲವಾದ್ದರಿಂದ ಕಂಪನಿಗೆ ಈ ಕಾರ್ಯವನ್ನು ವಹಿಸಿದ್ದು ತಪ್ಪಾಗಿದ್ದಿತು ಮತ್ತು ಕೆಟಿಪಿಪಿ ಅಧಿನಿಯಮ, 1999ರ ನಿಬಂಧನೆಗಳನ್ನು ಉಲ್ಲಂಘಿಸಿದಂತಾಗಿತ್ತು.

ಲೆಕ್ಕಪರಿಶೋಧನೆಯು ವಿವಿಧ ಮೂಲಗಳಿಂದ ಘಟಕದ ದರಗಳನ್ನು ಪಡೆದುಕೊಂಡಿತು ಮತ್ತು ಕಂಪನಿಗೆ ಪಾವತಿ ಮಾಡಿದ ದರಗಳು ಗಣನೀಯವಾಗಿ ಅಧಿಕವಾಗಿತ್ತೆಂದು ಗಮನಿಸಿತು. ಇದು **ಕೋಷ್ಟಕ–3.5**ರಲ್ಲಿ ತೋರಿಸಿರುವಂತೆ ₹40.26 ಲಕ್ಷಗಳ ವೆಚ್ಚದ ದರಪಾವತಿ ವ್ಯತ್ಯಾಸದಲ್ಲಿ ಪರಿಣಮಿಸಿತು.

### ಕೋಷ್ಟಕ–3.5: ದರಗಳಲ್ಲಿ ವ್ಯತ್ಯಾಸಗಳನ್ನು ತೋರಿಸುವ ಕೋಷ್ಟಕ

(₹ ಗಳಲ್ಲಿ)

| ಕ್ರಮ ಸಂಖ್ಯೆ | ಘಟಕದ ಹೆಸರು | ಖರೀದಿಸಿದ ಪ್ರಮಾಣ | ಪ್ರತಿ ಘಟಕಕ್ಕೆ ಪಾವತಿಸಿದ ದರ | ಪ್ರತಿ ಘಟಕಕ್ಕೆ ವಾಸ್ತವಿಕ ಮಾರುಕಟ್ಟೆ ದರ | ಪ್ರತಿ ಘಟಕಕ್ಕೆ ವ್ಯತ್ಯಾಸ | ದರ ಪಾವತಿಯ ಒಟ್ಟು ವ್ಯತ್ಯಾಸ | ಘಟಕದ ದರವನ್ನು ಪಡೆದುಕೊಂಡ ಮೂಲ |
|---|---|---|---|---|---|---|---|
| 1 | ಎಸ್‌ಪಿವಿ 200 ಡಬ್ಲ್ಯು | 72 | 34,200 | 4,883* | 29,317 | 21,10,824 | ಉತ್ಪಾದಕರಿಂದ ಇಮೇಲ್ |
| 2 | ಬ್ಯಾಟರಿ 150 ಎಹೆಚ್ | 72 | 26,000 | 11,550 | 14,450 | 10,40,400 | ಉತ್ಪನ್ನದ ಪ್ಯಾಕೆಟ್‌ನ ಮೇಲೆ ಮುದ್ರಿಸಿದ್ದ ಎಮ್‌ಆರ್‌ಪಿ |
| 3 | 9 ಡಬ್ಲ್ಯು ಎಲ್‌ಇಡಿ ಡಿಸಿ ಟ್ಯೂಬ್ | 432 | 2,000 | 400 | 1,600 | 6,91,200 | ಲಭ್ಯವಿದ್ದ ಉತ್ತನ್ನದ ಉತ್ತಮ ತಾಕ್ಷಣಿಕ ಬೆಲೆ |
| 4 | ಚಾರ್ಜ್ ಕಂಟ್ರೋಲರ್ | 72 | 6,050 | 3,500 | 2,550 | 1,83,600 | |
| ಒಟ್ಟು | | | | | | **40,26,024** | |

* ಇಲಾಖಾ ಅಧಿಕಾರಿಗಳೊಂದಿಗೆ ನಡೆಸಿದ (ಜೂನ್/ಜುಲೈ 2018) ಜಂಟಿ ಭೌತಿಕ ಪರಿಶೀಲನೆಯಲ್ಲಿ ಗಮನಿಸಿದಂತೆ ಕಂಪನಿಯು ಎಸ್‌ಪಿವಿ 200 ಡಬ್ಲ್ಯು ಬದಲಿಗೆ ಎಸ್‌ಪಿವಿ 150 ಡಬ್ಲ್ಯು ಅನ್ನು ಸರಬರಾಜು ಮಾಡಿದ್ದರಿಂದ ಎಸ್‌ಪಿವಿ 150 ಡಬ್ಲ್ಯುನ ಮಾರುಕಟ್ಟೆ ದರವನ್ನು ಅಳವಡಿಸಿಕೊಳ್ಳಲಾಗಿದೆ.

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ ಮತ್ತು ಇತರೆ ಮೂಲಗಳಿಂದ ಲೆಕ್ಕಪರಿಶೋಧನೆಯು ಪಡೆದುಕೊಂಡ ದರಗಳು

ಕಂಪನಿಯು ಬೆಲೆಪಟ್ಟಿಗಳ ಪ್ರತಿಗಳನ್ನು ಹಾಗೂ ಖಾತರಿ ಕಾರ್ಡ್‌ಗಳನ್ನು ವಿದ್ಯಾರ್ಥಿನಿಲಯದ ಅಧಿಕಾರಿಗಳಿಗೆ ಹಸ್ತಾಂತರಿಸಿಲ್ಲವೆಂದು ಹಾಗೂ ವಿದ್ಯಾರ್ಥಿನಿಲಯದ ಅಧಿಕಾರಿಗಳು ಈ ವಸ್ತುಗಳನ್ನು ಸರಕು ವಹಿಯಲ್ಲಿ ಸೇರಿಸಿರಲಿಲ್ಲವೆಂದು ಜಂಟಿ ಭೌತಿಕ ಪರಿಶೀಲನೆಯು ತೋರಿಸಿತು. ಸಹಾಯಕ ನಿರ್ದೇಶಕರುಗಳು ಮತ್ತು ವಿದ್ಯಾರ್ಥಿನಿಲಯಗಳ ವಾರ್ಡನ್‌ಗಳು ತೃಪ್ತಿಕರವಾದ ಸ್ವೀಕೃತಿ ಮತ್ತು ಅಳವಡಿಕೆಯ ಪ್ರಮಾಣಪತ್ರವನ್ನು ತಾಲ್ಲೂಕುಗಳ ದಾಖಲಿಸಿರಲಿಲ್ಲ. ಬದಲಿಗೆ ಸೋಲಾರ್ ಗೃಹ ದೀಪದ ವ್ಯವಸ್ಥೆಯನ್ನು ಅಳವಡಿಸಲಾಗಿದೆ ಎಂದು ತಿಳಿಸುವ ವಿದ್ಯಾರ್ಥಿನಿಲಯದ ವಾರ್ಡನ್ ಸಹಿ ಮಾಡಿರುವ ಪ್ರಮಾಣಪತ್ರವನ್ನು ಉಪನಿರ್ದೇಶಕರಿಗೆ ಸಲ್ಲಿಸಲಾಗಿತ್ತು. ತತ್ಪರಿಣಾಮವಾಗಿ ಸರಬರಾಜು ಮಾಡಿದ ವಸ್ತುಗಳು ಅಗತ್ಯವಿದ್ದ ವಿಶಿಷ್ಟತೆಗಳಿಗೆ ಅನುಗುಣವಾಗಿದ್ದವೆ ಎಂಬುದನ್ನು ಖಚಿತಪಡಿಸಿಕೊಳ್ಳದೇ ಪಾವತಿಗಳನ್ನು ಮಾಡಲಾಗಿತ್ತು.

ಹೀಗೆ, ಟೆಂಡರ್‌ಗಳನ್ನು ಆಹ್ವಾನಿಸದೇ ಕಾಮಗಾರಿಯನ್ನು ವಹಿಸಲು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಮತ್ತು ಜಿಲ್ಲಾ ಮಟ್ಟದ ಖರೀದಿ ಸಮಿತಿಯ ಅನುಮೋದನೆಯು ಸಿವಿಸಿ ಮಾರ್ಗದರ್ಶಿ ಸೂತ್ರಗಳನ್ನು ಉಲ್ಲಂಘಿಸಿದಂತಾಯಿತಲ್ಲದೇ ಇಲಾಖೆಯು ಸ್ಪರ್ಧಾತ್ಮಕ ಬೆಲೆಗಳನ್ನು ಪಡೆಯದಿರುವಲ್ಲಿ ಮತ್ತು ತತ್ಪರಿಣಾಮವಾದ ಅಧಿಕ ವೆಚ್ಚದಲ್ಲಿ ಪರಿಣಮಿಸಿತು.

### *3.2.9.2 ನಿರ್ಮಾಣ ಏಜೆನ್ಸಿಗಳಿಗೆ ವಹಿಸಿದ ಕಾಮಗಾರಿಗಳ ಸ್ಥಿತಿ*

2013–14ರಿಂದ 2017–18ರ ಅವಧಿಯಲ್ಲಿ ಕೈಗೆತ್ತಿಕೊಂಡ 200 ಕಾಮಗಾರಿಗಳ ಪೈಕಿ ರಾಜ್ಯ ಸರ್ಕಾರವು 70 ವಿದ್ಯಾರ್ಥಿನಿಲಯಗಳ ನಿರ್ಮಾಣವನ್ನು (ಶೇಕಡಾ 35) ಎನ್‌ಕೆಗೆ ಮತ್ತು 118 ವಿದ್ಯಾರ್ಥಿನಿಲಯಗಳ (ಶೇಕಡಾ 59) ನಿರ್ಮಾಣವನ್ನು ಕೆಆರ್‌ಇಐಎಸ್‌ಗೆ, 11 ವಿದ್ಯಾರ್ಥಿನಿಲಯಗಳ ನಿರ್ಮಾಣವನ್ನು ಕೆಆರ್‌ಐಡಿಎಲ್‌ಗೆ ಹಾಗೂ ಒಂದು ಕಾಮಗಾರಿಯನ್ನು ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ವಹಿಸಿತು. ನಿರ್ಮಾಣದ ಏಜೆನ್ಸಿವಾರು ಸ್ಥಿತಿಯನ್ನು **ನಕ್ಷೆ–3.3**ರಲ್ಲಿ ನೀಡಲಾಗಿದೆ.

**ನಕ್ಷೆ–3.3: ನಿರ್ಮಾಣದ ಏಜೆನ್ಸಿವಾರು ಸ್ಥಿತಿ**




| | ವಹಿಸಿದ್ದು | ಪೂರ್ಣಗೊಳಿಸಿದ್ದು | ಪ್ರಗತಿಯಲ್ಲಿರುವವು | ಪ್ರಾರಂಭಿಸಬೇಕಿರುವುದು |
|---|---|---|---|---|
| ಕೆಆರ್‌ಐಐಎಸ್ | 118 | 3 | 94 | 21 |
| ಎನ್‌ಕೆ | 70 | 38 | 26 | 6 |
| ಕೆಆರ್‌ಐಡಿಎಲ್ | 11 | 4 | 7 | 0 |
| ಪಿಆರ್‌ಇಡಿ | 1 | 0 | 1 | 0 |
| ಒಟ್ಟು | 200 | 45 | 128 | 27 |

ಕೆಆರ್‌ಐಐಎಸ್ ಎನ್‌ಕೆ ಕೆಆರ್‌ಐಡಿಎಲ್ ಪಿಆರ್‌ಇಡಿ ಒಟ್ಟು

ಮೇಲಿನ ನಕ್ಷೆಯಿಂದ ಕಂಡುಬರುವಂತೆ ಕೇವಲ 45 (ಶೇಕಡಾ 23ರಷ್ಟು) ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ, ಅವುಗಳಲ್ಲಿ ಐದು ಕಾಮಗಾರಿಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಲಾಗಿದೆ ಮತ್ತು ಉಳಿದ 40 ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ 4ರಿಂದ 32 ತಿಂಗಳುಗಳ ವಿಳಂಬವಿದ್ದಿತು. ಮಂಜೂರಾದ ಪೂರ್ಣಗೊಂಡ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ ವರ್ಷಾವಾರು ವಿವರಗಳನ್ನು **ಅನುಬಂಧ–3.14**ರಲ್ಲಿ ನೀಡಲಾಗಿದೆ. ನಿರ್ಮಾಣವನ್ನು ತ್ವರಿತಗೊಳಿಸಲು ಇಲಾಖೆಯು ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

### *3.2.9.3 ನಿರ್ಮಾಣ ಏಜೆನ್ಸಿಗಳಿಂದ ಕಾಮಗಾರಿಗಳನ್ನು ಪ್ರಾರಂಭಿಸುವಲ್ಲಿ ವಿಳಂಬ*

2013–14ರಿಂದ 2017–18ರ ಅವಧಿಯಲ್ಲಿ ಕಾರ್ಯಾದೇಶವನ್ನು ನೀಡುವ/ನಿವೇಶನವನ್ನು ಹಸ್ತಾಂತರಿಸುವ ದಿನಾಂಕದಿಂದ ನಿರ್ಮಾಣ ಏಜೆನ್ಸಿಗಳು ಕಾಮಗಾರಿಗಳನ್ನು ಪ್ರಾರಂಭಿಸುವಲ್ಲಿ ವಿಳಂಬಗಳಿದ್ದವೆಂದು ಆಯುಕ್ತರು ಸಲ್ಲಿಸಿದ ಮಾಹಿತಿಯಿಂದ ಮತ್ತು ಕೆಆರ್‌ಐಐಎಸ್ ಸಲ್ಲಿಸಿದ ಪ್ರಗತಿ ವರದಿಗಳಿಂದ ನಾವು ಗಮನಿಸಿದೆವು. ವಿವರಗಳನ್ನು **ಕೋಷ್ಟಕ–3.6**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.6: ಕಾಮಗಾರಿಗಳನ್ನು ಪ್ರಾರಂಭಿಸುವಲ್ಲಿ ವಿಳಂಬಗಳನ್ನು ತೋರಿಸುವ ಕೋಷ್ಟಕ**

| ಕ್ರಮ ಸಂಖ್ಯೆ | ವಿಳಂಬ ದಿನಗಳಲ್ಲಿ | ಕಾಮಗಾರಿಗಳ ಸಂಖ್ಯೆ | | |
|---|---|---|---|---|
| | | ಕೆಆರ್‌ಐಐಎಸ್ | ಎನ್‌ಕೆ* | ಕೆಆರ್‌ಐಡಿಎಲ್ |
| 1 | $> 30 \leq 60$ | 4 | 9 | |
| 2 | $> 60 \leq 90$ | 11 | 2 | 1 |
| 3 | $> 90 \leq 120$ | 12 | 2 | |
| 4 | $> 120 \leq 180$ | 17 | 4 | |
| 5 | $> 180 \leq 240$ | 4 | 6 | |
| 6 | $> 240 \leq 300$ | 8 | 1 | |
| 7 | $> 300$ | 9 | 4 | |
| | **ಒಟ್ಟು** | **65** | **28** | **1** |

* ಆಯುಕ್ತರು ಸಲ್ಲಿಸಿದ ಮಾಹಿತಿಯು ಅಸಮಂಜಸ ಮತ್ತು ಅಪೂರ್ಣವಾಗಿತ್ತು. ಮಾಹಿತಿಯು ಪೂರ್ಣವಾಗಿದ್ದೆಡೆಯಲ್ಲಿ ಮಾತ್ರ ವಿಳಂಬದ ವ್ಯಾಪ್ತಿಯನ್ನು ಲೆಕ್ಕ ಹಾಕಲಾಗಿದೆ.

ಆಧಾರ: ಸಮಾಜಕಲ್ಯಾಣ ಇಲಾಖೆಯ ಆಯುಕ್ತರು ಸಲ್ಲಿಸಿದ ಮಾಹಿತಿ ಮತ್ತು ಪ್ರಗತಿ ವರದಿಗಳು

2,669 ವಿದ್ಯಾರ್ಥಿಗಳಿಗೆ ವಸತಿ ಕಲ್ಪಿಸಲು ಪ್ರಸ್ತಾವಿಸಲಾಗಿದ್ದ 32 ವಿದ್ಯಾರ್ಥಿನಿಲಯಗಳ ಸಂಬಂಧವಾಗಿ ಕೆಆರ್‌ಐಐಎಸ್ ಮತ್ತು ಎನ್‌ಕೆ ಗಳು ಆರು ತಿಂಗಳುಗಳಿಗೂ ಹೆಚ್ಚಿನ ವಿಳಂಬದಿಂದ ಕಾಮಗಾರಿಗಳ ಪ್ರಾರಂಭ ಮಾಡಿದ್ದವೆಂದು ಮೇಲಿನ ಕೋಷ್ಟಕದಿಂದ ನಾವು ಕಾಣಬಹುದು. ಕೆಆರ್‌ಇಐಎಸ್ ಸಂಬಂಧವಾಗಿ ವಿಳಂಬಗಳನ್ನು ನಿವೇಶನಗಳನ್ನು ಹಸ್ತಾಂತರಿಸುವಲ್ಲಿನ ವಿಳಂಬ/ಪ್ರಾರಂಭ ಮಾಡುವಾಗ ನಿವೇಶನದ ಅಲಭ್ಯತೆಗೆ ಅಧ್ಯಾರೋಪಿಸಿದರೆ, ಎನ್‌ಕೆ ಸಂಬಂಧವಾಗಿನ ವಿಳಂಬಕ್ಕೆ ಕಾರಣಗಳು ದಾಖಲೆಗಳಲ್ಲಿ ಕಾಣಬರಲಿಲ್ಲ.

### *3.2.9.4 ಭೂಮಿಯ ಅಲಭ್ಯತೆಯಿಂದ ಕಾಮಗಾರಿಗಳನ್ನು ಕಾರ್ಯಗತಗೊಳಿಸದಿರುವುದು*

ಕಾಮಗಾರಿಗಾಗಿ ಅಗತ್ಯವಿರುವ ಪೂರ್ಣ ಭೂಮಿಯು ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳದೇ ಕಾರ್ಯಗತಗೊಳಿಸಲು ಯಾವುದೇ ಕಾಮಗಾರಿಯನ್ನು ವಹಿಸಬಾರದೆಂದು ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಉಪಬಂಧಗಳು ನಿಗದಿಪಡಿಸುತ್ತವೆ. ಅಲ್ಲದೆ, ಕೇಂದ್ರ ಪುರಸ್ಕೃತ ಯೋಜನೆ ಬಾಬು ಜಗಜೀವನ್‌ರಾಂ ಛಾತ್ರವಾಸ್ ಯೋಜನೆಯ ಮಾರ್ಗದರ್ಶಿ ಸೂತ್ರಗಳ ಅನ್ವಯ ರಾಜ್ಯ ಸರ್ಕಾರಗಳು ವಿದ್ಯಾರ್ಥಿನಿಲಯಗಳ ಸ್ಥಾಪನೆಗಾಗಿ ಪ್ರಸ್ತಾವನೆಗಳನ್ನು ಕಳುಹಿಸುವಾಗ ಅವು ಭೂಮಿಯ ಲಭ್ಯತೆಯನ್ನು ನಿರ್ದಿಷ್ಟವಾಗಿ ತಿಳಿಸಬೇಕು ಮತ್ತು ಭೂಮಿಯ ಸ್ವಾಧೀನ ಮತ್ತು ಮಾಲೀಕತ್ವದ ಬಗ್ಗೆ ಪುರಾವೆಯನ್ನು ಒದಗಿಸಬೇಕು.

ಇದೇ ತರಹದ ಆಕ್ಷೇಪಣೆಯ ಸಂಬಂಧವಾಗಿ (ಸಾಮಾನ್ಯ ಮತ್ತು ಸಾಮಾಜಿಕ ವಲಯದ ಲೆಕ್ಕಪರಿಶೋಧನೆ ಮೇಲೆ 31 ಮಾರ್ಚ್ 2013ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯ ಕಂಡಿಕೆ 2.1.8.2–2014ನೇ ವರ್ಷದ ವರದಿ ಸಂಖ್ಯೆ–3) ನಿವೇಶನದ ಲಭ್ಯತೆಯನ್ನು ಖಚಿತಪಡಿಸಿಕೊಂಡ ನಂತರವೇ ಕಾಮಗಾರಿಗಳ ಅನುಷ್ಠಾನಕ್ಕೆ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಶಿಫಾರಸ್ಸು ಮಾಡಿತ್ತು.

2013–14ರಿಂದ 2017–18ರ ಅವಧಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿನ ಒಂದು ವಿದ್ಯಾರ್ಥಿನಿಲಯವನ್ನು ಒಳಗೊಂಡು ₹45.63 ಕೋಟಿ ಅಂದಾಜು ವೆಚ್ಚದ 12 ವಿದ್ಯಾರ್ಥಿನಿಲಯಗಳ ನಿರ್ಮಾಣದ ಕಾಮಗಾರಿಯನ್ನು ಎನ್‌ಕೆ ಮತ್ತು ಕೆಆರ್‌ಇಐಎಸ್ ಗಳಿಗೆ ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ವಹಿಸಲಾಯಿತೆಂದು ದಾಖಲೆಗಳ ಪರಿಶೀಲನೆಯಿಂದ ನಾವು ಗಮನಿಸಿದೆವು. ತತ್ಪರಿಣಾಮವಾಗಿ, ಕಾಮಗಾರಿಗಳನ್ನು ಇನ್ನೂ ಕೈಗೆತ್ತಿಕೊಳ್ಳಬೇಕಿದೆ. ವಿವರಗಳನ್ನು **ಅನುಬಂಧ–3.15ರಲ್ಲಿ** ನೀಡಲಾಗಿದೆ.

ಹೀಗೆ, ಮಾರ್ಗದರ್ಶಿ ಸೂತ್ರಗಳ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸ್ಸುಗಳ ಉಲ್ಲಂಘನೆಯು ಕಾಮಗಾರಿಗಳನ್ನು ಕಾರ್ಯಗತಗೊಳಿಸದಿರುವಲ್ಲಿ ಮತ್ತು ತತ್ಪರಿಣಾಮವಾಗಿ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ನಿರಾಕರಿಸಿದಂತಾಯಿತು.

ಕಾಮಗಾರಿಗಳ ಪ್ರಾರಂಭದ ಸಮಯದಲ್ಲಿ ಸ್ಥಳೀಯ ವಿವಾದಗಳಿದ್ದರಿಂದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಲ್ಲಿ ವಿಳಂಬವಾಯಿತು ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಜನವರಿ 2019). ಕಾಮಗಾರಿಯನ್ನು ವಹಿಸುವ ಮೊದಲು ಯಾವುದೇ ಋಣಭಾರವಿಲ್ಲದ ಭೂಮಿಯು ಲಭ್ಯವಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕೆನ್ನುವ ಶಾಸನಬದ್ಧ ನಿಬಂಧನೆಯನ್ನು ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳನ್ನು ಉಲ್ಲಂಘನೆ ಮಾಡಿರುವುದನ್ನು ಉತ್ತರವು ಸೂಚಿಸುತ್ತದೆ.

### *3.2.9.5 ಸಿಎಸ್‌ಎಸ್–ಬಾಬು ಜಗಜೀವನ್‌ರಾಮ್ ಛಾತ್ರವಾಸ್ ಯೋಜನೆ ಅಡಿಯಲ್ಲಿ ವಿದ್ಯಾರ್ಥಿ ನಿಲಯಗಳ ನಿರ್ಮಾಣ*

ಪರಿಶಿಷ್ಟ ಜಾತಿಯ ಬಾಲಕಿಯರಿಗಾಗಿನ ವಿದ್ಯಾರ್ಥಿನಿಲಯಗಳ ನಿರ್ಮಾಣದ ಯೋಜನೆಯನ್ನು ಮೂರನೇ ಪಂಚವಾರ್ಷಿಕ ಯೋಜನೆಯಿಂದ (1961–66) ಮತ್ತು ಬಾಲಕರಿಗೆ 1989–90ರ ವರ್ಷದಿಂದ ಪ್ರಾರಂಭಿಸಲಾಯಿತು. ಬಾಲಕಿಯರ ವಿದ್ಯಾರ್ಥಿನಿಲಯದ ನಿರ್ಮಾಣಕ್ಕೆ ಶೇಕಡಾ 100ರಷ್ಟು ನೆರವನ್ನು ಮತ್ತು ಬಾಲಕರ ವಿದ್ಯಾರ್ಥಿನಿಲಯದ ನಿರ್ಮಾಣಕ್ಕೆ ಸಮಪ್ರಮಾಣದ ಹಂಚಿಕೆ ಆಧಾರದ ಮೇಲೆ ಶೇಕಡಾ 50ರಷ್ಟು ನೆರವನ್ನು ಭಾರತ ಸರ್ಕಾರವು ಒದಗಿಸುತ್ತದೆ. ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಅಧಿಕಾರ ಮಂತ್ರಾಲಯಕ್ಕೆ ಪ್ರಸ್ತಾವನೆಗಳನ್ನು ಕಳುಹಿಸುವ ಮೊದಲು ವಿದ್ಯಾರ್ಥಿನಿಲಯಗಳನ್ನು ನಿರ್ಮಾಣ

ಮಾಡುವ ಭೂಮಿಯ ಮೇಲೆ ಸ್ಪಷ್ಟವಾದ ಮಾಲೀಕತ್ವ ಮತ್ತು ಸ್ವಾಧೀನತೆಯನ್ನು ಹೊಂದಿರುವ ಬಗ್ಗೆ ರಾಜ್ಯ ಸರ್ಕಾರವು ಖಚಿತಪಡಿಸಿಕೊಂಡಿರಬೇಕು. ವಿದ್ಯಾರ್ಥಿನಿಲಯಗಳ ನಿರ್ಮಾಣವು ಪೂರ್ಣಗೊಳ್ಳುವವರೆಗೆ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ತೋರಿಸುವ ತ್ರೈಮಾಸಿಕ ವರದಿಗಳನ್ನು ಸಹ ರಾಜ್ಯಸರ್ಕಾರವು ಸಲ್ಲಿಸಬೇಕಿತ್ತು.

ರಾಜ್ಯ ಸರ್ಕಾರವು 2013–14ರ ಅವಧಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆ ಅಡಿಯಲ್ಲಿ ನಾಲ್ಕು ವಿದ್ಯಾರ್ಥಿನಿಲಯಗಳ ಮತ್ತು 2015–16, 2016–17 ಮತ್ತು 2017–18ರ ವರ್ಷಗಳಿಗೆ ಪ್ರತಿ ವರ್ಷಕ್ಕೆ ಎರಡು ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿತ್ತು. ಭಾರತ ಸರ್ಕಾರವು 2013–14ರ ವರ್ಷದ ನಾಲ್ಕು ಪ್ರಸ್ತಾವನೆಗಳನ್ನು ಅನುಮೋದಿಸಿತು ಮತ್ತು ಮೊದಲ ಕಂತಾಗಿ ₹3.50 ಕೋಟಿಗಳನ್ನು ಬಿಡುಗಡೆ (ಜನವರಿ 2014) ಮಾಡಿತು. ಭಾರತ ಸರ್ಕಾರವು ಇತರೆ ಆರು ಪ್ರಸ್ತಾವನೆಗಳನ್ನು ಇನ್ನೂ ಅನುಮೋದಿಸಬೇಕಿದೆ (ಸೆಪ್ಟಂಬರ್ 2018). ಭಾರತ ಸರ್ಕಾರವು ಬಿಡುಗಡೆ ಮಾಡಿದ ಹಣವನ್ನು ಇಲಾಖೆಯು ಸಮಯಕ್ಕೆ ಸರಿಯಾಗೆ ತೆಗೆದುಕೊಳ್ಳಲು ವಿಫಲವಾಗಿದ್ದರಿಂದ ಅದು ಕೇಂದ್ರ ನೆರವಿನ ಬಳಕೆಯಾಗದಿರುವಲ್ಲಿ ಪರಿಣಮಿಸಿತು.

ಲೆಕ್ಕಪರಿಶೋಧನೆಯು ಕೆಳಗಿನ ಅಂಶಗಳನ್ನು ಗಮನಿಸಿತು:

- ಅಕ್ಟೋಬರ್ 2017ರಲ್ಲಿ ಸಮಾಜಕಲ್ಯಾಣ ಇಲಾಖೆಯ ಆಯುಕ್ತರು 2013–14ರಲ್ಲಿ ಪ್ರಸ್ತಾವನೆ ಮಾಡಿದ್ದ ನಾಲ್ಕು ಕಾಮಗಾರಿಗಳ ನಿರ್ಮಾಣವನ್ನು ಎನ್‌ಕೆಗೆ ವಹಿಸಿದರು. ಹಣದ ಬಿಡುಗಡೆಯಾಗದಿರುವುದರಿಂದ ಎನ್‌ಕೆ ಈ ಕಾಮಗಾರಿಗಳ ನಿರ್ಮಾಣವನ್ನು ಆಗಸ್ಟ್ 2018ರಲ್ಲಿದ್ದಂತೆ ಇನ್ನೂ ಪ್ರಾರಂಭಿಸಿರಲಿಲ್ಲ.
- 2015–16ರಲ್ಲಿ ಪ್ರಸ್ತಾವಿಸಿದ್ದ ಎರಡು ಕಾಮಗಾರಿಗಳ ನಿರ್ಮಾಣವನ್ನು ಭಾರತ ಸರ್ಕಾರದ ಅನುಮೋದನೆಯಿಲ್ಲದೇ ಅಕ್ಟೋಬರ್ 2017ರಲ್ಲಿ ಎನ್‌ಕೆಗೆ ವಹಿಸಲಾಯಿತು. ಇವುಗಳಲ್ಲಿ ಒಂದು ಕಾಮಗಾರಿಯು ಪ್ರಗತಿಯಲ್ಲಿದೆ ಮತ್ತು ಇನ್ನೊಂದು ಕಾಮಗಾರಿಯನ್ನು ನಿವೇಶನದ ಅಲಭ್ಯತೆಯ ಕಾರಣದಿಂದ ಪ್ರಾರಂಭಿಸಲಾಗಿಲ್ಲ.
- 2016–17ರಲ್ಲಿ ಎರಡು ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸುವ ಮೊದಲು ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನೂ ನೀಡಲಿಲ್ಲ ಮತ್ತು ನಿವೇಶನದ ಲಭ್ಯತೆಯನ್ನೂ ಖಚಿತಪಡಿಸಿಕೊಳ್ಳಲಿಲ್ಲ. ಈ ಕಾಮಗಾರಿಗಳನ್ನು ಇನ್ನೂ ವಹಿಸಬೇಕಿದೆ.
- 2017–18ರಲ್ಲಿ ಪ್ರಸ್ತಾವಿಸಿದ ಎರಡೂ ಕಾಮಗಾರಿಗಳನ್ನೂ ಭಾರತ ಸರ್ಕಾರದ ಅನುಮೋದನೆಯಿಲ್ಲದೆ ಕೆಆರ್‌ಇಐಎಸ್‌ಗೆ ವಹಿಸಲಾಯಿತು (ಫೆಬ್ರವರಿ 2018). ಜನವರಿ 2019ರಲ್ಲಿದ್ದಂತೆ ಈ ಕಾಮಗಾರಿಗಳನ್ನು ಇನ್ನೂ ಪ್ರಾರಂಭಿಸಬೇಕಿದೆ.

ಹೀಗೆ, ಲಭ್ಯವಿದ್ದ ₹3.50 ಕೋಟಿ ಕೇಂದ್ರದ ನೆರವನ್ನು ಬಳಸಿಕೊಳ್ಳಲು ರಾಜ್ಯ ಸರ್ಕಾರವು ವಿಫಲವಾಯಿತಲ್ಲದೇ 2015–16ರಿಂದ 2017–18ರ ವರ್ಷಗಳಲ್ಲಿ ಪ್ರಸ್ತಾವಿಸಿದ ಕಾಮಗಾರಿಗಳಿಗೆ ಭಾರತ ಸರ್ಕಾರದ ಅನುಮೋದನೆಗಳನ್ನು ಪಡೆಯುವಲ್ಲಿಯೂ ಸಹ ವಿಫಲವಾಯಿತು. ತತ್ಪರಿಣಾಮವಾಗಿ, ಲೆಕ್ಕಪರಿಶೋಧನಾ ಅವಧಿಯಲ್ಲಿ ಸಿಎಸ್‌ಎಸ್ ಅಡಿಯಲ್ಲಿ ಪ್ರಸ್ತಾವಿಸಿದ ಯಾವುದೇ ಕಾಮಗಾರಿಯನ್ನೂ ಸಹ ಪೂರ್ಣಗೊಳಿಸಲಾಗಲಿಲ್ಲ.

2013–14ರಲ್ಲಿ ಅನುಮೋದನೆಗೊಂಡ ನಾಲ್ಕು ಕಾಮಗಾರಿಗಳಿಗೆ ಭಾರತ ಸರ್ಕಾರವು ಬಿಡುಗಡೆ ಮಾಡಿದ ಹಣವನ್ನು ಹಣಕಾಸು ಇಲಾಖೆಯು ಇದುವರೆಗೂ ಬಿಡುಗಡೆ ಮಾಡಿಲ್ಲ ಮತ್ತು ರಾಜ್ಯದ ಹಣದೊಂದಿಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲ್ಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019). 2015–16 ಮತ್ತು 2017–18ನೇ ವರ್ಷಗಳ ಎರಡೆರಡು ಕಾಮಗಾರಿಗಳು ಪ್ರಗತಿಯಲ್ಲಿವೆ ಮತ್ತು ರಾಜ್ಯದ ಹಣದಿಂದ 2016–17ನೇ ವರ್ಷದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದೂ ಸಹ ತಿಳಿಸಿತು. ಆದರೆ, ಕೇಂದ್ರದ ನೆರವು ಬರದಿರುವುದಕ್ಕೆ ಮತ್ತು ನಿವೇಶನಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ಪ್ರಸ್ತಾವನೆಗಳನ್ನು ಸಲ್ಲಿಸಿರುವುದಕ್ಕೆ ಕಾರಣಗಳ ಬಗ್ಗೆ ಉತ್ತರವು ಮೌನವಾಗಿದೆ.

### 3.2.9.6 ವಿದ್ಯಾರ್ಥಿನಿಲಯಗಳ ದುರಸ್ತಿಗಳು/ನವೀಕರಣ

ವಿದ್ಯಾರ್ಥಿನಿಲಯಗಳ ದುರಸ್ತಿಗಳು/ನವೀಕರಣವನ್ನು ರಾಜ್ಯ ಸರ್ಕಾರವು ತನ್ನದೇ ಹಣದಿಂದ ಕೈಗೆತ್ತಿಕೊಂಡಿತು. ವಿದ್ಯಾರ್ಥಿನಿಲಯಗಳ ದುರಸ್ತಿ/ನವೀಕರಣಕ್ಕೆ ಯಾವುದೇ ಮಾರ್ಗದರ್ಶಿ

ಸೂತ್ರಗಳಿರಲಿಲ್ಲ. 2013-14ರಿಂದ 2017-18ರ ಅವಧಿಯಲ್ಲಿ ರಾಜ್ಯ ಸರ್ಕಾರವು ₹575.42 ಕೋಟಿ ಅಂದಾಜು ವೆಚ್ಚದ 1,990 ದುರಸ್ತಿ/ನವೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿತು. 2013-14ರಿಂದ 2015-16ರ ಅವಧಿಯ ಕಾಮಗಾರಿಗಳ ಪ್ರಗತಿಯ ಬಗ್ಗೆ ಇಲಾಖೆಯು ಯಾವುದೇ ವರದಿ ನೀಡಲಿಲ್ಲ. 2016-17ರಿಂದ 2017-18ರ ಅವಧಿಯಲ್ಲಿ ನಡೆದ ದುರಸ್ತಿ ಕಾಮಗಾರಿಗಳ ಸ್ಥಿತಿಯನ್ನು **ಕೋಷ್ಟಕ-3.7**ರಲ್ಲಿ ನೀಡಲಾಗಿದೆ.

**ಕೋಷ್ಟಕ-3.7: 2013-14ರಿಂದ 2017-18ರ ಅವಧಿಯಲ್ಲಿ ವಿದ್ಯಾರ್ಥಿನಿಲಯಗಳ ದುರಸ್ತಿ/ನವೀಕರಣದ ಸ್ಥಿತಿ**

| ವರ್ಷ | ಮಂಜೂರಾದ ಕಾಮಗಾರಿಗಳ ಸಂಖ್ಯೆ | ದುರಸ್ತಿ/ನವೀಕರಣ ಕಾಮಗಾರಿಯ ಸ್ಥಿತಿ | | | | ಪೂರ್ಣಗೊಂಡಿರುವುದು ಶೇಕಡಾವಾರಿನಲ್ಲಿ |
|---|---|---|---|---|---|---|
| | | ಪೂರ್ಣ ಗೊಂಡಿರುವುದು | ಪ್ರಗತಿ ಯಲ್ಲಿರುವುದು | ಇನ್ನೂ ಪ್ರಾರಂಭಿಸ ಬೇಕಿರುವುದು | ಹಣದ ಬಿಡುಗಡೆ ಆಗದಿದ್ದುದರಿಂದ ಇನ್ನೂ ಪ್ರಾರಂಭಿಸಬೇಕಿರುವುದು | |
| 2013-14 | 434 | ಲೆಕ್ಕಪರಿಶೋಧನೆಯು ಜೂನ್ 2018ರಲ್ಲಿ ಮಾಹಿತಿಯನ್ನು ಕೇಳಿದೆ; ಸಮಾಜಕಲ್ಯಾಣ ಇಲಾಖೆಯು ಇನ್ನೂ ಮಾಹಿತಿಯನ್ನು ನೀಡಿಲ್ಲ (ಜನವರಿ 2019) | | | | |
| 2014-15 | 329 | | | | | |
| 2015-16 | 472 | | | | | |
| 2016-17 | 346 | 131 | 193 | 16 | 6 | 38 |
| 2017-18 | 409 | 101 | 183 | 123 | 2 | 25 |
| **ಒಟ್ಟು** | **1,990** | **232** | **376** | **139** | **8** | |

ಆಧಾರ: ಸಮಾಜಕಲ್ಯಾಣ ಇಲಾಖೆಯ ಆಯುಕ್ತರು ನೀಡಿದ ಮಾಹಿತಿ

ಮೇಲಿನ ಕೋಷ್ಟಕದಿಂದ ಗಮನಿಸಿದಂತೆ ಕಾರ್ಯಾದೇಶವನ್ನು ಜಾರಿ ಮಾಡಿದ ದಿನಾಂಕದಿಂದ ಆರು ತಿಂಗಳೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕೆಂದು ನಿಗದಿಪಡಿಸಿದ್ದರೂ ಸಹ 2016-17 ಮತ್ತು 2017-18ರಲ್ಲಿ ಕೈಗೆತ್ತಿಕೊಂಡ 755ರಲ್ಲಿ 376 ಕಾಮಗಾರಿಗಳು (ಶೇಕಡಾ 50) ಪ್ರಗತಿಯಲ್ಲಿದ್ದವು ಮತ್ತು ಈ ಎಲ್ಲ ಪ್ರಕರಣಗಳಲ್ಲಿ ನಿಗದಿಪಡಿಸಿದ ಅವಧಿ ಮುಗಿದುಹೋಗಿತ್ತು. ಕಾಮಗಾರಿಗಳು ಪೂರ್ಣ ಗೊಳ್ಳುವಲ್ಲಿನ ವಿಳಂಬಕ್ಕೆ ಯಾವುದೇ ಕಾರಣಗಳನ್ನು ದಾಖಲಿಸಿರಲಿಲ್ಲ.

ಜಿಲ್ಲೆಗಳಿಂದ ಮಾಹಿತಿಯನ್ನು ಕೇಳಿರುವುದರಿಂದ 2013-14ರಿಂದ 2015-16ರ ವರ್ಷಗಳಿಗೆ ಮಾಹಿತಿಯನ್ನು ನೀಡಲು ಸಮಯಾವಕಾಶ ಬೇಕೆಂದು ರಾಜ್ಯ ಸರ್ಕಾರವು ಉತ್ತರಿಸಿತು (ಜನವರಿ 2019). ಇಲಾಖೆಯಿಂದ ನಿರ್ಮಾಣ ಏಜೆನ್ಸಿಗಳ ಮೇಲ್ವಿಚಾರಣೆಯು ಅನುಪಸ್ಥಿತಿಯಿದ್ದಿತೆಂದು ಉತ್ತರವು ಸೂಚಿಸುತ್ತದೆ.

### *3.2.9.7 ನಿರ್ಮಾಣ ಏಜೆನ್ಸಿಗಳಿಂದ ತಪ್ಪಾದ ವರದಿ ಮಾಡುವಿಕೆ*

2013-14ರಿಂದ 2017-18ರ ಅವಧಿಯಲ್ಲಿ ವಿದ್ಯಾರ್ಥಿನಿಲಯಗಳ ದುರಸ್ತಿ/ನವೀಕರಣ ಕಾಮಗಾರಿಗಳನ್ನು ರಾಜ್ಯಸರ್ಕಾರವು ಮುಖ್ಯವಾಗಿ ಎನ್‌ಕೆ ಮತ್ತು ಕೆಆರ್‌ಐಡಿಎಲ್‌ಗಳಿಗೆ ವಹಿಸಿತು. ಕೆಆರ್‌ಐಡಿಎಲ್/ ಎನ್‌ಕೆ ಗಳು ಸಲ್ಲಿಸಿದ ಪ್ರಗತಿ ವರದಿಗಳು, ಆಯುಕ್ತರು ಹಣವನ್ನು ಪೂರ್ಣವಾಗಿ ಬಿಡುಗಡೆ ಮಾಡಿದ ಈ ಕೆಳಗಿನ ಕಾಮಗಾರಿಗಳು ಪೂರ್ಣಗೊಂಡಿದ್ದವು ಎಂದು ತಿಳಿಸಿದ್ದವು ಆದರೆ ವಾರ್ಡನ್‌ಗಳು/ ಅಧಿಕಾರಿಗಳೊಂದಿಗೆ ನಡೆಸಿದ ಜಂಟಿ ಭೌತಿಕ ಪರಿಶೀಲನೆಯು (ಮೇ 2018 ಮತ್ತು ಜುಲೈ 2018), **ಕೋಷ್ಟಕ-3.8** ದಲ್ಲಿ ತೋರಿಸಿದಂತೆ ಬೇರೆಯದನ್ನೇ ತೋರಿಸಿತು.

**ಕೋಷ್ಟಕ-3.8: ಪ್ರಗತಿ ವರದಿಗಳು ಮತ್ತು ಜಂಟಿ ಭೌತಿಕ ಪರಿಶೀಲನೆಯ ಅನ್ವಯ ಕಾಮಗಾರಿಗಳ ಹೋಲಿಕೆ**

(₹ ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಕಾಮಗಾರಿ ಆದೇಶದ ದಿನಾಂಕ | ಏಜೆನ್ಸಿಯ ಹೆಸರು | ಪ್ರಗತಿ ವರದಿಯ ಅನ್ವಯ ಸ್ಥಿತಿ | ಜಂಟಿ ಭೌತಿಕ ಪರಿಶೀಲನೆಯ ಅನ್ವಯ ಸ್ಥಿತಿ |
|---|---|---|---|---|---|---|
| 1 | ಸಕಲೇಶಪುರದ ಮೆಟ್ರಿಕ್‌ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ಛಾವಣಿಯನ್ನು ಜಲನಿರೋಧಕವನ್ನಾಗಿ ಮಾಡುವುದು, ವಾರ್ಡ್‌ರೋಬ್‌ಗಳು, ಪ್ಲಂಬಿಂಗ್ ಕಾಮಗಾರಿಗಳು ಮತ್ತು ಇತರೆ ಕಾಮಗಾರಿಗಳು | 27.80 | 16.12.2017 | ಕೆಆರ್‌ಐಡಿಎಲ್ | ಜಲನಿರೋಧಕ ಕಾಮಗಾರಿ ಪೂರ್ಣಗೊಂಡಿದೆ ಮತ್ತು ಇತರೆ ಪ್ರಗತಿಯಲ್ಲಿವೆ | ಅಂತಹ ಯಾವುದೇ ಕಾಮಗಾರಿಯನ್ನು ಕೈಗೆತ್ತಿಕೊಂಡಿಲ್ಲ |

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಕಾಮಗಾರಿ ಆದೇಶದ ದಿನಾಂಕ | ಏಜೆನ್ಸಿಯ ಹೆಸರು | ಪ್ರಗತಿ ವರದಿಯ ಅನ್ವಯ ಸ್ಥಿತಿ | ಜಂಟಿ ಭೌತಿಕ ಪರಿಶೀಲನೆಯ ಅನ್ವಯ ಸ್ಥಿತಿ |
|---|---|---|---|---|---|---|
| 2 | ಸಕಲೇಶಪುರ ತಾಲ್ಲೂಕಿನ ಹೆತ್ತೂರು ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯಕ್ಕೆ ಹೆಚ್ಚುವರಿ ಕೊಠಡಿಗಳು, ಸ್ನಾನದ ಕೊಠಡಿಗಳು, ಶೌಚಾಲಯಗಳು ಮತ್ತು ಇತರೆ ಕಾಮಗಾರಿಗಳು | 38.80 | 16.12.2013 | | ಎಲ್ಲ ಕಾಮಗಾರಿಗಳು ಪೂರ್ಣಗೊಂಡಿವೆ | ಸ್ನಾನದ ಕೊಠಡಿ ಮತ್ತು ಶೌಚಾಲಯಗಳಲ್ಲಿ ಪ್ಲಂಬಿಂಗ್ ಕಾಮಗಾರಿ ಮತ್ತು ಟೈಲ್ಸ್‌ಗಳನ್ನು ಹಾಕುವ ಕೆಲಸವನ್ನು ಇನ್ನೂ ಪ್ರಾರಂಭಿಸಿರಲಿಲ್ಲ |
| 3 | ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ದೊಂಬರಮತ್ತೂರು | 14.75 | 1.12.2014 | ಎನ್‌ಕೆ | ಕಾಮಗಾರಿಯನ್ನು ಕಾರ್ಯಗತಗೊಳಿಸಿ ಇಲಾಖೆಗೆ ಹಸ್ತಾಂತರಿಸಲಾಗಿದೆ | ಗ್ಯಾಸ್ ಪೈಪ್‌ಲೈನ್ ಕಾಮಗಾರಿಯನ್ನು ಪೂರ್ಣಗೊಳಿಸಿಲ್ಲ |
| 4 | ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸವಣೂರು ಪಟ್ಟಣ | 17.50 | 1.12.2014 | | | ಗ್ಯಾಸ್ ಪೈಪ್‌ಲೈನ್ ಕಾಮಗಾರಿಯನ್ನು ಪೂರ್ಣಗೊಳಿಸಿಲ್ಲ. ಸ್ನಾನಗೃಹ ಮತ್ತು ಶೌಚಾಲಯಗಳಿಗೆ ನೀರಿನ ಸಂಪರ್ಕವನ್ನು ಒದಗಿಸಿಲ್ಲ. |
| 5 | ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹುರಳಿಕುಪ್ಪಿ | 16.50 | 1.12.2014 | | | ಟೈಲ್ಸ್‌ಗಳನ್ನು ಹಾಕುವುದು ಮತ್ತು ಗ್ಯಾಸ್ ಪೈಪ್‌ಲೇನ್ ಪೂರ್ಣಗೊಳಿಸಿಲ್ಲ |

ಆಧಾರ: ಕೆಆರ್‌ಐಡಿಎಲ್/ಎನ್‌ಕೆ ಗಳ ಪ್ರಗತಿ ವರದಿಗಳು ಮತ್ತು ಜಂಟಿ ಭೌತಿಕ ಪರಿಶೀಲನೆ

ಬೇರೆ ಏಳು ದುರಸ್ತಿ/ನವೀಕರಣ ಕಾಮಗಾರಿಗಳ ಪ್ರಕರಣದಲ್ಲಿ ನಿವೇಶನದ ಸಮಸ್ಯೆಗಳಿಂದ ಆ ಕಾಮಗಾರಿಗಳನ್ನು ಪೂರ್ಣಗೊಳಿಸಿಲ್ಲ ಎಂದು ಕೆಆರ್‌ಐಡಿಎಲ್‌ನ ಪ್ರಗತಿ ವರದಿಯು (ಆಗಸ್ಟ್ 2018) ತಿಳಿಸಿತ್ತು. ಇದನ್ನು ನಂಬುವಂತಿಲ್ಲ, ಏಕೆಂದರೆ ದುರಸ್ತಿ/ನವೀಕರಣ ಕಾಮಗಾರಿಗಳು ಸ್ವಂತ ಕಟ್ಟಡಗಳಿರುವ ಅಸ್ತಿತ್ವದಲ್ಲಿರುವ ವಿದ್ಯಾರ್ಥಿನಿಲಯಗಳಿಗೆ ಸಂಬಂಧಿಸಿದ್ದಾಗಿದ್ದು ನಿವೇಶನದ ಸಮಸ್ಯೆಯು ಉದ್ಭವಿಸುವುದಿಲ್ಲ.

ಮೇಲಿನ ಪ್ರಕರಣಗಳಲ್ಲಿ ನಿರ್ಮಾಣ ಏಜೆನ್ಸಿಗಳು ತಪ್ಪಾಗಿ ವರದಿ ಮಾಡಿರುವುದನ್ನು ಮತ್ತು ಇಲಾಖೆಯಿಂದ ಮೇಲ್ವಿಚಾರಣೆಯ ಅನುಪಸ್ಥಿತಿಯನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಇಂತಹವುಗಳನ್ನು ತಡೆಗಟ್ಟುವುದಕ್ಕೆ ಈ ಏಜೆನ್ಸಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದ ಅಗತ್ಯವಿದೆ.

ಹಾವೇರಿ ಜಿಲ್ಲೆಯ ಮೂರು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಮತ್ತು ಹಾಸನ ಜಿಲ್ಲೆಯ ಎರಡು ಕಾಮಗಾರಿಗಳನ್ನು ಪೂರ್ಣಗೊಳಿಸಲು ಶೀಘ್ರವಾಗಿ ಕ್ರಮ ತೆಗೆದುಕೊಳ್ಳಲಾಗುವುದೆಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019). ತಪ್ಪಾಗಿ ವರದಿ ಮಾಡಿರುವುದಕ್ಕೆ ನಿರ್ಮಾಣ ಏಜೆನ್ಸಿಗೆ ಎಚ್ಚರಿಕೆ ನೀಡಲಾಗುವುದೆಂದು ಸಹ ತಿಳಿಸಲಾಯಿತು.

### *3.2.9.8 ಶಾಸನಬದ್ಧ ಕಡಿತಗಳು ಮತ್ತು ಹೆಚ್ಚಿನ ಭದ್ರತಾ ಠೇವಣಿಯನ್ನು ವಸೂಲು ಮಾಡದೇ ನಿರ್ಮಾಣ ಏಜೆನ್ಸಿಗಳಿಗೆ ಒಟ್ಟು ಮೊತ್ತವನ್ನು ಬಿಡುಗಡೆ ಮಾಡಿರುವುದು*

ನಿರ್ಮಾಣದ ಪ್ರಗತಿಯನ್ನು ಆಧರಿಸಿ ನಿರ್ಮಾಣ ಏಜೆನ್ಸಿಗಳಿಗೆ ಹಂತಹಂತವಾಗಿ ಹಾಗೂ ಶೇಕಡಾ ಐದರ ಹೆಚ್ಚಿನ ಭದ್ರತಾ ಠೇವಣಿಯನ್ನು ಒಳಗೊಂಡು ಶಾಸನಬದ್ಧ ಕಡಿತಗಳನ್ನು ವಸೂಲು ಮಾಡಿದ ನಂತರ ಹಣವನ್ನು ಬಿಡುಗಡೆ ಮಾಡಬೇಕೆಂದು ನಿರ್ದೇಶಕರಿಗೆ/ಸಹಾಯಕ ನಿರ್ದೇಶಕರಿಗೆ ಎನ್‌ಕೆ ಮತ್ತು ಕೆಆರ್‌ಐಡಿಎಲ್ ಗಳಿಗೆ ಕಾಮಗಾರಿಗಳನ್ನು ವಹಿಸುವ ಸಮಯದಲ್ಲಿ ಆಯುಕ್ತರು ಸೂಚಿಸಿದ್ದರು. ಅಲ್ಲದೆ, ಆದಾಯ ತೆರಿಗೆ ಅಧಿನಿಯಮದ ಪರಿಚ್ಛೇದ 194(ಸಿ), 1962ರ ಅನ್ವಯ ಗುತ್ತಿಗೆ ಮೊತ್ತದ ಶೇಕಡಾ 2ರಷ್ಟನ್ನು ಆದಾಯ ತೆರಿಗೆಯನ್ನಾಗಿ ವಸೂಲು ಮಾಡಬೇಕು. ಆದರೆ, ಅದೇ ಆದೇಶಗಳಲ್ಲಿ ಆಯುಕ್ತರು ಆರ್‌ಟಿಜಿಎಸ್ ಮೂಲಕ ನಿರ್ಮಾಣ ಏಜೆನ್ಸಿಗಳಿಗೆ ಪೂರ್ಣ ಹಣವನ್ನು ವರ್ಗಾಯಿಸುವಂತೆ ಸೂಚಿಸಿದ್ದರು.

ಸಮಾಜಕಲ್ಯಾಣ ಇಲಾಖೆಯ ಆಯುಕ್ತರು 2013-14ರಿಂದ 2017-18ರ ಅವಧಿಯಲ್ಲಿ ನಿರ್ಮಾಣ ಏಜೆನ್ಸಿಗಳಿಗೆ ₹743.21 ಕೋಟಿಗಳನ್ನು ಬಿಡುಗಡೆ ಮಾಡಿದ್ದರು. ಎಲ್ಲ ಕಾಮಗಾರಿಗಳಿಗೆ ಶಾಸನಬದ್ಧ ಕಡಿತಗಳ ಹಾಗೂ ಹೆಚ್ಚಿನ ಭದ್ರತಾ ಠೇವಣಿಯ ಯಾವುದೇ ವಸೂಲಾತಿಯನ್ನು ಮಾಡದೇ ಇಲಾಖೆಯು

ಹಣವನ್ನು ಒಂದೇ ಬಾರಿಗೆ ಬಿಡುಗಡೆ ಮಾಡಿರುವುದನ್ನು ನಾವು ಗಮನಿಸಿದೆವು. ಹೀಗೆ, ಹಣವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡಿದ್ದು ಈ ಕೆಳಗಿನವುಗಳನ್ನು ವಸೂಲು ಮಾಡದಿರುವಲ್ಲಿ ಪರಿಣಮಿಸಿತು:
(1) ₹14.86 ಕೋಟಿಗಳ ಆದಾಯ ತೆರಿಗೆ (₹743.21 ಕೋಟಿಗೆ ಶೇಕಡಾ 2ರಂತೆ); ಮತ್ತು
(2) ₹37.16 ಕೋಟಿಗಳ ಹೆಚ್ಚಿನ ಭದ್ರತಾ ಠೇವಣಿ (₹743.21 ಕೋಟಿಗೆ ಶೇಕಡಾ 5ರಂತೆ).

ಆದ್ದರಿಂದ, ಈ ನಿರ್ಮಾಣ ಏಜೆನ್ಸಿಗಳ ಮೇಲೆ ಜಿಲ್ಲಾ ಮತ್ತು ತಾಲ್ಲೂಕು ಅಧಿಕಾರಿಗಳಿಗೆ ಯಾವುದೇ ನಿಯಂತ್ರಣವಿರಲಿಲ್ಲ.

ಆರ್ಥಿಕ ಇಲಾಖೆಯ ಸೂಚನೆಗಳ ಅನ್ವಯ (ಸೆಪ್ಟಂಬರ್ 2018) ಟಿಡಿಎಸ್ ಅನ್ನು ಇಲಾಖೆಯೇ ಕಡಿತಗೊಳಿಸಬೇಕಿತ್ತು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019). ಆದರೆ, ಅಗತ್ಯವಿರುವಂತೆ ಮತ್ತು ತನ್ನದೇ ಆದೇಶಗಳಲ್ಲಿ ನಿಗದಿಪಡಿಸಿರುವಂತೆ ಇಲಾಖೆಯು ಮೂಲದಲ್ಲಿಯೇ ಶಾಸನಬದ್ಧ ಕಡಿತಗಳನ್ನು ಮಾಡಲು ವಿಫಲವಾಗಿತ್ತು ಎನ್ನುವುದು ವಾಸ್ತವಾಂಶವಾಗಿದೆ.

### *3.2.9.9 ನಿರ್ಮಾಣ ಏಜೆನ್ಸಿಗಳಿಂದ ಹಣವನ್ನು ಉಳಿಸಿಕೊಳ್ಳುವಿಕೆ*

ಪರೀಕ್ಷಾ–ತನಿಖೆ ನಡೆಸಿದ ತಾಲ್ಲೂಕುಗಳಿಗೆ ಸಂಬಂಧಿಸಿದ ಎಂಟು ಪ್ರಕರಣಗಳಲ್ಲಿ ನಿರ್ಮಾಣ ಏಜೆನ್ಸಿಯು ₹5.15 ಕೋಟಿ ಅಂದಾಜು ವೆಚ್ಚಕ್ಕೆ ಪ್ರತಿಯಾಗಿ ₹4.48 ಕೋಟಿ ಒಟ್ಟು ವೆಚ್ಚದಲ್ಲಿ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು ಉಳಿದ ₹0.67 ಕೋಟಿಯನ್ನು, **ಅನುಬಂಧ–3.16**ರಲ್ಲಿ ವಿವರಿಸಿರುವಂತೆ, ಇಲಾಖೆಗೆ ಹಿಂತಿರುಗಿಸುವಲ್ಲಿ ವಿಫಲವಾಗಿತ್ತು ಎಂಬುದನ್ನು ಕೆಆರ್‌ಐಡಿಎಲ್‌ನ ದಾಖಲೆಗಳ ಪರಿಶೀಲನೆಯು ತೋರಿಸಿತು. ಆದರೆ, ಸಲ್ಲಿಸಿದ ಪ್ರಗತಿ ವರದಿಯಲ್ಲಿ ಎಲ್ಲ ಬಿಡುಗಡೆಗಳನ್ನು ಖರ್ಚು ಮಾಡಲಾಗಿದೆ ಎಂದು ತೋರಿಸಲಾಗಿತ್ತು. ಎನ್‌ಕೆಗೆ ಸಂಬಂಧಪಟ್ಟಂತೆ ಇಲಾಖೆಯಾಗಲೀ ಅಥವಾ ಎನ್‌ಕೆಯಾಗಲೀ ಕಾಮಗಾರಿಗಳ ನಿರ್ಮಾಣದ ಮೇಲೆ ಭರಿಸಿದ ವೆಚ್ಚದ ಬಗ್ಗೆ ದಾಖಲೆಗಳನ್ನಾಗಲೀ/ಮಾಹಿತಿಯನ್ನಾಗಲೀ ಲೆಕ್ಕಪರಿಶೋಧನೆಗೆ ಪರಿಶೀಲನೆಗಾಗಿ ನೀಡಲಿಲ್ಲ. ಹೀಗಾಗಿ ಅದು ಹಣವನ್ನು ಉಳಿಸಿಕೊಂಡಿರುವ ಬಗ್ಗೆ ನಾವು ನಿರ್ಧರಿಸಲಾಗಲಿಲ್ಲ.

ಅನುಷ್ಠಾನ ಏಜೆನ್ಸಿಗಳಿಂದ ಬಳಕೆ ಮಾಡದ ಹಣವನ್ನು ಹಿಂದಕ್ಕೆ ಪಡೆಯಲು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019).

### *3.2.9.10 ನಿರ್ಮಾಣ ಏಜೆನ್ಸಿಗಳೊಂದಿಗೆ ಹಣವು ಬಂಧಿತವಾಗಿರುವುದು*

ಭೂವಿವಾದಗಳಿಂದ ನಿವೇಶನಗಳ ಅಲಭ್ಯತೆಯಿಂದ ಹಾಗೂ ಇತರೆ ಕಾರಣದಿಂದ ಕೆಲವು ವಿದ್ಯಾರ್ಥಿನಿಲಯಗಳ ನಿರ್ಮಾಣ/ದುರಸ್ತಿಗಳನ್ನು ಕೈಗೆತ್ತಿಕೊಳ್ಳಲಾಗಲಿಲ್ಲ ಎಂದು ಆಯುಕ್ತರು ಸಲ್ಲಿಸಿದ ಮಾಹಿತಿ ಹಾಗೂ ಕೆಆರ್‌ಇಐಎಸ್ ಮತ್ತು ಕೆಆರ್‌ಐಡಿಎಲ್‌ಗಳು ಸಲ್ಲಿಸಿದ ಪ್ರಗತಿ ವರದಿಗಳ ಪರಿಶೀಲನೆಯಿಂದ ನಾವು ಗಮನಿಸಿದೆವು. ಈ ಕಾಮಗಾರಿಗಳಿಗಾಗಿ ಏಜೆನ್ಸಿಗಳಿಗೆ ಬಿಡುಗಡೆ ಮಾಡಿದ ಹಣವನ್ನು ಇಲಾಖೆಗೆ ಹಿಂತಿರುಗಿಸದಿದ್ದುದು ನಿರ್ಮಾಣ ಏಜೆನ್ಸಿಗಳ ಬಳಿ ಹಣವು ಬಂಧಿತವಾಗುವುದರಲ್ಲಿ ಪರಿಣಮಿಸಿತು. ಈ ಏಜೆನ್ಸಿಗಳಿಗೆ ಬಿಡುಗಡೆ ಮಾಡಿದ ಪೂರ್ಣ ಹಣವನ್ನು ರಾಜ್ಯ ಸರ್ಕಾರದ ಲೆಕ್ಕಪತ್ರಗಳಲ್ಲಿ ವೆಚ್ಚವೆಂದು ಪರಿಗಣಿಸಲಾಗುತ್ತದೆ ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗುತ್ತದೆ. 12 ನಿರ್ಮಾಣ ಕಾಮಗಾರಿಗಳ ಸಂಬಂಧವಾಗಿ ₹45.63 ಕೋಟಿ (**ಅನುಬಂಧ–3.15**ರಲ್ಲಿ ವಿವರಿಸಿರುವಂತೆ) ಮತ್ತು ಏಳು ದುರಸ್ತಿ/ನವೀಕರಣ ಕಾಮಗಾರಿಗಳಿಗೆ ಸಂಬಂಧಿಸಿದ ₹2.07 ಕೋಟಿಗಳು, ಆಗಸ್ಟ್ 2018ರಲ್ಲಿದ್ದಂತೆ ಈ ಏಜೆನ್ಸಿಗಳ ಬಳಿ ಬಂಧಿತವಾಗಿದ್ದಿತು. ಮುಂಚಿತವಾಗಿ ಒಟ್ಟು ಹಣವನ್ನು ಬಿಡುಗಡೆ ಮಾಡುವ ಈ ಅಭ್ಯಾಸವು ಏಜೆನ್ಸಿಗಳು ಸಮಯಕ್ಕೆ ಸರಿಯಾಗಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ವಿಫಲವಾಗುವ ಅಪಾಯವನ್ನು ಒಳಗೊಂಡಿದೆ, ಹಾಗಾಗಿ ಇದನ್ನು ಪರಿಶೀಲಿಸಬೇಕಾದ ಅವಶ್ಯಕತೆಯಿದೆ.

ಎರಡು ಕಾಮಗಾರಿಗಳು ಪ್ರಗತಿಯಲ್ಲಿವೆ ಮತ್ತು ಇನ್ನೂ ಪ್ರಾರಂಭವಾಗಬೇಕಿರುವ ಕಾಮಗಾರಿಗಳ ಮೊತ್ತವನ್ನು ಬಡ್ಡಿಯ ಸಹಿತ ಹಿಂತಿರುಗಿ ಪಡೆಯಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019). ಹೀಗೆ, ಇಲಾಖೆಯು ಹಣದ ಬಳಕೆಯನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ವಿಫಲವಾಯಿತು.

### 3.2.9.11 ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು, 2000ದ ನಿಬಂಧನೆಗಳ ಮತ್ತು ಇತರೆ ಸೂಚನೆಗಳ ಅನುಸರಣೆ

➤ ***ಅಲ್ಪಾವಧಿ ಟೆಂಡರ್‌ಗಳ ಆಹ್ವಾನ***

₹ಎರಡು ಕೋಟಿಗೂ ಅಧಿಕವಾಗಿರುವ ಟೆಂಡರ್‌ಗಳನ್ನು ಸಲ್ಲಿಸಲು ನೀಡಬೇಕಿರುವ ಕನಿಷ್ಠ ಸಮಯವು 60 ದಿನಗಳಾಗಿರಬೇಕೆಂದು ಕೆಟಿಪಿಪಿ ನಿಯಮಗಳು, 2000ದ ನಿಯಮ 17 ನಿಗದಿಪಡಿಸುತ್ತದೆ. ನಿಗದಿಪಡಿಸಿದ ಸಮಯದಲ್ಲಿ ಕಡಿತ ಮಾಡಬೇಕಾದರೆ, ಕಾರಣಗಳನ್ನು ಲಿಖಿತವಾಗಿ ದಾಖಲಿಸಿ ಟೆಂಡರ್ ಆಹ್ವಾನ ಪ್ರಾಧಿಕಾರಕ್ಕಿಂತ ಉನ್ನತ ಅಧಿಕಾರವಿರುವ ಪ್ರಾಧಿಕಾರವು ಅನುಮೋದಿಸಬೇಕು.

ಇದೇ ರೀತಿಯ ವೀಕ್ಷಣೆಗೆ [ಕರ್ನಾಟಕ ಸರ್ಕಾರದ 31 ಮಾರ್ಚ್ 2013ಕ್ಕೆ ಕೊನೆಗೊಂಡ ವರ್ಷದ ಸಿಎಜಿರವರ ವರದಿ-2014ನೇ ವರ್ಷದ ವರದಿ ಸಂಖ್ಯೆ.3ರ ಕಂಡಿಕೆ 2.1.8.1(*i*)] ಪ್ರತಿಕ್ರಿಯೆಯಾಗಿ ಕೆಟಿಪಿಪಿ ಅಧಿನಿಯಮದಲ್ಲಿ ನಿಗದಿಪಡಿಸಿರುವಂತೆ 60 ದಿನಗಳ ಅವಧಿಯನ್ನು ಪಾಲಿಸಬೇಕು ಮತ್ತು ವಿಪರೀತದ ಸಂದರ್ಭಗಳಲ್ಲಿ ಮಾತ್ರ ಸಮಯದ ಅವಧಿಯನ್ನು ಕಡಿಮೆ ಮಾಡಬೇಕು ಎಂದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಶಿಫಾರಸು ಮಾಡಿತ್ತು.

2016-17 ಮತ್ತು 2017-18ರ ಅವಧಿಯಲ್ಲಿ ಎಸ್‌ಸಿ ವಿದ್ಯಾರ್ಥಿಗಳಿಗಾಗಿ ಸರ್ಕಾರಿ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ 119 ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು ಮತ್ತು ಒಂದನ್ನು ಹೊರತುಪಡಿಸಿ ಇನ್ನೆಲ್ಲಾ ಟೆಂಡರ್‌ಗಳ ಮೌಲ್ಯವು ₹ಎರಡು ಕೋಟಿಗಿಂತ ಅಧಿಕವಾಗಿತ್ತು ಎಂದು ಕೆಆರ್‌ಐಇಎಸ್‌ನ ದಾಖಲೆಗಳ ಪರಿಶೀಲನೆಯು ತೋರಿಸಿತು. ಇವುಗಳಲ್ಲಿ 50 ಪ್ರಕರಣಗಳಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ನೀಡಿದ್ದ ಕನಿಷ್ಠ ಸಮಯವು 7ರಿಂದ 58 ದಿನಗಳ ವ್ಯಾಪ್ತಿಯಲ್ಲಿದ್ದಿತೆಂದು ನಾವು ಗಮನಿಸಿದೆವು ಮತ್ತು ಇದು ಕೆಟಿಪಿಪಿ ಅಧಿನಿಯಮ ಹಾಗೂ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಶಿಫಾರಸುಗಳ ಉಲ್ಲಂಘನೆಯಾಗಿತ್ತು. ಆದರೆ, ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಕ್ಕೆ ಯಾವುದೇ ಕಾರಣಗಳನ್ನು ಧಾಖಲಿಸಿರಲಿಲ್ಲ.

ಎಂಟು ಕಾಮಗಾರಿಗಳ ಸಂಬಂಧವಾಗಿ ಮೊದಲೇ ಆಹ್ವಾನಕ್ಕೆ ಯಾವುದೇ ಪ್ರತಿಕ್ರಿಯೆ ಇರಲಿಲ್ಲವಾಗಿ ಟೆಂಡರ್‌ಗಳನ್ನು ಎರಡನೇ ಮತ್ತು ಮೂರನೇ ಬಾರಿ ಆಹ್ವಾನಿಸಲಾಗಿತ್ತು, ಹಾಗಾಗಿ ಸಮಯಾವಕಾಶವನ್ನು ಕಡಿಮೆ ಮಾಡಲಾಗಿತ್ತು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019). ಉಳಿದ ಟೆಂಡರ್‌ಗಳ ವಿಷಯವಾಗಿ ಉತ್ತರವು ಮೌನವಾಗಿತ್ತು.

➤ ***ಹಣಕಾಸಿನ ಬಿಡ್‌ಗಳನ್ನು ತೆರೆಯುವಲ್ಲಿ ವಿಳಂಬ***

ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕಾಗಿ ಕೆಆರ್‌ಇಐಎಸ್ ಎರಡು-ಲಕೋಟೆ ವ್ಯವಸ್ಥೆಯಡಿ ಟೆಂಡರ್‌ಗಳನ್ನು ಆಹ್ವಾನಿಸಿತ್ತು. ಜೂನ್ 2003ರ ಸರ್ಕಾರಿ ಸೂಚನೆಗಳ ಅನ್ವಯ ಮೊದಲನೇ ಲಕೋಟೆಯನ್ನು ತೆರೆದ ನಂತರ 45 ದಿನಗಳೊಳಗೆ ಟೆಂಡರ್‌ಗಳ ತಾಂತ್ರಿಕ ಮೌಲ್ಯಮಾಪನವನ್ನು ಮಾಡಬೇಕಿತ್ತು. ಈ ಅವಧಿಯು 45 ದಿನಗಳಿಂದ ಹೆಚ್ಚು ಆದರೆ 60 ದಿನಗಳಿಗಿಂತ ಕಡಿಮೆ ಇದ್ದ ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳ ಅನುಮೋದನೆಯನ್ನು ಪಡೆಯಬೇಕು. ಆ ಅವಧಿಯು 60 ದಿನಗಳಿಗೆ ಮೀರಿದರೆ, ಟೆಂಡರ್‌ಗಳನ್ನು ಮತ್ತೆ ಆಹ್ವಾನಿಸಬೇಕು.

ಕೆಟಿಟಿಪಿ ಅಧಿನಿಯಮದ ನಿಬಂಧನೆಗಳ ಅನ್ವಯ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳ ಮೌಲ್ಯಮಾಪನವು 45 ದಿನಗಳೊಳಗೆ ಪೂರ್ಣಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಸಹ ಶಿಫಾರಸು ಮಾಡಿತ್ತು.

ಆದರೆ, 46 ಪ್ರಕರಣಗಳಲ್ಲಿ ತಾಂತ್ರಿಕ ಮತ್ತು ಹಣಕಾಸಿನ ಬಿಡ್‌ಗಳನ್ನು ತೆರೆಯುವಲ್ಲಿನ ಸಮಯದ ಅಂತರವು 49 ದಿನಗಳಿಂದ 110 ದಿನಗಳವರೆಗಿನ ವ್ಯಾಪ್ತಿಯಲ್ಲಿದ್ದಿತೆಂದು ನಾವು ಗಮನಿಸಿದೆವು.

ಭವಿಷ್ಯದಲ್ಲಿ ಶಾಸನಬದ್ಧ ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019).

### ➢ *ಒಬ್ಬರೇ ಗುತ್ತಿಗೆದಾರರಿಗೆ ಗುತ್ತಿಗೆಗಳನ್ನು ವಹಿಸಿರುವುದು*

ಟೆಂಡರ್‌ಗಳ ಮೌಲ್ಯಮಾಪನಕ್ಕೆ ಟೆಂಡರ್ ದಾಖಲೆಗಳಲ್ಲಿ ಸೇರಿಸಿದ್ದ ಮಾನದಂಡಗಳ ಅನ್ವಯ ಗುತ್ತಿಗೆದಾರರು ಒಂದಕ್ಕಿಂತ ಹೆಚ್ಚಿನ ಗುತ್ತಿಗೆಗಳಲ್ಲಿ ಕನಿಷ್ಟ ಟೆಂಡರ್‌ದಾರರಾಗಿದ್ದರೆ, ಟೆಂಡರ್ ಪರಿಶೀಲನಾ ಸಮಿತಿ ಮತ್ತು ಟೆಂಡರ್ ಒಪ್ಪಿಕೊಳ್ಳುವ ಸಮಿತಿಗಳು ವೈಯಕ್ತಿಕ ಗುತ್ತಿಗೆಗಳ ಅರ್ಹತಾ ಮಾನದಂಡ ಮತ್ತು ಲಭ್ಯವಿರುವ ಟೆಂಡರ್ ಸಾಮರ್ಥ್ಯದ (ಎಟಿಸಿ)[49] ಒಟ್ಟು ಮೊತ್ತವನ್ನು ಪರಿಶೀಲಿಸುವ ಅಗತ್ಯವಿದೆ. ಒಟ್ಟು ಅರ್ಹತೆಯ ಮಾನದಂಡವು ತೃಪ್ತಿಕರವಾಗಿದ್ದರೆ ಮತ್ತು ಪರಿಗಣನೆಯಲ್ಲಿರುವ ಟೆಂಡರ್‌ಗಳ ಒಟ್ಟು ಮೌಲ್ಯಕ್ಕಿಂತ ಎಟಿಸಿಯು ಅಧಿಕವಾಗಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬೇಕು.

ಇದೇ ರೀತಿಯ ವೀಕ್ಷಣೆಗೆ [ಕರ್ನಾಟಕ ಸರ್ಕಾರದ 31 ಮಾರ್ಚ್ 2013ಕ್ಕೆ ಕೊನೆಗೊಂಡ ವರ್ಷದ ಸಿಎಜಿರವರ ವರದಿ–2014ನೇ ವರ್ಷದ ವರದಿ ಸಂಖ್ಯೆ.3ರ ಕಂಡಿಕೆ 2.1.8.1(*iv*)] ಪ್ರತಿಕ್ರಿಯೆಯಾಗಿ ನಿಗದಿತ ಸಮಯದೊಳಗೆ ಕಾಮಗಾರಿಗಳು ಪೂರ್ಣಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಕೆಆರ್‌ಇಐಎಸ್ ಸೂಕ್ತ ಕಾರ್ಯ ಯೋಜನೆಯನ್ನು ತಯಾರಿಸಬೇಕು ಅಲ್ಲದೆ, ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಿ ಎದುರಾಗುವ ಯಾವುದೇ ನ್ಯೂನತೆಗಳನ್ನು ಪರಿಹರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಶಿಫಾರಸು ಮಾಡಿತ್ತು.

ಒಂದಕ್ಕಿಂತ ಹೆಚ್ಚಿಗೆ ಕಾಮಗಾರಿಗಳಿಗೆ ಓರ್ವ ಗುತ್ತಿಗೆದಾರ ಟೆಂಡರ್‌ಗಳನ್ನು ಸಲ್ಲಿಸಿದ್ದಾಗ ಎಟಿಸಿ ಮೌಲ್ಯವನ್ನು ಪರಿಗಣಿಸದೇ ಟೆಂಡರ್‌ಗಳನ್ನು ಪ್ರತ್ಯೇಕವಾಗಿ ಮೌಲ್ಯಮಾಪನ ಮಾಡಲಾಗಿತ್ತು ಎಂಬುದನ್ನು ದಾಖಲೆಗಳ ಲೆಕ್ಕಪರಿಶೋಧನಾ ಪರಿಶೀಲನೆಯು ತಿಳಿಯಪಡಿಸಿತು. ಇದು, **ಅನುಬಂಧ–3.17ರಲ್ಲಿ** ವಿವರಿಸಿರುವಂತೆ, ಒಬ್ಬರೇ ಗುತ್ತಿಗೆದಾರರಿಗೆ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳನ್ನು ವಹಿಸುವಲ್ಲಿ ಪರಿಣಮಿಸಿತು.

ಗುತ್ತಿಗೆದಾರರ ಸಾಮರ್ಥ್ಯಕ್ಕೆ ಮಿಗಿಲಾಗಿ ಹಲವಾರು ಕಾಮಗಾರಿಗಳನ್ನು ವಹಿಸಿದ್ದು ನ್ಯೂನತೆಗಳಲ್ಲಿ ಮತ್ತು ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ದೀರ್ಘಕಾಲದ ವಿಳಂಬಗಳಲ್ಲಿ ಪರಿಣಮಿಸಿತಲ್ಲದೆ 4,188 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಲಭ್ಯಗಳನ್ನು ವಂಚಿಸಿದಂತಾಯಿತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಶಿಫಾರಸು ಮಾಡಿದ್ದಂತೆ ನಿಗದಿತ ಸಮಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಯಾವುದೇ ಕಾರ್ಯ ಯೋಜನೆಯನ್ನು ಸೊಸೈಟಿಯು ತಯಾರಿಸಿರಲಿಲ್ಲ ಎಂಬುದನ್ನು ಕೂಡ ನಾವು ಗಮನಿಸಿದೆವು.

**ಅನುಬಂಧ–3.17**ರ ಕ್ರಮಸಂಖ್ಯೆ.1ರ ಅಡಿಯಲ್ಲಿನ ಐದು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಿಗೆ ನಿವೇಶನವನ್ನು ಹಸ್ತಾಂತರಿಸುವಲ್ಲಿ ವಿಳಂಬವಾಗಿತ್ತು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019). ಆದರೆ, ಲೆಕ್ಕಪರಿಶೋಧನೆಯು ತೋರಿಸಿದ ಇತರೆ ಪ್ರಕರಣಗಳ ಬಗ್ಗೆ ಉತ್ತರವು ಮೌನವಾಗಿದ್ದಿತು.

### ➢ *ಅಂದಾಜುಗಳನ್ನು ವಿಭಜಿಸಿರುವುದು*

ಹಣಕಾಸಿನ ಅಧಿಕಾರಗಳ ನಿಯೋಜನೆಗಳ ಅನ್ವಯ (ಏಪ್ರಿಲ್ 2010) ಸಮಾಜಕಲ್ಯಾಣ ಇಲಾಖೆಯ ಆಯುಕ್ತರು ಒಂದು ಕಾಮಗಾರಿಗೆ ₹1.00 ಕೋಟಿಯ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಅಧಿಕಾರ ಹೊಂದಿರತ್ತಾರೆ. ಎರಡು ಜಿಲ್ಲೆಗಳ ಉಪನಿರ್ದೇಶಕರುಗಳು (ಹಾಸನ ಮತ್ತು ಹಾವೇರಿ) ₹9.62 ಕೋಟಿ ಮೌಲ್ಯದ ಏಳು ಕಾಮಗಾರಿಗಳನ್ನು, ಅವುಗಳಲ್ಲಿ ಪ್ರತಿಯೊಂದು ₹1.00 ಕೋಟಿಗಿಂತ ಅಧಿಕ, **ಅನುಬಂಧ–3.18**ರಲ್ಲಿ ವಿವರಿಸಿರುವಂತೆ, ಆಯುಕ್ತರ ಅಧಿಕಾರ

---

[49] ಲಭ್ಯವಿರುವ ಟೆಂಡರ್ ಸಾಮರ್ಥ್ಯ (ಎಟಿಸಿ) ವನ್ನು (ಎ*ಎನ್*1.5–ಬಿ) ಎಂದು ನಿರ್ಧರಿಸಲಾಗುತ್ತದೆ, ಇದರಲ್ಲಿ ಎ=ಕಳೆದ ಐದು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ಕಾರ್ಯಗತಗೊಳಿಸಿದ ಸಿವಿಲ್ ಇಂಜಿನಿಯರಿಂಗ್ ಕಾಮಗಾರಿಯ ಗರಿಷ್ಠ ಮೌಲ್ಯ, ಪೂರ್ಣಗೊಳಿಸಿದ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಗಣನೆಗೆ ತೆಗೆದುಕೊಂಡು, ಎನ್=ಟೆಂಡರ್‌ಗಳನ್ನು ಆಹ್ವಾನಿಸಿರುವ ಕಾಮಗಾರಿಯು ಪೂರ್ಣಗೊಳ್ಳಲು ನಿಗದಿಪಡಿಸಿರುವ ವರ್ಷಗಳ ಸಂಖ್ಯೆ, ಬಿ= ಅಸ್ತಿತ್ವದಲ್ಲಿರುವ ಬದ್ಧತೆಗಳು ಮತ್ತು ಮುಂದಿನ ವರ್ಷಗಳಲಿ ಪೂರ್ಣಗೊಳಿಸುವ ಪ್ರಗತಿಯಲ್ಲಿರುವ ಕಾಮಗಾರಿಗಳ .* ಮಟ್ಟದಲ್ಲಿ ಮೌಲ್ಯ (ಟೆಂಡರ್‌ಗಳನ್ನು ಆಹ್ವಾನಿಸಿರುವ ಕಾಮಗಾರಿಗಳ ಪೂರ್ಣಗೊಳಿಸುವ ಅವಧಿ).

ವ್ಯಾಪ್ತಿಯೊಳಗೆ ತರಲು ಪ್ರತಿಯೊಂದನ್ನು ₹1.00 ಕೋಟಿಗಿಂತ ಕಡಿಮೆ ಮೌಲ್ಯದ 18 ಅಂದಾಜುಗಳನ್ನಾಗಿ ವಿಭಜಿಸಿರುವುದನ್ನು (ಎರಡು ಅಥವಾ ಹೆಚ್ಚಿನ ಅಂದಾಜುಗಳು) ನಾವು ಗಮನಿಸಿದೆವು.

ಅಂದಾಜುಗಳನ್ನು ವಿಭಜಿಸಿಲ್ಲ ಆದರೆ, ದುರಸ್ತಿ ಕಾಮಗಾರಿಗಳಿಗೆ ಮತ್ತು ನವೀಕರಣ ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಅಂದಾಜುಗಳನ್ನು ತಯಾರಿಸಲಾಗಿತ್ತು ಮತ್ತು ಪ್ರತಿಯೊಂದು ಅಂದಾಜಿಗೂ ಪ್ರತ್ಯೇಕವಾಗಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಯಿತು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019). ವಿದ್ಯಾರ್ಥಿನಿಲಯಗಳ ಅಭಿವೃದ್ಧಿ ಕಾಮಗಾರಿಗಳನ್ನು ಸಮಗ್ರವಾಗಿ ಒಂದೇ ಪ್ಯಾಕೇಜಿನಡಿಯಲ್ಲಿ ತೆಗೆದುಕೊಳ್ಳದೇ ಉನ್ನತ ಪ್ರಾಧಿಕಾರದ ಮಂಜೂರಾತಿ ಪಡೆಯುವುದನ್ನು ತಪ್ಪಿಸಲು ಹಲವಾರು ಅಂದಾಜುಗಳನ್ನಾಗಿ ವಿಭಜಿಸಲಾಗಿತ್ತು ಎಂಬುದು ಉತ್ತರದಿಂದ ಸ್ಪಷ್ಟವಾಗುತ್ತದೆ.

## 3.2.10 ಹಣಕಾಸು ನಿರ್ವಹಣೆ

### *3.2.10.1 ಆಯವ್ಯಯ ಪ್ರಕ್ರಿಯೆ*

ರಾಜ್ಯ ಸರ್ಕಾರವು, ಕಂಡಿಕೆ 3.2.10.2ರಲ್ಲಿ ವಿವರಿಸಿರುವಂತೆ ವಿವಿಧ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ವಿದ್ಯಾರ್ಥಿನಿಲಯಗಳ ನಿರ್ಮಾಣ, ದುರಸ್ತಿಗಳು/ನವೀಕರಣ ಮತ್ತು ನಿರ್ವಹಣೆಗಾಗಿ ಹಣವನ್ನು ಒದಗಿಸಿತ್ತು. ಸಮಾಜಕಲ್ಯಾಣ ಇಲಾಖೆಯು ವಿವಿಧ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಹಣದ ಅಗತ್ಯತೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿರುವುದನ್ನು ನಾವು ಗಮನಿಸಿದೆವು. ಜಿಲ್ಲೆಗಳಿಂದ ಸ್ವೀಕರಿಸಿದ ಬೇಡಿಕೆಗಳ ಆಧಾರದ ಮೇಲೆ ಮತ್ತು ಹಿಂದಿನ ವರ್ಷಗಳ ಆಯವ್ಯಯ ಹಂಚಿಕೆಯನ್ನು ಪರಿಗಣಿಸಿ ಪ್ರಸ್ತಾವನೆಗಳನ್ನು ಮಾಡಲಾಗಿತ್ತು.

ಇಲಾಖೆಯು ತನ್ನಿಂದ ಸ್ವೀಕೃತವಾದ ಹಣವನ್ನು ವಿದ್ಯಾರ್ಥಿನಿಲಯಗಳ ನಿರ್ಮಾಣ, ದುರಸ್ತಿಗಳು ಮತ್ತು ಉನ್ನತೀಕರಣಕ್ಕಾಗಿ ನಿರ್ಮಾಣ ಏಜೆನ್ಸಿಗಳಿಗೆ ಬಿಡುಗಡೆ ಮಾಡುತ್ತದೆ ಮತ್ತು ಆರ್ಥಿಕ ಇಲಾಖೆಯು ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ ಹಣವನ್ನು ಬಿಡುಗಡೆ ಮಾಡುತ್ತದೆ ಮತ್ತು ಅವುಗಳು ನಂತರ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಅಧಿಕಾರಿಗಳಿಗೆ ಬಿಡುಗಡೆ ಮಾಡುತ್ತಾರೆ.

### *3.2.10.2 ಹಂಚಿಕೆ, ಬಿಡುಗಡೆ ಮತ್ತು ವೆಚ್ಚ*

2013–14ರಿಂದ 2017–18ರ ಅವಧಿಯಲ್ಲಿ ₹723.65 ಕೋಟಿಗಳನ್ನು ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ, ₹488.92 ಕೋಟಿಗಳನ್ನು ದುರಸ್ತಿಗಳಿಗೆ ಮತ್ತು ಉನ್ನತೀಕರಣಕ್ಕೆ ಹಾಗೂ ₹1,608.75 ಕೋಟಿಗಳನ್ನು ನಿರ್ವಹಣೆಗೆ ರಾಜ್ಯ ಸರ್ಕಾರವು ಬಿಡುಗಡೆ ಮಾಡಿತು. ಹಂಚಿಕೆ, ಬಿಡುಗಡೆ ಮತ್ತು ವೆಚ್ಚಗಳನ್ನು **ಕೋಷ್ಟಕ–3.9**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.9: 2013–14ರಿಂದ 2017–18ರ ಅವಧಿಯಲ್ಲಿ ಹಂಚಿಕೆ, ಬಿಡುಗಡೆ ಮತ್ತು ವೆಚ್ಚದ ವಿವರಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಹಂಚಿಕೆ | ಬಿಡುಗಡೆ | ವೆಚ್ಚ |
|---|---|---|---|---|
| 1 | 4225–01–277–2–01 (ಸಿಎಸ್‌ಎಸ್) | 292.05 | 84.70 | 84.70 |
| 2 | 4225–01–277–2–03 (ರಾಜ್ಯ) | 638.95 | 638.95 | 558.04 |
| | **ಒಟ್ಟು – ನಿರ್ಮಾಣ** | **931.00** | **723.65** | **642.74** |
| 3 | 2225–01–053–0–01 (ರಾಜ್ಯ) | 488.92 | 488.92 | 488.92 |
| | **ಒಟ್ಟು–ದುರಸ್ತೀಕರಣ/ಉನ್ನತೀಕರಣ** | **488.92** | **488.92** | **488.92** |
| 4 | 2225–00–101–0–29 (ಜಿ.ಪಂ) – ಪಿ | 281.27 | 284.26 | 270.74 |
| 5 | 2225–00–101–0–36 (ಜಿ.ಪಂ) – ಎನ್‌ಪಿ | 108.63 | 103.48 | 98.45 |
| 6 | 2225–00–101–0–61 (ತಾ.ಪಂ) – ಪಿ | 180.07 | 178.51 | 168.12 |
| 7 | 2225–00–101–0–61 (ತಾ.ಪಂ) – ಎನ್‌ಪಿ | 1,029.84 | 1,009.12 | 979.32 |
| 8 | 2225–00–101–0–67 (ತಾ.ಪಂ) – ಪಿ | 33.65 | 33.38 | 31.42 |
| | **ಒಟ್ಟು – ನಿರ್ವಹಣೆ** | **1,633.46** | **1,608.75** | **1,548.05** |
| | **ಒಟ್ಟು ಮೊತ್ತ** | **3,053.38** | **2,821.32** | **2,679.71** |

ಆಧಾರ: ಸಮಾಜಕಲ್ಯಾಣ ಇಲಾಖೆಯ ಆಯುಕ್ತರು ಸಲ್ಲಿಸಿದ ಮಾಹಿತಿ ಪಿ–ಯೋಜನೆ, ಎನ್‌ಪಿ–ಯೋಜನೇತರ

### *3.2.10.3 ನಿಷ್ಫಲ ವೆಚ್ಚ*

ವಿದ್ಯಾರ್ಥಿನಿಲಯಗಳ ಜಂಟಿ ಭೌತಿಕ ಪರಿಶೀಲನೆಯು ವಿದ್ಯಾರ್ಥಿನಿಲಯಗಳಿಗೆ ಡೀಸಲ್ ಜನರೇಟರ್‌ಗಳ ಸರಬರಾಜಿನಲ್ಲಿ, ಕೆಳಗೆ ವಿವರಿಸಿದಂತೆ, ನಿಷ್ಫಲ ವೆಚ್ಚಗಳ ಪ್ರಕರಣಗಳನ್ನು ತೋರಿಸಿತು.

(ಎ) ಬೆಳಗಾವಿಯಲ್ಲಿ ಮೆಟ್ರಿಕ್–ನಂತರದ ವಿದ್ಯಾರ್ಥಿಗಳಿಗಾಗಿ ಆರು ಬಾಲಕರ ವಿದ್ಯಾರ್ಥಿನಿಲಯಗಳಿವೆ. ವಿದ್ಯಾರ್ಥಿನಿಲಯ 1 ಮತ್ತು 3 ಒಂದೇ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. 5 ಕೆವಿಎ ಮತ್ತು 7.5 ಕೆವಿಎ ಸಾಮರ್ಥ್ಯದ ಎರಡು ಜನರೇಟರ್‌ಗಳನ್ನು ಈ ವಿದ್ಯಾರ್ಥಿನಿಲಯ ಕಟ್ಟಡದಲ್ಲಿ ಈಗಾಗಲೇ ಅಳವಡಿಸಲಾಗಿತ್ತು. ಆದರೂ, 10 ಕೆವಿಎ ಸಾಮರ್ಥ್ಯದ ಮತ್ತೆರಡು ಜನರೇಟರ್‌ಗಳನ್ನು ವಿದ್ಯಾರ್ಥಿನಿಲಯ 1 ಮತ್ತು 2ಕ್ಕೆ (ವಿದ್ಯಾರ್ಥಿನಿಲಯ–2 ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು) ಸರಬರಾಜು ಮಾಡಲಾಯಿತು (ಅಕ್ಟೋಬರ್ 2017).

(ಬಿ) ಮೆಟ್ರಿಕ್–ನಂತರದ ವಿದ್ಯಾರ್ಥಿಗಳಿಗಾಗಿನ ಬಾಲಕಿಯರ ಎರಡೂ ವಿದ್ಯಾರ್ಥಿನಿಲಯಗಳೂ ಒಂದೇ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. 7.5 ಕೆವಿಎ ಸಾಮರ್ಥ್ಯದ ಒಂದು ಜನರೇಟರನ್ನು ಈಗಾಗಲೇ ಆ ಕಟ್ಟಡದಲ್ಲಿ ಅಳವಡಿಸಲಾಗಿತ್ತು. ಆದರೆ, ಈ ವಿದ್ಯಾರ್ಥಿನಿಲಯಕ್ಕೆ 10 ಕೆವಿಎ ಸಾಮರ್ಥ್ಯದ ಮತ್ತೊಂದು ಜನರೇಟರನ್ನು ಸರಬರಾಜು ಮಾಡಲಾಯಿತು (ಅಕ್ಟೋಬರ್ 2017).

(ಸಿ) ರಾಮದುರ್ಗ ತಾಲ್ಲೂಕಿನ ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಆರು ವಿದ್ಯಾರ್ಥಿನಿಲಯಗಳಿಗೆ ಸರಬರಾಜು (ಅಕ್ಟೋಬರ್ 2017) ಮಾಡಿದ್ದ 10 ಕೆವಿಎ ಸಾಮರ್ಥ್ಯದ ಆರು ಜನರೇಟರುಗಳಲ್ಲಿ ಐದನ್ನು ಅಳವಡಿಸಲಾಗಿತ್ತು ಆದರೆ ಸಂಪರ್ಕ ಕಲ್ಪಿಸಿರಲಿಲ್ಲ ಮತ್ತು ಒಂದನ್ನು ಅಳವಡಿಸಿರಲಿಲ್ಲ.

ಹೀಗೆ, ಜನರೇಟರ್‌ಗಳ ಅನವಶ್ಯಕ ಸರಬರಾಜು ಮತ್ತು ಜನರೇಟರಗಳನ್ನು ಕಾರ್ಯಗತಗೊಳಿಸದಿದ್ದರಿಂದ ₹22.65 ಲಕ್ಷ ನಿಷ್ಫಲ ವೆಚ್ಚದಲ್ಲಿ ಪರಿಣಮಿಸಿತು.

ಹೊಸ ಕಟ್ಟಡಗಳ ನಿರ್ಮಾಣವು ಪ್ರಗತಿಯಲ್ಲಿದೆ ಮತ್ತು ಜನರೇಟರ್‌ಗಳನ್ನು ಹೊಸ ಕಟ್ಟಡಗಳಲ್ಲಿ ಬಳಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019). ಜನರೇಟರ್‌ಗಳನ್ನು ಪೂರ್ಣವಾಗಿ ಬಳಸಲು ಅಥವಾ ಅಗತ್ಯವಿರುವ ಸ್ಥಳಗಳಿಗೆ ಸ್ಥಳಾಂತರಿಸಲು ಸಂಬಂಧಪಟ್ಟ ಜಿಲ್ಲೆಗಳಿಗೆ ಸೂಚನೆ ನೀಡಲಾಗುವುದು ಎಂದೂ ಸಹ ತಿಳಿಸಲಾಯಿತು.

### *3.2.10.4 ತಪ್ಪಿಸಬಹುದಾಗಿದ್ದ ಬಾಡಿಗೆ ಪಾವತಿ*

ಈ ವರದಿಯ ಕಂಡಿಕೆ 3.2.8.1ರಲ್ಲಿ ತಿಳಿಸಿರುವಂತೆ, ರಾಜ್ಯದಲ್ಲಿನ ಶೇಕಡಾ 18ರಷ್ಟು ವಿದ್ಯಾರ್ಥಿನಿಲಯಗಳು ಬಾಡಿಗೆಯ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಹಾಗಾಗಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಇಲಾಖೆಯು ವಿದ್ಯಾರ್ಥಿನಿಲಯಗಳ ನಿರ್ಮಾಣವನ್ನು ಕೈಗೆತ್ತಿಕೊಂಡಿತು ಮತ್ತು ನಿರ್ಮಾಣ ಏಜೆನ್ಸಿಗಳಿಗೆ ಕಾಮಗಾರಿಗಳನ್ನು ವಹಿಸಿತು. ನಿರ್ಮಾಣ ಏಜೆನ್ಸಿಗಳು ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬ ಮಾಡಿರುವುದನ್ನು ನಾವು ಗಮನಿಸಿದೆವು, ಹಾಗಾಗಿ ಇಲಾಖೆಯು ವಿದ್ಯಾರ್ಥಿನಿಲಯಗಳನ್ನು ಅಸ್ತಿತ್ವದಲ್ಲಿದ್ದ ಬಾಡಿಗೆ ಕಟ್ಟಡಗಳಲ್ಲೇ ಮುಂದುವರೆಸಬೇಕಾಯಿತು. ಇದು 16 ವಿದ್ಯಾರ್ಥಿನಿಲಯಗಳ ಸಂಬಂಧವಾಗಿ ₹75.47 ಲಕ್ಷ ಬಾಡಿಗೆ ಪಾವತಿಯಲ್ಲಿ (ವಿವರಗಳನ್ನು **ಅನುಬಂಧ–3.19**ರಲ್ಲಿ ನೀಡಲಾಗಿದೆ) ಪರಿಣಮಿಸಿತು. ಕಾಮಗಾರಿಗಳು ಸಮಯಕ್ಕೆ ಸರಿಯಾಗಿ ಪೂರ್ಣಗೊಳ್ಳುವುದನ್ನು ಇಲಾಖೆಯು ಖಚಿತಪಡಿಸಿಕೊಂಡಿದ್ದರೆ, ಅದನ್ನು ತಪ್ಪಿಸಬಹುದಿತ್ತು.

ಶೀಘ್ರವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019).

## 3.2.11 ಪರೀಕ್ಷಾ–ತನಿಖೆ ನಡೆಸಿದ ವಿದ್ಯಾರ್ಥಿನಿಲಯಗಳಲ್ಲಿ ಸೌಲಭ್ಯಗಳ ಲಭ್ಯತೆ

ಪರೀಕ್ಷಾ–ತನಿಖೆ ನಡೆಸಿದ ತಾಲ್ಲೂಕುಗಳಲ್ಲಿನ 72 ವಿದ್ಯಾರ್ಥಿನಿಲಯಗಳ ಜಂಟಿ ಭೌತಿಕ ಪರಿಶೀಲನೆಯನ್ನು ಲೆಕ್ಕಪರಿಶೋಧನೆಯು ನಡೆಸಿತು. ರಾಜ್ಯ ಸರ್ಕಾರದ ನೀತಿಗಳು/ಮಾರ್ಗದರ್ಶಿ ಸೂತ್ರಗಳ ಅನುಪಸ್ಥಿತಿಯಲ್ಲಿ

ಕೇಂದ್ರ ಪುರಸ್ಕೃತ ಯೋಜನೆಗಳ ಮಾರ್ಗದರ್ಶಿ ಸೂತ್ರಗಳನ್ನು ಮಾನದಂಡಗಳಾಗಿ ಅಳವಡಿಸಿ ಕೊಳ್ಳಲಾಯಿತು. ಕೆಲವು ಸೌಲಭ್ಯಗಳ ಲಭ್ಯತೆಯ ಸ್ಥಿತಿಯನ್ನು ಕೆಳಗೆ ನೀಡಲಾಗಿದೆ:

❖ **ಮಂಚಗಳು** – ಪರೀಕ್ಷಾ-ತನಿಖೆ ನಡೆಸಿದ 72 ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾದ 5,880 ವಿದ್ಯಾರ್ಥಿಗಳಿಗೆ ಪ್ರತಿಯಾಗಿ 6,334 ವಿದ್ಯಾರ್ಥಿಗಳಿದ್ದರು. 55 ವಿದ್ಯಾರ್ಥಿನಿಲಯಗಳಲ್ಲಿ ಅಗತ್ಯವಿದ್ದ 5,386 ಮಂಚಗಳಿಗೆ ಪ್ರತಿಯಾಗಿ 3,266 ಮಂಚಗಳಿರುವುದನ್ನು ನಾವು ಗಮನಿಸಿದೆವು ಮತ್ತು 2,120 ಮಂಚಗಳ ಕೊರತೆಯಿದ್ದಿತು. ಹೀಗೆ, ಎಲ್ಲ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಲು ಮಂಚಗಳನ್ನು ಜೋಡಿಸಲಾಗುತ್ತಿತ್ತು ಅಥವಾ ವಿದ್ಯಾರ್ಥಿಗಳು ನೆಲದ ಮೇಲೆ ಮಲಗುತ್ತಿದ್ದರು (**ಪ್ರದರ್ಶಿಕೆ-3.3**). 15 ವಿದ್ಯಾರ್ಥಿನಿಲಯಗಳಲ್ಲಿ ಅಗತ್ಯವಿದ್ದ 833 ಮಂಚಗಳಿಗೆ ಪ್ರತಿಯಾಗಿ 1,126 ಮಂಚಗಳಿದ್ದು, 293 ಮಂಚಗಳು ಅಧಿಕವಾಗಿದ್ದವು. ಎರಡು ವಿದ್ಯಾರ್ಥಿನಿಲಯಗಳಲ್ಲಿ ಎಲ್ಲ ವಿದ್ಯಾಥಿಗಳಿಗೆ ಮಂಚಗಳನ್ನು ಒದಗಿಸಲಾಗಿತ್ತು (115).

**ಪ್ರದರ್ಶಿಕೆ-3.3: ಮಂಚಗಳನ್ನು ಜೋಡಿಸಿರುವುದು ಅಥವಾ ವಿದ್ಯಾರ್ಥಿಗಳು ನೆಲದ ಮೇಲೆ ಮಲಗಿರುವುದು (ಮೆಟ್ರಿಕ್‌ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ರಾಮದುರ್ಗ (29.06.2018)**



ಹೆಚ್ಚುವರಿ ಮಂಚಗಳನ್ನು ಖರೀದಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಮತ್ತು ಎಲ್ಲ ವಿದ್ಯಾರ್ಥಿನಿಲಯಗಳಿಗೆ ಎರಡು ಸ್ತರದ ಮಂಚಗಳನ್ನು ಸರಬರಾಜು ಮಾಡುವವರೆಗೆ ಮುಂದುವರೆಯುತ್ತದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019). ಹೆಚ್ಚುವರಿ ಮಂಚಗಳನ್ನು ಅಗತ್ಯವಿರುವ ವಿದ್ಯಾರ್ಥಿನಿಲಯಗಳಿಗೆ ತುರ್ತಾಗಿ ಸ್ಥಳಾಂತರಿಸುವಂತೆ ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದೂ ಸಹ ತಿಳಿಸಲಾಯಿತು.

❖ **ಹಾಸಿಗೆಗಳು ಮತ್ತು ಬೆಡ್‌ಶೀಟ್‌ಗಳು** – ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಮೂರು ವರ್ಷಗಳಿಗೊಮ್ಮೆ ಹಾಸಿಗೆಗಳು ಮತ್ತು ಬೆಡ್‌ಶೀಟ್‌ಗಳನ್ನು (ಹಾಸಿಗೆ ಹರವುಗಳು, ಚಾದರಗಳು, ದಿಂಬುಗಳು ಮತ್ತು ದಿಂಬುಕವರ್‌ಗಳನ್ನು ಒಳಗೊಂಡು) ಒದಗಿಸುವಂತೆ ರಾಜ್ಯ ಸರ್ಕಾವು ನಿಗದಿಪಡಿಸಿತ್ತು (ನವೆಂಬರ್ 2014). ಲೆಕ್ಕಪರಿಶೋಧನಾ ಅವಧಿಯಲ್ಲಿ 53, 30 ಮತ್ತು 39 ವಿದ್ಯಾರ್ಥಿ ನಿಲಯಗಳಿಗೆ ಅನುಕ್ರಮವಾಗಿ ಹಾಸಿಗೆಗಳು, ಬೆಡ್‌ಶೀಟ್‌ಗಳು, ದಿಂಬು/ದಿಂಬು ಕವರ್‌ಗಳನ್ನು ಒಂದು ಸಾರಿಯೂ ಕೂಡ ಸರಬರಾಜು ಮಾಡಿಲ್ಲದಿರುವುದನ್ನು ನಾವು ಗಮನಿಸಿದೆವು.

61,382 ಹಾಸಿಗೆಗಳನ್ನು ಕೆಆರ್‌ಇಐಎಸ್ ಮೂಲಕ ಸರಬರಾಜು ಮಾಡಲಾಗುತ್ತಿದೆ ಮತ್ತು ಮತ್ತಷ್ಟು ಖರೀದಿಯನ್ನು ಮಾಡಿ ಎಲ್ಲ ವಿದ್ಯಾರ್ಥಿಗಳಿಗೆ ಹಂತಹಂತವಾಗಿ ಸರಬರಾಜು ಮಾಡಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019).

❖ **ಅಧ್ಯಯನ ಟೇಬಲ್‌ಗಳು** – 60 ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಅಧ್ಯಯನ ಟೇಬಲ್‌ಗಳನ್ನು ಒದಗಿಸಿರಲಿಲ್ಲ. ಇಲಾಖೆಯು ಆಲೋಚಿಸಿರುವಂತೆ ಮುಂದಿನ ವರ್ಷಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಅಧ್ಯಯನ ಟೇಬಲ್‌ಗಳನ್ನು ಒದಗಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019)

❖ **ಕ್ರೀಡಾ ಸಾಮಗ್ರಿಗಳು** – ವಿದ್ಯಾರ್ಥಿನಿಲಯಗಳಲ್ಲಿ ಕ್ರೀಡಾ ಸಾಮಗ್ರಿಗಳನ್ನು ಒದಗಿಸಿರಬೇಕೆಂದು ರಾಜ್ಯ ಸರ್ಕಾರವು ನಿಗದಿಪಡಿಸಿತ್ತು (ನವೆಂಬರ್ 2014). ಪರೀಕ್ಷಾ-ತನಿಖೆ ನಡೆಸಿದ ಎಲ್ಲಾ ವಿದ್ಯಾರ್ಥಿನಿಲಯಗಳಲ್ಲಿ ಅಗತ್ಯವಿದ್ದ ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗಿತ್ತು.

❖ **ಗ್ರಂಥಾಲಯ ಪುಸ್ತಕಗಳು** – ವಿದ್ಯಾರ್ಥಿನಿಲಯಗಳ ಗ್ರಂಥಾಲಯಗಳಲ್ಲಿ ನಿರ್ವಹಿಸಬೇಕಿರುವ ಪುಸ್ತಕಗಳ ವಿಧವನ್ನಾಗಲೀ ಅಥವಾ ಸಂಖ್ಯೆಯನ್ನಾಗಲೀ ನಿಗದಿಪಡಿಸಿದ ಯಾವುದೇ ನೀತಿಯಿರಲಿಲ್ಲ. ಪರೀಕ್ಷಾ–ತನಿಖೆ ನಡೆಸಿದ ಎಲ್ಲ ವಿದ್ಯಾರ್ಥಿನಿಲಯಗಳ ಗ್ರಂಥಾಲಯಗಳಲ್ಲಿ ಸಾಮಾನ್ಯವಾಗಿ ಪುಸ್ತಕಗಳಿದ್ದವು.

❖ **ದೈಹಿಕ ವಿಶೇಷ ಚೇತನರಿಗೆ ರ್‍ಯಾಂಪ್** – ಕೇಂದ್ರ ಪುರಸ್ಕೃತ ಯೋಜನೆಯ ಮಾರ್ಗದರ್ಶಿ ಸೂತ್ರಗಳು ವಿದ್ಯಾರ್ಥಿನಿಲಯಗಳ ಕೆಲವು ಕೊಠಡಿಗಳು/ಬ್ಲಾಕ್‌ಗಳು ತಡೆರಹಿತವಾಗಿರಬೇಕು ಮತ್ತು ವಿಕಲಾಂಗ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿನ್ಯಾಸದಲ್ಲಿ ರ್‍ಯಾಂಪ್‌ನಂತಹ ಸೌಲಭ್ಯಗಳನ್ನು ಒದಗಿಸಬೇಕು ಎಂದು ನಿಗದಿಪಡಿಸಿದ್ದವು. ಅಂತಹ ಸೌಲಭ್ಯವು 61 ವಿದ್ಯಾರ್ಥಿನಿಲಯಗಳಲ್ಲಿ ಲಭ್ಯವಿರಲಿಲ್ಲ.

ರಾಜ್ಯ ಸರ್ಕಾರವು ಅನುಮೋದಿಸಿದ ಯೋಜನೆಯ ಅನ್ವಯ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲಾಗಿದೆ ಮತ್ತು ಕೇಂದ್ರ ಪುರಸ್ಕೃತಯೋಜನೆಯ ಮಾರ್ಗದರ್ಶಿಸೂತ್ರಗಳಂತಲ್ಲ ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಜನವರಿ 2019). ಅಂಗವಿಕಲರ ಅಗತ್ಯತೆಗಳನ್ನು ಪರಿಗಣಿಸದಿದ್ದುದರಿಂದ ಅನುಮೋದಿತ ಮಾದರಿ ಯೋಜನೆಯು ದೋಷಪೂರಿತವಾಗಿತ್ತು.

❖ **ಸ್ನಾನಗೃಹ/ಶೌಚಾಲಯದ ಅನುಪಾತ** – ಕೇಂದ್ರ ಪುರಸ್ಕೃತ ಯೋಜನೆಯ ಮಾರ್ಗದರ್ಶಿ ಸೂತ್ರಗಳ ಅನ್ವಯ ಪ್ರತಿ 10 ವಿದ್ಯಾರ್ಥಿಗಳಿಗೆ ಒಂದು ಸ್ನಾನಗೃಹ ಮತ್ತು ಒಂದು ಶೌಚಾಲಯವಿರಬೇಕು. ಈ ಪ್ರಮಾಣವನ್ನು 31 ವಿದ್ಯಾರ್ಥಿನಿಲಯಗಳಲ್ಲಿ ನಿರ್ವಹಿಸಲಾಗುತ್ತಿದೆ. 33 ಮತ್ತು 30 ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ 11ರಿಂದ 20 ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ಒಂದು ಸ್ನಾನಗೃಹ ಮತ್ತು ಒಂದು ಶೌಚಾಲಯಗಳಿದ್ದವು. 8 ಮತ್ತು 11 ವಿದ್ಯಾರ್ಥಿನಿಲಯಗಳ ಸಂಬಂಧವಾಗಿ 20ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಒಂದು ಸ್ನಾನಗೃಹ ಮತ್ತು ಒಂದು ಶೌಚಾಲಯವನ್ನು ಉಪಯೋಗಿಸುತ್ತಿದ್ದರು.

ಹೆಚ್ಚುವರಿ ಸ್ನಾನಗೃಹಗಳು/ಶೌಚಾಲಯಗಳ ನಿರ್ಮಾಣಕ್ಕೆ ಬೇಡಿಕೆಯಿದೆ ಮತ್ತು ಹಣದ ಲಭ್ಯತೆಯ ಆಧಾರದ ಮೇಲೆ ಅವುಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019).

❖ **ನೀರು ಸರಬರಾಜು** – ಪರೀಕ್ಷಾ–ತನಿಖೆ ನಡೆಸಿದ ಎಲ್ಲ ವಿದ್ಯಾರ್ಥಿನಿಲಯಗಳಲ್ಲಿ ನಿರಂತರ ನೀರಿನ ಸರಬರಾಜು ವ್ಯವಸ್ಥೆಯಿದ್ದಿತು.

❖ **ಬಯೋಮೆಟ್ರಿಕ್ ವ್ಯವಸ್ಥೆ** – ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಪ್ರಾರಂಭಿಸಲು ಮತ್ತು ಪ್ರತಿದಿನವೂ ಸ್ಥಿತಿಯನ್ನು ಅಪ್‌ಲೋಡ್ ಮಾಡಲು ಎಲ್ಲ ವಿದ್ಯಾರ್ಥಿನಿಲಯಗಳಿಗೆ ಇಲಾಖೆಯು ಸೂಚನೆಗಳನ್ನು ಹೊರಡಿಸಿತು (ಜೂನ್ 2017). ಈ ವ್ಯವಸ್ಥೆಯು 68 ವಿದ್ಯಾರ್ಥಿನಿಲಯಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ.

❖ **ಸಿ.ಸಿ.ಟಿವಿ** – ಮೇಲಿನ ಸುತ್ತೋಲೆಯು ಸಿ.ಸಿ.ಟಿವಿ ಕ್ಯಾಮರಾಗಳನ್ನು ಅಳವಡಿಸಲು ಸಹಾ ವಿದ್ಯಾರ್ಥಿನಿಲಯಗಳಿಗೆ ಸೂಚನೆಗಳನ್ನು ನೀಡಿತ್ತು. ನಾಲ್ಕು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಒಳಗೊಂಡು 35 ವಿದ್ಯಾರ್ಥಿನಿಲಯಗಳಲ್ಲಿ ಸಿ.ಸಿ.ಟಿವಿಗಳನ್ನು ಅಳವಡಿಸಲಾಗಿರಲಿಲ್ಲ.

ಮೊದಲನೆ ಹಂತದಲ್ಲಿ ಸ್ವಂತ ಕಟ್ಟಡಗಳಲ್ಲಿ ಸ್ಥಿತವಾಗಿರುವ ಎಲ್ಲ ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಸಿ.ಸಿ.ಟಿವಿಗಳನ್ನು ಅಳವಡಿಸಲಾಗಿದೆ ಮತ್ತು ಬಾಡಿಗೆಯ ಕಟ್ಟಡಗಳಲ್ಲಿ ಹಾಗೂ ಉಳಿದ ಬಾಲಕರ ವಿದ್ಯಾರ್ಥಿನಿಲಯಗಳಲ್ಲಿ ಸಹ ಸಿ.ಸಿ.ಟಿವಿಗಳನ್ನು ಅಳವಡಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019).

❖ **ಜನರೇಟರ್‌ಗಳು** – ಪರೀಕ್ಷಾ–ತನಿಖೆ ನಡೆಸಿದ ಕೇವಲ 23 ವಿದ್ಯಾರ್ಥಿನಿಲಯಗಳಲ್ಲಿ ಮಾತ್ರ ಬ್ಯಾಕ್‌ಅಪ್ ವಿದ್ಯುತ್ ಸರಬರಾಜಿಗಾಗಿ ಜನರೇಟರ್‌ಗಳಿದ್ದವು. ಎಲ್ಲ ವಿದ್ಯಾರ್ಥಿನಿಲಲಯಗಳಿಗೆ ಹಂತಹಂತವಾಗಿ ಡೀಸಲ್ ಜನರೇಟರ್‌ಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಇನ್ನೂ ಪೂರ್ಣಗೊಳ್ಳಬೇಕಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019).

❖ ಒಂಬತ್ತು ಬಾಲಕರ ವಿದ್ಯಾರ್ಥಿನಿಲಯಗಳು ಕಾವಲುಗಾರನನ್ನು ಹೊಂದಿರಲಿಲ್ಲ ಮತ್ತು ಪರೀಕ್ಷಾ–ತನಿಖೆ ನಡೆಸಿದ ಯಾವುದೇ ವಿದ್ಯಾರ್ಥಿನಿಲಯದಲ್ಲಿಯೂ ಸಹ ಕೇಂದ್ರ ಪುರಸ್ಕೃತ

ಯೋಜನೆಯ ಮಾರ್ಗದರ್ಶಿ ಸೂತ್ರಗಳಲ್ಲಿ ನಿಗದಿಪಡಿಸಿರುವಂತೆ ವಾರ್ಡನ್ ಮತ್ತು ಕಾವಲುಗಾರನಿಗೆ ಪ್ರತ್ಯೇಕ ಕೊಠಡಿಗಳಿರಲಿಲ್ಲ.

ಹೊರಗುತ್ತಿಗೆಯ ಮೂಲಕ ಆ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಮಾಜಕಲ್ಯಾಣ ಇಲಾಖೆಯ ಆಯುಕ್ತರು ತಿಳಿಸಿದರು (ಜನವರಿ 2019).

## 3.2.12 ಮೇಲ್ವಿಚಾರಣಾ ವ್ಯವಸ್ಥೆ

ಯಾವುದೇ ಯೋಜನೆ/ಚಟುವಟಿಕೆಯ ಯಶಸ್ವಿ ಅನುಷ್ಠಾನ ಮತ್ತು ಕಾರ್ಯನಿರ್ವಹಣೆಗೆ ಪರಿಣಾಮಕಾರಿ ಮೇಲ್ವಿಚಾರಣೆಯ ಅತ್ಯಗತ್ಯ. ಕೆಳಗೆ ವಿವರಿಸಿದಂತೆ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮೇಲ್ವಿಚಾರಣೆಯಲ್ಲಿ ಕೊರತೆಗಳಿದ್ದುದನ್ನು ನಾವು ಗಮನಿಸಿದೆವು.

### *3.2.12.1 ಕಾರ್ಯಾದೇಶಗಳಲ್ಲಿ ನಿಗದಿಪಡಿಸಿದ್ದ ಷರತ್ತುಗಳನ್ನು ಪಾಲಿಸದಿರುವುದು*

ಎನ್‌ಕೆ ಮತ್ತು ಕೆಆರ್‌ಐಡಿಎಲ್ ಅಂತಹ ನಿರ್ಮಾಣ ಏಜೆನ್ಸಿಗಳಿಗೆ ಜಾರಿ ಮಾಡಲಾದ ಕಾರ್ಯಾದೇಶಗಳಲ್ಲಿ ಅವರುಗಳು ಪಾಲಿಸಬೇಕಾದ ಕೆಲವು ಷರತ್ತುಗಳನ್ನು ಒಳಗೊಂಡಿರುತ್ತದೆ. **ಕೋಷ್ಟಕ-3.10**ರಲ್ಲಿ ತೋರಿಸಿರುವಂತೆ, ಅವುಗಳನ್ನು ಪಾಲಿಸದಿರುವುದನ್ನು ನಾವು ಗಮನಿಸಿದೆವು.

**ಕೋಷ್ಟಕ-3.10: ನಿರ್ಮಾಣ ಏಜೆನ್ಸಿಗಳು ಷರತ್ತುಗಳನ್ನು ಪಾಲಿಸದಿರುವುದು**

| ಕ್ರಮ ಸಂಖ್ಯೆ | ಷರತ್ತು | ಪಾಲಿಸುವಿಕೆಯ ಸ್ಥಿತಿ | ಪರಿಣಾಮ |
|---|---|---|---|
| 1 | ಕಾಮಗಾರಿಯು ತೃಪ್ತಿಕರವಾಗಿ ಪೂರ್ಣಗೊಂಡ ಮತ್ತು ಇಲಾಖೆಗೆ ಹಸ್ತಾಂತರಿಸಿದ ನಂತರ ನಿರ್ಮಾಣ ಏಜೆನ್ಸಿಗೆ ಕೊನೆಯ ಕಂತನ್ನು ಬಿಡುಗಡೆ ಮಾಡಬೇಕು | ಕಾಮಗಾರಿಯನ್ನು ಪ್ರಾರಂಭಿಸುವ ಮೊದಲೇ ಹಣವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡಲಾಗಿತ್ತು | ಕಾಮಗಾರಿಗಳು ಪೂರ್ಣಗೊಂಡಿವೆಯೆಂದು ಹೇಳಲಾದರೂ ಸಹ ಅವುಗಳಲ್ಲಿ ಹೆಚ್ಚಿನವನ್ನು ಇಲಾಖೆಗೆ ಹಸ್ತಾಂತರಿಸಿರಲಿಲ್ಲ |
| 2 | ನಿರ್ಮಾಣ ಏಜೆನ್ಸಿಯು ನಿಯತಕಾಲಿಕವಾಗಿ ಪ್ರಗತಿ ವರದಿಗಳನ್ನು ಆಯುಕ್ತರು. ಜಿಲ್ಲಾ ಅಧಿಕಾರಿಗಳು ಮತ್ತು ತಾಲ್ಲೂಕು ಅಧಿಕಾರಿಗಳಿಗೆ ಸಲ್ಲಿಸಬೇಕು | ಆಯುಕ್ತರು, ಜಿಲ್ಲಾ ಅಧಿಕಾರಿಗಳು ಮತ್ತು ತಾಲ್ಲೂಕು ಅಧಿಕಾರಿಗಳು ಲೆಕ್ಕಪರಿಶೋಧನೆಗೆ ಪ್ರಗತಿ ವರದಿಗಳನ್ನು ಲಭ್ಯಗೊಳಿಸಲಿಲ್ಲ | ಇಲಾಖಾ ಅಧಿಕಾರಿಗಳಿಂದ ನಿರ್ಮಾಣದ ಪ್ರಗತಿಯ ಮೇಲ್ವಿಚಾರಣೆ ಇರಲಿಲ್ಲ. |
| 3 | ಕಾಮಗಾರಿಯು ಪೂರ್ಣಗೊಂಡ ನಂತರ, ನಿರ್ಮಾಣ ಏಜೆನ್ಸಿಗಳು ಮತ್ತು ಸಮಾಜ ಕಲ್ಯಾಣ ಅಧಿಕಾರಿಗಳು ಜಂಟಿಯಾಗಿ ಸಹಿ ಮಾಡಿದ ಛಾಯಾಚಿತ್ರಗಳೊಂದಿಗೆ ಬಳಕೆ ಪ್ರಮಾಣ ಪತ್ರಗಳನ್ನು ಸಮಾಜಕಲ್ಯಾಣ ಇಲಾಖೆಯ ಆಯುಕ್ತರಿಗೆ ಸಲ್ಲಿಸಬೇಕು. | ಬಳಕೆ ಪ್ರಮಾಣಪತ್ರಗಳನ್ನು ಲಭ್ಯಗೊಳಿಸುವಂತೆ ಕೇಳಿದ ಲೆಕ್ಕಪರಿಶೋಧನೆಯ ತನಿಖೆಗೆ ಅದನ್ನು ಪಡೆದುಕೊಂಡು ಸಲ್ಲಿಸಲಾಗುವುದು ಎಂದು ಆಯುಕ್ತರು ಉತ್ತರಿಸಿದರು (ಆಗಸ್ಟ್ 2018) | ಉತ್ತರದಿಂದ ಸ್ಪಷ್ಟವಾಗುವಂತೆ ನಿರ್ಮಾಣ ಏಜೆನ್ಸಿಗಳು ಬಳಕೆಪ್ರಮಾಣಪತ್ರಗಳನ್ನು ಸಲ್ಲಿಸಿರಲಿಲ್ಲ. |

ಆಧಾರ: ಸಮಾಜಕಲ್ಯಾಣ ಇಲಾಖೆಯ ಆಯುಕ್ತರು ಸಲ್ಲಿಸಿದ ಮಾಹಿತಿ

ಹೀಗೆ, ಕಾರ್ಯಾದೇಶಗಳಲ್ಲಿ ನಿಗದಿಪಡಿಸಿದ್ದ ಷರತ್ತುಗಳನ್ನು ಪಾಲಿಸದಿರುವುದು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ನಿರ್ಮಾಣದ ಪ್ರಗತಿಯ ಪರಿಣಾಮಕಾರಿ ಮೇಲ್ವಿಚಾರಣೆಯು ಕೊರತೆಯಲ್ಲಿ ಪರಿಣಮಿಸಿತು.

ಕಾರ್ಯಾದೇಶಗಳಲ್ಲಿ/ಬಿಡುಗಡೆ ಆದೇಶಗಳಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಪಾಲಿಸಲು ಸೂಕ್ತ ನಿರ್ದೇಶನಗಳನ್ನು ಜಾರಿ ಮಾಡಲಾಗುವುದೆಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2019).

## 3.2.13 ನಿರ್ಣಯ

ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ರಾಜ್ಯ ಸರ್ಕಾರವು ಯಾವುದೇ ಮಾರ್ಗದರ್ಶಿ ಸೂತ್ರಗಳನ್ನು ಹೊರತರಲಿಲ್ಲ. ಬ್ಯಾಡಗಿಯಲ್ಲಿ ವಿದ್ಯಾರ್ಥಿನಿಲಯದ ನಿರ್ಮಾಣವಾಗದಿರುವುದು ಮತ್ತು ಬೆಟಗೇರದಲ್ಲಿನ ಅಪೂರ್ಣ ಕಾಮಗಾರಿಯು ವಿದ್ಯಾರ್ಥಿನಿಲಯಗಳ ನಿರ್ಮಾಣದಲ್ಲಿ ಸೂಕ್ತ ಯೋಜನೆ/ಆದ್ಯತೀಕರಣದ ಅಭಾವವನ್ನು ಸೂಚಿಸುತ್ತದೆ.

ರಾಜ್ಯದಲ್ಲಿನ ವಿದ್ಯಾರ್ಥಿನಿಲಯಗಳಲ್ಲಿ ಸ್ಥಳಾವಕಾಶ ಮಾಡಿಕೊಟ್ಟ ವಿದ್ಯಾರ್ಥಿಗಳ ಸಂಖ್ಯೆಯು ನಿಗದಿಪಡಿಸಿದ್ದ ಸಂಖ್ಯೆಗಿಂತ ಅಧಿಕವಾಗಿದ್ದಿತು. ವಿದ್ಯಾರ್ಥಿನಿಲಯಗಳ ಮಂಜೂರಾತಿ ಬಲವನ್ನು ಲೆಕ್ಕಿಸದೇ ವಿದ್ಯಾರ್ಥಿನಿಲಯಕ್ಕೆ ಪ್ರವೇಶಾವಕಾಶ ಕೋರಿದ್ದ ಎಲ್ಲ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಿಕೊಡಲು ಸಮಾಜಕಲ್ಯಾಣ ಇಲಾಖೆಗೆ ರಾಜ್ಯ ಸರ್ಕಾರವು ನಿರ್ದೇಶಿಸಿದ್ದೇ (ಜುಲೈ 2013) ಇದಕ್ಕೆ ಕಾರಣವಾಗಿತ್ತು.

16 ತಾಲ್ಲೂಕುಗಳ ಪರೀಕ್ಷಾ–ತನಿಖೆ ನಡೆಸಿದ 190 ರಲ್ಲಿ 74 ವಿದ್ಯಾರ್ಥಿನಿಲಯಗಳು (ಶೇಕಡಾ 39) ತಮ್ಮ ಸಾಮರ್ಥ್ಯಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ನೀಡಿದ್ದವು. 10 ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಶೇಕಡಾ 100ಕ್ಕಿಂತ ಅಧಿಕವಾಗಿತ್ತು. ಇನ್ನೊಂದು ಕಡೆ 85 ವಿದ್ಯಾರ್ಥಿನಿಲಯಗಳನ್ನು (ಶೇಕಡಾ 45) ಕಡಿಮೆ ಬಳಕೆ ಮಾಡಿಕೊಳ್ಳಲಾಗಿತ್ತು. 18 ವಿದ್ಯಾರ್ಥಿನಿಲಯಗಳಲ್ಲಿ ಕಡಿಮೆ ಬಳಕೆಯ ಪ್ರಮಾಣವು ಶೇಕಡ 10ಕ್ಕಿಂತ ಕಡಿಮೆಯಿದ್ದಿತು ಮತ್ತು 30 ವಿದ್ಯಾರ್ಥಿನಿಲಯಗಳಲ್ಲಿ ಅದು ಶೇಕಡಾ 12ರಿಂದ 25ರಷ್ಟಿತ್ತು. 26 ವಿದ್ಯಾರ್ಥಿನಿಲಯಗಳಲ್ಲಿನ ಕಡಿಮೆಬಳಕೆಯ ಪ್ರಮಾಣವು ಶೇಕಡಾ 26ರಿಂದ 50ರಷ್ಟಿದ್ದರೆ, ಉಳಿದ 11 ವಿದ್ಯಾರ್ಥಿನಿಲಯಗಳಲ್ಲಿ ಅದು ಶೇಕಡಾ 53ರಿಂದ 83ರಷ್ಟಿದ್ದಿತು. ಬಾಲಕರ ವಿದ್ಯಾರ್ಥಿನಿಲಯಗಳಿಗೆ ಹೋಲಿಸಿದರೆ ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅಧಿಕವಾಗಿದ್ದಿತು.

ಕೆಟಿಪಿಪಿ ಕಾಯಿದೆಯ ಕಲಮು 4(ಜಿ) ಅಡಿಯಲ್ಲಿ ನೀಡಲಾದ ವಿನಾಯಿತಿಯು ಕೇಂದ್ರ ಜಾಗೃತ ಆಯೋಗದ ಮಾರ್ಗದರ್ಶಿ ಸೂತ್ರಗಳನ್ನು ಉಲ್ಲಂಘಿಸಿತ್ತು ಮತ್ತು ಘನತೆವೆತ್ತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧವಾಗಿದೆ. ಇದು ಏಜೆನ್ಸಿಗಳಿಗೆ ನಾಮನಿರ್ದೇಶನದ ಆಧಾರದ ಮೇಲೆ ಅವ್ಯವಸ್ಥಿತವಾಗಿ ಕಾಮಗಾರಿಗಳನ್ನು ವಹಿಸುವಲ್ಲಿ ಪರಿಣಮಿಸಿತು. ನಿರ್ಮಾಣ ಏಜೆನ್ಸಿಗಳಿಂದ ಕಾಮಗಾರಿಗಳನ್ನು ಪ್ರಾರಂಭ ಮಾಡುವಲ್ಲಿ ಮತ್ತು ಪೂರ್ಣಗೊಳಿಸುವಲ್ಲಿ ವಿಳಂಬಗಳಿದ್ದವು. ಸಂಹಿತೆಯ ಉಪಬಂಧಗಳನ್ನು ಉಲ್ಲಂಘಿಸಿ ₹45.63 ಕೋಟಿ ಅಂದಾಜು ವೆಚ್ಚದ 12 ಕಾಮಗಾರಿಗಳನ್ನು ನಿವೇಶನಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ಇಲಾಖೆಯು ಏಜೆನ್ಸಿಗಳಿಗೆ ವಹಿಸಿತ್ತು.

2013–14ರಿಂದ 2015–16ರ ಅವಧಿಯಲ್ಲಿ ಕೈಗೆತ್ತಿಕೊಂಡ ದುರಸ್ತಿ/ನವೀಕರಣ ಕಾಮಗಾರಿಗಳ ವಿವರಗಳನ್ನು ಇಲಾಖೆಯು ಒದಗಿಸಲಿಲ್ಲ. ಅಲ್ಲದೆ, 2016–17 ಮತ್ತು 2017–18ರ ಅವಧಿಯಲ್ಲಿ ಪೂರ್ಣಗೊಳ್ಳಲು ಆರು ತಿಂಗಳ ಅವಧಿಯನ್ನು ನಿಗದಿಪಡಿಸಿದ್ದ ಕೈಗೆತ್ತಿಕೊಂಡ 755ರಲ್ಲಿ 376 ಕಾಮಗಾರಿಗಳನ್ನು (ಶೇಕಡಾ 50) ಇನ್ನೂ ಪೂರ್ಣಗೊಳಿಸಿರಲಿಲ್ಲ. ದುರಸ್ತಿ/ನವೀಕರಣ ಕಾಮಗಾರಿಗಳನ್ನು ಕಾರ್ಯಗತಗೊಳಿಸದೇ ಪೂರ್ಣಗೊಂಡಿದೆ ಎಂದು ತಪ್ಪಾಗಿ ವರದಿ ಮಾಡಿದ್ದ ಪ್ರಕರಣಗಳಿದ್ದವು.

ಪರೀಕ್ಷಾ–ತನಿಖೆ ನಡೆಸಿದ ವಿದ್ಯಾರ್ಥಿನಿಲಯಗಳಲ್ಲಿ ನಿವಾಸಿಗಳಿಗೆ ಮಂಚಗಳು, ಹಾಸಿಗೆಗಳು, ಮ್ಯಾಟ್ರೆಸ್‌ಗಳು, ಶೌಚಾಲಯಗಳು ಮತ್ತು ಸ್ನಾನಗೃಹಗಳು ಮುಂತಾದ ಸೌಕರ್ಯಗಳನ್ನು ಒದಗಿಸುವಲ್ಲಿ ನ್ಯೂನತೆಗಳಿದ್ದವು.

ಟೆಂಡರ್ ಪ್ರಕ್ರಿಯೆಯು ಕೆಟಿಟಿಪಿ ಅಧಿನಿಯಮ, 1999ರ ನಿಬಂಧನೆಗಳಿಗೆ ಅನುಗುಣವಾಗಿರಲಿಲ್ಲ. ಟೆಂಡರ್‌ಗಳ ಮೌಲ್ಯಮಾಪನವು ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವ ಮಾನದಂಡಗಳಿಗೆ ಅನುಗುಣವಾಗಿರಲಿಲ್ಲ. ಗುತ್ತಿಗೆದಾರರ ಸಾಮರ್ಥ್ಯಕ್ಕೆ ಮೀರಿ ಹಲವಾರು ಕಾಮಗಾರಿಗಳನ್ನು ವಹಿಸಿದ್ದು ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ಆವರ್ತಕ ವಿಳಂಬವಾಗುವುದರಲ್ಲಿ ಪರಿಣಮಿಸಿತು.

ಶಾಸನಬದ್ಧ ಕಡಿತಗಳು ಮತ್ತು ಎಫ್‌ಎಸ್‌ಡಿಯನ್ನು ಕಡಿತ ಮಾಡದೇ ನಿರ್ಮಾಣ ಏಜೆನ್ಸಿಗಳಿಗೆ ಹಣವನ್ನು ಒಟ್ಟಾರೆ ಮೊತ್ತವನ್ನಾಗಿ ಬಿಡುಗಡೆ ಮಾಡಿದ್ದು ₹14.86 ಕೋಟಿ ಮೊತ್ತದ ಆದಾಯ ತೆರಿಗೆ ಮತ್ತು ₹37.16 ಕೋಟಿ ಎಫ್‌ಎಸ್‌ಡಿಯು ವಸೂಲಾಗದಿರುವಲ್ಲಿ ಪರಿಣಮಿಸಿತು. ನಿರ್ಮಾಣ ಏಜೆನ್ಸಿಗಳು ನಿರ್ಮಾಣದ ನಂತರದ ಉಳಿತಾಯಗಳನ್ನು ಇಲಾಖೆಗೆ ಜಮೆ ಮಾಡದೇ ತಮ್ಮ ಬಳಿಯೇ ಉಳಿಸಿಕೊಂಡವು. ನಿರ್ಮಾಣ ಏಜೆನ್ಸಿಗಳು/ಇಲಾಖಾ ಅಧಿಕಾರಿಗಳು ಮಂಜೂರಾತಿ ಆದೇಶಗಳಲ್ಲಿ ನಿಗದಿಪಡಿಸಿದ್ದ ವಿವಿಧ ಸೂಚನೆಗಳನ್ನು ಪಾಲಿಸಲಿಲ್ಲವಾಗಿ ಅದು ಪರಿಣಾಮಕಾರಿ ಮೇಲ್ವಿಚಾರಣೆಯ ಅನುಪಸ್ಥಿತಿಯಲ್ಲಿ ಪರಿಣಮಿಸಿತು.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

### 3.3 ₹2.81 ಲಕ್ಷದ ದುರುಪಯೋಗ

**ಬಿಲ್ಲುಗಳ ತಯಾರಿಕೆ ಮತ್ತು ಮೇಲ್ವಿಚಾರಣೆಯಲ್ಲಿ ಕರ್ನಾಟಕ ಹಣಕಾಸು ಸಂಹಿತೆ, 1958ರಲ್ಲಿ ತಿಳಿಸಿರುವ ನಿಬಂಧನೆಗಳನ್ನು ಅನುಸರಿಸುವಲ್ಲಿ ಪಾವಗಡ ತಾಲ್ಲೂಕು ಆರೋಗ್ಯಾಧಿಕಾರಿಗಳ ವಿಫಲತೆಯು ಅದೇ ಕಛೇರಿಯ ಪ್ರಥಮ ದರ್ಜೆ ಸಹಾಯಕರು ₹2.81 ಲಕ್ಷವನ್ನು ದುರುಪಯೋಗಪಡಿಸಿಕೊಳ್ಳುವಲ್ಲಿ ಪರಿಣಮಿಸಿತು.**

ಕರ್ನಾಟಕ ಹಣಕಾಸು ಸಂಹಿತೆ, 1958 ಮತ್ತು ಕರ್ನಾಟಕ ಖಜಾನೆ ಸಂಹಿತೆ, 1963ರ ಅನುಚ್ಛೇದಗಳು ಕೆಳಕಂಡಂತೆ ನಿಗದಿಪಡಿಸುತ್ತವೆ:

| ಅನುಚ್ಛೇದ ಸಂಖ್ಯೆ | ನಿಬಂಧನೆಗಳು |
|---|---|
| ಕರ್ನಾಟಕ ಹಣಕಾಸು ಸಂಹಿತೆ | |
| 3 | ಪ್ರತಿಯೊಬ್ಬ ಸರ್ಕಾರಿ ನೌಕರನು ತನಗೆ ಸಂಬಂಧಪಟ್ಟ ಸರ್ಕಾರಿ ಹಣಕಾಸು ವಹಿವಾಟುಗಳಿಗೆ ಸೂಕ್ತವಾದ ಲೆಕ್ಕಪತ್ರಗಳನ್ನು ನಿರ್ವಹಿಸಿರುವಂತೆ ನೋಡಿಕೊಳ್ಳಬೇಕು. ಅವರು ತಮ್ಮ ಅಧೀನ ಉದ್ಯೋಗಿಗಳು ಯಾವುದೇ ವಂಚನೆ, ದುರುಪಯೋಗ ಅಥವಾ ಬೇರೆ ಯಾವುದೇ ಅಕ್ರಮಗಳನ್ನು ಮಾಡದಿರುವಂತೆ ಪದೇಪದೇ ಲೆಕ್ಕಪತ್ರಗಳನ್ನು ಪರಿಶೀಲಿಸಬೇಕು. |
| 24(ಎಫ್) | ಸರ್ಕಾರವು ಯಾವುದೇ ನಿರ್ದಿಷ್ಟ ಕಛೇರಿಯ ಸಂಬಂಧವಾಗಿ ವಿಶೇಷ ಅಧಿಕಾರ ನೀಡದ ಹೊರತು ಯಾವುದೇ ಬಿಲ್ ಅಥವಾ ವೋಚರ್ ಅಥವಾ ಪಾವತಿ ಆದೇಶಗಳನ್ನು ಕಛೇರಿಯ ಮುಖ್ಯಸ್ಥರ ಪರವಾಗಿ ಗುಮಾಸ್ತರು ಸಹಿ ಮಾಡಬಾರದು. |
| 67 | ಪ್ರತಿಯೊಂದು ಚೆಕ್ ಪುಸ್ತಕವನ್ನು ಹಣ ತೆಗೆಯುವ ಅಧಿಕಾರಿಯ ವೈಯಕ್ತಿಕ ಭದ್ರತೆಯಲ್ಲಿ ಬೀಗದ ಭದ್ರತೆಯಿರುವ ಕಪಾಟಿನಲ್ಲಿಡಬೇಕು. |
| ಕರ್ನಾಟಕ ಖಜಾನೆ ಸಂಹಿತೆ | |
| 68 | ತಾನೇ ಹಣ ತೆಗೆಯುವ ಅಧಿಕಾರಿಯಾಗಿರದ ಅಥವಾ ಬ್ಯಾಂಕರ್‌ನಿಂದ ಅಧಿಕಾರ ಪಡೆಯದ ವ್ಯಕ್ತಿಯೊಬ್ಬರು ಬಿಲ್‌ವೊಂದನ್ನು ಸಲ್ಲಿಸಿದಾಗ ಅವರು ಹಣ ತೆಗೆಯುವ ಅಧಿಕಾರಿಯಿಂದ ಅಥವಾ ಬ್ಯಾಂಕರ್‌ನಿಂದ ಕೆಟಿಸಿ-12 ನಮೂನೆಯಲ್ಲಿ ಪತ್ರವೊಂದನ್ನು ಸಲ್ಲಿಸುವುದು ಅಗತ್ಯವಾಗಿದೆ. |

ಶಿಶು ಮತ್ತು ತಾಯಿಯ ಸಾವಿನ ಪ್ರಮಾಣವನ್ನು ಕಡಿಮೆ ಮಾಡಲು ಮತ್ತು ಸಾಂಸ್ಥಿಕ ಹೆರಿಗೆಯನ್ನು ಉತ್ತೇಜಿಸಲು ಕರ್ನಾಟಕ ಸರ್ಕಾರವು ತಾಯಿ ಭಾಗ್ಯ ಯೋಜನೆಯನ್ನು ಪ್ರಾರಂಭಿಸಿತು (ಏಪ್ರಿಲ್ 2012). ಈ ಯೋಜನೆಯು 'ಪ್ರಸೂತಿ ಆರೈಕೆ' ಎಂಬ ಘಟಕವನ್ನು ಒಳಗೊಂಡಿತ್ತು ಮತ್ತು ಅದರಲ್ಲಿ ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಮಹಿಳೆಯರಿಗೆ ಎರಡನೇ ತ್ರೈಮಾಸಿಕ ಪ್ರಸವಪೂರ್ವ ಪರೀಕ್ಷೆಯ ಸಮಯದಲ್ಲಿ ₹1,000 ಹಣಕಾಸು ನೆರವು ನೀಡುವುದನ್ನು ಒದಗಿಸಲಾಗಿತ್ತು. 2017-18ಕ್ಕೂ ಮೊದಲು ಫಲಾನುಭವಿಗೆ ಹಣದ ನೆರವನ್ನು ಚೆಕ್ಕಿನ ಮೂಲಕ ನೀಡಬೇಕೆಂದು ಯೋಜನೆಯು ನಿಗದಿಪಡಿಸಿತ್ತು. ಅಲ್ಲದೆ, ವೆಚ್ಚ ಮತ್ತು ಫಲಾನುಭವಿಗಳ ಗುರುತಿಸುವಿಕೆಯನ್ನು ಮೊದಲು ರಾಜ್ಯ ಲೆಕ್ಕಪತ್ರ ಇಲಾಖೆಯು ಆರು ತಿಂಗಳಿಗೊಮ್ಮೆ ಲೆಕ್ಕಪರಿಶೋಧನೆ ಮಾಡಿ ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರ ಹಾಗೂ ಹಣಕಾಸು ಇಲಾಖೆ ಎರಡಕ್ಕೂ ಸಲ್ಲಿಸಬೇಕು.

ಯೋಜನೆಯಡಿ ಫಲಾನುಭವಿಗಳಿಗೆ ಹಣಕಾಸು ನೆರವನ್ನು ತೆಗೆದು ವಿತರಣೆ ಮಾಡಲು ಅನುಸರಿಸಬೇಕಾದ ವಿಧಾನವನ್ನು ಕೆಳಗೆ ನೀಡಲಾಗಿದೆ:

(ಎ) ಫಲಾನುಭವಿಗಳಿಂದ ಸ್ವೀಕರಿಸಿದ ಅರ್ಜಿಗಳನ್ನು ಫಲಾನುಭವಿಗಳು ಸಮಾಲೋಚನೆಗಾಗಿ ಬರುವ ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಆಸ್ಪತ್ರೆಯ ವೈದ್ಯಾಧಿಕಾರಿಗಳು ಪರಿಶೀಲಿಸಿ ಸಹಿ ಮಾಡಬೇಕು. ಆ ಅರ್ಜಿಗಳನ್ನು ಹಣ ತೆಗೆಯುವ ಮತ್ತು ಬಟವಾಡೆ ಮಾಡುವ (ಡಿಡಿಓ) ತಾಲ್ಲೂಕು ಆರೋಗ್ಯ ಅಧಿಕಾರಿಗೆ ಕಳುಹಿಸಬೇಕು, ಅವರು ಅರ್ಜಿಗಳಲ್ಲಿ ಮೇಲುರುಜು ಮಾಡಿ ಅವುಗಳನ್ನು ಜಿಲ್ಲಾ

ಆರೋಗ್ಯ ಕಛೇರಿಯ ಗೆಜೆಟೆಡ್ ಸಹಾಯಕರಿಗೆ ಅನುಮೋದನೆಗಾಗಿ ಕಳುಹಿಸುತ್ತಾರೆ. ಗೆಜೆಟೆಡ್ ಸಹಾಯಕರಿಂದ ಅನುಮೋದಿತವಾದ ಅರ್ಜಿಗಳು ಸ್ವೀಕೃತವಾದ ನಂತರ ತಾಲ್ಲೂಕು ಆರೋಗ್ಯಾಧಿಕಾರಿಗಳು ಸವಿವರ ಸಾದಿಲ್ವಾರು ಬಿಲ್ಲನ್ನು ತಯಾರಿಸಿ ಅದನ್ನು ಗೆಜೆಟೆಡ್ ಸಹಾಯಕ ಮೇಲುರುಜುವಿಗಾಗಿ ಜಿಲ್ಲಾ ಆರೋಗ್ಯ ಕಛೇರಿಗೆ ಕಳುಹಿಸುತ್ತಾರೆ. ಆ ನಂತರ ಡಿಡಿಓರವರು ಬಿಲ್ಲನ್ನು ಟೋಕನ್‌ನೊಂದಿಗೆ ಪಾವತಿಗಾಗಿ ಖಜಾನೆಗೆ ಕಳುಹಿಸುತ್ತಾರೆ. ಖಜಾನೆಯಿಂದ ಪಾವತಿಯ ಸ್ವೀಕೃತಿಯಾಗಲು ಟೋಕನ್ನಿನ ಪಕ್ಕಪ್ರತಿಯನ್ನು ಡಿಡಿಓರವರು ಇಟ್ಟುಕೊಳ್ಳಬೇಕು. ಖಜಾನೆ ಅಧಿಕಾರಿಗಳು ಬಿಲ್ಲಿನ ನಿಖರತೆಯನ್ನು ಪರಿಶೀಲಿಸಿದ ನಂತರ ಡಿಡಿಓರವರ ಪರವಾಗಿ ಚೆಕ್ಕನ್ನು ನೀಡುತ್ತಾರೆ.

(ಬಿ) ಅನುಷ್ಠಾನಾಧಿಕಾರಿಗಳು ಹಣದ ವಿತರಣೆ ಮಾಡುವುದನ್ನು ಅನುಕೂಲಗೊಳಿಸಲು ಡಿಡಿಓರವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಮಧ್ಯವರ್ತಿ ಖಾತೆಯನ್ನು ತೆರೆಯಲಾಗುವುದು. ಖಜಾನೆಯಿಂದ ಜಾರಿಯಾದ ಚೆಕ್ಕನ್ನು ಮೊದಲು ಈ ಮಧ್ಯವರ್ತಿ ಖಾತೆಯಲ್ಲಿ ಠೇವಣಿ ಮಾಡಲಾಗುವುದು ಮತ್ತು ನಂತರ ಫಲಾನುಭವಿಗಳ ಹೆಸರಿನಲ್ಲಿ ವೈಯಕ್ತಿಕ ಚೆಕ್ಕುಗಳ ಮೂಲಕ ಫಲಾನುಭವಿಗಳಿಗೆ ವಿತರಣೆ ಮಾಡಲಾಗುತ್ತದೆ.

2017–18ರ ಅವಧಿಯಲ್ಲಿ 19 ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಛೇರಿಗಳನ್ನು ಲೆಕ್ಕಪರಿಶೋಧನೆ ಮಾಡಲಾಯಿತು. ಪಾವಗಡ ತಾಲ್ಲೂಕು ಆರೋಗ್ಯ ಅಧಿಕಾರಿಗಳ ದಾಖಲೆಗಳ ಸಮೀಕ್ಷೆಯಲ್ಲಿ (ಅಕ್ಟೋಬರ್ 2018), 2016–17ರ ಅವಧಿಯಲ್ಲಿ ಪ್ರಸೂತಿ ಆರೈಕೆ ಯೋಜನೆಯಡಿಯಲ್ಲಿ 281 ಫಲಾನುಭವಿಗಳಿಗೆ ಹಣಕಾಸಿನ ನೆರವನ್ನು ನೀಡಲು ತೆಗೆದಿದ್ದ ₹2.81 ಲಕ್ಷಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಿಲ್ಲದಿರುವುದನ್ನು ನಾವು ಗಮನಿಸಿದೆವು. ಪಾವಗಡ ಉಪಖಜಾನೆ ಅಧಿಕಾರಿಗಳು ನೀಡಿದ್ದ ನಾಲ್ಕು ಚೆಕ್ಕುಗಳ ಮೂಲಕ ಕಛೇರಿಯ ಪ್ರಥಮ ದರ್ಜೆ ಗುಮಾಸ್ತರು 30 ಮಾರ್ಚ್ 2017 ಹಾಗೂ 31 ಮಾರ್ಚ್ 2017ರಂದು ಮೋಸದಿಂದ ಹಣ ತೆಗೆದಿರುವುದು ಮತ್ತಷ್ಟು ಪರಿಶೀಲನೆಯಿಂದ ತಿಳಿದುಬಂದಿತು. ಪಾವಗಡದ ಮೈಸೂರು ಬ್ಯಾಂಕಿನ (ಯೋಜನೆಯ ಮಧ್ಯವರ್ತಿ ಖಾತೆ) ಮ್ಯಾನೇಜರ್ ಅವರ ಪರವಾಗಿ ಖಜಾನೆಯು ನೀಡಿದ್ದ ಚೆಕ್ಕುಗಳನ್ನು ತಾವೇ ಸಹಿ ಮಾಡಿದ ಮೋಸದ ವೇತನ ಬಿಲ್ಲುಗಳನ್ನು ಸಲ್ಲಿಸುವ ಮೂಲಕ ಅದೇ ಬ್ಯಾಂಕಿನಲ್ಲಿರುವ ತಮ್ಮ ವೈಯಕ್ತಿಕ ಖಾತೆಗೆ ಜಮೆ ಮಾಡುವುದು ಪ್ರಥಮ ದರ್ಜೆ ಸಹಾಯಕರ ಕಾರ್ಯವಿಧಾನವಾಗಿತ್ತು. ಈ ಸಂಬಂಧವಾಗಿ ನಾವು ಕೆಳಕಂಡಂತೆ ಗಮನಿಸಿದೆವು:

- ತಾಲ್ಲೂಕು ಆರೋಗ್ಯಾಧಿಕಾರಿಗಳು ಹಾಗೂ ಗೆಜೆಟೆಡ್ ಸಹಾಯಕರು ಅನುಮೋದಿಸಿದ ಫಲಾನುಭವಿಗಳ ಮೂಲ ಅರ್ಜಿಗಳನ್ನು ಖಜಾನೆಗೆ ಸಲ್ಲಿಸಿದ ಡಿಸಿ ಬಿಲ್ಲಿನ ಜೊತೆಯಲ್ಲಿ ಲಗತ್ತಿಸಿರಲಿಲ್ಲ, ಏಕೆಂದರೆ ಅವುಗಳು ಪಾವಗಡದ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿಯಲ್ಲಿ ಲಭ್ಯವಿದ್ದವು (ಅಕ್ಟೋಬರ್ 2018).
- ಕೆಟಿಸಿಯ ಅನುಚ್ಛೇದ 68ಕ್ಕೆ ವಿರುದ್ಧವಾಗಿ ಡಿಡಿಓ ಆಗಿರದಿದ್ದ ಪ್ರಥಮ ದರ್ಜೆ ಸಹಾಯಕರು ಖಜಾನೆಗೆ ಡಿಸಿ ಬಿಲ್ಲನ್ನು ಸಲ್ಲಿಸಿದ್ದರು.
- ತಾವು ಸಹಿ ಮಾಡಿದ ಡಿಸಿ ಬಿಲ್ಲುಗಳಿಗೆ ಪ್ರತಿಯಾಗಿ ಖಜಾನೆಯ ಪಾವತಿಗಳನ್ನಾಗಲೀ ಅಥವಾ ಖಜಾನೆಯು ನೀಡಿದ ಚೆಕ್ಕುಗಳನ್ನು ಮಧ್ಯವರ್ತಿ ಬ್ಯಾಂಕ್ ಖಾತೆಗೆ ಡಿಡಿಓ ಹೆಸರಿನಲ್ಲಿ ಸಲ್ಲಿಸಿರುವುದನ್ನಾಗಲೀ ಡಿಡಿಓರವರು ಮೇಲ್ವಿಚಾರಣೆಯನ್ನೂ ಮಾಡಲಿಲ್ಲ.
- ಆದರೆ, ಖಜಾನೆಯಿಂದ ಪಾವತಿಯ ಸ್ವೀಕೃತಿಯನ್ನು ಖಚಿತಪಡಿಸಿಕೊಳ್ಳದೇ ಫಲಾನುಭವಿಗಳಿಗೆ ಹಣಕಾಸು ನೆರವನ್ನು ನೀಡಲು ಫಲಾನುಭವಿಗಳ ಹೆಸರಿನಲ್ಲಿ ವೈಯಕ್ತಿಕ ಚೆಕ್ಕುಗಳನ್ನು ಡಿಡಿಓರವರು ಸಹಿ ಮಾಡಿದ್ದರು. ಡಿಡಿಓರವರು ಸಹಿ ಮಾಡಿದ್ದ ಫಲಾನುಭವಿಗಳಿಗೆ ನೀಡಿರದಿದ್ದ 169 ಚೆಕ್ಕುಗಳು ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿಯಲ್ಲಿ ಲಭ್ಯವಿರುವುದನ್ನು (ಅಕ್ಟೋಬರ್ 2018) ನಾವು ಗಮನಿಸಿದೆವು. ಜೊತೆಗೆ, ಕೆಎಫ್‌ಸಿಯ ಅನುಚ್ಛೇದ 67ಕ್ಕೆ ವಿರುದ್ಧವಾಗಿ ಚೆಕ್ ಪುಸ್ತಕವು ಡಿಡಿಓರವರ ಅಧೀನದಲ್ಲಿರಲಿಲ್ಲ ಮತ್ತು ಚೆಕ್ಕ ಪುಸ್ತಕಗಳ ಯಾವುದೇ ದಾಸ್ತಾನು ವಹಿಯನ್ನೂ ಸಹ ನಿರ್ವಹಿಸಿರಲಿಲ್ಲ.
- ಡಿಡಿಓರವರು ಲೆಕ್ಕಪತ್ರಗಳ ಮರುಹೊಂದಾಣಿಕೆಯನ್ನೂ ನಡೆಸಿರಲಿಲ್ಲ.

- ನಿರ್ದೇಶನಾಲಯವು ಯೋಜನೆಯ ವೆಚ್ಚವನ್ನು ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಆಂತರಿಕವಾಗಿ ಲೆಕ್ಕಪರಿಶೋಧನೆಯ ಮಾಡಿಸಲು ಕ್ರಮ ಕೈಗೊಂಡಿರಲಿಲ್ಲ. ಅನುಸರಿಸಬೇಕಾದ ವಿಧಾನಕ್ಕೆ ಪ್ರತಿಯಾಗಿ ಪಾವಗಡದ ಉಪಖಜಾನೆ ಅಧಿಕಾರಿಗಳು ಡಿಡಿಓ ಹೆಸರಿನಲ್ಲಿ ಚೆಕ್‌ಗಳನ್ನು ನೀಡದೇ ಬ್ಯಾಂಕ್ ಮ್ಯಾನೇಜರ್‌ರವರ ಪರವಾಗಿ ಚೆಕ್ಕುಗಳನ್ನು ನೀಡಿದ್ದರು.

ಹೀಗೆ, ಆಂತರಿಕ ನಿಯಂತ್ರಣ ವ್ಯವಸ್ಥೆಯಲ್ಲಿನ ನಿರ್ದೇಶನಾಲಯದ ವಿಫಲತೆ ಹಾಗೂ ಬಿಲ್ಲುಗಳ ತಯಾರಿಕೆ ಹಾಗೂ ಮೇಲ್ವಿಚಾರಣೆಗಾಗಿ ಕೆಎಫ್‌ಸಿಯಲ್ಲಿ ತಿಳಿಸಿರುವ ಕಾರ್ಯವಿಧಾನವನ್ನು ಅನುಸರಿಸುವಲ್ಲಿ ಡಿಡಿಓರವರ ವಿಫಲತೆಯು ಪ್ರಸೂತಿ ಆರೈಕೆ ಯೋಜನೆಗೆ ಮೀಸಲಿದ್ದ ₹2.81 ಲಕ್ಷ ಸರ್ಕಾರಿ ಹಣದ ದುರುಪಯೋಗದಲ್ಲಿ ಪರಿಣಮಿಸಿತು ಹಾಗೂ ಫಲಾನುಭವಿಗಳಿಗೆ ಯೋಜನೆಯ ಲಾಭವನ್ನು ವಂಚಿಸಿದಂತಾಯಿತು.

ಲೆಕ್ಕಪರಿಶೋಧನಾ ಅವಲೋಕನದ ಆಧಾರದ ಮೇಲೆ ಪ್ರಥಮ ದರ್ಜೆ ಗುಮಾಸ್ತರನ್ನು ಅಮಾನತ್ತಿನಲ್ಲಿಡಲಾಗಿದೆ (ಸೆಪ್ಟಬಂರ್ 2018) ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ಉತ್ತರಿಸಿದರು (ಅಕ್ಟೋಬರ್ 2018). ಪ್ರಥಮ ದರ್ಜೆ ಗುಮಾಸ್ತರು ₹2.81 ಲಕ್ಷವನ್ನು ಹಿಂತಿರುಗಿಸಿದ್ದಾರೆಂದೂ (ಜನವರಿ 2018 ಹಾಗೂ ಸೆಪ್ಟಂಬರ್ 2018) ಸಹ ತಿಳಿಸಲಾಯಿತು. ಮುಂದುವರೆದು, ಡಿಡಿಓ ಮೇಲ್ವಿಚಾರಣೆಯ ತನ್ನ ಕರ್ತವ್ಯದಲ್ಲಿ ವಿಫಲರಾಗಿರುವುದರಿಂದ ಅವರ ವಿರುದ್ಧ ಕ್ರಮ ಜರುಗಿಸುವಂತೆ ಶಿಫಾರಸು ಮಾಡಲಾಗಿದೆ. ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಕರ್ತವ್ಯಲೋಪಕ್ಕಾಗಿ ದೋಷಾರೋಪ ಪಟ್ಟಿ ಜಾರಿ ಮಾಡಲಾಗಿದೆ ಎಂದು ಸರ್ಕಾರವು ತನ್ನ ಉತ್ತರದಲ್ಲಿ ತಿಳಿಸಿತು (ಫೆಬ್ರವರಿ 2019).

## ಪದವಿಪೂರ್ವ ಶಿಕ್ಷಣ ಇಲಾಖೆ

### 3.4 ಸರ್ಕಾರೇತರ ಖಾತೆಯಿಂದ ₹ಆರು ಲಕ್ಷ ಸಂದೇಹಾಸ್ಪದ ದುರುಪಯೋಗ

**ಸೆಳೆದ ಮೊತ್ತಕ್ಕಾಗಿ ಲೆಕ್ಕವನ್ನು ಸಲ್ಲಿಸುವಲ್ಲಿನ ಪದವಿಪೂರ್ವ ಇಲಾಖೆ, ಬಳ್ಳಾರಿಯ ಉಪನಿರ್ದೇಶಕರ ವಿಫಲತೆ ಮತ್ತು ಕರ್ನಾಟಕ ಲೆಕ್ಕಸಂಹಿತೆಯ ನಿಬಂಧನೆಗಳ ಅನ್ವಯ ನಗದು ಪುಸ್ತಕವನ್ನು ನಿರ್ವಹಿಸದಿರುವುದು ₹ಆರು ಲಕ್ಷ ಸಂದೇಹಾಸ್ಪದ ದುರುಪಯೋಗದಲ್ಲಿ ಪರಿಣಮಿಸಿತು.**

ಕರ್ನಾಟಕ ಲೆಕ್ಕಸಂಹಿತೆಯ (ಕೆಎಫ್‌ಸಿ) ಅನುಚ್ಛೇದಗಳು ಕೆಳಗಿನಂತೆ ನಿಗದಿಪಡಿಸುತ್ತವೆ:

| ಅನುಚ್ಛೇದ ಸಂಖ್ಯೆ | ನಿಬಂಧನೆಗಳು |
|---|---|
| 3 | ಪ್ರತಿಯೊಬ್ಬ ಸರ್ಕಾರೀ ನೌಕರನೂ ತನಗೆ ಸಂಬಂಧಪಟ್ಟ ಎಲ್ಲ ಸರ್ಕಾರೀ ಹಣಕಾಸಿನ ವಹಿವಾಟುಗಳಿಗೆ ಸೂಕ್ತವಾದ ಲೆಕ್ಕಗಳನ್ನು ನಿರ್ವಹಿಸಿರಬೇಕು. ಸರ್ಕಾರ, ಮಹಾಲೇಖಪಾಲರು ಅಥವಾ ಸಕ್ಷಮ ಇಲಾಖಾ ಪ್ರಾಧಿಕಾರಗಳು ನಿಗದಿಪಡಿಸಿರುವಂತೆ ಹಣಕಾಸಿನ ವಹಿವಾಟುಗಳಿಗೆ ಸಂಬಂಧಪಟ್ಟಂತೆ ಎಲ್ಲ ಲೆಕ್ಕಗಳನ್ನೂ ನಿಖರವಾಗಿ ಮತ್ತು ಪ್ರಾಮಾಣಿಕವಾಗಿ ಸಲ್ಲಿಸಬೇಕು ಎಂದೂ ಸಹ ಅದು ನಿಗದಿಪಡಿಸುತ್ತದೆ. |
| 49 | ಅಂತಹ ವೆಚ್ಚಕ್ಕೆ ಹಣವನ್ನು ಪಡೆದಿರುವ ಹಣ ತೆಗೆಯುವ ಅಧಿಕಾರಿಯು, ಲೆಕ್ಕಪರಿಶೋಧನಾ ಕಛೇರಿಗೆ ತೃಪ್ತಿಯಾಗುವ ಹಾಗೆ ಲೆಕ್ಕವನ್ನು ಒದಗಿಸುವವರೆಗೂ ಅಂತಹ ಹಣಕ್ಕೆ ಜವಾಬ್ದಾರರಾಗಿರುತ್ತಾರೆ |
| 329 | ವಹಿವಾಟಿನ ನಂತರ ನಗದು ಪುಸ್ತಕದಲ್ಲಿ ಎಲ್ಲ ಹಣಕಾಸಿನ ವಹಿವಾಟನ್ನೂ ನಮೂದಿಸಬೇಕು ಮತ್ತು ಅದನ್ನು ಪರಿಶೀಲಿಸಿರುವ ಸಂಕೇತವಾಗಿ ಕಛೇರಿಯ ಮುಖ್ಯಸ್ಥರು ದೃಢೀಕರಿಸಿರಬೇಕು. ಅಲ್ಲದೆ, ನಗದು ಪುಸ್ತಕವನ್ನು ನಿಯಮಿತ ಅಂತರಗಳಲ್ಲಿ ಮುಕ್ತಾಯಗೊಳಿಸಿರಬೇಕು ಹಾಗೂ ಪೂರ್ಣವಾಗಿ ಪರಿಶೀಲಿಸಿರಬೇಕು. ಪ್ರತಿ ತಿಂಗಳ ಅಂತ್ಯಕ್ಕೆ ಕಛೇರಿಯ ಮುಖ್ಯಸ್ಥರು ನಗದು ಪುಸ್ತಕದಲ್ಲಿನ ನಗದು ಶಿಲ್ಕನ್ನು ಪರಿಶೀಲಿಸಿ ಅದಕ್ಕಾಗಿ ದಿನಾಂಕ ಮತ್ತು ಸಹಿಯಿರುವ ಪ್ರಮಾಣಪತ್ರವನ್ನು ದಾಖಲಿಸಬೇಕು. |

ಪದವಿಪೂರ್ವ ಶಿಕ್ಷಣ ಇಲಾಖೆಯು (ಇಲಾಖೆ) 2017–18ರಲ್ಲಿ ಪ್ರಥಮ ಪದವಿಪೂರ್ವ (ಪಿಯು) ಅಭ್ಯಾಸಕ್ಕಾಗಿ ಅರ್ಥಶಾಸ್ತ್ರ, ವಾಣಿಜ್ಯ ಮತ್ತು ವ್ಯವಹಾರ ಅಧ್ಯಯನದ ಶಾಖೆಗಳಿಗೆ ಎನ್‌ಸಿಇಆರ್‌ಟಿ ಪಠ್ಯಕ್ರಮವನ್ನು ಅಳವಡಿಸಿಕೊಂಡಿತು. ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಕಾಲೇಜುಗಳ ಉಪನ್ಯಾಸಕರುಗಳನ್ನು ಈ ಪರಿವಿಡಿಗಳೊಂದಿಗೆ ಪರಿಚಯಿಸಲು ಮೊದಲನೆಯ ಕ್ರಮವಾಗಿ ಇಲಾಖೆಯು ಅರ್ಥಶಾಸ್ತ್ರದಲ್ಲಿ 12 ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತು. ಈ ನಿಟ್ಟಿನಲ್ಲಿ ಹೊರಡಿಸಿದ (ಮೇ 2017) ಭಿನವತ್ತಳೆಯ ಅನ್ವಯ ಬಳ್ಳಾರಿಯ ಪದವಿಪೂರ್ವ ಇಲಾಖೆಯ ಉಪ ನಿರ್ದೇಶಕರು ಬಳ್ಳಾರಿಯ ನಂದಿ ಪದವಿಪೂರ್ವ ಕಾಲೇಜಿನಲ್ಲಿ 18 ಮೇ 2017ರಿಂದ 29 ಮೇ 2017ರವರೆಗೆ ತರಬೇತಿ ಕಾರ್ಯಕ್ರಮವೊಂದನ್ನು ಆಯೋಜಿಸಬೇಕಿತ್ತು. ತರಬೇತಿ ಕಾರ್ಯಕ್ರಮಕ್ಕೆ ವೆಚ್ಚ ಮಾಡಿದ ₹5.86 ಲಕ್ಷವನ್ನು ಮೊದಲಿಗೆ ಪದವಿಪೂರ್ವ ಇಲಾಖೆಯ ಉಪನಿರ್ದೇಶಕರು ನಿರ್ವಹಿಸಿದ್ದ ಉಳಿತಾಯ ಬ್ಯಾಂಕ್ ಖಾತೆಯಿಂದ ಭರಿಸಲಾಯಿತು ಮತ್ತು ಸರ್ಕಾರದಿಂದ ಹಣದ ಸ್ವೀಕೃತಿಯಾದ ನಂತರ ಅದನ್ನು ಪುನರ್ಭರ್ತಿ ಮಾಡಲಾಯಿತು (ನವೆಂಬರ್ 2017).

ಡಿಸೆಂಬರ್ 2017ರಲ್ಲಿ ಬಳ್ಳಾರಿಯ ಪದವಿಪೂರ್ವ ಇಲಾಖೆಯ ಉಪನಿರ್ದೇಶಕರ ದಾಖಲೆಗಳ ಮತ್ತು ನಗದು ಪುಸ್ತಕದ ಪರಿಶೀಲನೆಯಲ್ಲಿ ನಾವು ಈ ಕೆಳಕಂಡಂತೆ ಗಮನಿಸಿದೆವು:

- ತರಬೇತಿ ಕಾರ್ಯಕ್ರಮಕ್ಕಾಗಿ ಭರಿಸಿದ ₹5.86 ಲಕ್ಷಗಳಿಗೆ ಜೊತೆಯಾಗಿ ಅದೇ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಅಂದಿನ ಉಪನಿರ್ದೇಶಕರು ಸೆಲ್ಫ್‌ಚೆಕ್‌ನಲ್ಲಿ ₹ಆರು ಲಕ್ಷವನ್ನು ತೆಗೆದಿದ್ದರು (ಮೇ 2017). ಆದರೆ ಲೆಕ್ಕಪರಿಶೋಧನೆಗೆ ಒದಗಿಸಿದ ದಾಖಲೆಗಳಲ್ಲಿ ಆ ವೆಚ್ಚಕ್ಕೆ ಬೆಂಬಲಿತವಾಗಿ ಯಾವುದೇ ವೋಚರ್ ಅಥವಾ ಬಿಲ್ಲುಗಳು ಲಭ್ಯವಿರಲಿಲ್ಲ. ಜೊತೆಗೆ ಹಾಲಿ ಉಪನಿರ್ದೇಶಕರು ಆ ವೆಚ್ಚಕ್ಕೆ ಬೆಂಬಲಿತವಾಗಿ ಯಾವುದೇ ವೋಚರ್‌ಗಳು ಇಲ್ಲವೆಂದು ಖಚಿತ ಪಡಿಸಿದ್ದರು (ಜೂನ್ 2018). ಈ ವಹಿವಾಟನ್ನು ನಗದುಪುಸ್ತಕದ ಸಂದಾಯದ ಭಾಗದಲ್ಲಿ ಯಾವುದೇ ನಗದೀಕರಣವಿಲ್ಲದೇ ಪಾವತಿ ಎಂದು ತೋರಿಸಲಾಗಿತ್ತು. ಹೀಗೆ, ತೆಗೆದಿರುವ ಹಣಕ್ಕೆ ಯಾವುದೇ ಲೆಕ್ಕವನ್ನು ನೀಡದೆ ಹಾಗೂ ನಗದು ಪುಸ್ತಕದಲ್ಲಿ ಬ್ಯಾಂಕ್‌ನಿಂದ ತೆಗೆದು ಮೊತ್ತವನ್ನು ಸಂದಾಯವೆಂದು ಬಿಂಬಿಸದೇ ಹಿಂದಿನ ಉಪನಿರ್ದೇಶಕರು ಕೆಎಫ್‌ಸಿಯ ಅನುಚ್ಛೇದಗಳನ್ನು ಉಲ್ಲಂಘಿಸಿದ್ದರು.
- ಪ್ರಥಮ ಪಿಯುನ ಸ್ವೀಕರಿಸಿದ ಎಲ್ಲಾ ಪರೀಕ್ಷಾ ಶುಲ್ಕಗಳನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ತೆರೆದಿರುವ ಉಳಿತಾಯ ಖಾತೆಗೆ ಜಮೆ ಮಾಡಬೇಕೆಂದು ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಸ್ವೀಕರಿಸಿದ ಸರ್ಕಾರೀ ಮತ್ತು ಸರ್ಕಾರೇತರ ಶುಲ್ಕಗಳ ವರ್ಗೀಕರಣ, ಜಮೆ ಮತ್ತು ಬಳಕೆಗೆ ಇಲಾಖೆಯು ಹೊರಡಿಸಿದ ಮಾರ್ಗದರ್ಶಿ ಸೂತ್ರಗಳು ಸೂಚಿಸಿದ್ದವು. ಆದರೆ, ಪದವಿ ಪೂರ್ವ ಇಲಾಖೆಯ ಬಳ್ಳಾರಿಯ ಉಪನಿರ್ದೇಶಕರು ಬಳ್ಳಾರಿಯ ಗಾಂಧೀನಗರದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಲ್ಲಿ ಪದವಿಪೂರ್ವ ಶಿಕ್ಷಣ ಪರೀಕ್ಷಾ ಉಪನಿರ್ದೇಶಕರ ಹೆಸರಿನಲ್ಲಿ ಉಳಿತಾಯ ಖಾತೆಯೊಂದನ್ನು ತೆರೆದಿದ್ದರು. ಆ ಖಾತೆಯನ್ನು ಯಾವ ಅಧಿಕಾರದ ಆಧಾರದ ಮೇರೆಗೆ ಕಾರ್ಯಾಚರಣೆ ಮಾಡುತ್ತಿದ್ದರು ಎಂಬುದು ಲೆಕ್ಕಪರಿಶೋಧನೆಗೆ ಒದಗಿಸಿದ ದಾಖಲೆಗಳಿಂದ ತಿಳಿಯಲಾಗಲಿಲ್ಲ.
- ಕಾಲೇಜುಗಳ ಸಂಚಿತ ನಿಧಿಯಿಂದ 2016–17ರ ವರ್ಷದ ತರಬೇತಿ ಕಾರ್ಯಕ್ರಮಗಳ ವೆಚ್ಚವನ್ನು ಭರಿಸಲು ಪದವಿಪೂರ್ವ ಇಲಾಖೆಯ ಉಪನಿರ್ದೇಶಕರುಗಳಿಗೆ ಅಧಿಕಾರ ನೀಡಿ ಇಲಾಖೆಯು ಸುತ್ತೋಲೆಯೊಂದನ್ನು ಹೊರಡಿಸಿತ್ತು (ನವೆಂಬರ್ 2016) ಮತ್ತು ನಂತರ ಅದನ್ನು ಸರ್ಕಾರವು ಮರುಭರ್ತಿ ಮಾಡುತ್ತಿತ್ತು. ಆದರೆ 2017–18ರಲ್ಲಿ ಅಂತಹ ಯಾವುದೇ ಸೂಚನೆಗಳನ್ನು ಹೊರಡಿಸಿರಲಿಲ್ಲ. ಹೀಗೆ ಇಲಾಖೆಯ ಪೂರ್ವಾನುಮತಿಯನ್ನು ಪಡೆಯದೇ ಹಣವನ್ನು ತೆಗೆದಿರುವ ಉಪನಿರ್ದೇಶಕರ ಕ್ರಮವು ಕಾನೂನುಬಾಹಿರವಾಗಿತ್ತು.

ಲೆಕ್ಕಪರಿಶೋಧನೆಯ ದೃಷ್ಟಾಂತದ ಮೇರೆಗೆ ಅಧಿಕಾರದಲ್ಲಿರುವ ಬಳ್ಳಾರಿಯ ಪದವಿಪೂರ್ವ ಉಪನಿರ್ದೇಶಕರು ಕ್ರಮ ಕೈಗೊಂಡಿದ್ದಾರೆ. ಹಿಂದಿನ ಉಪನಿರ್ದೇಶಕರು ಪದವಿಪೂರ್ವ ಬ್ಯಾಂಕ್ ಖಾತೆಗೆ ₹ಆರು ಲಕ್ಷಗಳನ್ನು ಜಮೆ ಮಾಡಿದ್ದಾರೆ (ಜುಲೈ 2018) ಮತ್ತು ಸೆಪ್ಟಂಬರ್ 2018ರಲ್ಲಿ ಅವರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ನವೆಂಬರ್ 2018). ಆದರೆ, ಅಂತಹ

**ಘಟನೆಗಳು ಪುನರಾವರ್ತನೆಯಾಗುವುದನ್ನು ತಡೆಯಲು ಏನು ಕ್ರಮ ಕೈಗೊಳ್ಳಲಾಗಿದೆ ಹಾಗೂ ಯಾವ ಅಧಿಕಾರದಡಿ ಉಪನಿರ್ದೇಶಕರ ಹೆಸರಿನಲ್ಲಿ ಬ್ಯಾಂಕ್ ಖಾತೆಯನ್ನು ಕಾರ್ಯಾಚರಣೆ ಮಾಡಲಾಗಿದೆ ಎಂಬುದರ ಬಗ್ಗೆ ಉತ್ತರವು ಮೌನವಾಗಿದೆ.**

**ಹೀಗೆ, ತೆಗೆದ ಮೊತ್ತಕ್ಕೆ ಲೆಕ್ಕವನ್ನು ಸಲ್ಲಿಸುವಲ್ಲಿನ ಪದವಿ ಪೂರ್ವ ಇಲಾಖೆಯ ಉಪನಿರ್ದೇಶಕರ ವಿಫಲತೆ ಮತ್ತು ಸಂಹಿತೆಯ ಉಪಬಂಧಗಳ ಅನ್ವಯ ನಗದು ಪುಸ್ತಕವನ್ನು ನಿರ್ವಹಿಸದಿರುವುದು ₹ಆರು ಲಕ್ಷ ಸಂದೇಹಾಸ್ಪದ ದುರುಪಯೋಗದಲ್ಲಿ ಪರಿಣಮಿಸಿತು.**

## ವಸತಿ ಇಲಾಖೆ

### 3.5 ಹಣದ ವಿವೇಚನಾರಹಿತ ನಿರ್ವಹಣೆ

**ಕೆಲವು ನಿಗದಿತ ದಿನಾಂಕಗಳಂದು ಮಾತ್ರವೇ ಹಣವನ್ನು ವರ್ಗಾವಣೆ ಮಾಡಬೇಕೆನ್ನುವ ತನ್ನ ಸೂಚನೆಗಳ ಕಾರಣದಿಂದಾಗಿ ಕರ್ನಾಟಕ ಗೃಹಮಂಡಳಿಯು ತನ್ನ ಹಣದ ಅಗತ್ಯತೆಯನ್ನು ಮೇಲ್ವಿಚಾರಣೆ ಮಾಡಲಾಗಲಿಲ್ಲ. ಇದು ಓವರ್‌ಡ್ರಾಫ್ಟ್ ಮೊತ್ತದ ಮೇಲೆ ₹0.63 ಕೋಟಿ ತಪ್ಪಿಸಬಹುದಾಗಿದ್ದ ಹಣಕಾಸು ಶುಲ್ಕದಲ್ಲಿ ಪರಿಣಮಿಸಿತು.**

ರಾಜ್ಯದಾದ್ಯಂತ ವಸತಿಯನ್ನು ಒದಗಿಸುವ ಉದ್ದೇಶದಿಂದ ಕರ್ನಾಟಕ ಗೃಹಮಂಡಳಿಯನ್ನು (ಕೆಹೆಚ್‌ಬಿ) ಸ್ಥಾಪಿಸಲಾಯಿತು. ಅರ್ಜಿಗಳ ಮಾರಾಟ, ಪ್ರಾರಂಭಿಕ ಠೇವಣಿಗಳು, ಹರಾಜು/ಕಂತುಗಳ ಮೂಲಕ ನಿವೇಶನಗಳು/ಮನೆಗಳು/ಫ್ಲಾಟ್‌ಗಳು ಮುಂತಾದವುಗಳ ಮಾರಾಟದಿಂದ, ವಾಣಿಜ್ಯ ಕಟ್ಟಡಗಳ ಬಾಡಿಗೆಗಳಿಂದ ಕಂತುಗಳು/ಬಾಡಿಗೆಯ ವಿಳಂಬಿತ ಪಾವತಿಗಾಗಿ ದಂಡ ಹಾಕುವುದು, ಮುಂತಾದವುಗಳಿಂದ ಮಂಡಳಿಯು ತನ್ನ ರಾಜಸ್ವವನ್ನು ಉತ್ಪತ್ತಿ ಮಾಡಿಕೊಳ್ಳುತ್ತದೆ. ಇವುಗಳ ಜೊತೆಗೆ, ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಅಥವಾ ನೆರವನ್ನು ಪಡೆಯದಿರುವುದರಿಂದ, ತನ್ನ ವಸತಿ ಯೋಜನೆಗಳಿಗೆ ಸಾಲಗಳು ಮತ್ತು ಕಾರ್ಪೊರೇಶನ್ ಬ್ಯಾಂಕಿನ ತನ್ನ ಓವರ್‌ಡ್ರಾಫ್ಟ್ ಖಾತೆಯ (ಡಿಸೆಂಬರ್ 2013ರಲ್ಲಿ ತೆರೆದ) ಮೇಲೆ ಸಾಲವನ್ನೂ ಸಹ ಕೆಹೆಚ್‌ಬಿಯು ಪಡೆದುಕೊಳ್ಳುತ್ತದೆ. ಮುಖ್ಯ ಓವರ್‌ಡ್ರಾಫ್ಟ್ ಖಾತೆಯ ಹೊರತಾಗಿ ತನ್ನ ಸ್ವೀಕೃತಿಗಳ ಸಂಗ್ರಹಣೆಗಾಗಿ ಕೆಹೆಚ್‌ಬಿಯು ನಾಲ್ಕು ಬ್ಯಾಂಕುಗಳಲ್ಲಿ ಇತರೆ ಏಳು[50] ಖಾತೆಗಳನ್ನು ಕಾರ್ಯಾಚರಣೆ ಮಾಡುತ್ತಿದೆ ಮತ್ತು ಅದು ಮೇಲಿನ ಬ್ಯಾಂಕುಗಳ ಎಲ್ಲ ಶಾಖೆಗಳಿಗೂ ಸಾರ್ವಜನಿಕರಿಂದ ಹಣವನ್ನು ಸ್ವೀಕರಿಸಲು ಅನುಮತಿ ನೀಡಿತ್ತು. 2014–17ರ ಅವಧಿಯಲ್ಲಿ ಓವರ್‌ಡ್ರಾಫ್ಟ್ ಖಾತೆಯ ಮೇಲಿನ ಸಾಲಗಳಿಗೆ ಕಾರ್ಪೊರೇಶನ್ ಬ್ಯಾಂಕ್ ವಿಧಿಸುತ್ತಿದ್ದ ಬಡ್ಡಿಯ ದರವು ಶೇಕಡಾ 10.25ರಿಂದ ಶೇಕಡಾ 9.65ರ ವ್ಯಾಪ್ತಿಯಲ್ಲಿದ್ದಿತು. ಈ ಮಧ್ಯೆ, ಕೆಹೆಚ್‌ಬಿ ನಾಲ್ಕು ಬ್ಯಾಂಕುಗಳಲ್ಲಿ ನಿರ್ವಹಿಸಿರುವ ಇತರೆ ಸಂಗ್ರಹಣಾ ಖಾತೆಗಳಿಗೆ ಉಳಿತಾಯ ಖಾತೆ ಬಡ್ಡಿಯನ್ನು ಸ್ವೀಕರಿಸಿತು.

ಸಾರ್ವಜನಿಕರಿಂದ ಸಂಗ್ರಹಿಸಿದ್ದ ಹಣವನ್ನು ಮೊದಲಿಗೆ ಅವರ ಸಂಬಂಧಿತ ಬ್ಯಾಂಕ್‌ಗಳು ಮುಖ್ಯ ಖಾತೆಗಳಿಗೆ ವರ್ಗಾವಣೆ ಮಾಡಲಾಗುತ್ತಿತ್ತು ಮತ್ತು ನಂತರ ಕೆಹೆಚ್‌ಬಿಯ ಮುಖ್ಯ ಓವರ್‌ಡ್ರಾಫ್ಟ್ ಖಾತೆಗೆ ವರ್ಗಾವಣೆ ಮಾಡಲಾಗುತ್ತಿತ್ತು. ಸಂಗ್ರಹಣಾ ಖಾತೆಗಳಿಂದ ಮುಖ್ಯ ಖಾತೆಗೆ ಹಣವನ್ನು ವರ್ಗಾವಣೆ ಮಾಡುವ ಅಧಿಕಾರವು ಕೆಹೆಚ್‌ಬಿಯ ಆಯುಕ್ತರು ಮತ್ತು ಹಣಕಾಸು ನಿಯಂತ್ರಕರ ಬಳಿ ಇದ್ದಿತು.

**ಕೋಷ್ಟಕ-3.11ರಲ್ಲಿ** ತೋರಿಸಿರುವಂತೆ ಮುಖ್ಯ ಖಾತೆಗೆ ಹಣದ ವರ್ಗಾವಣೆಗಾಗಿ ಕೆಹೆಚ್‌ಬಿ ಕಾಲಕಾಲಕ್ಕೆ ಸೂಚನೆಗಳನ್ನು ನೀಡುತ್ತಿತ್ತು ಎಂಬುದನ್ನು ಕೆಹೆಚ್‌ಬಿಯ ದಾಖಲೆಗಳ ಪರಿಶೀಲನೆಯಲ್ಲಿ (ಜನವರಿ 2018) ನಾವು ಗಮನಿಸಿದೆವು.

[50] ಆಕ್ಸಿಸ್ ಬ್ಯಾಂಕ್ (2), ಇಂಡಸ್‌ಇಂಡ್ ಬ್ಯಾಂಕ್ (1), ಐಸಿಐಸಿಐ ಬ್ಯಾಂಕ್ (1) ಮತ್ತು ಕಾರ್ಪೋರೇಶನ್ ಬ್ಯಾಂಕ್ (3)

**ಕೋಷ್ಟಕ–3.11: ಹಣದ ವರ್ಗಾವಣೆಗಾಗಿ ನೀಡಿದ ಸೂಚನೆಗಳ ವಿವರಗಳು**

| ತಿಂಗಳು ಮತ್ತು ವರ್ಷ | ಸೂಚನೆಗಳು | ವರ್ಗಾವಣೆಯ ಆವರ್ತನ |
|---|---|---|
| ಫೆಬ್ರವರಿ 2014 | ಪ್ರತಿ ತಿಂಗಳ ಮೊದಲನೇ ಕೆಲಸದ ದಿನದಂದು | 30 ದಿನಗಳಿಗೊಂದು ಸಾರಿ |
| ಫೆಬ್ರವರಿ 2015 | ಪ್ರತಿ ತಿಂಗಳ 1 ಮತ್ತು 16ನೇ ತಾರೀಖಿನಂದು | 15 ದಿನಗಳಿಗೊಮ್ಮೆ |
| ಅಕ್ಟೋಬರ್ 2015 | ಎರಡು ದಿನಗಳಿಗೊಂದು ಸಾರಿ | ಪರ್ಯಾಯ ದಿನಕ್ಕೊಮ್ಮೆ |
| ಆಗಸ್ಟ್ 2016 | ಪರ್ಯಾಯ ದಿನಕ್ಕೊಮ್ಮೆ ವರ್ಗಾವಣೆ ಮಾಡಲು ಜ್ಞಾಪನೆ | |

ಆಧಾರ: ಕೆಹೆಚ್‌ಬಿ ಸಲ್ಲಿಸಿದ ಮಾಹಿತಿ

ಹಣದ ವರ್ಗಾವಣೆಗಾಗಿ ಮಂಡಳಿಯು ಸೂಚನೆಗಳನ್ನು ನೀಡಿದ್ದರೂ ಸಹ ಅದು ಬ್ಯಾಂಕುಗಳೊಂದಿಗೆ ಜನವರಿ 2017ರವರೆಗೆ ಯಾವುದೇ ಸೇವಾ ಒಪ್ಪಂದಗಳನ್ನು ಮಾಡಿಕೊಂಡಿರಲಿಲ್ಲ ಹಾಗೂ ಆಗ ಇಂಡಸ್‌ಇಂಡ್ ಬ್ಯಾಂಕ್ ಜೊತೆಗೆ ಮೊದಲನೇ ಬಾರಿ ಒಪ್ಪಂದವನ್ನು ಮಾಡಿಕೊಂಡಿರುವುದನ್ನು ನಾವು ಗಮನಿಸಿದೆವು.

ಹಣದ ವರ್ಗಾವಣೆಗೆ ನೀಡಿದ ಸೂಚನೆಗಳ ಹಾಗೂ ಡಿಸೆಂಬರ್ 2013ರಿಂದ ಸೆಪ್ಟಂಬರ್ 2016ರವರೆಗೆ[51] ಬ್ಯಾಂಕುಗಳೊಂದಿಗೆ ಒಪ್ಪಂದ ಮಾಡಿಕೊಳ್ಳದಿರುವ ಪ್ರಭಾವದ ಬಗ್ಗೆ ಲೆಕ್ಕಪರಿಶೋಧನೆಯು ಅಧ್ಯಯನ ನಡೆಸಿತು. 1,024 ವ್ಯವಹಾರಗಳ ಅಧ್ಯಯನದ ನಂತರ ಲೆಕ್ಕಪರಿಶೋಧನೆಯ ಅವಲೋಕನಗಳು ಕೆಳಕಂಡಂತಿವೆ:

- ಹಣದ ವರ್ಗಾವಣೆಗೆ ಕೆಹೆಚ್‌ಬಿ ಸೂಚನೆಗಳನ್ನು ನೀಡಿದ್ದರೂ ಸಹ ಯಾವುದೇ ಒಪ್ಪಂದದ ಅನುಪಸ್ಥಿತಿಯಲ್ಲಿ ಬ್ಯಾಂಕುಗಳು ಎರಡರಿಂದ 31 ದಿನಗಳಷ್ಟು ವ್ಯಾಪ್ತಿಯ ವಿಳಂಬದ ನಂತರ ಹಣವನ್ನು ವರ್ಗಾವಣೆ ಮಾಡಿದ್ದವು.
- ವರ್ಗಾವಣಾ ಸೂಚನೆಗಳು ಅಗತ್ಯವಿದ್ದ ಕನಿಷ್ಠ ಶಿಲ್ಕಿನ ಮೇಲಿರದೇ ವರ್ಗಾವಣೆಯ ಆವರ್ತನದ ಮೇಲೆ ಆಧಾರಿತವಾಗಿದ್ದವು.
- ಪರೀಕ್ಷಾ–ತನಿಖೆ ನಡೆಸಿದ ಮೂರು[52] ಸಂಗ್ರಹಣಾ ಖಾತೆಗಳ ವಹಿವಾಟುಗಳ ತ:ಖ್ತೆಯ ಅನ್ವಯ ವರ್ಗಾವಣೆಯ ದಿನದಂದು, ಬ್ಯಾಂಕುಗಳು ಸಂಗ್ರಹಣೆ ಮಾಡಿದ ಮೊತ್ತದ ಅಂಶಿಕ ವರ್ಗಾವಣೆಯನ್ನು ಮಾತ್ರ ಮಾಡಿದ್ದವು ಹಾಗೂ ಸಂಗ್ರಹಣಾ ಖಾತೆಯಲ್ಲಿ ಬಹಳಷ್ಟು ಹಣವನ್ನು ಉಳಿಸಿಕೊಂಡಿದ್ದವು.
- ಕೆಹೆಚ್‌ಬಿ ತನ್ನ ಹಣದ ಅಗತ್ಯತೆಯನ್ನು ಮೇಲ್ವಿಚಾರಣೆ ಮಾಡಲಿಲ್ಲ ಮತ್ತು 74 ಸಂದರ್ಭಗಳಲ್ಲಿ ತನ್ನ ಸಂಗ್ರಹಣಾ ಖಾತೆಗಳಲ್ಲಿ ಸಾಕಷ್ಟು ಹಣವಿದ್ದರೂ ಸಹ ಓವರ್‌ಡ್ರಾಫ್ಟ್ ಖಾತೆಗಳಲ್ಲಿ ಸಾಲ ಇರುವುದು ಮುಂದುವರೆದಿತ್ತು.
- ಡಿಸೆಂಬರ್ 2013ರಿಂದ ಸೆಪ್ಟಂಬರ್ 2016ರ ಅವಧಿಯಲ್ಲಿ ಕೆಹೆಚ್‌ಬಿ ತಾನು ಪಡೆದುಕೊಂಡ ಓವರ್‌ಡ್ರಾಫ್ಟ್‌ನ ಮೇಲೆ ₹1.86 ಕೋಟಿ ಬಡ್ಡಿಯನ್ನು ಪಾವತಿಸಿದ್ದರೆ, ಹಲವಾರು ಸಂಗ್ರಹಣಾ ಖಾತೆಗಳಲ್ಲಿ ಅದು ಹೊಂದಿದ್ದ ಸ್ವೀಕೃತಿಗಳ ಮೇಲೆ ₹1.23 ಕೋಟಿ ಬಡ್ಡಿಯನ್ನು ಪಡೆದಿತ್ತು. ಹೀಗೆ, ಕೆಹೆಚ್‌ಬಿ ಓವರ್‌ಡ್ರಾಫ್ಟ್ ಖಾತೆಯ ಮೇಲೆ ₹0.63 ಕೋಟಿ ತಪ್ಪಿಸಬಹುದಾಗಿದ್ದ ಹಣಕಾಸು ಶುಲ್ಕವನ್ನು ಭರಿಸಿತು.

ಯೋಜನೆಯೊಂದರ ವೆಚ್ಚವು ಓವರ್‌ಡ್ರಾಫ್ಟ್ ಖಾತೆಯ ಮೇಲಿನ ಬಡ್ಡಿ ಘಟಕವನ್ನೂ ಸಹ ಒಳಗೊಂಡಿರುತ್ತದೆ ಎಂದು ಕೆಹೆಚ್‌ಬಿ ತಿಳಿಸಿತು (ಜುಲೈ 2018). ಉತ್ತರವನ್ನು ಒಪ್ಪಲಾಗುವುದಿಲ್ಲ, ಏಕೆಂದರೆ ಓವರ್‌ಡ್ರಾಫ್ಟ್ ಖಾತೆಯ ಮೇಲೆ ತಪ್ಪಿಸಬಹುದಾಗಿದ್ದ ಹಣಕಾಸು ಶುಲ್ಕಗಳನ್ನು ಭರಿಸುವುದು ಹಣಕಾಸಿನ ಔಚಿತ್ಯತೆಯ ನಿಯಮಗಳಿಗೆ ವಿರುದ್ಧವಾಗಿರುತ್ತದೆ.

[51] ಪರ್ಯಾಯ ದಿನಗಳಂದು ಹಣವನ್ನು ವರ್ಗಾವಣೆ ಮಾಡುವಂತೆ ಬ್ಯಾಂಕ್‌ಗಳಿಗೆ ಸೂಚನೆ ನೀಡಲಾಗಿತ್ತು ಮತ್ತು ಅದನ್ನು ಪಾಲಿಸಲಾಗಿತ್ತು.

[52] ಐಸಿಐಸಿಐ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್ ಹಾಗೂ ಆಕ್ಸಿಸ್ ಬ್ಯಾಂಕ್.

ಹೀಗೆ, ಹಣದ ಅಗತ್ಯತೆಯ ಸಾಕಷ್ಟಿಲ್ಲದ ಮೇಲ್ವಿಚಾರಣೆ ಮತ್ತು ಬ್ಯಾಂಕ್‌ಗಳೊಂದಿಗೆ ಸೇವಾ ಒಪ್ಪಂದಗಳನ್ನು ಮಾಡಿಕೊಳ್ಳದಿರುವುದು ಓವರ್‌ಡ್ರಾಫ್ಟ್ ಖಾತೆಯ ಮೇಲೆ ₹0.63 ಕೋಟಿ ತಪ್ಪಿಸಬಹುದಾಗಿದ್ದ ಹಣಕಾಸು ಶುಲ್ಕದಲ್ಲಿ ಪರಿಣಮಿಸಿತು.

ಬ್ಯಾಂಕ್‌ಗಳು ಕನಿಷ್ಠ ಸೇವಾಶುಲ್ಕವಾದ ₹100ನ್ನು ವಿಧಿಸಿದ್ದರೆ ಆಗ ಕೆಹೆಚ್‌ಬಿ, ಮೇಲಿನ ಅವಧಿಗೆ ₹94.56 ಲಕ್ಷವನ್ನು ಸೇವಾ ಶುಲ್ಕವಾಗಿ ಭರಿಸಬೇಕಾಗುತ್ತಿತ್ತು ಮತ್ತು ಅದು ತಪ್ಪಿಸಬಹುದಾಗಿದ್ದ ಹಣಕಾಸು ಶುಲ್ಕಕ್ಕಿಂತ ಅಧಿಕವಾಗುತ್ತಿತ್ತು ಎಂದು ಸರ್ಕಾರವು ತಿಳಿಸಿತು (ಸೆಪ್ಟಂಬರ್ 2018). ಉತ್ತರವನ್ನು ಒಪ್ಪಲಾಗುವುದಿಲ್ಲ ಏಕೆಂದರೆ ಕೆಹೆಚ್‌ಬಿ ಮಾಡಿಕೊಂಡ ಒಪ್ಪಂದವು ಯಾವುದೇ ಸೇವಾಶುಲ್ಕವನ್ನು ಒಳಗೊಂಡಿರಲಿಲ್ಲ.

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

### 3.6 ಅನರ್ಹ ಫಲಾನುಭವಿಗಳಿಗೆ ಹಣಕಾಸಿನ ನೆರವನ್ನು ನೀಡಿರುವುದು

**ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಯು 'ಬಿದಾಯಿ' ಯೋಜನೆಯಡಿಯಲ್ಲಿ ಫಲಾನುಭವಿಗಳು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸದೇ ಅನರ್ಹ ಫಲಾನುಭವಿಗಳಿಗೆ ₹50 ಲಕ್ಷ ಹಣಕಾಸಿನ ನೆರವನ್ನು ನೀಡಿತು.**

ಹೆಣ್ಣು ಮಗುವಿನ ಮದುವೆಗೆ ಹಣಕಾಸಿನ ಬೆಂಬಲವನ್ನು ನೀಡುವುದಕ್ಕೆ ಹೆಣ್ಣು ಮಗುವಿನ ಜನನದ ನಂತರ ಆ ಕುಟುಂಬಕ್ಕೆ ಧನಾತ್ಮಕ ಬದಲಾವಣೆಯನ್ನು ತರುವ ಮುಖ್ಯ ಉದ್ದೇಶದಿಂದ ಸರ್ಕಾರವು 'ಬಿದಾಯಿ' ಯೋಜನೆಯನ್ನು ಪ್ರಾರಂಭಿಸಿತು (ನವೆಂಬರ್ 2013). ಅಲ್ಪಸಂಖ್ಯಾತ ಸಮುದಾಯದ ಬಡ ಹೆಂಗಸರಿಗೆ (ವಿಧವೆಯವರು ಮತ್ತು ವಿಚ್ಛೇದನ ಪಡೆದವರನ್ನು ಒಳಗೊಂಡಂತೆ) ಅವರ ಮಗಳ ಮದುವೆ ವೆಚ್ಚವನ್ನು ಭರಿಸಲು ಈ ಯೋಜನೆಯು ₹50,000 ಹಣಕಾಸಿನ ನೆರವನ್ನು ಒದಗಿಸುತ್ತಿತ್ತು.

ಹಣಕಾಸಿನ ನೆರವಿನ ವಿತರಣೆಗಾಗಿ ನಿಗದಿಪಡಿಸಿದ್ದ (ನವೆಂಬರ್ 2013) ಮುಖ್ಯ ಷರತ್ತುಗಳು ಕೆಳಕಂಡವುಗಳನ್ನು ಒಳಗೊಂಡಿದ್ದವು:

- ಮದುವೆಯ ದಿನದಂದು ವಧು ಮತ್ತು ವರರ ಕನಿಷ್ಠ ವಯಸ್ಸು ಅನುಕ್ರಮವಾಗಿ 18 ಮತ್ತು 21 ವರ್ಷಗಳಾಗಿರಬೇಕು.
- ಕುಟುಂಬದ ವಾರ್ಷಿಕ ವರಮಾನವು ₹1.50 ಲಕ್ಷಕ್ಕಿಂತ ಕಡಿಮೆಯಿರಬೇಕು.
- ಜೀವಿತಾವಧಿಯಲ್ಲಿ ಕುಟುಂಬದ ಒಬ್ಬ ಸದಸ್ಯರಿಗೆ ಮಾತ್ರ ಹಣಕಾಸಿನ ನೆರವು ಲಭ್ಯವಿರುತ್ತದೆ.

ರಾಜ್ಯದಾದ್ಯಂತ ಈ ಯೋಜನೆಯನ್ನು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಯು ಅನುಷ್ಠಾನಗೊಳಿಸುತ್ತಿದೆ. 2014–15ರಿಂದ 2016–17ರ ಅವಧಿಯಲ್ಲಿ ಇಲಾಖೆಯು ರಾಜ್ಯದಾದ್ಯಂತ 32,065 ಫಲಾನುಭವಿಗಳಿಗೆ ಹಣಕಾಸಿನ ನೆರವನ್ನು ಒದಗಿಸಲು ₹160.32 ಕೋಟಿ ವೆಚ್ಚವನ್ನು ಭರಿಸಿತ್ತು.

ಪರೀಕ್ಷಾ–ತನಿಖೆ ನಡೆಸಿದ ಎಂಟು[53] ಜಿಲ್ಲೆಗಳಲ್ಲಿ, 4,208 ಫಲಾನುಭವಿಗಳಿಗೆ ₹21.05 ಕೋಟಿ ಹಣಕಾಸಿನ ನೆರವನ್ನು ನೀಡಿರುವ ಎರಡು ಜಿಲ್ಲೆಗಳ [ಬೆಂಗಳೂರು (ನಗರ) ಮತ್ತು ಬಳ್ಳಾರಿ] ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ನಿರ್ದೇಶಕರುಗಳ ದಾಖಲೆಗಳ ಪರಿಶೀಲನೆಯಲ್ಲಿ ನಾವು ಕೆಳಕಂಡಂತೆ ಗಮನಿಸಿದೆವು:

(ಎ) 4,208 ಫಲಾನುಭವಿಗಳಲ್ಲಿ, ಮದುವೆಯ ದಿನದಂದು 59 ವಧುಗಳ ಮತ್ತು 10 ವರಗಳ ವಯಸ್ಸು, ವಯಸ್ಸಿನ ಬೆಂಬಲಕ್ಕಾಗಿ ನೀಡಿರುವ ಆಧಾರ್ ಕಾರ್ಡ್, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ವರ್ಗಾವಣೆ ಪ್ರಮಾಣಪತ್ರ ಮುಂತಾದ ದಾಖಲೆಗಳಲ್ಲಿ ನಮೂದಿಸಿದಂತೆ ಅನುಕ್ರಮವಾಗಿ 18 ಮತ್ತು 21 ವರ್ಷಗಳಿಗಿಂತ ಕಡಿಮೆಯಿದ್ದಿತು. ಯೋಜನೆಯ ಷರತ್ತುಗಳು ಅಪ್ರಾಪ್ತ ವಯಸ್ಕರಿಗೆ ಹಣಕಾಸಿನ ನೆರವನ್ನು ನೀಡುವುದನ್ನು ಹಾಗೂ ಬಾಲ್ಯ ವಿವಾಹ ಕಾಯಿದೆ, 2006, ಅಪ್ರಾಪ್ತ ವಯಸ್ಕರ

[53] ಬಳ್ಳಾರಿ, ಬೆಂಗಳೂರು (ನಗರ), ದಕ್ಷಿಣ ಕನ್ನಡ, ಹಾಸನ, ಹಾವೇರಿ, ಕೊಪ್ಪಳ, ಶಿವಮೊಗ್ಗ ಮತ್ತು ವಿಜಯಪುರ.

ಮದುವೆಯನ್ನು ನಿಷೇದಿಸಿದ್ದರೂ ಸಹ ಇಲಾಖೆಯು ಅಪ್ರಾಪ್ತ ವಯಸ್ಕರಿಗೆ ಯೋಜನೆಯಡಿಯಲ್ಲಿ ನೆರವನ್ನು ನೀಡಿತ್ತು. ಈ 69 ಫಲಾನುಭವಿಗಳಿಗೆ ನೀಡಿದ ಹಣಕಾಸಿನ ನೆರವು ₹34.50 ಲಕ್ಷಗಳಾಗಿದ್ದಿತು.

(ಬಿ) ವಾರ್ಷಿಕ ವರಮಾನ, ಜಾತಿ ಪ್ರಮಾಣ ಪ್ರಮಾಣಪತ್ರ[54] ಮತ್ತು ಹುಟ್ಟಿದ ದಿನಾಂಕಗಳ ಬೆಂಬಲಕ್ಕಾಗಿ ನೀಡಿದ್ದ ದಾಖಲೆಗಳು ನಕಲಿಯಾಗಿದ್ದವು ಎಂದು 31 ಫಲಾನುಭವಿಗಳ ಸಂಬಂಧವಾಗಿ ನಾವು ಗಮನಿಸಿದೆವು. ಸರ್ಕಾರೀ ಜಾಲತಾಣ 'ನಾಡಕಛೇರಿ'ಯಲ್ಲಿ ಲಭ್ಯವಿರುವ ಮಾಹಿತಿಯೊಂದಿಗೆ ಈ ಪ್ರಮಾಣಪತ್ರಗಳನ್ನು ಲೆಕ್ಕಪರಿಶೋಧನೆಯು ತಾಳೆ ನೋಡಿತು ಮತ್ತು ಇಲಾಖೆಗೆ ನೀಡಿರುವ ದಾಖಲೆಯು ಮೂಲ ದಾಖಲೆಗಿಂತ ಭಿನ್ನವಾಗಿರುವುದನ್ನು ಅದು ಸೂಚಿಸುತ್ತಿತ್ತು. ಇಲಾಖೆಯು ಮೂಲ ದಾಖಲೆಗಳನ್ನು ಪರಿಶೀಲಿಸದೇ ಈ 31 ಫಲಾನುಭವಿಗಳಿಗೆ ₹15.50 ಲಕ್ಷ ಹಣಕಾಸಿನ ನೆರವನ್ನು ನೀಡಿರುವುದನ್ನು ಇದು ಸೂಚಿಸುತ್ತಿತ್ತು. ಮೇಲಿನ ಎಲ್ಲ 31 ಪ್ರಕರಣಗಳನ್ನೂ ಸಂಬಂಧಪಟ್ಟ ತಹಸೀಲ್ದಾರ್‌ಗಳಿಗೆ ಉಲ್ಲೇಖಿಸಲಾಯಿತು. 11 ಫಲಾನುಭವಿಗಳು ಸಲ್ಲಿಸಿದ್ದ ಜಾತಿ ಪ್ರಮಾಣಪತ್ರಗಳು ನೈಜವಾಗಿರಲಿಲ್ಲ ಎಂಬ ವಾಸ್ತವಾಂಶವನ್ನು ಮೂರು ತಹಸೀಲ್ದಾರ್‌ಗಳು (ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಯಲಹಂಕ) ಖಚಿತಪಡಿಸಿದರು. ಇತರ ತಹಸೀಲ್ದಾರ್‌ಗಳಿಂದ ಖಚಿತಪಡಿಸುವಿಕೆಯನ್ನು ನಿರೀಕ್ಷಿಸಲಾಗಿದೆ.

ಹೀಗೆ, ಇಲಾಖೆಗಳ ಅಧಿಕಾರಿಗಳು ದಾಖಲೆಗಳನ್ನು ಸೂಕ್ತವಾಗಿ ಪರಿಶೀಲಿಸದೇ ಅರ್ಜಿಗಳನ್ನು ಸಂಸ್ಕರಣೆ ಮಾಡಿರುವುದು ಎರಡು ಜಿಲ್ಲೆಗಳಲ್ಲಿ ಅನರ್ಹ ಫಲಾನುಭವಿಗಳಿಗೆ ₹50 ಲಕ್ಷ ಹಣಕಾಸಿನ ನೆರವನ್ನು ನೀಡುವಲ್ಲಿ ಪರಿಣಮಿಸಿತು. 2013–14ರಿಂದ 2017–18ರ ಅವಧಿಯಲ್ಲಿ ಯೋಜನೆಯಡಿಯಲ್ಲಿ 66,010 ಫಲಾನುಭವಿಗಳಿಗೆ ₹330 ಕೋಟಿಗಳ ಹಣಕಾಸಿನ ನೆರವನ್ನು ನೀಡಿರುವುದರಿಂದ ರಾಜ್ಯ ಸರ್ಕಾರವು ಎಲ್ಲ ಜಿಲ್ಲೆಗಳಲ್ಲಿಯೂ ಈ ವಿಷಯವನ್ನು ಪರಿಶೀಲಿಸಬೇಕಿದೆ.

ಕೆಲಸದ ಒತ್ತಡದಿಂದಾಗಿ ಕಾರ್ಯವಿಧಾನದಲ್ಲಿ ಅಕ್ರಮಗಳಾಗಿವೆ ಎಂಬುದಾಗಿ ಸರ್ಕಾರವು ತಿಳಿಸಿತು (ಡಿಸೆಂಬರ್ 2018). ದಾಖಲೆಗಳನ್ನು ಪರಿಶೀಲಿಸಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಲು ಎಲ್ಲಾ ಜಿಲ್ಲಾ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದೂ ಸಹ ತಿಳಿಸಲಾಯಿತು.

## 3.7 ಉದ್ಯೋಗಿಗಳಿಗೆ ಶಾಸನಬದ್ಧ ವಂತಿಗೆಗಳನ್ನು ಪಾವತಿ ಮಾಡದಿರುವುದು

**ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಇತರೆ ನಿಬಂಧನೆಗಳ ಅಧಿನಿಯಮ, 1952 ಮತ್ತು ಉದ್ಯೋಗಿಗಳ ರಾಜ್ಯ ವಿಮಾ ಅಧಿನಿಯಮ, 1948ರ ನಿಬಂಧನೆಗಳನ್ನು ಅನುಪಾಲಿಸಲು ವಿಫಲವಾಯಿತು. ತತ್ಪರಿಣಾಮವಾಗಿ ಮಂಡಳಿಯು ಶಾಸನಬದ್ಧ ಪಾವತಿಗಳನ್ನು ಮಾಡಲಿಲ್ಲ ಮತ್ತು ಅದು ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಉದ್ಯೋಗಿಗಳ ರಾಜ್ಯ ವಿಮೆಯ ಕಡೆಗೆ ₹1.09 ಕೋಟಿಗಳಷ್ಟಾಗಿತ್ತು.**

ಉದ್ಯೋಗದಾತನು ತನ್ನಿಂದ ಅಥವಾ ಗುತ್ತಿಗೆದಾರನಿಂದ ಉದ್ಯೋಗಕ್ಕೆ ಸೇರಿರುವ ಉದ್ಯೋಗಿಗೆ ಪಾವತಿ ಮಾಡಬೇಕಿರುವ ವಂತಿಗೆಗಳನ್ನು ಉದ್ಯೋಗದಾತನು ಗುತ್ತಿಗೆದಾರನಿಂದ ಯಾವುದೇ ಗುತ್ತಿಗೆಯಡಿಯಲ್ಲಿ ಅವರಿಗೆ ಪಾವತಿ ಮಾಡಬೇಕಿರುವ ಯಾವುದೇ ಬಿಲ್ಲುಗಳಿಂದ ಕಳೆಯುವ ಮೂಲಕ ಅಥವಾ ಗುತ್ತಿಗೆದಾರನು ಪಾವತಿ ಮಾಡಬೇಕಿರುವ ಸಾಲವೆಂದು ವಸೂಲು ಮಾಡಬೇಕೆಂದು ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಇತರೆ ನಿಬಂಧನೆಗಳು (ಇಪಿಎಫ್) ಅಧಿನಿಯಮ, 1952ರ ಪರಿಚ್ಛೇದ 8ಎ ನಿಗದಿಪಡಿಸುತ್ತದೆ. ಉದ್ಯೋಗಿಗೆ ಉದ್ಯೋಗದಾತನು ಪ್ರಸ್ತುತ ನೀಡಬೇಕಿರುವ ವಂತಿಗೆಯು ಮೂಲ ವೇತನ ಮತ್ತು ತುಟ್ಟಿಭತ್ಯೆಯ ಶೇಕಡಾ 12ರಷ್ಟಾಗಿರುತ್ತದೆ.

[54] ಕಂದಾಯ ಇಲಾಖೆಯ ತಹಸೀಲ್ದಾರ್‌ರವರು ನೀಡಿರುವ ವಾರ್ಷಿಕ ವರಮಾನ ಮತ್ತು ಜಾತಿ ಪ್ರಮಾಣಪತ್ರ.

ಅಲ್ಲದೆ, ಪ್ರಮುಖ ಉದ್ಯೋಗದಾತನು ತನ್ನಿಂದ ನೇರವಾಗಿ ಉದ್ಯೋಗ ಪಡೆದಿರುವ ಅಥವಾ ಮಧ್ಯವರ್ತಿಯಿಂದ ಉದ್ಯೋಗ ಪಡೆದಿರುವ ಪ್ರತಿಯೊಬ್ಬ ಉದ್ಯೋಗಿಯ ಸಂಬಂಧವಾಗಿ ಉದ್ಯೋಗದಾತರ ವಂತಿಗೆ ಮತ್ತು ಉದ್ಯೋಗಿಯ ವಂತಿಗೆ ಎರಡನ್ನೂ ನಿಗದಿಪಡಿಸಿದ ದರಗಳಲ್ಲಿ ಪಾವತಿ ಮಾಡಬೇಕೆಂದು ಉದ್ಯೋಗಿಗಳ ರಾಜ್ಯ ವಿಮಾ ಅಧಿನಿಯಮ, 1948ರ ಪರಿಚ್ಛೇದ 40(1) ನಿಗದಿಪಡಿಸುತ್ತದೆ. ಪ್ರಸ್ತುತ, ಉದ್ಯೋಗಿಗಳಿಗೆ ಪಾವತಿ ಮಾಡುವ ವೇತನದ ಶೇಕಡಾ 4.75ರಷ್ಟನ್ನು ಉದ್ಯೋಗದಾತನು ವಿಮೆಯ ಕಂತನ್ನಾಗಿ ಪಾವತಿ ಮಾಡಬೇಕು.

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು (ಮಂಡಳಿ) ಕರ್ನಾಟಕ ಸರ್ಕಾರದ ಉದ್ಯಮವಾದ ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮವನ್ನು (ಕಿಯೋನಿಕ್ಸ್) ಗುತ್ತಿಗೆ ಆಧಾರದ ಮೇಲೆ ಆಡಳಿತಾತ್ಮಕ ಸಿಬ್ಬಂದಿಯನ್ನು[55] ಒದಗಿಸಲು ಕೋರಿತು (ಆಗಸ್ಟ್ 2010). ಅಗತ್ಯವಾಗಿದ್ದ ಮಾನವ ಸಂಪನ್ಮೂಲವನ್ನು ಒದಗಿಸಲು ಕಿಯೋನಿಕ್ಸ್ ವಿಫಲವಾಗಿದ್ದರಿಂದ ಮಂಡಳಿಯು ಅಗತ್ಯವಿರುವ ಮಾನವ ಸಂಪನ್ಮೂಲವನ್ನು ಸರಬರಾಜು ಮಾಡಲು ಮೆ.ಎಸ್ ಕಾನ್ಸೆಪ್ಟ್ಸ್ ಕಂಪನಿಯನ್ನು ಸಂಪರ್ಕಿಸಿತು (ಸೆಪ್ಟಂಬರ್ 2010). ಆ ಏಜೆನ್ಸಿಯು ಪ್ರತಿಯೊಬ್ಬ ಉದ್ಯೋಗಿಗೆ ₹950ರಂತೆ ಸೇವಾ ಶುಲ್ಕಗಳನ್ನು ವಿಧಿಸುತ್ತೇನೆಂದು ತಿಳಿಸಿತು ಮತ್ತು ಮಂಡಳಿಯು ಅದಕ್ಕೆ ಒಪ್ಪಿಕೊಂಡಿತು (ಅಕ್ಟೋಬರ್ 2010). ಆದರೆ, 2010-11ರಿಂದ 2017-18ರ ಅವಧಿಯಲ್ಲಿ ಮೆ.ಎಸ್ ಕಾನ್ಸೆಪ್ಟ್ಸ್ ನಿಗದಿಪಡಿಸಿದ್ದ ₹950ರ ಬದಲಿಗೆ ಕೇವಲ ₹450ನ್ನು ವಿಧಿಸಿರುವುದನ್ನು ದಾಖಲೆಗಳಿಂದ ನಾವು ಗಮನಿಸಿದೆವು.

ಇಪಿಎಫ್ ಅಧಿನಿಯಮ, 1952 ಮತ್ತು ಇಎಸ್ಐ ಅಧಿನಿಯಮ, 1945ರ ನಿಬಂಧನೆಗಳಿಗೆ ವಿರುದ್ಧವಾಗಿ ಗುತ್ತಿಗೆ ಆಧಾರದ ಮೇಲೆ ಮಂಡಳಿಯು ನೇಮಕಾತಿ ಮಾಡಿಕೊಂಡಿರುವ ಸಿಬ್ಬಂದಿಗೆ ಭವಿಷ್ಯನಿಧಿ ವಂತಿಗೆ, ಇಎಸ್ಐ ವಂತಿಗೆ ಮುಂತಾದ ಶಾಸನಬದ್ಧ ಪಾವತಿಗಳನ್ನು (ಉದ್ಯೋಗದಾತರ ವಂತಿಗೆ) ಪಾವತಿಸಿಲ್ಲದಿರುವುದನ್ನು ನಾವು ಗಮನಿಸಿದೆವು. ಪಿಎಫ್ ಮತ್ತು ಇಎಸ್ಐ ಕಡೆಗೆ 2010-11ರಿಂದ 2017-18ರವರೆಗೆ ಮಂಡಳಿಯು ಪಾವತಿ ಮಾಡಬೇಕಿದ್ದ ಶಾಸನಬದ್ಧ ಪಾವತಿಗಳ ಮೊತ್ತವು, **ಕೋಷ್ಟಕ-3.12**ರಲ್ಲಿ ತೋರಿಸಿದಂತೆ, ಕ್ರಮವಾಗಿ ₹78.38 ಹಾಗೂ ₹31.02 ಲಕ್ಷಗಳಾಗಿದ್ದವು.

**ಕೋಷ್ಟಕ-3.12: ಶಾಸನಬದ್ಧ ವಂತಿಗೆಗಳನ್ನು ಪಾವತಿ ಮಾಡದಿರುವ ವಿವರಗಳು**

| ವರ್ಷ | ಉದ್ಯೋಗಿಗಳ ಒಟ್ಟು ಸಂಖ್ಯೆ | ಶೇಕಡಾ 12ರಂತೆ ಪಿಎಫ್ ವಂತಿಗೆ (₹ ಲಕ್ಷಗಳಲ್ಲಿ) | ಶೇಕಡಾ 4.75ರಂತೆ ಇಎಸ್ಐ ವಂತಿಗೆ (₹ ಲಕ್ಷಗಳಲ್ಲಿ) |
|---|---|---|---|
| 2010-11 ರಿಂದ 2012-13 | 36 | 8.52 | 3.37 |
| 2013-14 | 158 | 18.07 | 7.15 |
| 2014-15 ಮತ್ತು 2015-16 | 86 | 24.41 | 9.66 |
| 2016-17 ಮತ್ತು 2017-18 | 83 | 27.38 | 10.84 |
| **ಒಟ್ಟು** | | **78.38** | **31.02** |

ಆಧಾರ: ಮಂಡಳಿಯು ಸಲ್ಲಿಸಿದ ಮಾಹಿತಿ

ಹೀಗೆ, ಇಪಿಎಫ್ ಅಧಿನಿಯಮ, 1952 ಮತ್ತು ಇಎಸ್ಐ ಅಧಿನಿಯಮ, 1945ರ ನಿಬಂಧನೆಗಳನ್ನು ಮಂಡಳಿಯು ಅನುಪಾಲಿಸದಿರುವುದು ಗುತ್ತಿಗೆಯ ಆಧಾರದ ಮೇಲೆ ನೇಮಕಗೊಂಡ ಉದ್ಯೋಗಿಗಳಿಗೆ ₹1.09 ಕೋಟಿಗಳಷ್ಟು ಇಪಿಎಫ್ ಮತ್ತು ಇಎಸ್ಐ ವಂತಿಗೆಯನ್ನು ಪಾವತಿ ಮಾಡದಿರುವಲ್ಲಿ ಪರಿಣಮಿಸಿತು. ಅಲ್ಲದೆ, ಗುತ್ತಿಗೆ ಆಧಾರದ ಮೇಲೆ ನೇಮಕಾತಿಗೊಂಡ ಉದ್ಯೋಗಿಗಳು ಉಚಿತ ವೈದ್ಯಕೀಯ ಸೌಲಭ್ಯದಿಂದ ಹಾಗೂ ನಿವೃತ್ತ ಸೌಲಭ್ಯಗಳಿಂದ ವಂಚಿತರಾದರು. ಜೊತೆಗೆ ಅಧಿನಿಯಮದ ನಿಬಂಧನೆಗಳನ್ನು ಅನುಪಾಲಿಸದಿರುವುದು ದಂಡ ಮತ್ತು ಬಡ್ಡಿ ವಿಧಿಸುವುದು ಹಾಗೂ ಕಾರಾಗೃಹ ವಾಸವನ್ನು ಸಹ ಆಕರ್ಷಿಸುತ್ತವೆ.

[55] 14 ಪ್ರಥಮ ದರ್ಜೆ ಸಹಾಯಕರು ಮತ್ತು ಏಳು ಡಿ ದರ್ಜೆ ಉದ್ಯೋಗಿಗಳು

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ವಕ್ಫ್ ಅಧಿನಿಯಮ, 1995ರ ಅಡಿಯಲ್ಲಿ ಸ್ಥಾಪಿತವಾಗಿರುವ ಒಂದು ಶಾಸನಬದ್ಧ ಸಂಸ್ಥೆಯಾಗಿದ್ದು ಸ್ವತಂತ್ರವಾದ ಹಣ ಸೆಳೆಯುವ ಮತ್ತು ವಿತರಣೆ ಮಾಡುವ ಅಧಿಕಾರವನ್ನು ಹೊಂದಿರುವ ಸ್ವಾಯತ್ತ ಸಂಸ್ಥೆಯಾಗಿದೆ ಎಂದು ಸರ್ಕಾರವು ಉತ್ತರಿಸಿತು (ಡಿಸೆಂಬರ್ 2018). ಆದುದರಿಂದ ಮತ್ತಷ್ಟು ಸ್ಪಷ್ಟತೆಗೆ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಸಂಪರ್ಕಿಸುವಂತೆ ತಿಳಿಸಿತು. ಮೆ.ಎಸ್ ಕಾನ್ಸೆಪ್ಟ್ಸ್ ಅವರ ಮೂಲಕ ಸೇವೆಗಳನ್ನು ಬಾಡಿಗೆ ಪಡೆಯುವುದನ್ನು ಸ್ಥಗಿತಗೊಳಿಸಲಾಗಿದೆ (ಮೇ 2018) ಮತ್ತು ಅದನ್ನು ಹೊಸ ಏಜೆನ್ಸಿಗೆ ವಹಿಸಲಾಗಿದೆ ಮತ್ತು ಹೊಸ ಏಜೆನ್ಸಿಯು ಪಿಎಫ್ ಮತ್ತು ಇಎಸ್ಐ ವಂತಿಗೆಗಳನ್ನು ಕಡಿತಗೊಳಿಸುತ್ತಿದ್ದಾರೆ ಎಂದು ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ತಮ್ಮ ಪತ್ರದಲ್ಲಿ (ನವೆಂಬರ್ 2018) ತಿಳಿಸಿದರು. ಆದರೆ, ಗುತ್ತಿಗೆ ಆಧಾರದ ಮೇಲೆ ನೇಮಕಾತಿಯಾಗಿದ್ದ ಉದ್ಯೋಗಿಗಳಿಗೆ ₹1.09 ಕೋಟಿಯಷ್ಟು ಇಪಿಎಫ್ ಮತ್ತು ಇಎಸ್ಐ ವಂತಿಗೆಗಳ ಪಾವತಿಯಾಗದಿರುವುದರಲ್ಲಿ ಪರಿಣಮಿಸಿದ ಇಪಿಎಫ್ ಅಧಿನಿಯಮ, 1952 ಮತ್ತು ಇಎಸ್ಐ ಅಧಿನಿಯಮ, 1945ರ ನಿಬಂಧನೆಗಳನ್ನು ಅನುಪಾಲಿಸದಿರುವ ಬಗ್ಗೆ ಉತ್ತರವು ಮೌನವಾಗಿದೆ.

## ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

## 3.8 ಪಠ್ಯಪುಸ್ತಕಗಳ ಮುದ್ರಣದಲ್ಲಿ ತಪ್ಪಿಸಬಹುದಾಗಿದ್ದ ವೆಚ್ಚ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕರ್ನಾಟಕ ಪಠ್ಯಪುಸ್ತಕ ಸೊಸೈಟಿಯು ಸರ್ಕಾರದ ಆದೇಶ ಮತ್ತು ಸೂಚನೆಗಳನ್ನು ಅನುಪಾಲಿಸದಿರುವುದು ₹1.13 ಕೋಟಿ ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿತು.**

ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ (ಏಪ್ರಿಲ್ 2006) ಕರ್ನಾಟಕ ಪಠ್ಯಪುಸ್ತಕ ಸೊಸೈಟಿಯು (ಸೊಸೈಟಿ) ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ತಯಾರಿಕೆ, ಮುದ್ರಣ, ಪ್ರಕಟಣೆ ಮತ್ತು ವಿತರಣೆಗೆ ಜವಾಬ್ದಾರಿಯುತವಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ (ಬಿಇಓ) ಸ್ವೀಕರಿಸಿದ ಬೇಡಿಕೆಗಳ ಮೂಲಕ ಮುಂದಿನ ಶೈಕ್ಷಣಿಕ ವರ್ಷಕ್ಕೆ ಮುದ್ರಿಸಬೇಕಿರುವ ಪಠ್ಯಪುಸ್ತಕಗಳ[56] ಅಗತ್ಯತೆಯನ್ನು ಸೊಸೈಟಿಯು ನಿರ್ಧರಿಸುತ್ತದೆ (ಶೈಕ್ಷಣಿಕ ವರ್ಷದ ಮೊದಲನೇ ತ್ರೈಮಾಸಿಕ). ಜೊತೆಗೆ ಬೇಡಿಕೆಗಳ ಕ್ರೋಢೀಕರಣದಿಂದ ನಿರ್ಧರಿಸಿದ ಒಟ್ಟು ಅಗತ್ಯತೆಯ ಮೇಲೆ ಶೇಕಡಾ ಐದರಷ್ಟು ಪುಸ್ತಕಗಳನ್ನು ಹೆಚ್ಚುವರಿಯಾಗಿ ಮುದ್ರಿಸಲಾಗುತ್ತದೆ. ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಮೊದಲು ಅಂತಿಮಗೊಳಿಸಿದ ಬೇಡಿಕೆಗಳ ಆಧಾರದ ಮೇಲೆ ಪಠ್ಯಪುಸ್ತಕಗಳ ವಿತರಣೆಯನ್ನು ಅನುಕೂಲಗೊಳಿಸಲು ಪಠ್ಯಪುಸ್ತಕಗಳ ಮುದ್ರಣ ಮತ್ತು ಸರಬರಾಜಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗುತ್ತದೆ.

ಜುಲೈ 2017ರಲ್ಲಿ 2016–17ರ ಶೈಕ್ಷಣಿಕ ವರ್ಷಕ್ಕೆ ಪಠ್ಯಪುಸ್ತಕಗಳ ಮುದ್ರಣ ಮತ್ತು ವಿತರಣೆಗೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆಯಲ್ಲಿ ನಾವು ಕೆಳಕಂಡಂತೆ ಗಮನಿಸಿದೆವು:

### *(1) ಅಗತ್ಯತೆಗಿಂತ ಹೆಚ್ಚಾಗಿ ಪಠ್ಯಪುಸ್ತಕಗಳ ಮುದ್ರಣ*

2017–18ರ ಶೈಕ್ಷಣಿಕ ವರ್ಷದಿಂದ ಪಠ್ಯಪುಸ್ತಕಗಳ ಪರಿಷ್ಕರಣೆಯನ್ನು ಅನುಷ್ಠಾನಗೊಳಿಸಲಾಗುವುದು ಎಂದು ಕರ್ನಾಟಕ ಸರ್ಕಾರವು ಆದೇಶ ಹೊರಡಿಸಿತ್ತು (ಸೆಪ್ಟಂಬರ್ 2015). ಪಠ್ಯಪುಸ್ತಕಗಳನ್ನು ಮುದ್ರಿಸಲು ಬೇಡಿಕೆಗಳನ್ನು ಆಹ್ವಾನಿಸುವಾಗ (ಜುಲೈ 2015) ಸೊಸೈಟಿಯು ಬೇಡಿಕೆಗಳನ್ನು ಅಂತಿಮಗೊಳಿಸುವಾಗ ಬಿಇಓಗಳು/ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳು (ಡಿಡಿಪಿಐ) ಗಮನದಲ್ಲಿಟ್ಟುಕೊಳ್ಳಬೇಕಾದ ಸೂಚನೆಗಳು ಮತ್ತು ನಿರ್ದೇಶನಗಳನ್ನು ಜಾರಿ ಮಾಡಿತ್ತು. 2017–18ನೇ ಶೈಕ್ಷಣಿಕ ವರ್ಷದಿಂದ ಪಠ್ಯಪುಸ್ತಕಗಳ ಪರಿಷ್ಕರಣೆಯಾಗುವುದರಿಂದ ಉಚಿತ ವಿತರಣೆ ಮತ್ತು ಮಾರಾಟ

[56] ಉಚಿತವಾಗಿ ವಿತರಣೆ ಮಾಡುವ ಹಾಗೂ ಮಾರಾಟ ಮಾಡುವ ಪಠ್ಯಪುಸ್ತಕಗಳನ್ನು ಒಳಗೊಂಡಿದೆ.

ಎರಡೂ ವರ್ಗಗಳಲ್ಲಿಯೂ ಹೆಚ್ಚುಕಡಿಮೆ ಶೂನ್ಯ ಶಿಲ್ಕು ಉಳಿಯುವಂತೆ ಬೇಡಿಕೆಗಳನ್ನು ತಯಾರಿಸಬೇಕು ಎಂದು ಸೂಚನೆಗಳಲ್ಲಿ ತಿಳಿಸಲಾಗಿತ್ತು. ವಿತರಣೆಯ ನಂತರ, ಅಧಿಕ ಪುಸ್ತಕಗಳೇನಾದರೂ ಉಳಿದಿದ್ದರೆ ಸಂಬಂಧಪಟ್ಟ ಬಿಇಒಗಳು/ಡಿಡಿಪಿಐಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದೂ ಸಹ ಸೂಚನೆಯಲ್ಲಿ ಎಚ್ಚರಿಕೆ ನೀಡಲಾಗಿತ್ತು. ಮೇಲಿನ ಸೂಚನೆಗಳನ್ನು ಒತ್ತಿ ಹೇಳುವಾಗ (ಸೆಪ್ಟಂಬರ್ 2015) 2016-17ರ ಶೈಕ್ಷಣಿಕ ವರ್ಷದಲ್ಲಿ ಹೆಚ್ಚುವರಿಗೆ ಯಾವುದೇ ಅವಕಾಶ ನೀಡದಂತೆ ಸೊಸೈಟಿಯು ತಿಳಿಸಿತ್ತು.

2016-17ರಲ್ಲಿ ಮುದ್ರಿತವಾದ 360 ಶೀರ್ಷಿಕೆಗಳ 4.57 ಕೋಟಿ ಪುಸ್ತಕಗಳಲ್ಲಿ, ಮಾರ್ಚ್ 2017ರಲ್ಲಿದ್ದಂತೆ, ಹೆಚ್ಚುವರಿಯಾಗಿ ಮುದ್ರಿಸಬಹುದಾದ ಶೇಕಡಾ ಐದಕ್ಕಿಂತಲೂ ಅಧಿಕವಾಗಿ 178[57] ಶೀರ್ಷಿಕೆಗಳ 3.25 ಲಕ್ಷ ಪುಸ್ತಕಗಳು ದಾಸ್ತಾನಿನಲ್ಲಿ ಉಳಿದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಪುಸ್ತಕಗಳ ಮುದ್ರಣದ ವೆಚ್ಚವು ₹0.76 ಕೋಟಿಗಳಾಗುತ್ತದೆ. ಇದು, ಡಿಡಿಪಿಐಗಳು/ಬಿಇಒಗಳಿಂದ ಬೇಡಿಕೆಗಳನ್ನು ತಯಾರಿಸುವಲ್ಲಿ ಲೋಪದೋಷಗಳಿದ್ದವು ಎಂಬುದನ್ನು ಸೂಚಿಸುತ್ತದೆ. 20 ಶೈಕ್ಷಣಿಕ ಜಿಲ್ಲೆಗಳಲ್ಲಿ ಮಾರಾಟ ಮಾಡಬೇಕಾದ ಪುಸ್ತಕಗಳ ಸಂಬಂಧವಾಗಿ ದಾಸ್ತಾನಿನಲ್ಲಿ ಉಳಿದಿದ್ದ ಪಠ್ಯಪುಸ್ತಕಗಳು, **ನಕ್ಷೆ-3.4** ರಲ್ಲಿರುವಂತೆ, ಪಠ್ಯಪುಸ್ತಕಗಳಿಗೆ ಸಲ್ಲಿಸಿದ್ದ ಬೇಡಿಕೆಗಳಿಗಿಂತ ಶೇಕಡಾ 5ರಿಂದ 55ರಷ್ಟು ವ್ಯಾಪ್ತಿಯಲ್ಲಿದ್ದವು, ಅಂದರೆ ಶೇಕಡಾ ಐದಕ್ಕಿಂತ ಹೆಚ್ಚಾಗಿದ್ದವು ಎಂಬುದು ಸ್ವೀಕರಿಸಿದ ಬೇಡಿಕೆಗಳ ಮತ್ತಷ್ಟು ಪರಿಶೀಲನೆಯು ತಿಳಿಯಪಡಿಸಿತು. ಆದರೆ, ಲೆಕ್ಕಪರಿಶೋಧನೆಗೆ ನೀಡಿದ ದಾಖಲೆಗಳಲ್ಲಿ ವಿತರಣೆಯ ಬಳಿಕ ದಾಸ್ತಾನಿನಲ್ಲಿ ಉಳಿದಿರುವ ಪುಸ್ತಕಗಳಿಗೆ ಸಂಬಂಧಪಟ್ಟ ಬಿಇಒಗಳು/ಡಿಡಿಪಿಐಗಳ ವಿರುದ್ಧ ತೆಗೆದುಕೊಂಡ ಕ್ರಮದ ಬಗ್ಗೆ ಯಾವುದೇ ಮಾಹಿತಿಯಿರಲಿಲ್ಲ.

**ನಕ್ಷೆ-3.4: ದಾಸ್ತಾನಿನಲ್ಲಿ ಉಳಿದಿರುವ ಪಠ್ಯಪುಸ್ತಕಗಳಿಗೆ ಪ್ರತಿಯಾಗಿ ಜಿಲ್ಲಾವಾರು ಬೇಡಿಕೆಗಳು**




2017-18ರ ಶೈಕ್ಷಣಿಕ ವರ್ಷದಿಂದ ಪಠ್ಯಪುಸ್ತಕಗಳು ಪರಿಷ್ಕರಣೆಯಾದ ಕಾರಣದಿಂದ ವಿತರಣೆಯಾಗದ ಪುಸ್ತಕಗಳನ್ನು ಬಳಕೆ ಮಾಡದಿದ್ದರಿಂದ ಆ ಪುಸ್ತಕಗಳ ಮೇಲೆ ವೆಚ್ಚ ಮಾಡಿದ ₹0.76 ಕೋಟಿಯು ನಿಷ್ಫಲವಾಯಿತು.

[57] 2017-18ರಲ್ಲಿ ಪರಿಷ್ಕರಣೆಯಾಗದ 10ನೇ ತರಗತಿಯ ಕೋರ್ ವಿಷಯಗಳ ಪಠ್ಯಪುಸ್ತಕಗಳನ್ನು ಹೊರತುಪಡಿಸಿ.

ಗೌರವಾನ್ವಿತ ಉಚ್ಚ ನ್ಯಾಯಾಲಯದ ಸೂಚನೆಗಳ ಮೇರೆಗೆ ಬೇಡಿಕೆಗಳ ಶೇಕಡಾ ಐದಕ್ಕಿಂತ ಹೆಚ್ಚಿಗೆ ಪಠ್ಯಪುಸ್ತಕಗಳನ್ನು ಮುದ್ರಿಸಲಾಯಿತು ಎಂದು ಸರ್ಕಾರವು ತಿಳಿಸಿತು (ಡಿಸೆಂಬರ್ 2018). ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಜೊತೆಗೆ ಪಠ್ಯಪುಸ್ತಕಗಳ ಬೇಡಿಕೆಯು ವಿವಿಧ ಮೂಲಗಳಿಂದ ಬರುತ್ತಾದ್ದರಿಂದ ಪುಸ್ತಕಗಳ ಅಗತ್ಯತೆಯನ್ನು ನಿಖರವಾಗಿ ಲೆಕ್ಕಹಾಕಲು ಸಾಧ್ಯವಾಗುವುದಿಲ್ಲ ಎಂದೂ ಸಹ ತಿಳಿಸಿತು. ಮುದ್ರಿಸಿದ ಅಧಿಕ ಪುಸ್ತಕಗಳು ಕೇವಲ ಶೇಕಡಾ ನಾಲ್ಕರಷ್ಟಿದೆ ಮತ್ತು ಅವುಗಳನ್ನು ಗ್ರಂಥಾಲಯಗಳಲ್ಲಿ ಬಳಸಲು ಶಾಲೆಗಳಿಗೆ ವಿತರಿಸಲಾಗುವುದು ಎಂದೂ ಸಹ ಸರ್ಕಾರವು ತಿಳಿಸಿತು.



ಗೋದಾಮಿನಲ್ಲಿ ಉಳಿದಿರುವ ಹೆಚ್ಚುವರಿ ಪುಸ್ತಕಗಳು

ಅಗತ್ಯತೆಯನ್ನು ನಿಖರವಾಗಿ ಲೆಕ್ಕಹಾಕಲು ಸಾಧ್ಯವಾಗುವುದಿಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ, ಆದರೂ ಹೆಚ್ಚುವರಿಯನ್ನು, 19 ಶೈಕ್ಷಣಿಕ ಜಿಲ್ಲೆಗಳಲ್ಲಿರುವಂತೆ ಕನಿಷ್ಠವಾಗಿಸಬೇಕು. ಅಲ್ಲದೆ, ಚಿತ್ರದಲ್ಲಿ ತೋರಿಸಿರುವಂತೆ ವಿತರಣೆಯಾದ ಒಂದು ವರ್ಷದ ಬಳಿಕವೂ ಪುಸ್ತಕಗಳು ಸೂಕ್ತವಾದ ವ್ಯವಸ್ಥೆಯಿಲ್ಲದೇ/ ಬೇರ್ಪಡಿಸದೇ ಗೋದಾಮು ಗಳಲ್ಲಿ ಉಳಿದಿದ್ದವು.

### *(2) ಅಧಿಕ ಜಿಎಸ್‌ಎಮ್[58] ಕಾಗದವನ್ನು ಬಳಸಿ ಪಠ್ಯಪುಸ್ತಕಗಳ ಮುದ್ರಣ*

2015–16ನೇ ವರ್ಷದ ಶೈಕ್ಷಣಿಕ ವರ್ಷಕ್ಕೆ 70 ಜಿಎಸ್‌ಎಮ್ ಕಾಗದದಲ್ಲಿ ಪಠ್ಯಪುಸ್ತಕಗಳ ಮುದ್ರಣವನ್ನು ಅನುಮೋದಿಸುವಾಗ (ಜನವರಿ 2015) 2016–17ರ ಶೈಕ್ಷಣಿಕ ವರ್ಷದಿಂದ ಪಠ್ಯಪುಸ್ತಕಗಳನ್ನು 60 ಜಿಎಸ್‌ಎಮ್ ಕಾಗದವನ್ನು ಉಪಯೋಗಿಸಿ ಮುದ್ರಿಸಬೇಕೆಂದು ಸರ್ಕಾರವು ಸೂಚನೆ ನೀಡಿತ್ತು. 2017–18ರಲ್ಲಿ ಸೊಸೈಟಿಯು ನೀಡಿದ ತಾಂತ್ರಿಕ ವಿಶಿಷ್ಟತೆ ವರದಿಯಲ್ಲಿ ಕಾಗದದ ಎರಡು ಗುಣಮಟ್ಟದಲ್ಲಿನ ವೆಚ್ಚ ವ್ಯತ್ಯಾಸವಾದ ಮೆಟ್ರಿಕ್‌ಟನ್‌ಗೆ ₹65,714ನ್ನು ಪರಿಗಣಿಸಿ 60 ಜಿಎಸ್‌ಎಮ್ ಕಾಗದದಲ್ಲಿ ಪಠ್ಯಪುಸ್ತಕಗಳನ್ನು ಮುದ್ರಿಸುವುದನ್ನು ಮುಂದುವರೆಸಬೇಕೆಂದು ಪ್ರಸ್ತಾವಿಸಲಾಗಿತ್ತು. ಆದರೆ, ಸರ್ಕಾರಿ ಮುದ್ರಣಾಲಯ ದೊಂದಿಗೆ 2016–17ರ ಶೈಕ್ಷಣಿಕ ವರ್ಷಕ್ಕೆ ಪಠ್ಯಪುಸ್ತಕಗಳ ಮುದ್ರಣದ ಆದೇಶವನ್ನು ನೀಡಬೇಕಾದರೆ (ಜೂನ್ 2015) ಸೊಸೈಟಿಯು ಒಂಬತ್ತು ಶೀರ್ಷಿಕೆಗಳ ಪಠ್ಯಪುಸ್ತಕಗಳ ಸಂಬಂಧವಾಗಿ 60 ಜಿಎಸ್‌ಎಮ್ ಕಾಗದದ ಬದಲು 70 ಜಿಎಸ್‌ಎಮ್ ಕಾಗದವನ್ನು ಬಳಸಬೇಕೆಂದು ನಿರ್ದಿಷ್ಟಪಡಿಸಿತ್ತು ಎಂಬುದನ್ನು ನಾವು ಗಮನಿಸಿದೆವು. ನಂತರ, ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಬೇಕಾದ ಪುಸ್ತಕಗಳ ಶೀರ್ಷಿಕೆಗಳನ್ನು ಆರಕ್ಕೆ ಪರಿಷ್ಕರಿಸಲಾಯಿತು (ಜುಲೈ 2015). ಇದು 56.27 ಎಮ್‌ಟಿ ಹೆಚ್ಚುವರಿ ಕಾಗದದಲ್ಲಿ ಮತ್ತು ₹0.37 ಕೋಟಿ ಅಧಿಕ ವೆಚ್ಚದಲ್ಲಿ ಪರಿಣಮಿಸಿತು.

60 ಜಿಎಸ್‌ಎಮ್ ಕಾಗದವನ್ನು ಬಳಸಿ ಮುದ್ರಿಸಬೇಕು ಎನ್ನುವ ಆಡಳಿತ ಮಂಡಳಿಯ ನಿರ್ಣಯಕ್ಕಿಂತ (ನವೆಂಬರ್ 2016) ಮೊದಲೇ ಸರ್ಕಾರಿ ಮುದ್ರಣಾಲಯಕ್ಕೆ ಆರು ಶೀರ್ಷಿಕೆಗಳ ಪಠ್ಯಪುಸ್ತಕಗಳನ್ನು ಮುದ್ರಿಸುವ ಆದೇಶವನ್ನು ನೀಡಲಾಗಿತ್ತು ಎಂದು ಸರ್ಕಾರವು ತಿಳಿಸಿತು (ಡಿಸೆಂಬರ್ 2018). ಶೈಕ್ಷಣಿಕ ವರ್ಷ 2016–17ರಿಂದ 60 ಜಿಎಸ್‌ಎಮ್ ಕಾಗದವನ್ನು ಬಳಸಿ ಪಠ್ಯಪುಸ್ತಕಗಳನ್ನು ಮುದ್ರಿಸಬೇಕು ಎಂದು ಜನವರಿ 2015ರಲ್ಲಿಯೇ ಸರ್ಕಾರವು ತಾನೇ ಸೂಚಿಸಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

ಹೀಗೆ, ಡಿಡಿಪಿಐ/ಬಿಇಓಗಳಿಂದ ಬೇಡಿಕೆಗಳನ್ನು ತಯಾರಿಸುವಲ್ಲಿನ ಲೋಪಗಳು ಹಾಗೂ ಶೈಕ್ಷಣಿಕ ವರ್ಷದಲ್ಲಿ ಪಠ್ಯಪುಸ್ತಕಗಳನ್ನು ಮುದ್ರಿಸಲು ಸರ್ಕಾರವು ನಿಗದಿಪಡಿಸಿದ ನೀತಿಗಳನ್ನು ಸೊಸೈಟಿಯು ಅನುಸರಿಸದಿದ್ದುದು ₹1.13 ಕೋಟಿ ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿತು.

[58] ಜಿಎಸ್‌ಎಮ್ ಎಂದರೆ ಕಾಗದದ ಸಾಂದ್ರತೆ ಚದರ ಮೀಟರ್/ಗ್ರಾಂ

## ಕಂದಾಯ ಇಲಾಖೆ

### 3.9 ತಪ್ಪಿಸಬಹುದಾಗಿದ್ದ ಪರಿಹಾರ ಪಾವತಿ

**ಭೂಸ್ವಾಧೀನ ಅಂತಿಮ ಅಧಿಸೂಚನೆಯಲ್ಲಿ ಭೂಮಿಯನ್ನು ತಪ್ಪಾಗಿ ವರ್ಗೀಕರಿಸಿದ್ದು ಹಾಗೂ ಸರ್ಕಾರವು ಸಮಯಕ್ಕೆ ಸರಿಯಾಗಿ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳದಿದ್ದುದು ಭೂಮಾಲೀಕರುಗಳಿಗೆ ₹10.53 ಕೋಟಿ ತಪ್ಪಿಸಬಹುದಾಗಿದ್ದ ಪರಿಹಾರ ಪಾವತಿಯಲ್ಲಿ ಪರಿಣಮಿಸಿತು.**

ಭೂಸ್ವಾಧೀನ ಅಧಿನಿಯಮ, 1894ರ ಅಡಿಯಲ್ಲಿನ ಭೂಸ್ವಾಧೀನಕ್ಕಾಗಿನ ನಿಬಂಧನೆಗಳು ಕೆಳಕಂಡಂತಿವೆ:

| ಪರಿಚ್ಛೇದ | ನಿಬಂಧನೆ |
|---|---|
| 4(1) | ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಯಾವುದೇ ಸ್ಥಳದಲ್ಲಿ ಅಗತ್ಯವಿರುವ ಭೂಮಿಯ ಸಂಬಂಧವಾಗಿ ಜಿಲ್ಲಾಧಿಕಾರಿಗಳು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಬೇಕು. ಅಧಿಸೂಚನೆಯು ಯಾವ ಉದ್ದೇಶಕ್ಕಾಗಿ ಭೂಮಿಯ ಅಗತ್ಯತೆಯಿದೆ ಎಂಬುದನ್ನು ತಿಳಿಸಿ ಅದರ ಸರ್ವೆನಂಬರ್ ಮತ್ತು ಅಂದಾಜು ಪ್ರದೇಶವನ್ನು ಒಳಗೊಂಡಿರಬೇಕು |
| 6(1) | ಅಗತ್ಯವಿರುವ ಭೂಮಿಯನ್ನು ಜಿಲ್ಲಾಧಿಕಾರಿಗಳು ಗುರುತು ಮಾಡಿ ಅಳತೆ ಮಾಡಿದ ನಂತರ ಸೂಕ್ತ ಸರ್ಕಾರವು ಭೂಮಿಯ ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಾಗಿದೆ ಎಂದು ಘೋಷಿಸಬೇಕು. |
| 11 | ಭೂಮಿಯಲ್ಲಿ ಆಸಕ್ತಿಯಿರುವ ಎಲ್ಲ ವ್ಯಕ್ತಿಗಳಿಂದ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ತೀರ್ಮಾನ ಮಾಡಿ ಜಿಲ್ಲಾಧಿಕಾರಿಗಳು ಅಗತ್ಯವಿರುವ ಭೂಮಿಗೆ ಪರಿಹಾರದ ಐತೀರ್ಪನ್ನು ಹೊರಡಿಸಬೇಕು. |
| 13–ಎ | ಐತೀರ್ಪನ್ನು ಹೊರಡಿಸಿದ ಆರು ತಿಂಗಳುಗಳೊಳಗೆ ಅಥವಾ ಪರಿಚ್ಛೇದ 18ರಡಿಯಲ್ಲಿ ನ್ಯಾಯಾಲಯಕ್ಕೆ ಉಲ್ಲೇಖಿಸುವ ಮೊದಲು ಐತೀರ್ಪಿನಲ್ಲಿರುವ ಯಾವುದೇ ಸಂಖ್ಯೆಯಲ್ಲಿನ ತಪ್ಪುಗಳನ್ನು ಅಥವಾ ತನ್ನದೇ ತಪ್ಪಿನಿಂದ ಅಥವಾ ಯಾವುದೇ ವ್ಯಕ್ತಿಯಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಆದ ತಪ್ಪುಗಳನ್ನು ಆದೇಶವೊಂದರ ಮೂಲಕ ಸರಿಪಡಿಸಬೇಕು. |

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಇವರು ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ಬೆಳ್ಳಂದೂರು ಅಮಾನಿಖಾನೆ ಗ್ರಾಮದಲ್ಲಿರುವ 56 ಎಕರೆ 22 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ (ಸೆಪ್ಟಂಬರ್ 2008) ಮತ್ತು ಅಂತಿಮ ಅಧಿಸೂಚನೆ (ಏಪ್ರಿಲ್ 2010) ಹೊರಡಿಸಿದರು. ಕಾವೇರಿ ನೀರು ಸರಬರಾಜು ಯೋಜನೆ, ಹಂತ-4, ಘಟ್ಟ-2ರ ಅಡಿಯಲ್ಲಿ 120 ಎಮ್‌ಎಲ್‌ಡಿ ಸಾಮರ್ಥ್ಯದ ಕೊಳಚೆನೀರು ಸಂಸ್ಕರಣಾ ಸ್ಥಾವರವನ್ನು ಸ್ಥಾಪಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪರವಾಗಿ ಈ ಅಧಿಸೂಚನೆಗಳನ್ನು ಜಾರಿ ಮಾಡಲಾಗಿತ್ತು.

ಸ್ವಾಧೀನವು ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ಬೆಳ್ಳಂದೂರು ಅಮಾನಿಖಾನೆ ಗ್ರಾಮದ ಸರ್ವೆ ನಂಬರ್ 293ರಲ್ಲಿನ 1 ಎಕರೆ 29 ಗುಂಟೆಗಳನ್ನು ಒಳಗೊಂಡಿತ್ತೆಂದು ವಿಶೇಷ ಭೂಸ್ವಾಧೀನಾಧಿಕಾರಿಗಳ ದಾಖಲೆಗಳ ಪರಿಶೀಲನೆಯಿಂದ ನಾವು ಗಮನಿಸಿದೆವು (ಜೂನ್ 2017). ಪ್ರಾಥಮಿಕ ಅಧಿಸೂಚನೆಯಲ್ಲಿ (ಸೆಪ್ಟಂಬರ್ 2008) ಮೇಲಿನ ಭೂಮಿಯನ್ನು ತರಿ[59] (31 ಗುಂಟೆಗಳು) ಮತ್ತು ಭಾಗಾಯ್ತು[60] (38 ಗುಂಟೆಗಳು) ಎಂದು ವರ್ಗೀಕರಿಸಲಾಗಿದ್ದರೆ ಅದನ್ನು ಅಂತಿಮ ಅಧಿಸೂಚನೆಯಲ್ಲಿ (ಏಪ್ರಿಲ್ 2010) ತರಿ (31 ಗುಂಟೆಗಳು) ಮತ್ತು ಖರಾಬ್[61] (38 ಗುಂಟೆಗಳು) ಎಂದು ವರ್ಗೀಕರಿಸಲಾಗಿತ್ತು. ಕಂದಾಯ ದಾಖಲೆಗಳನ್ನು ಪರಿಶೀಲಿಸಲಾಗಿ ಒಂದು ಎಕರೆ 29

[59] ಆರ್ದ್ರತೆ ಕೃಷಿ ಭೂಮಿ.

[60] ನೀರಾವರಿ ಭೂಮಿ.

[61] ಒಣಭೂಮಿ, ಕೊಳಗಳು, ಕಲ್ಲುಗಳು ಮುಂತಾದ ಕೃಷಿ ಮಾಡಲಾಗದ ಭೂಮಿ.

ಗುಂಟೆಗಳನ್ನು ತರಿ ಎಂದು ವರ್ಗೀಕರಿಸಲಾಗಿರುವುದನ್ನು ನಾವು ಗಮನಿಸಿದೆವು. ಹೀಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸುವಾಗ ವರ್ಗೀಕರಣದಲ್ಲಿ ತಪ್ಪಾಗಿದ್ದಿತು. ವಿಶೇಷ ಭೂಸ್ವಾಧೀನಾಧಿಕಾರಿಗಳು, ಬೆಂಗಳೂರು ಇವರು ಮೇಲಿನ ತಪ್ಪನ್ನು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ತಿಳಿಸಿ (ಜೂನ್ 2011) ಅದನ್ನು ಸರಿಪಡಿಸಲು ಅನುಮೋದನೆಯನ್ನು ಕೋರಿದ್ದರು ಎಂದು ನಾವು ಗಮನಿಸಿದೆವು. ಆದರೆ, ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ನಂತರ ಮತ್ತು ಐತೀರ್ಪನ್ನು ಹೊರಡಿಸಿದ ನಂತರ ತಪ್ಪನ್ನು ಸರಿಪಡಿಸಲು ಯಾವುದೇ ನಿಬಂಧನೆಗಳು ಅಸ್ತಿತ್ವದಲ್ಲಿಲ್ಲ ಎಂದು ಆ ಕೋರಿಕೆಯನ್ನು ಸರ್ಕಾರವು ತಿರಸ್ಕರಿಸಿತು (ಆಗಸ್ಟ್ 2014). ಇದು, ಐತೀರ್ಪಿನಲ್ಲಿನ ಯಾವುದೇ ತಪ್ಪುಗಳನ್ನು ಸರಿಪಡಿಸಬಹುದು ಎಂದು ತಿಳಿಸಿದ್ದ ಭೂಸ್ವಾಧೀನ ಅಧಿನಿಯಮ, 1964ರ ಪರಿಚ್ಛೇದ 13–ಎಗೆ ಇದು ವ್ಯತಿರಿಕ್ತವಾಗಿತ್ತು.

ಅಂತಿಮ ಅಧಿಸೂಚನೆಯ ಆಧಾರದ ಮೇಲೆ ಪರಿಹಾರಕ್ಕಾಗಿ ಡಿಸೆಂಬರ್ 2010ರಲ್ಲಿ ಐತೀರ್ಪನ್ನು ಜಾರಿ ಮಾಡಿರುವುದನ್ನು ನಾವು ಗಮನಿಸಿದೆವು. ಐತೀರ್ಪಿನ ಅನ್ವಯ ಖರಾಬ್ ಭೂಮಿಯ ಮೂಲ ಬೆಲೆಯನ್ನು ಪ್ರತಿ ಎಕರೆಗೆ ₹12.50 ಲಕ್ಷ ಮತ್ತು ಇತರೆ ಭೂಮಿಗಳಿಗೆ ಪ್ರತಿ ಎಕರೆಗೆ ₹1.25 ಕೋಟಿ ಎಂದು ನಿಗದಿಪಡಿಸಲಾಗಿತ್ತು. ಭೂಮಿಯ ಸರಿಯಾದ ವರ್ಗೀಕರಣದ ಅನ್ವಯ ಪರಿಹಾರವು ₹3.47[62] ಕೋಟಿಗಳಾಗುತ್ತಿತ್ತು. ಈ ಮಧ್ಯೆ, ಅಂತಿಮ ಅಧಿಸೂಚನೆಯಲ್ಲಿನ ತಪ್ಪಿನಿಂದ ಮತ್ತು ಅಂತಿಮ ಐತೀರ್ಪಿನ ಅಧಿಸೂಚನೆಯಿಂದ ಸಂಕಟಕ್ಕೊಳಗಾದ ಭೂಮಾಲೀಕರುಗಳು ಗೌರವಾನ್ವಿತ ಉಚ್ಚ ನ್ಯಾಯಾಲಯದ ಮೊರೆ ಹೋಗಿ (ಆಗಸ್ಟ್ 2014) ಪ್ರಾಥಮಿಕ ಅಧಿಸೂಚನೆ ಮತ್ತು ಅಂತಿಮ ಅಧಿಸೂಚನೆಗಳ ಜೊತೆಗೆ ಅಂತಿಮ ಪರಿಹಾರದ ಐತೀರ್ಪನ್ನೂ ಸಹ ರದ್ದುಪಡಿಸುವಂತೆ ಕೋರಿದರು. ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಯನ್ನು ಊರ್ಜಿತ ಮಾಡಿ ಸೂಕ್ತ ನೋಟೀಸನ್ನು ಜಾರಿ ಮಾಡಿ ಆ ದಿನದಿಂದ ನಾಲ್ಕು ತಿಂಗಳುಗಳ ಮಿತಿಯೊಳಗೆ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕಾನೂನಿನ ಅನ್ವಯ ಐತೀರ್ಪನ್ನು ಹೊರಡಿಸುವಂತೆ ಹಾಗೂ ಆದೇಶದ ದಿನದಂದು ಚಾಲ್ತಿಯಲ್ಲಿರುವ ಮಾರುಕಟ್ಟೆ ದರವನ್ನು ನೀಡಬೇಕೆಂದು ಎಸ್‌ಎಲ್‌ಎಓರವರಿಗೆ ನಿರ್ದೇಶಿಸಿತು. ಅದರಂತೆ, ಭೂಸ್ವಾಧೀನದಲ್ಲಿ ನ್ಯಾಯಬದ್ಧ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಅಧಿನಿಯಮ (ಎಲ್‌ಎ ಅಧಿನಿಯಮ), 2013ರ ಆಧಾರದ ಮೇಲೆ ಸರ್ಕಾರವು ಪರಿಹಾರದ ಮೊತ್ತವನ್ನು ₹14 ಕೋಟಿಗಳಿಗೆ ಪರಿಷ್ಕರಿಸಿತು (ಸೆಪ್ಟಂಬರ್ 2016). ಪರಿಹಾರದ ಮೊತ್ತವನ್ನು ಭೂಮಾಲೀಕರುಗಳಿಗೆ ಸೆಪ್ಟಂಬರ್–ಅಕ್ಟೋಬರ್ 2016ರ ಅವಧಿಯಲ್ಲಿ ಪಾವತಿಸಲಾಯಿತು.

ಹೀಗೆ, ಅಂತಿಮ ಅಧಿಸೂಚನೆಯಲ್ಲಿ ಭೂಮಿಯನ್ನು ತಪ್ಪಾಗಿ ವರ್ಗೀಕರಿಸಿದ್ದು ಮತ್ತು ಎಲ್‌ಎ ಅಧಿನಿಯಮ, 1964ರ ನಿಬಂಧನೆಗಳ ಅಡಿಯಲ್ಲಿ ಸಮಯಕ್ಕೆ ಸರಿಯಾಗಿ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳದಿದ್ದುದು ಭೂಮಾಲೀಕರುಗಳಿಗೆ ₹10.53 ಕೋಟಿ[63] ತಪ್ಪಿಸಬಹುದಾಗಿದ್ದ ಪರಿಹಾರ ಪಾವತಿಯಲ್ಲಿ ಪರಿಣಮಿಸಿತು.

ಈ ವಿಷಯದಲ್ಲಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಯಿತು ಎಂದು ಸರ್ಕಾರವು ತಿಳಿಸಿತು (ಡಿಸೆಂಬರ್ 2018). ಈ ಕೆಳಗಿನ ಕಾರಣಗಳಿಂದ 6(1) ಅಧಿಸೂಚನೆಯನ್ನು ಸರಿಪಡಿಸಲು ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಕಾನೂನು ಇಲಾಖೆಯು ತಿಳಿಸಿತು:

- ➢ ಭೂಮಿಯ ವರ್ಗೀಕರಣದ ಸರಿಪಡಿಸುವಿಕೆಗೆ ನಿಗದಿಪಡಿಸಿದ್ದ ಸಮಯದೊಳಗೆ ಮಾಲೀಕರು ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ.
- ➢ ಭೂಸ್ವಾಧೀನಾಧಿಕಾರಿಗಳ ಸ್ಥಳ ತಪಾಸಣಾ ವರದಿಯಲ್ಲಿ ಭೂಮಿಯ ಸ್ವರೂಪವನ್ನು ಸೂಚಿಸಿರಲಿಲ್ಲ.

[62] ಭೂಮಿಯ ಬೆಲೆ ₹2.15 ಕೋಟಿ ಹಾಗೂ ₹1.32 ಕೋಟಿ ಸೊಲೇಷಿಯಮ್, ಬಡ್ಡಿ ಹಾಗೂ ಸರ್ಕಾರದ ವೆಚ್ಚಗಳನ್ನು ಒಳಗೊಂಡಿದೆ.

[63] ₹14 ಕೋಟಿ – ₹ 3.47 ಕೋಟಿ = ₹10.53 ಕೋಟಿ.

- ಆರ್‌ಟಿಸಿ/ಪಹಣಿಯಲ್ಲಿ ಭೂಮಿಯ ಸ್ವರೂಪದ ಬಗ್ಗೆ ಉಲ್ಲೇಖವಿಲ್ಲ. ಆದರೆ, ಅಧಿಕ ಪರಿಹಾರಕ್ಕೆ ಕಾರಣರಾದ ಅಧಿಕಾರಿ/ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳುವುದಾಗಿಯೂ ಸಹ ಉತ್ತರದಲ್ಲಿ ತಿಳಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಯವರು ಲೋಪದೋಷಗಳನ್ನು ತಾವೇ ಗಮನಿಸಿದ್ದರು ಮತ್ತು ನಿಗದಿತ ಸಮಯದೊಳಗೆ ಕ್ರಮ ತೆಗೆದುಕೊಂಡಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಹೀಗೆ, ಸರ್ಕಾರದ ಮಟ್ಟದಲ್ಲಿ ಸರಿಪಡಿಸುವ ಕ್ರಮವನ್ನು ಕೈಗೊಳ್ಳಬಹುದಿತ್ತು. ಅಲ್ಲದೆ, ಆರ್‌ಟಿಸಿಯಲ್ಲಿ ಭೂಮಿಯ ವರ್ಗದ ಬಗ್ಗೆ ಉಲ್ಲೇಖವಿರದಿದ್ದರೂ ಸಹ ಅದರಲ್ಲಿ 'ಖರಾಬ್ ಭೂಮಿ' 'ಇಲ್ಲ' ಎಂದು ಸೂಚಿಸಲಾಗಿತ್ತು. ಆದುದರಿಂದ ಅಧಿಕ ಪರಿಹಾರದ ಪಾವತಿಯನ್ನು ತಪ್ಪಿಸಬಹುದಿತ್ತು.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

### 3.10 ನೀರು ಸರಬರಾಜು ಯೋಜನೆಯ ಮೇಲೆ ನಿಷ್ಫಲ ವೆಚ್ಚ

**ಹರಪನಹಳ್ಳಿಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ದಾವಣಗೆರೆ ಜಿಲ್ಲೆಯ ನೀರು ಸರಬರಾಜು ಯೋಜನೆಗಳಿಗೆ ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ವಿಫಲರಾಗಿದ್ದು ₹47.55 ಕೋಟಿ ನಿಷ್ಫಲ ವೆಚ್ಚದಲ್ಲಿ ಪರಿಣಮಿಸಿತು ಮತ್ತು ಸುರಕ್ಷಿತ ಕುಡಿಯುವ ನೀರನ್ನು ವಂಚಿಸಿದಂತಾಯಿತು.**

ಕಾಮಗಾರಿಗೆ ಅಗತ್ಯವಿರುವ ಸಂಪೂರ್ಣ ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ಕಾರ್ಯಗತಗೊಳಿಸಲು ಯಾವುದೇ ಕಾಮಗಾರಿಯನ್ನು ವಹಿಸಬಾರದು ಎಂದು ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯು ನಿಗದಿಪಡಿಸುತ್ತದೆ. ಅಲ್ಲದೆ, ಅರಣ್ಯ (ಸಂರಕ್ಷಣೆ) ಅಧಿನಿಯಮ, 1980ರ ಮೇಲಿನ ಕಿರುಹೊತ್ತಿಗೆಯ ಸ್ಪಷ್ಟೀಕರಣ 4.4 ಮತ್ತು ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಸಂಕಲಿಸಿರುವ ಅರಣ್ಯ (ಸಂರಕ್ಷಣೆ) ನಿಯಮಗಳು, 2003 ಅರಣ್ಯ ಮತ್ತು ಅರಣ್ಯೇತರ ಭೂಮಿಯನ್ನು ಒಳಗೊಂಡಿರುವ ಯೋಜನೆಗಳ ಸಂಬಂಧವಾಗಿ ಅಧಿನಿಯಮದ ಅಡಿಯಲ್ಲಿ ಅರಣ್ಯ ಭೂಮಿಯ ಬಿಡುಗಡೆಗೆ ಕೇಂದ್ರ ಸರ್ಕಾರದಿಂದ ಅನುಮತಿ ದೊರೆಯುವವರೆಗೂ ಅರಣ್ಯೇತರ ಭೂಮಿಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಬಾರದು ಎಂದು ತಿಳಿಸುತ್ತವೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಮಂತ್ರಿಗಳು ಮುಖ್ಯಸ್ಥರಾಗಿರುವ ರಾಜ್ಯ ಮಟ್ಟದ ಉನ್ನತಾಧಿಕಾರದ ಸಮಿತಿಯು (ಎಸ್‌ಎಲ್‌ಇಸಿ) ಇತರೆ ನೀರು ಸರಬರಾಜು ಯೋಜನೆಗಳೊಂದಿಗೆ ಹೆಚ್ಚಿನ ಫ್ಲೋರೈಡ್ ಸೇರಿದಂತೆ ನೀರಿನ ಅನೇಕ ಗುಣಮಟ್ಟದ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲು ಒಟ್ಟಾಗಿ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ (1) ತೆಲಗಿ ಮತ್ತು ಇನ್ನಿತರ 56 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ (ಅಂದಾಜು ವೆಚ್ಚ ₹27.25 ಕೋಟಿ) ಮತ್ತು (2) ಹರಕನಾಲು ಮತ್ತು ಇನ್ನಿತರ 29 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ (ಅಂದಾಜು ವೆಚ್ಚ ₹23.31 ಕೋಟಿ) ಇವುಗಳನ್ನು ಅನುಮೋದಿಸಿತು (ನವೆಂಬರ್ 2008). ತಾಂತ್ರಿಕ ಕಾರ್ಯಸಾಧ್ಯತೆ ಮತ್ತು ಅನುದಾನಗಳ ಲಭ್ಯತೆಗಳ ಆಧಾರದ ಮೇಲೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗುತ್ತದೆ ಎಂದು ಎಸ್‌ಎಲ್‌ಇಸಿ ತಿಳಿಸಿತು ಮತ್ತು ಪಟ್ಟಿಮಾಡಿದ ಸಮಾಲೋಚಕರಿಂದ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಕ್ರಮ ಕೈಗೊಳ್ಳಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ನಿರ್ದೇಶಿಸಿತು.

ದಾವಣಗೆರೆಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗದ[64], ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿಯ ದಾಖಲೆಗಳ ಪರಿಶೀಲನೆಯು (ಆಗಸ್ಟ್ 2016) ಮತ್ತು ಸಲ್ಲಿಸಿದ ಹೆಚ್ಚುವರಿ ಮಾಹಿತಿಯು (ದರಪಟ್ಟಿಗಳ ನಕಲುಗಳು, ಸಮೀಕ್ಷಾ ವರದಿ, ಡಿಪಿಆರ್, ಒಪ್ಪಂದಗಳು, ರನ್ನಿಂಗ್ ಅಕೌಂಟ್ ಬಿಲ್, ಮುಂತಾದವು) (ಅಕ್ಟೋಬರ್ 2017) ತೆಲಗಿ ಮತ್ತು ಇನ್ನಿತರ 56 ಗ್ರಾಮಗಳ ನೀರು ಸರಬರಾಜು ಯೋಜನೆ (ಜೂನ್ 2009) ಮತ್ತು ಹರಕನಲು ಹಾಗೂ ಇನ್ನಿತರ 29 ಗ್ರಾಮಗಳ ನೀರು ಸರಬರಾಜು ಯೋಜನೆ (ಡಿಸೆಂಬರ್ 2009) ಸಂಬಂಧವಾಗಿ ಹರಪನಹಳ್ಳಿ ಪಿಆರ್‌ಇಡಿಯ ಇಇರವರು ಡಿಪಿಆರ್‌ಗಳ ತಯಾರಿಕೆಯನ್ನು ಸಮಾಲೋಚಕರೊಬ್ಬರಿಗೆ (ಶ್ರೀ ವೆಂಕಟೇಶ್ವರ ಗ್ರಾಮೀಣ ಇಂಜಿನಿಯರಿಂಗ್ ಕನ್‌ಸಲ್ಟೆಂಟ್ಸ್, ಮೈಸೂರು) ವಹಿಸಿದ್ದರು ಎಂದು ತಿಳಿಯಪಡಿಸಿದವು.

ಮೇಲಿನ ಸಮಾಲೋಚಕರು ತಯಾರಿಸಿದ ಎರಡೂ ಯೋಜನೆಗಳ ಡಿಪಿಆರ್‌ಗಳೂ (ಸೆಪ್ಟಂಬರ್ 2011) ತುಂಗಭದ್ರ ನದಿಯನ್ನು ಆಕರವನ್ನಾಗಿಸಿಕೊಂಡು ಗರ್ಭಗುಡಿ ಗ್ರಾಮದ ಹತ್ತಿರ ಒಂದೇ ಹೆಡ್‌ವರ್ಕ್ಸ್ ಮತ್ತು ನೀರು ಸಂಸ್ಕರಣಾ ಸ್ಥಾವರನ್ನು ಪ್ರಸ್ತಾವಿಸಿದ್ದವು. ಡಿಪಿಆರ್‌ಗಳು ಕೈಗೆತ್ತಿಕೊಳ್ಳಬೇಕಿದ್ದ ವಿವಿಧ ಕಾಮಗಾರಿಗಳನ್ನು ಸೂಚಿಸಿದ್ದವು ಆದರೆ ಈ ಕಾಮಗಾರಿಗಳಿಗೆ ಅಗತ್ಯವಿರುವ ಭೂಮಿಯನ್ನು ಗುರುತಿಸಲು ವಿಫಲವಾಗಿದ್ದವು ಏಕೆಂದರೆ ಅಗತ್ಯವಿರುವ ಹಾಗೆ ವಿವರವಾದ ಸಮೀಕ್ಷೆ ಮತ್ತು ಪರಿಶೀಲನೆಯನ್ನು ಕೈಗೊಂಡಿರಲಿಲ್ಲ.

ರಾಜ್ಯ ಸರ್ಕಾರವು ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ ಸಬ್-ಮಿಶನ್ ಅಡಿಯಲ್ಲಿ ಎರಡೂ ಯೋಜನೆಗಳನ್ನು ಆಡಳಿತಾತ್ಮಕವಾಗಿ ಅನುಮೋದಿಸಿತು (ಜೂನ್ 2010). ಬೆಂಗಳೂರು ಪಿಆರ್‌ಇಡಿಯ ಸಿಇರವರು ತೆಲಗಿ ಮತ್ತು ಇನ್ನಿತರ 56 ಗ್ರಾಮಗಳ ನೀರು ಸರಬರಾಜು ಯೋಜನೆಗೆ ₹30.17 ಕೋಟಿ ವೆಚ್ಚದಲ್ಲಿ ಮತ್ತು ಹರಕನಲು ಹಾಗೂ ಇನ್ನಿತರ 29 ಗ್ರಾಮಗಳ ನೀರು ಸರಬರಾಜು ಯೋಜನೆಗೆ ₹26.75 ಕೋಟಿ ವೆಚ್ಚದಲ್ಲಿ ತಾಂತ್ರಿಕ ಮಂಜೂರಾತಿ ನೀಡಿದರು (ಸೆಪ್ಟಂಬರ್ 2011). ಇದಲ್ಲದೆ, ಟೆಂಡರ್‌ಗಳನ್ನು ಆಹ್ವಾನಿಸುವ ಮೊದಲು ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳಬೇಕೆಂದು ತಾಂತ್ರಿಕ ಮಂಜೂರಾತಿ ನೀಡುವ ಟಿಪ್ಪಣಿಯಲ್ಲಿ ನಿಗದಿಪಡಿಸಲಾಗಿತ್ತು.

ಎರಡೂ ಯೋಜನೆಗಳು ಮುಖ್ಯ ಬ್ಯಾಲೆನ್ಸಿಂಗ್ ಟ್ಯಾಂಕ್‌ಗಳೊಂದಿಗೆ ನೀರು ಸಂಸ್ಕರಣಾ ಸ್ಥಾವರದ ನಿರ್ಮಾಣಕ್ಕೆ (1.514 ಹೆಕ್ಟೇರ್), ಭೂಮಟ್ಟದ ಸಂಗ್ರಹಣಾ ರಿಸರ್ವಾಯರ್, ವಿಭಾಗೀಯ ಬ್ಯಾಲೆನ್ಸಿಂಗ್ ಟ್ಯಾಂಕ್, ಪೈಪ್‌ಲೇನ್ ಮತ್ತು ರಸ್ತೆಗಾಗಿ (2.327 ಹೆಕ್ಟೇರ್ಸ್) 3.841 ಹೆಕ್ಟೇರ್‌ಗಳಷ್ಟು ಅರಣ್ಯ ಭೂಮಿಯನ್ನು ಮಾರ್ಗಪಲ್ಲಟ ಮಾಡುವುದನ್ನು ಒಳಗೊಂಡಿದ್ದವು. ಹರಪನಹಳ್ಳಿಯ ಪಿಆರ್‌ಇಡಿಯ ಇಇರವರು ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ಟೆಂಡರ್‌ಗಳನ್ನು[65] ಆಹ್ವಾನಿಸಿದರು ಮತ್ತು ಎರಡೂ ಕಾಮಗಾರಿಗಳನ್ನು ಅನುಕ್ರಮವಾಗಿ ಅನುಮೋದಿತ ವೆಚ್ಚವಾದ ₹29.55 ಕೋಟಿ (ಮಂಜೂರಾದ ಅಂದಾಜುಗಳಿಗಿಂತ ಶೇಕಡಾ 15 ರಷ್ಟು ಅಧಿಕ) ಮತ್ತು ₹31.60 ಕೋಟಿಗಳಿಗೆ (ಮಂಜೂರಾದ ಅಂದಾಜುಗಳಿಗಿಂತ ಶೇಕಡಾ 16.58 ರಷ್ಟು ಅಧಿಕ), ಮಳೆಗಾಲವನ್ನೊಳಗೊಂಡು 11 ತಿಂಗಳು ಮತ್ತು 25 ದಿನಗಳೊಳಗೆ ಅಂದರೆ ಜನವರಿ 2014ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ನಿಗದಿಪಡಿಸಿ ಮೆ.ಶ್ರೀನಿವಾಸ ಕನ್‌ಸ್ಟ್ರಕ್ಷನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಬಳ್ಳಾರಿ, ಇವರಿಗೆ ವಹಿಸಿದರು (ಜನವರಿ 2013).

ಕಾಮಗಾರಿಗಳನ್ನು ವಹಿಸಿರುವುದು ಮೇಲೆ ತಿಳಿಸಿದ ನಿಬಂಧನೆಗಳಿಗೆ ವಿರುದ್ಧವಾಗಿತ್ತು ಮತ್ತು ಜುಲೈ 2018ರಲ್ಲಿದ್ದಂತೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರಲಿಲ್ಲವಾಗಿ ಯೋಜನೆಗಳು ಪೂರ್ಣ

[64] ಪಿಆರ್‌ಇ ಇಲಾಖೆಯು ಅನುಷ್ಠಾನಗೊಳಿಸುವ ನೀರು ಸರಬರಾಜು ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಮತ್ತು ದಕ್ಷ ನಿರ್ವಹಣೆಗಾಗಿ ದಿನಾಂಕ 4.3.2014ರ ಸರ್ಕಾರೀ ಆದೇಶದ ಅನ್ವಯ ಒಂದು ಪ್ರತ್ಯೇಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯನ್ನು ರಚಿಸಲಾಯಿತು.

[65] ಹರಕನಲು ಮತ್ತು ಇತರೆ 29 ಗ್ರಾಮಗಳು ಏಪ್ರಿಲ್ 2012ರಲ್ಲಿ ಮತ್ತು ತೆಲಗಿ ಮತ್ತು ಇತರೆ 56 ಗ್ರಾ.ಮಗಳು ಜುಲೈ 2012ರಲ್ಲಿ

ಗೊಂಡಿರಲಿಲ್ಲ. ಜುಲೈ 2018ರಲ್ಲಿದ್ದಂತೆ ₹23.82 ಕೋಟಿ (ತೆಲಗಿ ಮತ್ತು ಇತರೆ 56 ಗ್ರಾಮಗಳು) ಮತ್ತು ₹23.73 ಕೋಟಿಗಳನ್ನು (ಹರಕನಲು ಮತ್ತು ಇತರೆ 29 ಗ್ರಾಮಗಳು) ವೆಚ್ಚ ಮಾಡಲಾಗಿತ್ತು.

ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೊದಲು ಭೂಮಿಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವಲ್ಲಿನ ಆರ್‌ಡಿಪಿಆರ್ ಇಲಾಖೆಯ ವಿಫಲತೆಯಿಂದ ನೀರು ಸರಬರಾಜು ಯೋಜನೆಗಳ ಮೇಲೆ ನಿಷ್ಫಲ ವೆಚ್ಚದ ಬಗ್ಗೆ ಸ್ಥಳೀಯ ಸಂಸ್ಥೆಗಳ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ[66] ಉಲ್ಲೇಖಗಳನ್ನು ಮಾಡಲಾಗಿತ್ತು. ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಮೇಲಿನ ಸಮಿತಿಯು ಈ ಆಕ್ಷೇಪಣೆಗಳನ್ನು ಗಂಭೀರವಾಗಿ ತೆಗೆದುಕೊಂಡಿತ್ತು ಮತ್ತು ಭೂಮಿಯ ಸ್ವಾಧೀನ ಮಾಡಿಕೊಳ್ಳದಿರುವುದರಿಂದ ಆಗುವ ವಿಳಂಬಗಳನ್ನು ತಪ್ಪಿಸಬೇಕು ಎಂದು ಶಿಫಾರಸು ಮಾಡಿತ್ತು.

ಹೀಗೆ, ಸಂಹಿತೆಯ ನಿಂಬಧನೆಗಳಿದ್ದರೂ ಹಾಗೂ ಲೆಕ್ಕಪರಿಶೋಧನೆಯು ಪದೇಪದೇ ಆಕ್ಷೇಪಿಸುತ್ತಿದ್ದರೂ ಸಹ ಆರ್‌ಡಿಪಿಆರ್ ಇಲಾಖೆಯು ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿತ್ತು. ಈ ಎರಡು ಪ್ರಕರಣಗಳಲ್ಲಿಯೂ ಸಹ ಕಾಮಗಾರಿಗಳನ್ನು ಪ್ರಾರಂಭಿಸುವ ಮೊದಲು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿನ ಇಇರವರ ವಿಫಲತೆಯು ಪ್ರಾರಂಭಗೊಂಡ ಐದು ವರ್ಷಗಳ ನಂತರವೂ ಯೋಜನೆಗಳು ಅಪೂರ್ಣವಾಗಿ ಉಳಿಯುವಲ್ಲಿ ಮತ್ತು ಇದುವರೆಗೆ ತತ್ಪರಿಣಾಮವಾದ ₹47.55 ಕೋಟಿಗಳ ನಿಷ್ಫಲ ವೆಚ್ಚದಲ್ಲಿ ಪರಿಣಮಿಸಿತಲ್ಲದೆ ಆ ಗ್ರಾಮಗಳ ಜನತೆಗೆ (1,02,695) ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯವನ್ನು ವಂಚಿಸಿದಂತಾಯಿತು.

ಅರಣ್ಯ ಇಲಾಖೆಯು ನೀರು ಸಂಸ್ಕರಣಾ ಸ್ಥಾವರಕ್ಕೆ ಮತ್ತು ಬ್ಯಾಲೆನ್ಸಿಂಗ್ ಟ್ಯಾಂಕ್‌ಗಳ ನಿರ್ಮಾಣಕ್ಕೆ ಭೂಮಿಯನ್ನು ಮಂಜೂರು ಮಾಡಿದೆ ಮತ್ತು ಅಗತ್ಯವಿದ್ದ ₹34.51 ಲಕ್ಷವನ್ನು ಅರಣ್ಯ ಇಲಾಖೆಗೆ ಠೇವಣಿ ಮಾಡಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಆಗಸ್ಟ್ 2018). ನವೆಂಬರ್ 2018ರೊಳಗೆ ಕಾಮಗಾರಿಗಳು ಪೂರ್ಣಗೊಳ್ಳಬಹುದು ಮತ್ತು ಬೇಸಿಗೆಯ ಒಳಗೆ ಎಲ್ಲ ಗ್ರಾಮಗಳಿಗೂ ನೀರನ್ನು ಸರಬರಾಜು ಮಾಡಲಾಗುವುದು ಎಂದೂ ಸಹ ತಿಳಿಸಿತು.

ಭೂಮಿಯ ಲಭ್ಯತೆಯಿಲ್ಲದೇ ಕಾಮಗಾರಿಯನ್ನು ವಹಿಸಿದ್ದಕ್ಕೆ ಕಾರಣಗಳನ್ನು ಉತ್ತರವು ನೀಡುತ್ತಿಲ್ಲ. ಅಲ್ಲದೆ, ಕೇಂದ್ರ ಸರ್ಕಾರವು 1.514 ಹೆಕ್ಟೇರ್‌ಗಳ ಅರಣ್ಯಭೂಮಿಯ ಮಾರ್ಗಪಲ್ಲಟಕ್ಕೆ (ಘಟ್ಟ–1) ಕೇವಲ 1 ಮಾರ್ಚ್ 2017ರಲ್ಲಿ ಮತ್ತು 2.327 ಹೆಕ್ಟೇರ್‌ಗಳ ಅರಣ್ಯಭೂಮಿಗೆ 4 ಡಿಸೆಂಬರ್ 2017ರಲ್ಲಿ ಅನುಮೋದನೆ ನೀಡಿದೆ ಮತ್ತು ಎರಡೂ ಯೋಜನೆಗಳ ಸಂಬಂಧವಾಗಿ ಅರಣ್ಯ ಭೂಮಿಯ ವರ್ಗಾವಣೆಗೆ ಕೇಂದ್ರ ಸರ್ಕಾರದಿಂದ ಅಂತಿಮ ಅನುಮೋದನೆಯನ್ನು ಇನ್ನೂ ನಿರೀಕ್ಷೆ ಮಾಡಲಾಗಿದೆ (ಸೆಪ್ಟೆಂಬರ್ 2018).

## 3.11 ಶಿಕ್ಷಣ ಉಪಕರದ ತಪ್ಪಾದ ವಿಧಿಸುವಿಕೆ ಮತ್ತು ಸಂಗ್ರಹಣೆ

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಕರ್ನಾಟಕ ಶಿಕ್ಷಣ ಅಧಿನಿಯಮ, 1983ರನ್ನು ಉಲ್ಲಂಘನೆ ಮಾಡಿ ಗ್ರಾಮಪಂಚಾಯತಿಗಳು ಶಿಕ್ಷಣ ಉಪಕರವನ್ನು ವಿಧಿಸಿ ಸಂಗ್ರಹಿಸಬೇಕೆಂದು ನಿಗದಿಪಡಿಸಿತು. ಅದರಂತೆ, ಪರೀಕ್ಷಾ–ತನಿಖೆ ನಡೆಸಿದ 197 ಗ್ರಾಮಪಂಚಾಯತಿಗಳು ಮಾರ್ಚ್ 2017ರಲ್ಲಿದ್ದಂತೆ ₹2.69 ಕೋಟಿಯನ್ನು ವಿಧಿಸಿ ಸಂಗ್ರಹಿಸಿದ್ದವು.**

ಕರ್ನಾಟಕ (ಕೆಲವು ಉಪಕರಗಳ ವೃದ್ಧಿ) ಅಧಿನಿಯಮ, 1976ರ ಪರಿಚ್ಛೇದ 2, ಕರ್ನಾಟಕ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅಧಿನಿಯಮ, 1961ರ (ಕೆಸಿಪಿಇಎ, 1961) ಅಧ್ಯಾಯ–3ರ ತಿದ್ದುಪಡಿಯ ಮೂಲಕ, ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಉತ್ತೇಜಿಸಲು (1) ಭೂಕಂದಾಯ, (2) ಅನುಸೂಚಿ ಎ ಯಲ್ಲಿ

[66] ಲೆಕ್ಕಪರಿಶೋಧನಾ ವರದಿ–2009ರ ಕಂಡಿಕೆ 2.3, ಲೆಕ್ಕಪರಿಶೋಧನಾ ವರದಿ–2010ರ ಕಂಡಿಕೆ 2.3, ಲೆಕ್ಕಪರಿಶೋಧನಾ ವರದಿ–2012ರ ಕಂಡಿಕೆ 2.4 ಮತ್ತು ಲೆಕ್ಕಪರಿಶೋಧನಾ ವರದಿ–2016ರ ಕಂಡಿಕೆ 3.1.8.3(ಬಿ).

ತಿಳಿಸಿರುವ ರಾಜ್ಯ ಕಂದಾಯ, ಮತ್ತು (3) ಅನುಸೂಚಿ 'ಬಿ'[67] ಯಲ್ಲಿ ನಮೂದಿಸಿರುವ ತೆರಿಗೆಯ ಅಂಶಗಳ ಮೇಲೆ ಒಂದು ರೂಪಾಯಿಯ ಮೇಲೆ 10 ಪೈಸದ ಹಾಗೆ ಶಿಕ್ಷಣ ಉಪಕರವನ್ನು ವಿಧಿಸಬೇಕೆಂದು ನಿಗದಿಪಡಿಸಿವೆ. ಪರಿಚ್ಛೇದ 17–ಎ ವಸೂಲು ಮಾಡಿದ ಮೊತ್ತದ ಶೇಕಡಾ 10ರಷ್ಟನ್ನು ಸಂಗ್ರಹಣಾ ವೆಚ್ಚವನ್ನಾಗಿ ಕಡಿತಗೊಳಿಸಲು ಸ್ಥಳೀಯ ಪ್ರಾಧಿಕಾರವು ಅಧಿಕಾರ ಹೊಂದಿರುತ್ತದೆ ಮತ್ತು ಉಳಿದ ಮೊತ್ತವನ್ನು ರಾಜ್ಯ ಸರ್ಕಾರಕ್ಕೆ ಜಮೆ ಮಾಡಬೇಕು. ಮುಂದುವರೆದು, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ[68] (ಕೆಇಎ, 1983) ಪರಿಚ್ಛೇದ 146(1) ಕೆಸಿಪಿಎಟ, 1961ನ್ನು ರದ್ದುಗೊಳಿಸಿತು ಮತ್ತು ಕೆಇಎ, 1983ರಲ್ಲಿ ಶಿಕ್ಷಣ ಉಪಕರ ವಿಧಿಸುವಿಕೆ ಮತ್ತು ಸಂಗ್ರಹಣೆಗೆ ಯಾವುದೇ ನಿಬಂಧನೆ ಇರಲಿಲ್ಲ.

60 ಗ್ರಾಮ ಪಂಚಾಯತಿಗಳ ದಾಖಲೆಗಳ ಲೆಕ್ಕಪರಿಶೋಧನಾ ಪರಿಶೀಲನೆಯು (ಜೂನ್/ಸೆಪ್ಟಂಬರ್ 2017) ಮತ್ತು 2012–13ರಿಂದ 2016–17ರ ಅವಧಿಗೆ 137 ಗ್ರಾಮಪಂಚಾಯತಿಗಳಿಗೆ ನಮೂನೆಗಳನ್ನು ನೀಡುವ ಮೂಲಕ (ಜೂನ್/ಜುಲೈ 2017) ಸಂಗ್ರಹಿಸಿದ ಮಾಹಿತಿಯು ಮಾರ್ಚ್ 2017ರಲ್ಲಿದ್ದಂತೆ ಗ್ರಾಮಪಂಚಾಯತಿಗಳು ₹2.69 ಕೋಟಿ[69] ಶಿಕ್ಷಣ ಉಪಕರವನ್ನು ಸಂಗ್ರಹಿಸಿದ್ದವು ಎಂಬುದನ್ನು ತೋರಿಸಿತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ತನ್ನ ಸುತ್ತೋಲೆಗಳ ಮೂಲಕ (ಮೇ 2003ರಿಂದ ನವೆಂಬರ್ 2016ರವರೆಗೆ ಏಳು ಸುತ್ತೋಲೆಗಳು) ಗ್ರಾಮಪಂಚಾಯತಿಗಳಿಗೆ ನೀಡಿ ನಮೂನೆಗಳನ್ನು ಒದಗಿಸಿ ಭೂಮಿ ಮತ್ತು ಕಟ್ಟಡಗಳ ಮೇಲಿನ ತೆರಿಗೆಗೆ ಶೇಕಡಾ 10ರಂತೆ ಶಿಕ್ಷಣ ಉಪಕರವನ್ನು ವಿಧಿಸಿ ಸಂಗ್ರಹಿಸುವಂತೆ ಸ್ಪಷ್ಟವಾಗಿ ನಿರ್ದೇಶನ ನೀಡಿತ್ತು. ಈ ನಿರ್ದೇಶನವು ಸ್ಪಷ್ಟವಾಗಿ ಕೆಎಇ, 1983ರ ನಿಬಂಧನೆಗಳಿಗೆ ವಿರುದ್ಧವಾಗಿತ್ತು ಏಕೆಂದರೆ ಶಿಕ್ಷಣ ಉಪಕರದ ವಿಧಿಸುವಿಕೆ ಮತ್ತು ಸಂಗ್ರಹಣೆಯ ಶಾಸನಬದ್ಧ ನಿಬಂಧನೆಯನ್ನು 1 ಜೂನ್ 1995ರಿಂದ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿತ್ತು.

ಶಿಕ್ಷಣ ಉಪಕರವನ್ನು ವಿಧಿಸಿ ಸಂಗ್ರಹಿಸುವ ಸೂಚನೆಗಳನ್ನು ಗ್ರಾಮಪಂಚಾಯತಿಗಳು ಅನುಸರಿಸಿದರೆ, ಕೇವಲ 49 ಗ್ರಾಮಪಂಚಾಯತಿಗಳು ಮಾತ್ರ ಅದನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮೆ ಮಾಡುವುದನ್ನು ಅನುಸರಿಸಿದವು ಮತ್ತು ₹41.73 ಲಕ್ಷವನ್ನು[70] ಅಂಶಿಕವಾಗಿ ಜಮೆ ಮಾಡಿದವು. ಇತರೆ 148 ಗ್ರಾಮಪಂಚಾಯತಿಗಳು ಯಾವುದೇ ಜಮೆಗಳನ್ನು ಮಾಡಿರಲಿಲ್ಲ. ಗ್ರಾಮಪಂಚಾಯತಿಗಳು ವೇತನ ಪಾವತಿ, ನೀರಿನ ಶುಲ್ಕಗಳು ಮತ್ತು ಸಾಮಾನ್ಯ ವೆಚ್ಚದ ಕಡೆಗೆ ₹1.07 ಕೋಟಿಯನ್ನು ಬಳಸಿಕೊಂಡವು ಮತ್ತು **ಅನುಬಂಧ–3.20ಯಲ್ಲಿ** ವಿವರಿಸಿರುವಂತೆ ₹1.20 ಕೋಟಿಯನ್ನು ತಮ್ಮಲ್ಲಿಯೇ ಉಳಿಸಿಕೊಂಡವು.

ಹೀಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಮೇಲಿನ ಸೂಚನೆಗಳು ಪರೀಕ್ಷಾ–ತನಿಖೆ ನಡೆಸಿದ ಗ್ರಾಮಪಂಚಾಯತಿಗಳು ಕಾನೂನುಬಾಹಿರವಾಗಿ ₹2.69 ಕೋಟಿ ಶಿಕ್ಷಣ ಉಪಕರವನ್ನು ವಿಧಿಸಿ ಸಂಗ್ರಹಿಸುವಲ್ಲಿ ಪರಿಣಮಿಸಿತು ಮತ್ತು ಶಿಕ್ಷಣ ಉಪಕರವನ್ನು ಜಮೆ ಮಾಡದಿದ್ದುದರಿಂದ ಅಕ್ರಮವಾಗಿ ಅದನ್ನು ಉಳಿಸಿಕೊಳ್ಳುವಲ್ಲಿ ಮತ್ತು ಮಾರ್ಗಪಲ್ಲಟದಲ್ಲಿ ಪರಿಣಸಿತು. ಇವು ಕೇವಲ ದೃಷ್ಟಾಂತ ಪ್ರಕರಣಗಳಾಗಿದ್ದು ಬೇರೆ ಲೆಕ್ಕಪರಿಶೋಧನೆ ನಡೆಸಿರದ ಗ್ರಾಮಪಂಚಾಯತಿಗಳಲ್ಲಿ ಅಂತಹದೇ ತಪ್ಪಾಗಿರುವ ಅಪಾಯವಿದೆ. ಆದುದರಿಂದ ಸರ್ಕಾರವು ಈ ವಿಷಯವನ್ನು ಎಲ್ಲ 6,022 ಗ್ರಾಮಪಂಚಾಯತಿಗಳಲ್ಲಿ ಪರಿಶಿಲೀಸುವ ಮತ್ತು ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ.

ಆಸ್ತಿ ತೆರಿಗೆಯ ಮೇಲೆ ವಿಧಿಸಿ ಸಂಗ್ರಹಿಸಿರುವ ಎಲ್ಲ ಉಪಕರಗಳನ್ನು (ಶೇಕಡಾ 10ರಷ್ಟು ಶಿಕ್ಷಣ ಉಪಕರವನ್ನು ಒಳಗೊಂಡು) ಮಾರ್ಚ್ 2018ರೊಳಗೆ ಸರ್ಕಾರಕ್ಕೆ ಜಮೆ ಮಾಡಬೇಕೆಂದು ಎಲ್ಲ ಗ್ರಾಮಪಂಚಾಯತಿಗಳಿಗೆ ರಾಜ್ಯ ಸರ್ಕಾರವು ಸೂಚನೆಗಳನ್ನು ಹೊರಡಿಸಿತು (ಏಪ್ರಿಲ್ 2017). ಮೇಲಿನ

[67] ಕಟ್ಟಡಗಳು ಮತ್ತು ಭೂಮಿಯ ಮೇಲಿನ ತೆರಿಗೆಗಳು ಮತ್ತು ವಾಹನಗಳು ಹಾಗೂ ಪ್ರಾಣಿಗಳ ಮೇಲಿನ ತೆರಿಗೆಗಳು.

[68] ಕರ್ನಾಟಕ ಶಿಕ್ಷಣ ಅಧಿನಿಯಮ, 1983 1 ಜೂನ್ 1995ರಿಂದ ಜಾರಿಗೆ ಬಂದಿತು.

[69] ಏಪ್ರಿಲ್ 2012ಕ್ಕೆ ಮೊದಲು ಸಂಗ್ರಹಿಸಿದ ಶಿಕ್ಷಣ ಉಪಕರವನ್ನು ಒಳಗೊಂಡಿದೆ.

[70] 23 ಗ್ರಾಮಪಂಚಾಯತಿಗಳು ₹16.25 ಲಕ್ಷವನ್ನು ಜಮೆ ಮಾಡಿರುವುದಕ್ಕೆ ಯಾವುದೇ ದಾಖಲೆಯ ಪುರಾವೆಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಿರುವುದಿಲ್ಲ.

ಸೂಚನೆಗಳ ನಂತರ ಶಿಕ್ಷಣ ಉಪಕರವನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮೆ ಮಾಡುವಂತೆ ಮತ್ತೆ ಎಲ್ಲ ಗ್ರಾಮಪಂಚಾಯತಿಗಳಿಗೆ ನಿರ್ದೇಶಿಸಿತು (ಜೂನ್ 2018). ಗ್ರಾಮಪಂಚಾಯತಿಗಳು ಜಮೆ ಮಾಡಿರುವ ಸ್ಥಿತಿಯನ್ನು ಇನ್ನೂ ಲೆಕ್ಕಪರಿಶೋಧನೆಗೆ ಸಲ್ಲಿಸಬೇಕಿದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಆಕ್ಷೇಪಣೆಗಳನ್ನು ಒಪ್ಪಿಕೊಂಡಿತು (ಜನವರಿ 2019) ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ರಲ್ಲಿ ನಿರ್ದಿಷ್ಟ ನಿಬಂಧನೆಗಳ ಅನುಪಸ್ಥಿತಿಯಲ್ಲಿ ಗ್ರಾಮಪಂಚಾಯತಿಗಳಿಗೆ ಉಪಕರಗಳನ್ನು ಸಂಗ್ರಹಿಸುವ ಅಧಿಕಾರವಿಲ್ಲ ಎಂದು ತಿಳಿಸಿತು. ಉಪಕರವನ್ನು ಸಂಗ್ರಹಿಸಿ ಸಂಬಂಧಪಟ್ಟವರಿಗೆ ವರ್ಗಾವಣೆ ಮಾಡುವ ಈ ಅಭ್ಯಾಸವನ್ನು ರದ್ದು ಪಡಿಸುವುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪರಿಗಣನೆಯಲ್ಲಿದೆ ಎಂದೂ ಸಹ ತಿಳಿಸಿತು.

## ತಾಂತ್ರಿಕ ಶಿಕ್ಷಣ ಇಲಾಖೆ

### 3.12 ಮಹಿಳಾ ವಿದ್ಯಾರ್ಥಿನಿಲಯದ ನಿರ್ಮಾಣದಲ್ಲಿ ನಿಷ್ಫಲ ವೆಚ್ಚ

**ಕರ್ನಾಟಕ ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಮತ್ತು ಕರ್ನಾಟಕ ಗೃಹಮಂಡಳಿ ಇವುಗಳು ಬೇಡಿಕೆ ಸಮೀಕ್ಷೆ ನಡೆಸದಿರುವುದರಿಂದ ಮಹಿಳಾ ವಿದ್ಯಾರ್ಥಿನಿಲಯದ ನಿರ್ಮಾಣದ ಅಂದಾಜು ಮತ್ತು ವಿನ್ಯಾಸಗಳನ್ನು ತಯಾರಿಸುವಲ್ಲಿನ ಲೋಪದೋಷಗಳಿಂದ ₹1.86 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಕಟ್ಟಡವು ಅಪೂರ್ಣವಾಗಿ ಹಾಗೂ ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಬಳಕೆಯಾಗದೇ ಉಳಿದಿತ್ತು.**

ಸಮೀಕ್ಷೆ ಮತ್ತು ಇಂಜಿನಿಯರಿಂಗ್ ವಿನ್ಯಾಸಗಳು ಯಾವುದೇ ಸಿವಿಲ್ ಇಂಜಿನಿಯರಿಂಗ್ ಯೋಜನೆಯ ಪ್ರಮುಖ ಅಂಶಗಳಾಗಿವೆ ಮತ್ತು ಅವು ಪರಿಣಾಮಕಾರಿ ವಿನ್ಯಾಸ, ಅಂದಾಜು ಮತ್ತು ಕಾರ್ಯಗತಗೊಳಿಸುವಿಕೆಯಲ್ಲಿ ಪರಿಣಮಿಸುತ್ತವೆ ಎಂದು ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ, 2014ರ ಕಲಮು 61 ತಿಳಿಸುತ್ತದೆ. ಕಟ್ಟಡಗಳಿಗೆ ನಿರ್ಮಾಣ ಅಂದಾಜುಗಳನ್ನು ತಯಾರಿಸುವ ಮೊದಲು ಗುಣಮಟ್ಟ ನಿಯಂತ್ರಣ ಪ್ರಯೋಗಶಾಲೆಗಳಿಂದ ಮಣ್ಣಿನ ಗುಣಲಕ್ಷಣಗಳನ್ನು ಪರೀಕ್ಷೆ ಮಾಡಿಸಬೇಕು ಎಂದೂ ಸಹ ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ, 2014ರ ಕಲಮು 90(4) ತಿಳಿಸುತ್ತದೆ. ಕಟ್ಟಡಗಳ ತಳಪಾಯದ ಮಣ್ಣಿನ ಗುಣಲಕ್ಷಣಗಳ ವರದಿಯ ಆಧಾರದ ಮೇಲೆ (ಮಣ್ಣಿನ ಭಾರ ಹೊರುವ ಸಾಮರ್ಥ್ಯ) ತಳಪಾಯ ಮತ್ತು ರಚನಾ ವಿನ್ಯಾಸ, ರಚನೆಯ ಹಾಗೂ ಪ್ರತಿಯೊಂದು ಘಟಕಕ್ಕೂ ವಿವರಗಳನ್ನು ಅಂದಾಜು ಒಳಗೊಂಡಿರಬೇಕು. ಇದರಿಂದ ಪರಿಷ್ಕೃತ ಅಂದಾಜನ್ನು ತಯಾರಿಸುವುದನ್ನು ತಪ್ಪಿಸಬಹುದಾಗಿದೆ.

ಭಾರತ ಸರ್ಕಾರವು ಕೌಶಲ್ಯ ಅಭಿವೃದ್ಧಿಗೆ 'ಸಂಯೋಜಿತ ಕಾರ್ಯಯೋಜನೆಯಡಿಯಲ್ಲಿ ಪಾಲಿಟೆಕ್ನಿಕ್‌ಗಳ ಮೇಲಿನ ಉಪಯೋಜನೆ' ಯೋಜನೆಯಡಿಯಲ್ಲಿ ಮಹಿಳಾ ವಿದ್ಯಾರ್ಥಿನಿಲಯದ ನಿರ್ಮಾಣಕ್ಕಾಗಿ ಒಂದು ಬಾರಿಯ ಹಣಕಾಸಿನ ನೆರವನ್ನು ವಿಸ್ತರಿಸಿತು. ಈ ಯೋಜನೆಯನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್/ಸರ್ಕಾರಿ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ (50 ವಿದ್ಯಾರ್ಥಿಗಳಿಗೆ ಸ್ಥಳಾವಕಾಶವಿರುವ ಪಾಲಿಟೆಕ್ನಿಕ್ ಒಂದಕ್ಕೆ ₹ಒಂದು ಕೋಟಿಯಂತೆ) ಅನುಷ್ಠಾನಗೊಳಿಸಬೇಕಿತ್ತು. ಈ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರವು 57 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮಹಿಳಾ ವಿದ್ಯಾರ್ಥಿನಿಲಯಗಳ ನಿರ್ಮಾಣವನ್ನು ಕೈಗೆತ್ತಿಕೊಂಡಿತು. 36 ಕಾಮಗಾರಿಗಳು ಪೂರ್ಣಗೊಂಡಿದ್ದರೆ 21 ಕಾಮಗಾರಿಗಳು ಪೂರ್ಣಗೊಳ್ಳುವ ವಿವಿಧ ಹಂತಗಳಲ್ಲಿದ್ದವು ಎಂದು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ (ಡಿಟಿಇ) ದಾಖಲೆಗಳು ಸೂಚಿಸುತ್ತಿದ್ದವು. ಪೂರ್ಣಗೊಂಡ 36ರಲ್ಲಿ ಲೆಕ್ಕಪರಿಶೋಧನೆಯು ಮೂರು ಕಾಮಗಾರಿಗಳನ್ನು ಪರೀಕ್ಷಾ-ತನಿಖೆ ನಡೆಸಿತು, ಅವುಗಳೆಂದರೆ ಧರ್ಮಪ್ರಕಾಶ ಅರಳಗುಪ್ಪೆ ಚಂದ್ರೇಗೌಡ ಸರ್ಕಾರೀ ಪಾಲಿಟೆಕ್ನಿಕ್ (ಡಿಎಸಿಜಿಪಿ)-ಚಿಕ್ಕಮಗಳೂರು, ಸರ್ಕಾರಿ ಪಾಲಿಟೆಕ್ನಿಕ್-ನಾಗಮಂಗಲ ಮತ್ತು ಸರ್ಕಾರಿ ಪಾಲಿಟೆಕ್ನಿಕ್ ತುಮಕೂರು. ಎರಡು ಪಾಲಿಟೆಕ್ನಿಕ್‌ಗಳ ಸಂಬಂಧವಾಗಿನ ಅವಲೋಕನಗಳನ್ನು ಕೆಳಗೆ ಚರ್ಚಿಸಲಾಗಿದೆ.

- ***ಡಿಎಸಿ ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು***

ಡಿಎಸಿ ಸರ್ಕಾರಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ಕಾಮಗಾರಿಯನ್ನು ಕರ್ನಾಟಕ ಲೋಕೋಪಯೋಗಿ, ಬಂದರುಗಳು ಮತ್ತು ಒಳ ಜಲಸಾರಿಗೆ ಇಲಾಖೆಗೆ (ಇಲಾಖೆ) ವಹಿಸಿದರು. ಡಿಟಿಇ, ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಸಲ್ಲಿಸಿದ 703 ಚದರ ಮೀಟರ್ ವಿಸ್ತಾರದ ಮಹಿಳಾ ವಿದ್ಯಾರ್ಥಿನಿಲಯದ ನಿರ್ಮಾಣಕ್ಕಾಗಿನ ವಿನ್ಯಾಸ ಮತ್ತು ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು (ನವೆಂಬರ್ 2011). ಎಲ್ಲ ಟೆಂಡರ್ ಕಾರ್ಯವಿಧಾನಗಳನ್ನು ಅನುಸರಿಸಿದ ನಂತರ ಇಲಾಖೆಯು ಕನಿಷ್ಠ ಬಿಡ್ಡರ್‌ಗೆ ಟೆಂಡರ್ ಮೊತ್ತವಾದ ₹1.05 ಕೋಟಿಗಳಿಗೆ ಕಾಮಗಾರಿಯನ್ನು ವಹಿಸಿತು (ನವೆಂಬರ್ 2012). ಈ ಟೆಂಡರ್ ಮೊತ್ತವು 2009–10ರ ದರಪಟ್ಟಿ ಆಧಾರದ ಮೇಲೆ ಅಂದಾಜಿಸಲಾಗಿದ್ದ ವೆಚ್ಚದ ಮೇಲೆ ಶೇಕಡಾ 10ರಷ್ಟು ಹೆಚ್ಚಾಗಿದ್ದಿತು. ಕಾಮಗಾರಿಯನ್ನು ಪೂರ್ಣಗೊಳಿಸುವ ನಿಗದಿತ ದಿನಾಂಕವು ನಿವೇಶನವನ್ನು ಹಸ್ತಾಂತರಿಸಿದ ದಿನಾಂಕದಿಂದ ಎಂಟು ತಿಂಗಳುಗಳಾಗಿದ್ದಿತು. ಈ ಕಾಮಗಾರಿಗೆ ಸ್ವೀಕರಿಸಿದ ಒಟ್ಟು ಅನುದಾನವಾದ ₹0.90 ಕೋಟಿಯನ್ನು ಜನವರಿ 2012ರಿಂದ ಜೂನ್ 2014ರ ಅವಧಿಯಲ್ಲಿ ಇಲಾಖೆಗೆ ಜಮೆ ಮಾಡಲಾಯಿತು.

ತಳಪಾಯದ ಕಾಮಗಾರಿಯನ್ನು ಕೈಗೊಂಡಾಗ ಮಣ್ಣಿನ ಸ್ಥರವು ಸಡಿಲ ಕಪ್ಪು ಮಣ್ಣಿನ ಪದರವನ್ನು ಹೊಂದಿದ್ದು ತಳಪಾಯದ ವಿನ್ಯಾಸದಲ್ಲಿ ಬದಲಾವಣೆಯ ಅಗತ್ಯತೆಯಿರುವುದನ್ನು ಗುತ್ತಿಗೆದಾರರು ಗಮನಿಸಿದರು. ಅದರಂತೆ ಇಲಾಖೆಯು ತಳಪಾಯವನ್ನು ಪುನರ್ ವಿನ್ಯಾಸಗೊಳಿಸಿ ಅಂದಾಜನ್ನು ಸಹ ಪರಿಷ್ಕರಿಸಿತು ಹಾಗೂ ಅದರಂತೆ ₹1.50 ಕೋಟಿ ಹೆಚ್ಚುವರಿ ಮೊತ್ತದ ಅವಶ್ಯಕತೆಯಿದ್ದಿತು. ಪ್ರಾರಂಭಿಕ ಅಂದಾಜು ಮತ್ತು ವಿನ್ಯಾಸಗಳನ್ನು ತಯಾರಿಸುವ ಮೊದಲು ಮಣ್ಣಿನ ಪರೀಕ್ಷೆಯನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆ, ₹ಒಂದು ಕೋಟಿಗೂ ಹೆಚ್ಚಿನ ಅಂದಾಜು ವೆಚ್ಚವನ್ನು ರಾಜ್ಯ ಸರ್ಕಾರ ಅಥವಾ ಸಂಸ್ಥೆ ತಾನೇ ಭರಿಸಬೇಕೆಂದು ಅನುದಾನಗಳ ಮಂಜೂರಾತಿ ಆದೇಶದ ಷರತ್ತುಗಳು ತಿಳಿಸಿದ್ದವು. ರಾಜ್ಯ ಸರ್ಕಾರದ ಮೂಲಕ ಹೆಚ್ಚುವರಿ ಹಣವನ್ನು ಒದಗಿಸುವ ಬದಲು ಕಾಮಗಾರಿಯನ್ನು ₹ಒಂದು ಕೋಟಿಗೆ ನಿರ್ಬಂಧಿಸಲು ಡಿಟಿಇರವರು ಕಾಮಗಾರಿಯ ವ್ಯಾಪ್ತಿಯನ್ನು 703 ಚದರ ಮೀಟರ್‌ಗಳಿಂದ 500 ಚದರ ಮೀಟರ್‌ಗಳಿಗೆ ಕಡಿತಗೊಳಿಸಿದರು. ಹೀಗೆ, ವಿದ್ಯಾರ್ಥಿನಿಲಯದ ಸಾಮರ್ಥ್ಯವು 50 ವಿದ್ಯಾರ್ಥಿಗಳ ಬದಲು 36 ವಿದ್ಯಾರ್ಥಿಗಳಿಗೆ ಸ್ಥಳಾವಕಾಶವನ್ನು ಒದಗಿಸುವುದಕ್ಕೆ ಇಳಿಕೆಯಾಯಿತು ಮತ್ತು ಇದು ಯೋಜನಾ ಮಾರ್ಗದರ್ಶಿ ಸೂತ್ರಗಳಿಗೆ ವಿರುದ್ಧವಾಗಿತ್ತು.

ಕಾಮಗಾರಿಯು ಪೂರ್ಣಗೊಂಡ ನಂತರ, ಗುತ್ತಿಗೆದಾರರು ₹0.97 ಕೋಟಿಗೆ ತಮ್ಮ ಅಂತಿಮ ಬಿಲ್ಲನ್ನು ಸಲ್ಲಿಸಿದರು (ಜೂನ್ 2014) ಮತ್ತು ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ವ್ಯವಸ್ಥೆಗಳು ಬಾಕಿ ಇವೆ ಎಂಬ ನಿರ್ದಿಷ್ಠ ಅಭಿಪ್ರಾಯಗಳೊಂದಿಗೆ ಕಟ್ಟಡವನ್ನು ಡಿಎಸಿಜಿಪಿಯ ಪ್ರಾಂಶುಪಾಲರಿಗೆ ಹಸ್ತಾಂತರಿಸಿದರು (ಜುಲೈ 2014). ಆದರೆ, ಭಾರತ ಸರ್ಕಾರಕ್ಕೆ ಸಲ್ಲಿಸಿದ ಬಳಕೆ ಪ್ರಮಾಣಪತ್ರಗಳು/ಯೋಜನೆಯ ಅಡಿಯಲ್ಲಿ ಸಾಧಿಸಿದ ಪ್ರಗತಿಯ ಸ್ಥಿತಿಗತಿಗಳು (ಸೆಪ್ಟಂಬರ್ 2014, ಜುಲೈ 2015, ಫೆಬ್ರವರಿ 2016 ಮತ್ತು ಜೂನ್ 2018[71]) ಕಾಮಗಾರಿಯು ಪೂರ್ಣಗೊಂಡಿದೆ ಮತ್ತು ವಿದ್ಯಾರ್ಥಿನಿಲಯವು ಕಾರ್ಯ ನಿರ್ವಹಿಸಲು ಸಿದ್ಧವಾಗಿದೆ ಎಂದು ಸೂಚಿಸಲಾಗಿತ್ತು. ವಿದ್ಯಾರ್ಥಿನಿಲಯವನ್ನು 2015–16ರಿಂದ ಉಪಯೋಗಿಸಲಾಗುತ್ತಿದೆ ಎಂದೂ ಸಹ ತಿಳಿಸಲಾಗಿದ್ದಿತು. ವಾಸ್ತವಾಂಶವನ್ನು ಪರಿಶೀಲಿಸಲು ನಿರ್ಮಿಸಿದ ವಿದ್ಯಾರ್ಥಿನಿಲಯದ ಜಂಟಿ ತಪಾಸಣೆಯೊಂದನ್ನು[72] (ಜುಲೈ 2018) ನಡೆಸಲಾಯಿತು ಹಾಗೂ ಕೆಳಗಿನವುಗಳನ್ನು ಗಮನಿಸಲಾಯಿತು:

- ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಕಾಮಗಾರಿಗಳು ಬಾಕಿ ಉಳಿದಿದ್ದವು.
- ಬಾಗಿಲುಗಳು ಮತ್ತು ಕಿಟಕಿಗಳನ್ನು ಅಳವಡಿಸಿರಲಿಲ್ಲ.
- ಕಟ್ಟಡದ ಶೌಚಾಲಯದ ಪ್ರದೇಶದಲ್ಲಿ ಸಮತಲವಾದ ಬಿರುಕೊಂದು ಏರ್ಪಟ್ಟಿತ್ತು.

[71] ಪ್ರಾಂಶುಪಾಲರಿಗೆ ವಿದ್ಯಾರ್ಥಿನಿಲಯವನ್ನು ಹಸ್ತಾಂತರಿಸಿಲ್ಲ ಎಂದು ಇದು ಸೂಚಿಸುತ್ತದೆ.
[72] ಸಂಸ್ಥೆಯಿಂದ ನಾಮನಿರ್ದೇಶನಗೊಂಡ ಅಧಿಕಾರಿಯ ಜೊತೆಗೆ ಲೆಕ್ಕಪರಿಶೋಧನಾ ತಂಡ.

ಕಟ್ಟಡ ನಿರ್ಮಾಣದ ನಾಲ್ಕು ವರ್ಷಗಳ ಬಳಿಕವೂ ಬಳಕೆಗೆ ಸೂಕ್ತವಾಗಿರಲಿಲ್ಲ ಎಂಬುದನ್ನು ಜಂಟಿ ತಪಾಸಣೆಯು ದೃಢಪಡಿಸಿತು ಮತ್ತು ಕಟ್ಟಡವು ಪೂರ್ಣಗೊಂಡಿದೆ ಮತ್ತು ಬಳಕೆಗೆ ಸಿದ್ಧವಾಗಿದೆ ಎಂಬ ಡಿಟಿಇರವರ ಹೇಳಿಕೆಯು ವಾಸ್ತವವಾಗಿ ತಪ್ಪಾಗಿತ್ತು.

ಡಿಎಸಿಜಿಪಿರವರ ಭೌತಿಕ ಪ್ರಗತಿ ವರದಿಯು ನಿರ್ಮಾಣವನ್ನು ಎಐಸಿಟಿಇ ನೀತಿಗಳ ಅನ್ವಯ ಮಾಡಲಾಗಿದೆ ಹಾಗೂ ಅಂತಿಮ ಅನುದಾನವನ್ನು ಬಿಡುಗಡೆ ಮಾಡುವ ಉದ್ದೇಶಕ್ಕೆ ಕಟ್ಟಡವು ಕನಿಷ್ಠ 50 ಹಾಸಿಗೆಗಳನ್ನು ಹೊಂದಿದೆ ಎನ್ನುವ ಪ್ರಮಾಣಪತ್ರವನ್ನು ಒಳಗೊಂಡಿಲ್ಲ ಎಂಬುದನ್ನು ಭಾರತ ಸರ್ಕಾರವು ಡಿಟಿಇರವರಿಗೆ ತಿಳಿಸಿತ್ತು (ಸೆಪ್ಟಂಬರ್ 2016) ಎಂಬುದನ್ನು ನಾವು ಗಮನಿಸಿದೆವು. ಆದರೆ, ಲೆಕ್ಕಪರಿಶೋಧನೆಗೆ ಒದಗಿಸಿದ ದಾಖಲೆಗಳಲ್ಲಿ ಮೇಲಿನವುಗಳಿಗೆ ಡಿಟಿಇರವರ ಪ್ರತಿಕ್ರಿಯೆ ಲಭ್ಯವಿರಲಿಲ್ಲ. ತತ್ಪರಿಣಾಮವಾಗಿ ಭಾರತ ಸರ್ಕಾರವು ಅನುದಾನದ ಅಂತಿಮ ಕಂತನ್ನು ಬಿಡುಗಡೆ ಮಾಡಲಿಲ್ಲ.

ಹೀಗೆ, ಅಂದಾಜುಗಳು ಮತ್ತು ವಿನ್ಯಾಸಗಳನ್ನು ತಯಾರಿಸುವ ಮೊದಲು ಮಣ್ಣಿನ ಪರೀಕ್ಷೆಯನ್ನು ನಡೆಸುವಲ್ಲಿನ ವಿಫಲತೆಯು ವೆಚ್ಚವು ವೃದ್ಧಿಯಾಗುವಲ್ಲಿ ಪರಿಣಮಿಸಿತು. ತತ್ಪರಿಣಾಮವಾಗಿ ನಿರ್ಮಿಸಿದ ಪ್ರದೇಶದಲ್ಲಿ ಇಳಿಕೆಯಾಯಿತು ಮತ್ತು ಅದರಿಂದ ವಿದ್ಯಾರ್ಥಿನಿಲಯದ ಸಾಮರ್ಥ್ಯದಲ್ಲಿ ಇಳಿಕೆಯಾಯಿತು. ಇದು ಯೋಜನೆಯ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲದೇ ಭಾರತ ಸರ್ಕಾರದಿಂದ ಅಂತಿಮ ಕಂತಿನ ಅನುದಾನಗಳು ಬಿಡುಗಡೆಯಾಗದಿರುವಲ್ಲಿಯೂ ಪರಿಣಮಿಸಿತು. ಈ ಎಲ್ಲ ಅಂಶಗಳ ಕಾರಣದಿಂದ ಕಟ್ಟಡವು ಅಪೂರ್ಣವಾಗಿ ಉಳಿಯಿತು ಮತ್ತು ತತ್ಪರಿಣಾಮವಾಗಿ ₹0.97 ಕೋಟಿ ವೆಚ್ಚವನ್ನು ಭರಿಸಿದ ನಂತರವೂ ಪಾಲಿಟೆಕ್ನಿಕ್‌ನಲ್ಲಿ ಮಹಿಳಾ ವಿದ್ಯಾರ್ಥಿನಿಲಯವನ್ನು ಒದಗಿಸುವ ಮೂಲ ಉದ್ದೇಶವನ್ನು ಸೋಲಿಸಿದಂತಾಯಿತು.

- ***ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ***

ಡಿಎಸಿಜಿಪಿ, ಚಿಕ್ಕಮಗಳೂರಿಗೆ ಹೋಲುವ ರೀತಿಯಲ್ಲಿ ಕೆಹೆಚ್‌ಬಿ ₹0.89 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಮಹಿಳಾ ವಿದ್ಯಾರ್ಥಿನಿಲಯವು ಸಹ ಖಾಲಿ ಉಳಿದಿತ್ತು. ಆದರೆ, ಭಾರತ ಸರ್ಕಾರಕ್ಕೆ ಒದಗಿಸಿದ (ಸೆಪ್ಟಂಬರ್ 2014/ಜುಲೈ 2015) ಬಳಕೆ ಪ್ರಮಾಣಪತ್ರಗಳಲ್ಲಿ ನಿರ್ಮಾಣವು ಪೂರ್ಣಗೊಂಡಿದೆ ಮತ್ತು ಉಪಯೋಗವಾಗುತ್ತಿದೆ ಎಂದು ಸೂಚಿಸಲಾಗಿತ್ತು. ಜಂಟಿ ಭೌತಿಕ ಪರಿಶೀಲನೆಯಲ್ಲಿ ಕಟ್ಟಡದಲ್ಲಿ ಬಿರುಕುಗಳನ್ನು ಗಮನಿಸಲಾಯಿತು, ಬಾಗಿಲು ಮತ್ತು ಕಿಟಕಿಗಳನ್ನು ಕಳವು ಮಾಡಲಾಗಿತ್ತು, ಹಾಗಾಗಿ ಕಟ್ಟಡವು ವಾಸಕ್ಕೆ ಯೋಗ್ಯವಾಗಿರಲಿಲ್ಲ. ಮುಂದುವರೆದು, ಹಿಂದುಳಿದ ವರ್ಗಗಳ ಇಲಾಖೆಯ ಉಚಿತ ಮಹಿಳಾ ವಿದ್ಯಾರ್ಥಿನಿಲಯವು ಲಭ್ಯವಿದ್ದುದರಿಂದ ಈ ವಿದ್ಯಾರ್ಥಿನಿಲಯಕ್ಕೆ ಬೇಡಿಕೆ ಇರಲಿಲ್ಲ ಎಂಬುದನ್ನು ಮೌಖಿಕವಾಗಿ ತಿಳಿಯಲಾಯಿತು. ಬೇಡಿಕೆ ಇಲ್ಲದೇ ಮಹಿಳಾ ವಿದ್ಯಾರ್ಥಿನಿಲಯದ ನಿರ್ಮಾಣವನ್ನು ಪ್ರಸ್ತಾವಿಸಲಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ.

ಬೇಡಿಕೆ ಸಮೀಕ್ಷೆಯಿಲ್ಲದೇ ವಿದ್ಯಾರ್ಥಿನಿಲಯಗಳನ್ನು ನಿರ್ಮಾಣ ಮಾಡಿರುವುದು ವಿದ್ಯಾರ್ಥಿನಿಲಯಗಳಲ್ಲಿ ಉಳಿಯುವವರು ಇಲ್ಲದಿರುವಲ್ಲಿ ಪರಿಣಮಿಸಿ ಅದರ ಮೇಲೆ ಭರಿಸಿದ ₹0.89 ಕೋಟಿ ವೆಚ್ಚವು ನಿಷ್ಫಲವಾಗುವಲ್ಲಿ ಪರಿಣಮಿಸಿತು.

ಹೀಗೆ, ಬಾಲಕಿಯರಿಗೆ ವಿದ್ಯಾರ್ಥಿನಿಲಯವನ್ನು ಒದಗಿಸುವ ಯೋಜನೆಯ ಉದ್ದೇಶವನ್ನು ಎರಡೂ ಜಾಗಗಳಲ್ಲಿ ಸೋಲಿಸಿದಂತಾಯಿತು.

ಡಿಎಸಿ ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರಿನ ಸಂಬಂಧವಾಗಿ ವಾಸ್ತವಾಂಶಗಳನ್ನು ಒಪ್ಪಿಕೊಳ್ಳುತ್ತಾ, ನಿರ್ಮಾಣದ ನಿವೇಶನವನ್ನು ಅಂತಿಮಗೊಳಿಸಿರಲಿಲ್ಲವಾದ್ದರಿಂದ ಮಣ್ಣಿನ ಪರೀಕ್ಷಾ ವರದಿಯಿಲ್ಲದೇ ಅಂದಾಜನ್ನು ತಯಾರಿಸಲಾಗಿತ್ತು ಎಂದು ಸರ್ಕಾರವು ತಿಳಿಸಿತು (ನವೆಂಬರ್ 2018). ಮುಂದುವರೆದು, ಅದು ಕೆಳಗಿನಂತೆ ತಿಳಿಸಿತು:

- ಪ್ರಸ್ತುತ ಕಟ್ಟಡವನ್ನು ದುರಸ್ತಿ ಮಾಡಲಾಗಿದೆ, ಎಲ್ಲ ಬಾಗಿಲು ಮತ್ತು ಕಿಟಕಿಗಳನ್ನು ಅಳವಡಿಸಲಾಗಿದೆ, ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜನ್ನು ಸಹ ಒದಗಿಸಲಾಗಿದೆ.
- ವಿದ್ಯಾರ್ಥಿನಿಲಯದಲ್ಲಿ ತಂಗಲು ಯಾವುದೇ ಬಾಲಕಿಯರು ಇಚ್ಚಿಸದ ಕಾರಣ ಕಟ್ಟಡದ ಸೂಕ್ತ ಬಳಕೆಗಾಗಿ ಆರು ಕೊಠಡಿಗಳ ಬಾಲಕಿಯರ ವಿದ್ಯಾರ್ಥಿ ನಿಲಯವನ್ನು ಬಾಲಕರಿಗೆ ಒದಗಿಸಲಾಗಿದೆ.
- ಉಳಿದ ₹10 ಲಕ್ಷಗಳನ್ನು ಪಡೆದ ನಂತರ ಮೊದಲನೇ ಅಂತಸ್ತಿನಲ್ಲಿ 50 ವಿದ್ಯಾರ್ಥಿಗಳಿಗೆ ಅವಕಾಶ ನೀಡುವ ಮೂರು ಕೊಠಡಿಗಳನ್ನು ಪೂರ್ಣಗೊಳಿಸಲಾಗುವುದು.

ಮಣ್ಣಿನ ಪರೀಕ್ಷೆ ನಡೆಸದೇ ಕಾಮಗಾರಿಯ ಅಂದಾಜನ್ನು ತಯಾರಿಸಲಾಗಿತ್ತು ಎಂಬುದನ್ನು ಉತ್ತರವು ಖಚಿತಪಡಿಸಿತಲ್ಲದೇ ಅಗತ್ಯತೆಯನ್ನು ನಿರ್ಧರಿಸದೇ ಬಾಲಕಿಯರ ವಿದ್ಯಾರ್ಥಿನಿಲಯದ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿತ್ತು ಎಂಬುದನ್ನೂ ಸಹ ಖಚಿತಪಡಿಸಿತು. ನಂತರ ವಿದ್ಯಾರ್ಥಿನಿಲಯವನ್ನು ಬಾಲಕರಿಗೆ ಹಂಚಿಕೆ ಮಾಡಿರುವುದು ಸಹ ಬಾಲಕಿಯರ ವಿದ್ಯಾರ್ಥಿನಿಲಯವನ್ನು ಒದಗಿಸುವ ಯೋಜನೆಯ ಮೂಲ ಉದ್ದೇಶವನ್ನೇ ಉಲ್ಲಂಘಿಸಿದಂತಾಯಿತು. ವಿದ್ಯಾರ್ಥಿನಿಲಯವು ಕೇವಲ 36 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ಕಲ್ಪಿಸಿಕೊಡುವುದರಿಂದ ಭಾರತ ಸರ್ಕಾರದಿಂದ ಉಳಿದ ಅನುದಾನಗಳು ಬಿಡುಗಡೆ ಯಾಗುವುದು ಕ್ಷೀಣವಾಗಿದೆ.

**ಬೆಂಗಳೂರು**
**ದಿನಾಂಕ 1 ಆಕ್ಟೋಬರ್, 2019**

**(ಇ.ಪಿ.ನಿವೇದಿತ)**
**ಪ್ರಧಾನ ಮಹಾಲೇಖಾಪಾಲರು**
**ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ**
**ಕರ್ನಾಟಕ**

**ಮೇಲು ಸಹಿ ಮಾಡಿದೆ**

**ನವದೆಹಲಿ**
**ದಿನಾಂಕ 4 ಆಕ್ಟೋಬರ್, 2019**

**(ರಾಜೀವ್ ಮೆಹ್ರಿಷಿ)**
**ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

# ಅನುಬಂಧಗಳು

## ಅನುಬಂಧ–1.1
### (ಉಲ್ಲೇಖ: ಕಂಡಿಕೆ–1.7.1, ಪುಟ–9)
### 31 ಮಾರ್ಚ್ 2018ರಲ್ಲಿದ್ದಂತೆ ಬಾಕಿಯಿರುವ ತಪಾಸಣಾ ವರದಿಗಳು ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳು

| ಕ್ರಮ ಸಂಖ್ಯೆ | ಇಲಾಖೆಯ ಹೆಸರು | ಒಂದು ವರ್ಷಕ್ಕಿಂತ ಕಡಿಮೆ | | 1ರಿಂದ 2 ವರ್ಷಗಳು | | 2ರಿಂದ 5 ವರ್ಷಗಳು | | 5ರಿಂದ 10 ವರ್ಷಗಳು | | 10 ವರ್ಷಗಳಿಗೂ ಮೇಲ್ಪಟ್ಟು | |
|---|---|---|---|---|---|---|---|---|---|---|---|
| | | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
| 1 | ಆಡಳಿತ ಮತ್ತು ನ್ಯಾಯಾಂಗ | 0 | 0 | 0 | 0 | 4 | 14 | 0 | 0 | 1 | 1 |
| 2 | ಆಡಳಿತಾತ್ಮಕ ತರಬೇತಿ ಸಂಸ್ಥೆ | 0 | 0 | 0 | 0 | 1 | 3 | 0 | 0 | 0 | 0 |
| 3 | ಅಡ್ವೊಕೇಟ್ ಜನರಲ್ | 0 | 0 | 0 | 0 | 2 | 5 | 0 | 0 | 1 | 1 |
| 4 | ಕೃಷಿ | 0 | 0 | 3 | 10 | 5 | 28 | 6 | 32 | 3 | 7 |
| 5 | ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳು | 0 | 0 | 2 | 14 | 2 | 17 | 1 | 7 | 1 | 6 |
| 6 | ಆರ್ಕೆಯಾಲಜಿ ಮತ್ತು ಮ್ಯೂಸಿಯಮ್ | 0 | 0 | 1 | 7 | 6 | 52 | 2 | 9 | 5 | 8 |
| 7 | ಪತ್ರಾಗಾರಗಳು | 0 | 0 | 0 | 0 | 2 | 5 | 0 | 0 | 0 | 0 |
| 8 | ಗ್ರಾಹಕ ವೇದಿಕೆ | 0 | 0 | 0 | 0 | 0 | 0 | 0 | 0 | 0 | 0 |
| 9 | ವಿಕಲಚೇತನ ಕಲ್ಯಾಣ | 0 | 0 | 0 | 0 | 0 | 0 | 0 | 0 | 3 | 4 |
| 10 | ಜಿಲ್ಲಾಡಳಿತ | 0 | 0 | 0 | 0 | 0 | 0 | 0 | 0 | 0 | 0 |
| 11 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳು | 0 | 0 | 2 | 14 | 13 | 119 | 12 | 39 | 44 | 135 |
| 12 | ಔಷಧ ನಿಯಂತ್ರಕರು | 0 | 0 | 4 | 5 | 7 | 11 | 0 | 0 | 3 | 3 |
| 13 | ಚುನಾವಣೆ | 0 | 0 | 2 | 12 | 1 | 7 | 3 | 11 | 3 | 10 |
| 14 | ಉದ್ಯೋಗ ಮತ್ತು ತರಬೇತಿ | 0 | 0 | 25 | 160 | 35 | 134 | 27 | 41 | 8 | 10 |
| 15 | ಕಾರ್ಮಿಕರ ರಾಜ್ಯ ವಿಮೆ | 0 | 0 | 20 | 50 | 12 | 29 | 4 | 6 | 1 | 1 |
| 16 | ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು | 0 | 0 | 0 | 0 | 0 | 0 | 0 | 0 | 0 | 0 |
| 17 | ಹಣಕಾಸು | 10 | 63 | 3 | 27 | 6 | 32 | 1 | 2 | 14 | 28 |
| 18 | ಹಣಕಾಸು ಮತ್ತು ವಿತ್ತೀಯ ನೀತಿ | 0 | 0 | 0 | 0 | 3 | 24 | 2 | 7 | 0 | 0 |
| 19 | ಅಗ್ನಿಶಾಮಕ ಮತ್ತು ತುರ್ತು ಸೇವೆಗಳು | 0 | 0 | 8 | 36 | 5 | 23 | 2 | 3 | 0 | 0 |
| 20 | ಮೀನುಗಾರಿಕೆ | 0 | 0 | 0 | 0 | 1 | 7 | 1 | 9 | 1 | 1 |
| 21 | ರಾಜ್ಯಪಾಲರ ಕಛೇರಿ | 0 | 0 | 0 | 0 | 0 | 0 | 0 | 0 | 0 | 0 |
| 22 | ಅತಿಥಿ ಗೃಹ | 0 | 0 | 0 | 0 | 2 | 11 | 2 | 7 | 5 | 10 |
| 23 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 58 | 434 | 60 | 448 | 125 | 659 | 99 | 269 | 63 | 143 |
| 24 | ಉನ್ನತ ಶಿಕ್ಷಣ | 35 | 342 | 135 | 969 | 162 | 1030 | 92 | 291 | 109 | 413 |
| 25 | ಹೋಮ್‌ಗಾರ್ಡ್ | 0 | 0 | 1 | 5 | 1 | 4 | 6 | 9 | 2 | 2 |
| 26 | ತೋಟಗಾರಿಕೆ | 0 | 0 | 2 | 8 | 3 | 19 | 0 | 0 | 0 | 0 |
| 27 | ವಸತಿ | 1 | 17 | 4 | 34 | 6 | 44 | 13 | 67 | 49 | 132 |
| 28 | ಮಾಹಿತಿ ಪ್ರಚಾರ | 0 | 0 | 1 | 7 | 3 | 21 | 7 | 27 | 8 | 14 |
| 29 | ಭಾರತೀಯ ಔಷಧ ಪದ್ಧತಿ ಮತ್ತು ಹೋಮಿಯೋಪತಿ | 6 | 40 | 17 | 89 | 20 | 60 | 6 | 9 | 9 | 12 |

ಅನುಬಂಧ-1.1 ಮುಂದುವರೆದಿದೆ

| ಕ್ರಮ ಸಂಖ್ಯೆ | ಇಲಾಖೆಯ ಹೆಸರು | ಒಂದು ವರ್ಷಕ್ಕಿಂತ ಕಡಿಮೆ | | 1ರಿಂದ 2 ವರ್ಷಗಳು | | 2ರಿಂದ 5 ವರ್ಷಗಳು | | 5ರಿಂದ 10 ವರ್ಷಗಳು | | 10 ವರ್ಷಗಳಿಗೂ ಮೇಲ್ಪಟ್ಟು | |
|---|---|---|---|---|---|---|---|---|---|---|---|
| | | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
| 30 | ಕನ್ನಡ ಮತ್ತು ಸಂಸ್ಕೃತಿ | 2 | 17 | 3 | 31 | 33 | 216 | 19 | 102 | 15 | 51 |
| 31 | ಕರ್ನಾಟಕ ಗೆಜೆಟ್ | 0 | 0 | 0 | 0 | 0 | 0 | 0 | 0 | 0 | 0 |
| 32 | ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ | 0 | 0 | 0 | 0 | 0 | 0 | 0 | 0 | 0 | 0 |
